ಕೆ.ವೆಂಕಟಪ್ಪ

ಕಲೆ ಮತ್ತು ಬದುಕು

ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಸಂಪ್ರಬಂಧ.



ಸಂಶೋಧಕ
ಎಂ.ವೈ.ರಾಜೀವ

ಮಾರ್ಗದರ್ಶಕರು
ಡಾ.ಎಸ್.ಸಿ.ಪಾಟೀಲ್
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

ದೃಶ್ಯಕಲಾ ವಿಭಾಗ
ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ. ಹಂಪಿ
ವಿದ್ಯಾರಣ್ಯ
೨೦೧೨

ಕೆ. ವೆಂಕಟಪ್ಪರವರ ಕಲೆ ಮತ್ತು ಬದುಕು

(ಕನ್ನಡ ವಿಶ್ವವಿದ್ಯಾಲಯ ಹಂಪಿ, ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕರು

ರಾಜೀವ ಎಂ.ವೈ

ಮಾರ್ಗದರ್ಶಕರು

ಡಾ. ಎಸ್.ಸಿ. ಪಾಟೀಲ

ಲಲಿತಕಲಾ ನಿಕಾಯ

ದೃಶ್ಯಕಲಾ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೨

ಘೋಷಣಾ ಪತ್ರ

ಕೆ ವೆಂಕಪ್ಪನವರ ಕಲೆ ಮತ್ತು ಬದುಕು ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ದೃಶ್ಯಕಲಾ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾದ ಡಾ.ಎಸ್.ಸಿ. ಪಾಟೀಲ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ದೃಶ್ಯಕಲಾ ವಿಭಾಗಕ್ಕೆ ಸಂಪ್ರಬಂಧವನ್ನು ಸಲ್ಲಿಸುತ್ತಿದ್ದೇನೆ.

ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಇನ್ನಿತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ಪ್ರಮಾಣೀಕರಿಸುತ್ತೇನೆ.

(ರಾಜೀವ ಎಂ.ವೈ)
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಸ್ಥಳ : ಹಂಪಿ, ವಿದ್ಯಾರಣ್ಯ
ದಿನಾಂಕ :

ದೃಢೀಕರಣ ಪತ್ರ

ರಾಜೀವ ಎಂ.ವೈ ಇವರು ನನ್ನ ಮಾರ್ಗದರ್ಶನದಲ್ಲಿ **ಕೆ. ವೆಂಕಟಪ್ಪನವರ ಕಲೆ ಮತ್ತು ಬದುಕು** ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಸಿದ್ಧಪಡಿಸಿದ್ದು, ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ದೃಶ್ಯಕಲಾ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ.

ಸದರಿ ಸಂಪ್ರಬಂಧವು ಮೂಲ ಸಂಶೋಧನ ಕೃತಿಯಾಗಿದ್ದು, ಇದರ ಯಾವುದೇ ಭಾಗ ಮತ್ತು ವಿಷಯವನ್ನು ಯಾವುದೇ ಉದ್ದೇಶಕ್ಕೆ ಬಳಸಿಕೊಂಡಿಲ್ಲ ಮತ್ತು ಈ ಮೊದಲು ಎಲ್ಲಿಯೂ ಪ್ರಕಟಗೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ ಮತ್ತು ದೃಶ್ಯಕಲಾ ವಿಭಾಗದ ಮೂಲಕ ಈ ಸಂಪ್ರಬಂಧವನ್ನು ಸಲ್ಲಿಸಲಾಗುತ್ತಿದೆ.

ಸ್ಥಳ : ಹಂಪಿ, ವಿದ್ಯಾರಣ್ಯ

ದಿನಾಂಕ :

(ಡಾ. ಎಸ್. ಸಿ. ಪಾಟೀಲ)

ಮಾರ್ಗದರ್ಶಕರು


ಡೀನ್, ಲಲಿತಕಲಾ ನಿಕಾಯ

ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

ದೃಶ್ಯಕಲಾ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ




ಕೆ. ವೆಂಕಟಪ್ಪನವರ ಕಲೆ ಮತ್ತು ಬದುಕು

ಪರಿವಿಡಿ

ಅಧ್ಯಾಯ - ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ




ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ, ಮತ್ತು ನೈಧಾನಿಕತೆ

ಕಲೆಯು ಕಲೆಗಾಗಿ ಅಥವಾ ಕಲೆ ಬದುಕಿಗಾಗಿಯೋ ಎಂಬ ಜಿಜ್ಞಾಸೆ ಕಲಾ ಚಿಂತಕರಲ್ಲಿ ಬೆಂಬಿಡದ ಪ್ರಶ್ನೆಯಾಗಿವೆ ಹಾಗೂ ಕಲೆ ಮಾನವನ ಉದ್ಧಾರಕ್ಕೋ ಅಥವಾ ಸಮಾಜದ ಒಳಿತಿಗೋ ಎಂಬ ಪ್ರಶ್ನೆಯೂ ಸಾಮರ್ಥ್ಯವನ್ನು ಹೊಂದಿದೆ. ಇದೇ ನಿಟ್ಟಿನಲ್ಲಿ ಈ ಕಲೆಯ ಕುರಿತಾಗಿ ಹಲವಾರು ಕಲಾ ಚಿಂತಕರು, ತತ್ವಜ್ಞಾನಿಗಳು ಅವರದೇ ಆದಂತಹ ಹಲವಾರು ಹೇಳಿಕೆಗಳನ್ನು ನೀಡುತ್ತಾ ಬಂದರೂ ಸಹ ಕಲೆ ಎಂಬ ಸೃಜನ ಕೌತುಕ ಕ್ರಿಯೆ ಮಾತ್ರ ತನ್ನ ನಿಟ್ಟು ಹಾಗೂ ದಾರಿಯ ಮೂಲವನ್ನು ಇಂದಿಗೂ ಮರ್ಮವಾಗಿಯೇ ಉಳಿಸಿಕೊಂಡಿದೆ. ಪಾಶ್ಚಾತ್ಯರ ಪಾಲಿಗೆ ಕಲೆ ಎಂಬುದು ಮಾನವನ ಸೃಜನಶೀಲತೆ ಸಾಧನವಾದರೆ, ಭಾರತೀಯರ ಮಟ್ಟಿಗೆ ಅದು ಬೇರೆಯೇ ಆಗಿದೆ. ಕಲೆ ಎಂಬುದು ಮಾನವನನ್ನು ದೈವತ್ವದೆಡೆಗೆ ಕರೆದೊಯ್ಯುವ ಸಾಧನ. ಈ ಹೇಳಿಕೆಯು ಈ ಮಣ್ಣಿನ ಧರ್ಮದ ದೈವತ್ವವನ್ನು ತಿಳಿಸುತ್ತದೆ.

ಭಾರತದ ಚರಿತ್ರೆಯ ಪುಟಗಳನ್ನು ತಿರುಗಿಸುತ್ತಾ ಹೋದರೆ ಕರ್ನಾಟಕ ಅದರಲ್ಲಿ ತನ್ನದೇ ಆದ ಸ್ವಂತಿಕೆಯನ್ನು ಕಾದಿರಿಸಿದೆ. ಅಲ್ಲದೆ ಕರ್ನಾಟಕ ಲಲಿತಕಲೆಗಳ ತವರೂರು ಎಂಬುದಕ್ಕೆ ಇಲ್ಲಿ ಇಂದಿಗೂ ಉಳಿದಿರುವ ಕಲೆ, ಸಾಹಿತ್ಯ, ಸಂಗೀತ, ನಾಟಕ, ಜಾನಪದ, ಶಿಲ್ಪ-ಚಿತ್ರ ಸಾಕ್ಷಿಯಾಗಿವೆ. "ಒಂದು ಕಲಾ ಪರಂಪರೆಯ ಬೆಳವಣಿಗೆ ಹಿಂದೆ ಆ ಸಂಸ್ಕೃತಿಯ ತಾಯಿ ಬೇರುಗಳಿರುವುದನ್ನು




ಪ್ರಮುಖವಾಗಿ ಗುರುತಿಸಲಾಗಿದೆ." ಅದೇ ರೀತಿಯಲ್ಲಿ ಯಾವುದೇ ದೇಶದ ಅಥವಾ ನಾಡಿನ ಕಲೆಯು ಪರಿಪೂರ್ಣತೆಯ ಹಂತವನ್ನು ಏರುವುದಿಲ್ಲ. ಅದು ಹಲವಾರು ಪರಿವರ್ತನೆಯ ಹಂತವನ್ನು ಮೀರಿ ತನ್ನ ಜೀವಂತಿಕೆಯನ್ನು ಹಾಗೂ ಅಸ್ತಿತ್ವವನ್ನು ಕಾಯ್ದುಕೊಳ್ಳುತ್ತದೆ. ಈ ರೀತಿಯ ಸತತವಾದ ಪರಿಶ್ರಮದ ಹಿಂದೆ ಹಲವಾರು ಕಲಾವಿದರ ನಿರಂತರ ಪರಿಶ್ರಮವು ಗೌಣವಾಗಿರುತ್ತದೆ. ಇದಲ್ಲದೆ, ಆ ನಾಡಿನ ಪ್ರಜೆಗಳ ಹಾಗೂ ಅವರ ಪ್ರತಿನಿಧಿಗಳಾಗಿರುತ್ತಿದ್ದ ಅರಸರ, ಮಾಂಡಲೀಕರ, ನಾಯಕರ ಕಲಾಭಿರುಚಿಯ ಕಲಾಭಿಜ್ಞಾತಿಯ ಆಶ್ರಯ ಪಾಲನೆ-ಪೋಷಣೆ ಮತ್ತು ಪ್ರೋತ್ಸಾಹವು ಇರುತ್ತವೆ.

ಯಾವುದೇ ನಾಡಿನ ಕಲೆ, ಸಾಹಿತ್ಯ, ಸಂಗೀತ, ಚಿತ್ರ, ಶಿಲ್ಪ, ನೃತ್ಯ ಮೊದಲಾದ ಲಲಿತಕಲೆಗಳು ಅಂದಂದಿನ ಒಟ್ಟು ಜನಾಂಗದ ಪ್ರತಿಬಿಂಬವಾಗಿ ಬೆಳವಣಿಗೆಯನ್ನು ಹೊಂದಿರುತ್ತದೆ. ಅಲ್ಲದೆ ಆಯಾ ಕಾಲದ ಸಾಂಸ್ಕೃತಿಕ ಇತಿಹಾಸವನ್ನೇ ತಮ್ಮಲ್ಲಿ ಒಡಮೂಡಿಸಿಕೊಂಡಿರುತ್ತದೆ. ಹೀಗೆ ನಮ್ಮ ದೇಶದ ಅಥವಾ ನಾಡಿನ ಪರಂಪರೆಯನ್ನು ಬೆಳಸುವ ಕ್ರಿಯೆಯಲ್ಲಿ ಸಾವಿರಾರು ಕಲಾವಿದರ ಅವಿರತ ಪರಿಶ್ರಮವನ್ನು ಅವಲೋಕಿಸಬಹುದಾಗಿದೆ. ಹಾಗಾಗಿ ನಾಡಿನ ಕಲಾ ಪರಂಪರೆಯ ಹಿಂದೆ ದುಡಿದ ಕಲಾವಿದರ ಕೊಡುಗೆಯೂ ಬಹುಮುಖ್ಯವಾಗಿ ಕಂಡು ಬರುತ್ತದೆ. ಅದರೆ ನಮ್ಮ ದೇಶದ ಕಲೆಯ ವಿಪರ್ಯಾಸವೆಂದರೆ ದಾಖಲೀಕರಣ. ನಮ್ಮ ದೇಶದಲ್ಲಿ ಇತಿಹಾಸದ ಅಥವಾ ಕಲಾ ಇತಿಹಾಸದ ದಾಖಲೀಕರಣ ಕುಂಠಿತವಾಗಿದೆ. ನಮ್ಮ ದೇಶದ ಇತಿಹಾಸವನ್ನು ಮುಂದಿನ ಪೀಳಿಗೆಗೆ ಕಟ್ಟಿಕೊಡಲು ಪಾಶ್ಚಾತ್ಯ ಕಲಾಇತಿಹಾಸವನ್ನು ಅವಲಂಬಿಸಬೇಕಾಗಿದೆ.

ಈ ಹಂತದಲ್ಲಿ ವಿದೇಶಿ ಕಲಾತಜ್ಞರ ದೂರದೃಷ್ಟಿ ಹಾಗೂ ಕಲೆಯ ಬಗ್ಗೆ ಅವರಿಗಿದ್ದ ಕಾಳಜಿ, ಕಳಕಳಿಯನ್ನು ನಾವಿಲ್ಲಿ ಗುರುತಿಸಬೇಕಾದ ಅಂಶವಾಗಿದೆ. ಇದರಿಂದಾಗಿ ಭಾರತೀಯ ಕಲಾಇತಿಹಾಸದಲ್ಲಿ ಕಲೆಯು ಕಂಗೊಳಿಸಿದರೂ ಕಲಾವಿದರು ಮಾತ್ರ ಕಾಣೆಯಾಗುತ್ತಾರೆ. ಇದಕ್ಕೆ ಕಾರಣ ದಾಖಲೀಕರಣದ ವೈಫಲ್ಯ ಎಂದರೆ ತಪ್ಪಾಗಲರಾದರು. ಆದುದರಿಂದ ಕಲೆಯ ಹಾಗೂ ಕಲಾಇತಿಹಾಸದ ಸಂಪೂರ್ಣ ಅಧ್ಯಾಯವನ್ನು ಮಾಡಲು ಸಮಗ್ರವಾಗಿ ನೋಡಲು ಸಾಧ್ಯವಾಗುತ್ತಿಲ್ಲ.

ಪ್ರಸ್ತುತ ಸಮಕಾಲೀನ ಸಂದರ್ಭದಲ್ಲಿಯೂ ನಾವು ಈ ಕೊರತೆಯನ್ನು ಎದುರಿಸುತ್ತಿದ್ದೇವೆ. ಸಮಕಾಲೀನ ಕಲೆ, ಕಲಾವಿದರ ಕುರಿತಾದ ಅಮೂಲ್ಯವಾದ ಮಾಹಿತಿಯನ್ನು ಚಿಂತನಾಶೀಲ ವಿಚಾರವನ್ನು ಅವರ ಕುರಿತಾದ ಪ್ರಕಟಿತ ಸಾಹಿತ್ಯ ವಿಮರ್ಶೆಯನ್ನು, ಕಲಾಕೃತಿಗಳನ್ನು ಅರ್ಥೈಸುವ, ಅದರ ಹಿಂದೆ ದುಡಿದ ಕಲಾವಿದನ ಮನಸ್ಸನ್ನು ಪರಿಭಾವಿಸುವ ಹಲವಾರು ಅಂಶಗಳನ್ನು ತುಂಬ ಗಂಭೀರವಾಗಿ ಪ್ರಸ್ತುತ ಸಮಕಾಲೀನ ಸಂದರ್ಭದಲ್ಲಿ ದಾಖಲಿಸಬೇಕಾದುದು ಇಂದಿನ ಮಟ್ಟಿಗೆ ಬಹುಮುಖ್ಯ ಕಾರ್ಯವಾಗಿದೆ.




ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ತಡವಾಗಿಯಾದರೂ ಕಲೆ, ಕಲಾವಿದರ ಕುರಿತಾದ ಸಂಶೋಧನಾ ಅಧ್ಯಯನಗಳು ಇಂದು ವಿಶ್ವವಿದ್ಯಾಲಯದ ಮಟ್ಟದಲ್ಲಿ ನಡೆಯುತ್ತಿರುವುದು ಈ ಕ್ಷೇತ್ರದ ಒಂದು ಶುಭವೆಂದೇ ಹೇಳಬೇಕು. ಪ್ರಸ್ತುತ ಕರ್ನಾಟಕದಲ್ಲಿ ಹಿರಿಯ ತಲೆಮಾರಿನ ಕಲಾವಿದರಾದ ಕಲಾ ತಪಸ್ವಿ, ಎಂದೇ ಖ್ಯಾತರಾದ, ತನ್ನ ಜೀವನವನ್ನೇ ಕಲೆಗಾಗಿ ಮುಡಿಪಾಗಿಟ್ಟ ಕಲಾಸಾಧಕ ಶ್ರೀ ಕೆ. ವೆಂಕಟಪ್ಪನವರ ಕಲೆ ಮತ್ತು ಜೀವನದ ಕುರಿತಾದ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಒಟ್ಟಾರೆಯಾಗಿ ನಾವು ಗಮನಿಸುವುದಾದರೆ ಕಲಾಪರಂಪರೆಯ ಇತಿಹಾಸದಲ್ಲಿ ಕಲಾವಿದರೂ ಸಹ ತಮ್ಮ ಅಸ್ತಿತ್ವವನ್ನು ಕಾಯ್ದುಕೊಳ್ಳಬೇಕಾಗಿರುತ್ತದೆ. ಇಂತಹ ಸಂದರ್ಭದಲ್ಲಿ ವ್ಯಕ್ತಿ ಅಧ್ಯಯನಗಳ ಸಂಶೋಧನಾ ಕಾರ್ಯ ಹೆಚ್ಚು ಹೆಚ್ಚು ನಡೆಯಬೇಕಾಗಿದೆ. ಅಲ್ಲದೆ ಕಲಾವಿದ ಶ್ರೀ ಕೆ. ವೆಂಕಟಪ್ಪನವರಂತಹ ಹಿರಿಯ ಚೇತನಗಳ ಸಾಲು ಸಾಲು ಅಧ್ಯಯನದ ಅವಶ್ಯಕತೆ ಇದೆ. ಇಲ್ಲಿಯವರೆಗೆ ಇವರನ್ನು ಗಮನಿಸದಿರುವುದು ಕಲಾ ಕ್ಷೇತ್ರಕ್ಕೆ ಮಾಡಿದ ಅಪಚಾರವೆಂದರೆ ತಪ್ಪಾಗಲಾರದು.

ಕಲಾ ತಪಸ್ವಿ ಎಂದೇ ಕರೆಸಿಕೊಳ್ಳುವ ಶ್ರೀ ಕೆ. ವೆಂಕಟಪ್ಪನವರು ಸ್ವಾತಂತ್ರ್ಯಪೂರ್ವದಲ್ಲಿ ಕರುನಾಡ ಕಲಾ ಕಿಂಕರನಾಗಿ ಬೆಳೆದಂಥ ಕನ್ನಡದ ಕುವರ. ಕಲಾಭ್ಯಾಸಕ್ಕೆಂದು ಪ್ರಪ್ರಥಮವಾಗಿ ಹೊರಾಜ್ಯಕ್ಕೆ ತೆರಳಿ ಕಲಾಭ್ಯಾಸ ಮಾಡಿ, ಅವರ ಮುಂದಿನ ಪೀಳಿಗೆಗೆ ನಾಂದಿಯಾಡಿದ ಕಲಾ ದಿಗ್ಗಜನೆನಿಸುವ ಸಲುವಾಗಿ ಇವರ ಕಲೆ ಮತ್ತು ಬದುಕನ್ನು ಮುಂದಿನ ಪೀಳಿಗೆಗೆ ಕಟ್ಟಿಕೊಡುವ, ಕಾರ್ಯಕರ್ತರಾದ ಇವರ ಬಗೆಗಿನ ಅಧ್ಯಯನವು ಅನಿವಾರ್ಯ ಮತ್ತು ಅವಶ್ಯಕವಾಗಿ ಮಾಡಬೇಕಾಗಿದೆ.

ಅಧ್ಯಯನದ ಉದ್ದೇಶ

ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯಮಟ್ಟದಲ್ಲಿ ಭಾರತೀಯ ಕಲೆಗೆ ತನ್ನದೇ ಆದ ಬಹುಮುಖ್ಯ ಸ್ಥಾನಮಾನಗಳಿವೆ. ಪುರಾತನ ಸಿಂಧೂ ಬಯಲಿನ ನಾಗರಿಕತೆಯಿಂದಿಡಿದು ಇಲ್ಲಿಯವರೆಗೆ ಭಾರತೀಯ ಕಲೆಯು ಜಾಗತಿಕ, ಧಾರ್ಮಿಕ, ಸಾಮಾಜಿಕ, ಸಂಘರ್ಷಗಳನ್ನು ಧರಿಸುತ್ತಾ ಬಂದಿದೆ. ಇದರ ನಡುವಿನಲ್ಲಿಯೇ ತಲೆಯೆತ್ತಿ ನಿಂತಿವೆ. ಅದೇ ರೀತಿಯಲ್ಲಿ ಚಿತ್ರಕಲಾ ಕ್ಷೇತ್ರದಲ್ಲಿಯೂ ಸಹ ತನ್ನ ಛಾಪನ್ನು ಬೀರಿದೆ. ಇಲ್ಲಿಯವರೆವಿಗೂ ಚಿತ್ರಕಲಾ ಕ್ಷೇತ್ರಕ್ಕೆ ಹಲವಾರು ಕಲಾವಿದರು ಅವಿರತವಾಗಿ ಶ್ರಮಿಸಿದ್ದಾರೆ.

ಇಂಥಹವರ ಕಲಾ ಬದುಕು, ಇವರು ರಚಿಸಿದ ಕಲಾ ಕೃತಿಗಳು, ಇವರ ಕಲಾ ಕೃತಿಯ ಮೇಲಾದ ಪರಿಣಾಮಗಳು ಹಾಗೂ ಇವರ ಜೀವನ ಶೈಲಿ ಇವರ ಬದುಕಿನಲ್ಲಾದ ತಿರುವುಗಳು, ಕಲಾಕ್ಷೇತ್ರಕ್ಕೆ ಇವರು ಕೊಟ್ಟ ಕೊಡುಗೆಗಳು, ಇವರ ಜೀವನಾದರ್ಶ, ಇವರುಗಳು ಮಾಡಿದ ಸಾಧನೆ,




ಬಂದಂತಹ ಬಿರುದು-ಬಹುಮಾನಗಳು, ಇವರುಗಳು ರಚಿಸಿದ ಕಲಾಕೃತಿಗಳು, ಆ ಕೃತಿಗಳು ಸಮಾಜದ ಮೇಲೆ ಬೀರಿದ ಪರಿಣಾಮಗಳನ್ನು ಇಲ್ಲಿ ಮೌಲಿಕವಾಗಿ ಚರ್ಚಿಸುವ ಉದ್ದೇಶವನ್ನು ಹೊಂದಲಾಗಿದೆ. ಇದೇ ನಿಟ್ಟಿನಲ್ಲಿ ಭಾರತೀಯ ಕಲಾಪರಂಪರೆಯಲ್ಲಿ ಕರ್ನಾಟಕಕ್ಕೆ ಕಳಸಪ್ರಾಯವಾಗಿರುವ ವ್ಯಕ್ತಿ, ಕಲಾ ತಪಸ್ವಿ, ಕುಂಚಬ್ರಹ್ಮ ಎಂದೆಲ್ಲ ಕರೆಸಿಕೊಳ್ಳುವ ಹಿರಿಯ ಚೇತನ ಕಲಾವಿದ "ಕೆ. ವೆಂಕಟಪ್ಪ" ಈ ಮಾನ್ಯರ ಕುರಿತಾದ ಸಂಶೋಧನೆಗಳು ಇಲ್ಲಿಯವರೆಗೂ ಅಗದಿರುವುದು ವಿಷಾಧನೀಯ ಸಂಗತಿ.

ತಮ್ಮ ಜೀವನವನ್ನೇ ಕಲೆಗಾಗಿಯೇ ಮುಡುಪಾಗಿಟ್ಟ ಶ್ರೀಯುತರು ಬ್ರಹ್ಮಚಾರಿಯಾಗಿಯೇ ಕಲಾ ಸರಸ್ವತಿಯನ್ನು ಆರಾಧಿಸಿದರು. ಯೌವ್ವನದಿಂದ ತಮ್ಮ ಇಳಿಯವಯಸ್ಸಿನವರೆವಿಗೂ ತಾವಾಗಿಯೇ ತಮ್ಮನ್ನು ಕಲೆಗೆ ಪ್ರಚೋದಿಸಿಕೊಂಡು ಬೆಳೆದಂತಹ ಕಲಾಂತರ್ಗಾಮಿ ಶ್ರೀ ಕೆ. ವೆಂಕಟಪ್ಪನವರು. ಈ ಕಾರಣದಿಂದಾಗಿಯೇ ಶ್ರೀಯುತರ ಜೀವನ, ಸಾಧನೆ, ಕಲಾಕೃತಿಗಳ ಹಾಗೂ ಕಲಾಕ್ಷೇತ್ರಕ್ಕೆ ಕೊಟ್ಟ ಅವರ ವಿಶಿಷ್ಟ ಕೊಡುಗೆಯನ್ನು ಕುರಿತು ಪ್ರಸ್ತುತ ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಲಾಗಿದೆ.

ಕೆ. ವೆಂಕಟಪ್ಪನವರ ಅಧ್ಯಯನವೆಂದರೆ ಅವರ ಒಟ್ಟು ಬದುಕಿನ ಸಮಕಾಲೀನ ಕಲೆ ಹಾಗೂ ಕಲಾವಿದರ ಅಧ್ಯಯನವೆಂದೇ ಅರ್ಥ. ಹೀಗಾಗಿ ವೆಂಕಟಪ್ಪನವರ ಕುರಿತಾದ ಅಧ್ಯಯನದೊಂದಿಗೆ ಸಮಕಾಲೀನ ಕಲೆ, ಕಲಾ ಶಿಕ್ಷಣ, ಕಲಾವಿದರ ಅಧ್ಯಯನದ ಮಹತ್ವದ ವಿವರಗಳನ್ನು ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಲಾಗಿದೆ. ಕೆ. ವೆಂಕಟಪ್ಪನವರ ಬಾಲ್ಯದ ನೆನಪುಗಳು, ಮೈಸೂರು ಅರಸರ ಆಶ್ರಯದಲ್ಲಿ ಕಲಿಕೆ, ಅಲ್ಲಿಯ ಅವರ ಉದ್ಯೋಗ, ಅವರ ಕೃತಿ ರಚನೆಯ ಮೇಲಾದ ಅರಮನೆಯ ಪ್ರಭಾವ, ಅಲ್ಲಿಯ ಪರಿಸರ, ಸಂಸ್ಕೃತಿ, ಸಂಸ್ಕಾರ, ಕಲಾಶಿಕ್ಷಣಕ್ಕಾಗಿ ಕಲ್ಕತ್ತ ಪ್ರವಾಸ, ಅಲ್ಲಿಯ ಕಲಾ ಬದುಕು, ಅಲ್ಲಿ ಅವರಿಗೆ ಎದುರಾದ ಸಂಗತಿಗಳು, ಅವುಗಳನ್ನು ಎದುರಿಸಿದ ಸಂಗತಿ, ಪಾಶ್ಚಾತ್ಯ ಕಲೆಯಿಂದ ವಿಮುಕ್ತಿ ಪಡೆದು ದೇಶಿ ಪದ್ಧತಿಗೆ ತಿರುಗಿಸಿದ ಬಂಗಾಳಿ ಕಲಾಶೈಲಿ, ಆರಂಭದ ದಿನಗಳಲ್ಲಿನ ಇವರ ಅನುಭವ ಇವೆಲ್ಲದರ ಕುರಿತಾದ ತಾತ್ವಿಕ ಚಿಂತನೆಗಳ ಕುರಿತಾದ ಪ್ರಸ್ತುತ ಅಧ್ಯಯನದಲ್ಲಿ ಚರ್ಚಿಸಲು ಉದ್ದೇಶಿಸಲಾಗಿದೆ.

ಕೆ. ವೆಂಕಟಪ್ಪನವರ ನೂರಾರು ಕಲಾಕೃತಿಗಳು ವೈವಿಧ್ಯಮಯವಾದವುಗಳಾಗಿದ್ದು, ವಿವಿಧ ತಂತ್ರಗಾರಿಕೆ ಅವುಗಳಲ್ಲಿದೆ. ಅವುಗಳ ವಸ್ತುವಿಷಯ, ಮಾಧ್ಯಮದ ಕುರಿತು, ವರ್ಣ ವಿನ್ಯಾಸ, ರೇಖಾ ವಿನ್ಯಾಸಗಳ ಸ್ವರೂಪಗಳನ್ನು ಕುರಿತು ವಿಶೇಷವಾದ ಅಧ್ಯಯನ ಮಾಡುವ ಸದುದ್ದೇಶ ಇಲ್ಲಿ ಮಾಡಲಾಗುವುದು. ಕಲಾಕ್ಷೇತ್ರಕ್ಕೆ ವೆಂಕಟಪ್ಪನವರ ಸಾಧನೆಯ ವಿವಿಧ ರೀತಿಯ ಕೊಡುಗೆಗಳನ್ನು ಕಲಾವಿದರಾಗಿ ಅವರ ಸ್ಥಾನಮಾನಗಳನ್ನು, ಅವರ ಬೆಳವಣಿಗೆಯ ವಿವಿಧ ಹಂತಗಳನ್ನು ಒಂದೆಡೆಗೆ ದಾಖಲಿಸುವ ಮಹತ್ವದ



ಕಾರ್ಯವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ. ವೆಂಕಟಪ್ಪನವರ ಕಲಾಕೃತಿಗಳ ಪ್ರಮುಖ ತಂತ್ರ, ಅವರ ಧೋರಣೆ ಗುರುತಿಸುವ ಮತ್ತು ಅವರ ಕಲಾಕೃತಿಗಳು ಸಮಾಜದ ಮೇಲೆ ಮೂಡಿಸಿದ ಪರಿಣಾಮವನ್ನು, ಸೂಕ್ಷ್ಮವಾದ ಒಳನೋಟಗಳನ್ನು ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡುವ ಉದ್ದೇಶ ಹೊಂದಿದೆ.

ಈ ಹಿನ್ನೆಲೆಯಲ್ಲಿ ಸಮಕಾಲೀನ ಕಲಾ ಸಂದರ್ಭದಲ್ಲಿ ವೆಂಕಟಪ್ಪನವರ ಜೀವನ-ಸಾಧನೆ,-ಸಿದ್ಧಿ-ಕೊಡುಗೆಗಳನ್ನು ಅವರ ಕಲಾಕೃತಿಗಳ ಅಧ್ಯಯನದಿಂದ ಮುಂದಿನ ಪೀಳಿಗೆಗೆ ಪರಿಚಯಿಸಿಕೊಡುವುದೂ ಸಹ ಪ್ರಸ್ತುತ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

ಅಧ್ಯಯನದ ಸ್ವರೂಪ


ಈ ಅಧ್ಯಯನವನ್ನು ಒಟ್ಟು ಎರಡು ಅಧ್ಯಾಯಗಳನ್ನು ವಿಂಗಿಡಿಸಕೊಂಡಿದ್ದು, ಪ್ರತಿಯೊಂದು ಅಧ್ಯಾಯದ ವಿಷಯವನ್ನು ಕುರಿತ ಸಂಕ್ಷಿಪ್ತ ಸ್ವರೂಪದ ಮಾಹಿತಿಯನ್ನು ಇಲ್ಲಿ ಮಾಡಲಾಗಿದೆ.

ಒಂದನೇ ಅಧ್ಯಾಯದಲ್ಲಿ ಅಧ್ಯಯನವನ್ನು ತೆಗೆದುಕೊಳ್ಳಲು ಕಾರಣ, ಪ್ರೇರಣೆ ಮತ್ತು ಅಧ್ಯಯನದ ಅವಶ್ಯಕತೆ, ಯಾವ ಕಾರಣದಿಂದಾಗಿ ಈ ಉದ್ದೇಶವನ್ನು ಹೊಂದಲಾಗಿದೆ ಎಂಬುದರ ಪೂರ್ಣ ಮಾಹಿತಿ, ಯಾವ ಸ್ವರೂಪದಲ್ಲಿ ಈ ಅಧ್ಯಯನವನ್ನು ಮಾಡಲಾಗುವುದು ಹಾಗೂ ಯಾವ ವ್ಯಾಪ್ತಿ ಅಂಚಿನಲ್ಲಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ ಮತ್ತು ಈ ಅಧ್ಯಯನದ ವೈಧಾನಿಕತೆಯನ್ನು ಇಲ್ಲಿ ವಿಸ್ತೃತ ರೂಪದಲ್ಲಿ ಹೇಳಲಾಗುವುದು.

ಎರಡನೇ ಅಧ್ಯಾಯದಲ್ಲಿ ವೆಂಕಟಪ್ಪನವರ ಸಮಗ್ರವಾದ ಅಧ್ಯಾಯ ಇದಾಗಿದೆ. ಇಲ್ಲಿ ವೆಂಕಟಪ್ಪನವರ ಯೌವ್ವನದಿಂದ ಹಿಡಿದು ಮುಪ್ಪಿನವರೆಗಿನ ಜೀವನ, ಕಲಾ ಜೀವನ, ಸಾಧನೆ, ಅವರ ನಿಲುವು, ಅವರ ಮೈಸೂರಿನ ಬಾಲ್ಯ, ಕಲ್ಕತ್ತದ ಕಲಾ ಶಿಕ್ಷಣ, ಬೆಂಗಳೂರಿನಲ್ಲಿನ ಸಂಧ್ಯಾವಸ್ಥೆಯ ಜೀವನ ಹಾಗೂ ಕಲೆ ಇವೆಲ್ಲದರ ಸಂಪೂರ್ಣ ಮಾಹಿತಿಯನ್ನು ~~ಈ~~ ಅಧ್ಯಾಯದಲ್ಲಿ ಹೇಳಲಾಗುವುದು.

ಮೂರನೇ ಅಧ್ಯಾಯದಲ್ಲಿ ಕೆ. ವೆಂಕಟಪ್ಪನವರ ರೇಖಾಚಿತ್ರಗಳು, ಅದರ ಮೇಲಾದ ಪ್ರಭಾವ, ಪ್ರೇರಣೆ ಹಾಗೂ ಅವರು ಅಳವಡಿಸಿಕೊಂಡಿದ್ದ ಶೈಲಿಯಲ್ಲಿ ಅಜಂತಾ ಚಿತ್ರಗಳಿಂದಾದ ಪ್ರಭಾವ, ಶಾಂತಿನಿಕೇತನದಲ್ಲಿ ದೇಶೀ ಕಲೆಯ ಭರಾಟೆಯಲ್ಲಿ ಇವರ ಪತ್ರವನ್ನು ಸಹ ಇಲ್ಲಿ ಚರ್ಚಿಸಲಾಗುವುದು.

ನಾಲ್ಕನೇ ಅಧ್ಯಾಯದಲ್ಲಿ ಕೆ. ವೆಂಕಟಪ್ಪನವರು ರಚಿಸಿದ ಬೇರೆ ಬೇರೆ ಪ್ರಕಾರದ ವರ್ಣಚಿತ್ರಗಳನ್ನು ವರ್ಗೀಕರಿಸಿ, ವಿಂಗಡಿಸಲಾಗುವುದು. ಅನಂತರ ಅವುಗಳನ್ನು ಸೂಕ್ಷ್ಮವಾಗಿ ಅಭ್ಯಸಿಸಿ, ಅವುಗಳನ್ನು ತರ್ಕಕ್ಕೆ ಈಡುಮಾಡಲಾಗುವುದು. ಆ ನಂತರ ಅವುಗಳ ಮೇಲಾದ ಪ್ರಭಾವ, ಪ್ರೇರಣೆ, ಶೈಲಿ, ಮಾಧ್ಯಮವನ್ನು ಕುರಿತು ಇಲ್ಲಿ ಚರ್ಚಿಸಲಾಗುವುದು.



ಐದನೇ ಅಧ್ಯಾಯದಲ್ಲಿ ಕೆ. ವೆಂಕಟಪ್ಪನವರು ಪಿ.ಓ.ಪಿ. ಮಾಧ್ಯಮದಲ್ಲಿ ರಚಿಸಿದ ಕಲಾಕೃತಿಗಳ ಬಗ್ಗೆ ~~ಈ ಅಧ್ಯಾಯ~~ದಲ್ಲಿ ಚರ್ಚಿಸಲಾಗುವುದು. ಇಲ್ಲಿ ಅವರು ಮಾಡಲಾಗಿರುವ ಪಿ.ಓ.ಪಿ. ಮಾಧ್ಯಮದ ಟೂಡಿ ಹಾಗೂ ತ್ರೀಡಿ ಆಯಾಮದ ಶಿಲ್ಪಗಳನ್ನಾಗಿ ವರ್ಗೀಕರಿಸಿ, ಅವುಗಳ ತಂತ್ರಗಾರಿಕೆ, ಶೈಲಿ, ಅವುಗಳ ಮೇಲಾಗಿರುವ ಪ್ರಭಾವಗಳನ್ನು ಇಲ್ಲಿ ವಿವರವಾಗಿ, ವಿಸ್ತೃತ ರೂಪದಲ್ಲಿ ಹೇಳಲಾಗುವುದು.


ಆರನೇ ಅಧ್ಯಾಯದಲ್ಲಿ ಕೆ. ವೆಂಕಟಪ್ಪನವರು ರಚಿಸಲಾದ ಎಲ್ಲಾ ಮಾಧ್ಯಮದ ಕಲಾಕೃತಿಯ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ ಮತ್ತು ಶೈಲಿಯನ್ನು ಇಲ್ಲಿ ಹೇಳಲಾಗುವುದು. ವೆಂಕಟಪ್ಪನವರ ಎಲ್ಲಾ ಕೃತಿಗಳನ್ನು ಮಾಧ್ಯಮಕ್ಕೆ ಅನುಸಾರವಾಗಿ ವಿಂಗಡಿಸಿ, ಶೈಲಿಗೆ ಅನುಸಾರವಾಗಿ ವಿಭಾಗಿಸಿ, ಪ್ರತಿಯೊಂದನ್ನೂ ಇಲ್ಲಿ ಸರಳವಾಗಿ ಹೇಳಲಾಗುವುದು.

ಏಳನೇ ಅಧ್ಯಾಯದಲ್ಲಿ ವೆಂಕಟಪ್ಪನವರ ಕುರಿತು ಬಂದಂಥಹ ಪತ್ರಿಕಾ ಸಾಹಿತ್ಯ, ಅವುಗಳಲ್ಲಿ ದಿನಪತ್ರಿಕೆ, ವಾರಪತ್ರಿಕೆ, ಮಾಸ ಪತ್ರಿಕೆ, ತ್ರೈಮಾಸಿಕ ಹಾಗೂ ವಾರ್ಷಿಕ ಪತ್ರಿಕೆ, ವಿಶೇಷ ಸಂಚಿಕೆ, ಬಿಡಿ ಲೇಖನಗಳು, ತುಂಡು ಬರಹಗಳು, ಪುಸ್ತಕ ಸಾಹಿತ್ಯ ಹೀಗೆ ಎಲ್ಲಾ ರೀತಿಯಿಂದಲೂ ಬಂದಂತಹ ಸಾಹಿತ್ಯವನ್ನು, ಅದರಲ್ಲಿ ವೆಂಕಟಪ್ಪನವರ ಜೀವನ ವೃತ್ತಾಂತವನ್ನು ಶಾಬ್ದಿಕ ರೂಪದಲ್ಲಿ ವಿವರಿಸಲಾದ ಸಾಹಿತ್ಯದ ಕುರಿತು ಚರ್ಚಿಸಲಾಗುವುದು.

ಎಂಟನೇ ಅಧ್ಯಾಯದಲ್ಲಿ ಮೇಲೆ ವಿವರಿಸಲಾದ ಏಳು ಅಧ್ಯಾಯಗಳ ಫಲಿತಾಂಶಗಳನ್ನು ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

ಅಧ್ಯಯನ ವ್ಯಾಪ್ತಿ

ನಮ್ಮ ದೇಶದಲ್ಲಿಯೇ ಪ್ರಸಿದ್ಧರಾದ ಕೆ. ವೆಂಕಟಪ್ಪನವರ ಹೆಸರು ಪ್ರಪಂಚ ವ್ಯಾಪ್ತಿ ಹರಡಿದೆ. ಅದೇ ರೀತಿಯಲ್ಲಿ ಇವರ ಕಲಾಕೃತಿಗಳು ಸಹ ಪ್ರಪಂಚ ವ್ಯಾಪ್ತಿಯಾಗಿ ಹರಡಿವೆ. ದೇಶದ ಹಾಗೂ ಹೊರದೇಶದ ಹಲವಾರು ಕಲಾ ಗ್ಯಾಲರಿಗಳಲ್ಲಿ, ಅರಮನೆಗಳಲ್ಲಿ, ದೇಶದ ಹಾಗೂ ಶ್ರೀಮಂತರ ಮನೆಗಳಲ್ಲಿ ಇವರ ಕಲಾಕೃತಿಯ ಸಂಗ್ರಹವಿದ್ದು, ಕಲೆಯ ಮಿತಿ ಹಾಗೂ ಅಧ್ಯಯನದ ಮಿತಿಯನ್ನು ಪರಿಗಣಿಸಿ ಕರ್ನಾಟಕದಲ್ಲಿ ಇರುವ ಇವರ ಕಲಾಕೃತಿಗಳು ಹಾಗೂ ಕಲಾ ಸಂಗ್ರಹಾಲಯಗಳು, ಇವರ ಮನೆ, ಅರಮನೆಯಲ್ಲಿನ ಸಂಗ್ರಹಗಳು ಎಲ್ಲವನ್ನು ಆಧರಿಸಿ ಕೆ. ವೆಂಕಟಪ್ಪನವರ ಜೀವನ ಮತ್ತು ಕಲೆಯ ಅಧ್ಯಾಯಕ್ಕೆ ಬೇಕಾಗುವ ಸಾಮಗ್ರಿ ಹಾಗೂ ಮಾಹಿತಿಯನ್ನು ಕರ್ನಾಟಕದ ವ್ಯಾಪ್ತಿಯಲ್ಲಿ ಅಧ್ಯಯನ ಮಾಡಲಾಗುವುದು.



ಹೀಗೆ ತೊಂಭತ್ತರ ದಶಕದಿಂದ ಪ್ರಾರಂಭವಾದ ದೃಶ್ಯಕಲಾ ಅಧ್ಯಯನದ ಸ್ಥೂಲವಾದ ನೋಟವನ್ನು ಇಲ್ಲಿ ನೋಡಬಹುದಾಗಿದೆ. ಮುಖ್ಯವಾಗಿ ಎಂ.ಫಿಲ್. ಪದವಿಗಾಗಿ, ಪಿಹೆಚ್.ಡಿ. ಪದವಿಗಾಗಿ ನಡೆಸಿದ ಅಧ್ಯಯನಗಳು ಹಾಗೂ ಡಿ.ಲಿಟ್ ಪದವಿಗಾಗಿ ಸಂಶೋಧನಾ ಅಧ್ಯಯನ ಪ್ರಾರಂಭವಾಗಿದ್ದು, ಅವುಗಳಲ್ಲಿ ಇಲ್ಲಿ ೧. ಪಿಹೆಚ್.ಡಿ. ಪ್ರಬಂಧಗಳು. ೨. ಎಂ.ಫಿಲ್. ಪ್ರಬಂಧಗಳು, ೩. ಡಿ. ಲಿಟ್ ಪ್ರಬಂಧಗಳು ಎಂದು ವಿಂಗಡಿಸಿ ನೋಡಬಹುದಾಗಿದೆ. ಕರ್ನಾಟಕ ವಿಶ್ವವಿದ್ಯಾಲಯ ಮಟ್ಟದಲ್ಲಿ ಚಿತ್ರಕಲೆಯ ಕುರಿತು ಎಸ್.ಸಿ. ಪಾಟೀಲ ಅವರು ೧೯೮೩ರಲ್ಲಿ **"ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ–ಒಂದು ಅಧ್ಯಯನ"**[೨] ಎಂಬ ಕಿರು ಸಂಶೋಧನ ಪ್ರಬಂಧವನ್ನು ಸ್ನಾತಕೋತ್ತರ ಶಿಕ್ಷಣ ಪದವಿಯ ಅಂಶಿಕ ಅವಶ್ಯಕತೆಗಾಗಿ ೧೯೮೩ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡಕ್ಕೆ ಸಲ್ಲಿಸಿದ್ದು, ಇದು ದೃಶ್ಯಕಲಾ ಕ್ಷೇತ್ರದಲ್ಲಿ, ವಿಶ್ವವಿದ್ಯಾಲಯ ಹಂತದಲ್ಲಿ ನಡೆದ ಪ್ರಥಮ ಚಿತ್ರಕಲಾ ಶಿಕ್ಷಣದ ಕಿರು ಸಂಶೋಧನಾ ಅಧ್ಯಯನವಾಗಿದೆ.

ಆನಂತರದ ೧೯೮೭ರಲ್ಲಿ ಡಾ. ಚುಡಾಮಣಿ ನಂದಗೋಪಾಲರವರ **"ಡ್ಯಾನ್ಸ್ ಅಂಡ್ ಅದರ್ ಫೈನ್ ಆರ್ಟ್ಸ್ ಇನ್ ಕರ್ನಾಟಕ ಸ್ಕಲ್ಪಚರ್ ಅಂಡ್ ಪೇಂಟಿಂಗ್ಸ್"**[೩] ಮೈಸೂರು ವಿಶ್ವವಿದ್ಯಾಲಯದಿಂದ ಬಂದಿದೆ. ಇಲ್ಲಿ ವಿಶೇಷವಾಗಿ ನೃತ್ಯವನ್ನು ಪ್ರಮುಖವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಕರ್ನಾಟಕ ವಿಶ್ವವಿದ್ಯಾಲಯದಿಂದ **"ಬಿ.ಕೆ. ಹಿರೇಮಠರ ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ"**[೪] ಎಂಬ ಪಿಎಚ್.ಡಿ. ಪ್ರಬಂಧ ಬಂದಿದ್ದು, ಇದರಲ್ಲಿ ಸಹ ಚಿತ್ರಕಲೆಯ ಕುರಿತು ಒಂದೆರಡು ಅಧ್ಯಾಯಗಳು ಪ್ರಾಸಂಗಿಕವಾಗಿ ಬಂದಿವೆ. ಆದರೆ ಇವರ ಮುಖ್ಯವಾದ ಅಧ್ಯಯನವು ಕನ್ನಡ ಹಸ್ತಪ್ರತಿಗಳ ಕುರಿತ ಅಧ್ಯಯನವಾಗಿದೆ. ಇವು ಪ್ರಾರಂಭಿಕ ಹಂತದಲ್ಲಿ ನಡೆದ ಕೆಲವು ಪ್ರಯತ್ನಗಳಾಗಿವೆ.

೧. ಪಿಎಚ್.ಡಿ. ಪ್ರಬಂಧಗಳು

ದೃಶ್ಯಕಲೆಯನ್ನೇ ಅಧ್ಯಯನದ ಪ್ರಧಾನ ಉದ್ದೇಶವಾಗಿಟ್ಟುಕೊಂಡು ಬಂದ ಸಂಶೋಧನ ಅಧ್ಯಯನ ೧೯೯೧ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಿಂದ ಎಸ್.ಸಿ. ಪಾಟೀಲ ಅವರ **"ಕರ್ನಾಟಕದ ಜನಪದ ಚಿತ್ರಕಲೆ"**[೫] ಎಂಬ ಪಿಹೆಚ್.ಡಿ. ಪ್ರಬಂಧ ಹೊರಬಂದಿದ್ದು ಪೂರ್ಣಪ್ರಮಾಣದಲ್ಲಿ ಚಿತ್ರಕಲೆಯನ್ನೇ ಕುರಿತು ಸಂಶೋಧನೆ ನಡೆಸಿದ ಕರ್ನಾಟಕದ ಮೊಟ್ಟ ಮೊದಲ ಪಿಹೆಚ್.ಡಿ ಮಹಾಪ್ರಬಂಧವಾಗಿದೆ.

---

೦೨. ಎಸ್.ಸಿ.ಪಾಟೀಲ : ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ, ಕರ್ನಾಟಕ ವಿ.ವಿ.ಧಾರವಾಡ, ೧೯೮೩.

೦೩. ಡಾ. ಚೂಡಾಮಣಿ ನಂದಗೋಪಾಲ: "ಡ್ಯಾನ್ಸ್ ಅಂಡ್ ಆದರ್ ಫೈನ್ ಆರ್ಟ್ಸ್ ಇನ್ ಕರ್ನಾಟಕ ಸ್ಕಲ್ಪಚರ್ ಅಂಡ್ ಪೇಂಟಿಂಗ್ಸ್" ಮೈಸೂರು ವಿ.ವಿ– ೧೯೮೭

೦೪. ಡಾ. ಬಿ.ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು – ಪಿಹೆಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿ.ವಿ. ೧೯೮೭

೦೫. ಡಾ. ಎಸ್.ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿ.ವಿ. ೧೯೯೧.

ಮುಂದೆ ನಾಲ್ಕು ವರ್ಷಗಳ ನಂತರ ೧೯೯೫ ರಲ್ಲಿ **"ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು"**[೦೬] ಎಂಬ ಪಿಹೆಚ್.ಡಿ ಮಹಾಪ್ರಬಂಧವು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಅ.ಲ. ನರಸಿಂಹನ್ ಅವರಿಂದ ಸಲ್ಲಿಸಲ್ಪಟ್ಟಿತು. ೧೯೯೭ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಪುಷ್ಪಾ ದ್ರಾವಿಡ ಅವರು **"ಅನಿವಾಸಿ ಭಾರತೀಯ ಕಲಾವಿದ ದಿ ರೋರಿಕ್ ಜೀವನ ಮತ್ತು ಕಲಾಕೃತಿಗಳು"**[೦೭] ಎಂಬ ವಿಷಯದ ಮೇಲೆ, ೧೯೯೮ರಲ್ಲಿ ಸಂಪದಾ ಭಟ್ ಅವರು **"ಹಿಂದೂಸ್ಥಾನಿ ಸಂಗೀತ ಮತ್ತು ರಾಗಮಾಲಾ ಚಿತ್ರಗಳು"**[೦೮] ಎಂಬ ವಿಷಯದ ಕುರಿತು, ೨೦೦೨ ರಲ್ಲಿ ಯಾದಪ್ಪ ಪರದೇಶಿ ಅವರು **"ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ"**[೦೯], ಶಿವಾನಂದ ಬಂಟನೂರ **"ಉತ್ತರ ಕರ್ನಾಟಕದ ಜನಪದ ಶಿಲ್ಪಕಲೆ, ಒಂದು ಅಧ್ಯಯನ"**,[೧೦] ಗಿರೀಶ ಕುಮಾರ ಅವರ **"ಬುಡಕಟ್ಟು ಚಿತ್ರಕಲೆ"**,[೧೧] ಲಕ್ಷ್ಮೀದೇವಿ ಗವಾಯಿಯವರ **"ಕಲಾವಿದ ಎಂ.ಎ.ಚೆಟ್ಟಿಯವರ ಜೀವನ ಮತ್ತು ಕಲಾಕೃತಿಗಳು – ಒಂದು ಅಧ್ಯಯನ"**[೧೨], ಶರಣಪ್ಪ ಕೋಲ್ಕಾರ ಅವರ **"ಕೊಪ್ಪಳ – ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ"**,[೧೩] ಸೌಮ್ಯ ಅವರ **"ಯಂತ್ರಾ ದಿ ವಿಜ್ಯುವಲ್ ಆಫ್ ಶಂಕರ ಫಿಲಾಸಫಿ ವಿತ್ ರೆಫೆರೆನ್ಸ್ ಟು ಕಾಂಟೆಂಪರರಿ ತಾಂತ್ರಿಕ ಆರ್ಟಿಸ್ಟ್"**[೧೪], ಪ್ರಮೀಳಾ ಲೋಚನ ಅವರ **"ಮೈಂಡ್, ಮ್ಯೂಸಿಕ್ ಅಂಡ್ ಕಲರ್ ಎಕ್ಸಪೋಸೆಸ್ ಅಂಡ್ ಡೆವೆಲಪಮೆಂಟ್ ಆಫ್ ರಾಗಮಾಲಾ ಅಂಡ್ ಕಾಂಟೆಂಪರರಿ ಪೇಂಟಿಂಗ್"**[೧೫] ೨೦೦೩ರಲ್ಲಿ ವೀಣಾ ಶೇಖರ್ ಮಂಡಿಸಿದ **"ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ"**[೧೬] (೧೭೮೦ – ೧೮೨೦), ಸಿದ್ಧಲಿಂಗಸ್ವಾಮಿ

---

೦೬. ಡಾ. ಅ.ಲ. ನರಸಿಂಹನ : ಕರ್ನಾಟಕ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು. ಪಿಎಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ. ೧೯೯೮

೦೭. ಡಾ. ಪುಷ್ಪಾ ದ್ರಾವಿಡ್ : ಅನಿವಾಸಿ ಭಾರತೀಯ ಕಲಾವಿದ ದಿ. ನಿಕೋಲಸ್ ರೋರಿಕ್ ಜೀವನ ಮತ್ತು ಕಲಾಕೃತಿಗಳು. ಪಿಎಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ. ೧೯೯೭.

೦೮. ಡಾ. ಸಂಪದಾಭಟ್ : ಹಿಂದುಸ್ಥಾನ ಸಂಗೀತ ಮತ್ತು ರಾಗಮಾಲ ಚಿತ್ರಗಳು, ಪಿಎಚ್.ಡಿ. ಮಹಾಪ್ರಬಂಧ ಕನ್ನಡ ವಿ.ವಿ. ೧೯೯೮

೦೯. ಡಾ. ಯಾದಪ್ಪ ಪರದೇಶಿ : ಉತ್ತರ ಕರ್ನಾಟದ ಭಿತ್ತಿ ಚಿತ್ರಕಲೆ ಒಂದು ಅಧ್ಯಯನ, ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೧.

೧೦. ಡಾ. ಶಿವಾನಂದ ಬಂಟನೂರು : ಉತ್ತರ ಕರ್ನಾಟಕದ ಜನಪದ ಶಿಲ್ಪಕಲೆ: ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೨.

೧೧. ಡಾ. ಗಿರೀಶ ಕುಮಾರ : ಬುಡಕಟ್ಟು ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೨.


೧೨. ಡಾ. ಲಕ್ಷ್ಮೀದೇವಿ ಗವಾಯಿ : ಪಿಎಚ್.ಡಿ. ಮಹಾಪ್ರಬಂಧ "ಕಲಾವಿದ ಎಂ.ಎ.ಚೆಟ್ಟಿಯವರ ಜೀವನ ಕಲಾಕೃತಿಗಳು – ಒಂದು ಅಧ್ಯಯನ ೨೦೦೨.

೧೩. ಡಾ. ಶರಣಪ್ಪ ಕೋಲ್ಕರ್ : ಕೊಪ್ಪಳ – ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. – ೨೦೦೨.

೧೪. ಡಾ. ಸೌಮ್ಯ : ಯಂತ್ರಾ ದಿ ವಿಜುವಲ್ ಆಫ್ ಶಂಕರ ಫಿಲಾಸಫಿ ವಿತ್ ರೆಫೆರೆನ್ಸ್ ಟು ಕಾಂಟೆಂಪರರಿ ತಾಂತ್ರಿಕ ಆರ್ಟಿಸ್ಟ್ ಪಿಎಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ. ೨೦೦೨

೧೫. ಡಾ. ಪ್ರಮೀಳಾ ಲೋಚನ್ : ಮೈಂಡ್ ಕಲರ್ ಎಕ್ಸಪೋಜಿಸ್ ಅಂಡ್ ಡೆವೆಲಪಮೆಂಟ್ ಆಫ್ ರಾಗಮಾಲಾ ಅಂಡ್ ಕಾಂಟೆಂಪರರಿ ಪೇಂಟಿಂಗ್, ಪಿಎಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ. ೨೦೦೨.

೧೬. ಡಾ. ವೀಣಾಶೇಖರ : ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ (೧೭೮೦–೧೮೨೦), ಪಿಎಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ. ೨೦೦೩.



ಹಿರೇಮಠ **"ಕಲಾವಿದ ಆರ್,ಎಮ್. ಹಡಪದ, ಒಂದು ಅಧ್ಯಯನ"**[೧೭], ಎಸ್. ಸಿ. ಪಾಟೀಲರು ಕರ್ನಾಟಕ ವಿ.ವಿ.ಗೆ ಮಂಡಿಸಿದ **"ಎ ಕ್ರಿಟಿಕಲ್ ಅನಾಲಸಿಸ್ ಆಫ್ ಆರ್ಟ್ ಎಜ್ಯುಕೇಶನ್ ಅಟ್ ಸ್ಕೂಲ್ ಲೆವೆಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೆಷಲ್ ರೆಫೆರೆನ್ಸ್ ಟು ಡ್ರಾಯಿಂಗ್ ಅಂಡ್ ಪೇಂಟಿಂಗ್"**[೧೮] ಅವರ ಎರಡನೆಯ ಪಿಹೆಚ್.ಡಿ ಮಹಾಪ್ರಬಂಧ, ೨೦೦೪ ರಲ್ಲಿ ವಿ.ಎಮ್. ಬಾಗಾಯತ್ ಅವರ **ಕರ್ನಾಟಕದ ಮುಸ್ಲಿಂ ಅರಸರ ಕಾಲದ ಚಿತ್ರಕಲೆ – ಒಂದು ಅಧ್ಯಯನ"** (೧೪೦೦ – ೧೮೦೦),[೧೯] ಶಿಕುಮಾರ ಜಿ.ಓ. ಅವರ **"ಕನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು",**[೨೦] ಪಿ. ಗೌರೀಶ, ಅವರ **"ಮೈಸೂರು ಜಿಲ್ಲೆಯ ಜಾನಪದ ಚಿತ್ರಕಲೆ",**[೨೧] ಶಶಿಕಲಾ ಹೂಗಾರ ಅವರ **"ಕರ್ನಾಟಕ ತೊಗಲು ಗೊಂಬೆ"**[೨೨] ೨೦೦೫ರಲ್ಲಿ ಶಿವಪ್ರಕಾಶ ತುಕ್ಕಣ್ಣವರ ಅವರ **"ಕರ್ನಾಟಕ ರಥ ಶಿಲ್ಪಕಲೆ"**[೨೩], ಎಸ್. ವಿ. ವೆಂಕಟೇಶಯ್ಯ ಅವರ **"ಅಜಂತಾ ಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು: ಒಂದು ಅಧ್ಯಯನ"**[೨೪], ಎಚ್. ಎನ್. ಚಿತ್ರಗಾರ ಅವರ **"ಕರ್ನಾಟಕ ಹಸ್ತಪ್ರತಿ ಚಿತ್ರಕಲೆ"**[೨೫], ೨೦೦೬ರಲ್ಲಿ ವಿಶ್ವೇಶ್ವರಿ ತಿವಾರಿ ಅವರ **"ಹೈದ್ರಾಬಾದ್–ಕರ್ನಾಟಕದ ರಂಗೋಲಿ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು",**[೨೬] ೨೦೦೭ರಲ್ಲಿ ಮಲ್ಲಿಕಾರ್ಜುನ ಬಾಗೋಡಿ ಇವರ **"ಸುರಪುರ ಶೈಲಿಯ ಚಿತ್ರಕಲೆ ಒಂದು ಅಧ್ಯಯನ"**[೨೭] ಮತ್ತು ಗೀತಾಂಜಲಿ ಬಿ.ಆರ್. ಅವರ **"ಐತಿಹಾಸಿಕ ದೀಪಸ್ತಂಭಗಳು",**[೨೮]

೧೭. ಡಾ. ಸಿದ್ಧಲಿಂಗ ಸ್ವಾಮಿ ಹಿರೇಮಠ : ಕಲಾವಿದ ಆರ್,ಎಮ್. ಹಡಪದ, ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೩.

೧೮. ಡಾ. ಎಸ್.ಸಿ. ಪಾಟೀಲ : ಎ ಕ್ರಿಟಿಕಲ್ ಅನಾಲಿಸಿಸ್ ಆಫ್ ಎಜ್ಯುಕೇಶನ್ ಎಟ್ ಸ್ಕೂಲ್ ಲೆವೆಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೆಷಲ್ ರೆಫೆರೆನ್ಸ್ ಟು ಡ್ರಾಯಿಂಗ ಆಂಡ್ ಪೇಂಟಿಂಗ್ ಪಿಎಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿ.ವಿ. ಧಾರವಾಡ ೨೦೦೨.

೧೯. ಡಾ. ಎಂ.ವ್ಹಿ. ಬಾಗಾಯತ್ : ಕರ್ನಾಟಕದ ಮುಸ್ಲಿಂ ಅರಸರ ಕಾಲದ ಚಿತ್ರಕಲೆ, ಒಂದು ಅಧ್ಯಯನ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ.– ೨೦೦೪.

೨೦. ಡಾ. ಜಿ. ಶಿವಕುಮಾರ : ಕನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾನಿಜ್ಯ ಮೇಳಗಳ ವಿವಿಧ ಆಯಾಮಗಳು, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗು. – ೨೦೦೪.

೨೧. ಡಾ. ಪಿ. ಗೌರೀಶ : ಮೈಸೂರು ಜಿಲ್ಲೆಯ ಜಾನಪದ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ, ಮೈಸೂರು ವಿ.ವಿ. ೨೦೦೪.

೨೨. ಡಾ. ಶಶಿಕಲಾ ಹೂಗಾರ : ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ ಕನ್ನಡ ವಿ.ವಿ., ಹಂಪಿ – ೨೦೦೪

೨೩. ಡಾ. ಶಿವಪ್ರಕಾಶ ಎಲ್. ತುಕ್ಕಣ್ಣವರ : ಕರ್ನಾಟಕ ರಥ ಶಿಲ್ಪಕಲೆ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೪.

೨೪. ಡಾ. ಎಸ್.ವಿ. ವೆಂಕಟೇಶಯ್ಯ : ಅಜಂತಾ ಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. – ೨೦೦೫.

೨೫. ಡಾ. ಎಚ್.ಎನ್.ಚಿತ್ರಗಾರ : ಕರ್ನಾಟಕ ಹಸ್ತಪ್ರತಿ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ ಕನ್ನಡ ವಿ.ವಿ. ಹಂಪಿ. ೨೦೦೫.

೨೬. ಡಾ. ವಿಶ್ವೇಶ್ವರಿ ತಿವಾರಿ : ರಂಗೋಲಿ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗು. – ೨೦೦೬

೨೭. ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ : ಸುರಪುರ ಶೈಲಿಯ ಚಿತ್ರಕಲೆ ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗು. ೨೦೦೭.

೨೮. ಡಾ. ಗೀತಾಂಜಲಿ ಬಿ.ಆರ್. : ಕರ್ನಾಟಕದ ಐತಿಹಾಸಿಕ ದೀಪಸ್ತಂಭಗಳು, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೭.

ಲಕ್ಷ್ಮಣಸಿಂಗ್ ಆರ್. ರಾಠೋಡ್ ಅವರ **"ಅನ್ವಯಿಕ ಕಲೆ, ಹಿಂದಿನಿಂದ ಇಂದಿನವರೆಗೆ",**[೨೯] ೨೦೦೮ ರಲ್ಲಿ ಮೋಹನ್ ಪಂಚಾಳ ಅವರ **"ಕಲಾವಿದ ಎಸ್.ಎಮ್. ಪಂಡಿತ, ಬದುಕು ಮತ್ತು ಕಲೆ",**[೩೦] ವಿಶ್ವನಾಥ ಎ.ಎಸ್. ಅವರ **"ಕರಾವಳಿ ಕರ್ನಾಟಕದ ಯಕ್ಷಗಾನ ಮುಖವರ್ಣಿಕೆ ಹಾಗೂ ವೇಷಭೂಷಣಗಳು"**[೩೧], ಪಿ.ಟಿ. ಲಕ್ಕಣ್ಣನವರ ಅವರ **"ಕರ್ನಾಟಕದ ಚಿತ್ರಕಲಾ ಸಾಹಿತ್ಯ – ಒಂದು ವೈಚಾರಿಕ ಅಧ್ಯಯನ",**[೩೨] ರವಿಂದ್ರ ಕಮ್ಮಾರ ಅವರ **"ಕಲಾವಿದ ವಿ.ಬಿ.ಹಿರೇಗೌಡರ ಬದುಕು ಮತ್ತು ಕಲಾಕೃತಿಗಳು"**[೩೩], ೨೦೦೯ರಲ್ಲಿ ರೆಹಮಾನ ಪಟೇಲ ಅವರ **"ಕರ್ನಾಟಕ ಬಿದ್ರಿ ಕಲೆ" ಒಂದು ಅಧ್ಯಯನ**[೩೪], ೨೦೧೦ರಲ್ಲಿ ಶ್ರೀಮತಿ ಸುನಿತಾ ಪಾಟೀಲರವರ **"ವಿಜಯ ಸಿಂಧೂರ ಅವರ ಕಲಾಕೃತಿಗಳ ಒಳನೋಟಗಳು"**[೩೫], ೨೦೧೧ರಲ್ಲಿ ನಿಂಗಪ್ಪ ಎಂ. ಅಂಗಡಿಯವರ **"ಗಾಜಿನ ಮೇಲಿನ ಚಿತ್ರಗಳು ಒಂದು ಅಧ್ಯಯನ",**[೩೬] ಕಿಶೋರ ಎನ್. ದಾಟನಾಳ ಅವರ **"ಕಲಾವಿದ ಶಂಕರ ಪಾಟೀಲರ ಜೀವನ ಮತ್ತು ಕಲಾಕೃತಿಗಳ ಒಂದು ಅಧ್ಯಯನ"**[೩೭], ಕಾಶಿನಾಥ ಡಿ. ವಡ್ಡರ್ ಅವರ **"ಶಾಂತಿನೀಕೇತನದ ಭಿತ್ತಿಚಿತ್ರಗಳು',**[೩೮] ಸತೀಷಕುಮಾರ ವಲ್ಲ್ಯೇಪೂರೆರವರ **'ಜೆ.ಜೆ. ಕಲಾ ಶಾಲೆಯ ಪ್ರಾತಿನಿಧಿಕ ಕಲಾವಿದರು"**[೩೯], ಶಂಕರ ಕುಂದಗೋಳ ಅವರ **"ಕರ್ನಾಟಕದ ಗಂಜೀಫಾ ಚಿತ್ರಕಲೆ"**[೪೦], ೨೦೧೨ರಲ್ಲಿ ಭಾರತಿ ಮರವಂತಿ ಅವರ **"ಕರಾವಳಿ ಕರ್ನಾಟಕದ ರಂಗೋಲಿ ಚಿತ್ರಕಲೆ"**[೪೧], ಕಾಮಾಕ್ಷಿ ಸಿ. ಸೊಪ್ಪಣ ಅವರ **"ಕರ್ನಾಟಕದ ಬಟ್ಟೆ**

---

೨೯. ಡಾ. ಲಕ್ಷ್ಮಣಸಿಂಗ್ ಆರ್. ರಾಠೋಡ : ಅನ್ವಯಿಕ ಕಲೆ ಹಿಂದಿನಿಂದ ಇಂದಿನವರೆಗೆ, ಪಿಎಚ್.ಡಿ. ಮಹಾಪ್ರಬಂಧ, ಮೈಸೂರು ವಿ.ವಿ. – ೨೦೦೭

೩೦. ಡಾ. ಮೋಹನ್ ಪಂಚಾಳ : ಕಲಾವಿದ ಎಸ್.ಎಮ್. ಪಂಡಿತ, ಬದುಕು ಮತ್ತು ಕಲೆ, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗು – ೨೦೦೮.

೩೧. ಡಾ. ವಿಶ್ವನಾಥ ಎ.ಎಸ್. ಕರಾವಳಿ ಕರ್ನಾಟಕದ ಯಕ್ಷಗಾನ ಮುಖವರ್ಣಿಕೆ ಹಾಗೂ ವೇಷಭೂಷಣಗಳು ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. – ೨೦೦೮.

೩೨. ಡಾ.ಪಿ.ಟಿ. ಲಕ್ಕಣ್ಣನವರ : ಕರ್ನಾಟಕದ ಚಿತ್ರಕಲಾ ಸಾಹಿತ್ಯ – ಒಂದು ವೈಚಾರಿಕ ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೮.

೩೩. ಡಾ. ರವಿಂದ್ರ ಕಮ್ಮಾರ : ಕಲಾವಿದ ವಿ.ಬಿ.ಹಿರೇಗೌಡರ ಬದುಕು ಮತ್ತು ಕಲಾಕೃತಿಗಳು, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ.೨೦೦೮.

೩೪. ಡಾ. ರೆಹಮಾನ ಪಟೇಲ : ಕನಾಟಕದ ಬಿದ್ರಿ ಕಲೆ – ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗು – ೨೦೦೯

೩೫. ಡಾ. ಸುನಿತಾ ಪಾಟೀಲ : ವಿಜಯ ಸಿಂಧೂರ ಅವರ ಕಲಾಕೃತಿಗಳ ಒಳನೋಟಗಳು, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ ೨೦೧೦

೩೬. ಡಾ. ನಿಂಗಪ್ಪ ಎಂ. ಅಂಗಡಿ : ಗಾಜೀನ ಮೇಲಿನ ಚಿತ್ರಗಳು – ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ ೨೦೧೦

೩೭. ಡಾ. ಕಿಶೋರ ಎನ್. ದಾಟನಾಳ : ಕಲಾವಿದ ಶಂಕರ ಪಾಟೀಲರ ಜೀವನ ಮತ್ತು ಕಲಾಕೃತಿಗಳ – ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೧೦.


೩೮. ಡಾ. ಕಾಶಿನಾಥ ಡಿ. ವಡ್ಡರ : ಶಾಂತಿನೀಕೇತರದ ಭಿತ್ತಿಚಿತ್ರಗಳು, ಪಿಎಚ್.ಡಿ. ಮಹಾಪ್ರಬಂಧ : ಗು.ವಿ.ಗು– ೨೦೧೧

೩೯. ಡಾ. ಸತೀಶಕುಮಾರ ವಲ್ಲ್ಯೇಪೂರೆ : ಜೆ.ಜೆ. ಕಲಾ ಶಾಲೆಯ ಪ್ರಾತಿನಿಧಿಕ ಕಲಾವಿದರು, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗು, ೨೦೧೧.

೪೦. ಡಾ. ಶಂಕರ ಕುಂದಗೋಳ : "ಕರ್ನಾಟಕದ ಗಂಜೀಫಾ ಚಿತ್ರಕಲೆ" ಕನ್ನಡ ವಿ.ವಿ. ಹಂಪಿ. ೨೦೧೨

೪೧. ಡಾ. ಭಾರತಿ ಮರವಂತಿ : "ಕರಾವಳಿ ಕರ್ನಾಟಕದ ರಂಗೋಲಿ ಚಿತ್ರಕಲೆ" ಮೈಸೂರು ವಿ.ವಿ. ೨೦೧೨

೪೨. ಡಾ. ಕಾಮಾಕ್ಷಿ ಸಿ. ಸೊಪ್ಪಣ : "ಕರ್ನಾಟಕ ಬಟ್ಟೆ ಮಾಧ್ಯಮದ ಚಿತ್ರಕಲೆ" ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ. ೨೦೧೨



ಮಾಧ್ಯಮದ ಚಿತ್ರಕಲೆ"[೪೨] ಇವು ದೃಶ್ಯಕಲೆಗಳ ಕುರಿತು ಬಂದ ಪಿಹೆಚ್.ಡಿ. ಮಹಾಪ್ರಬಂಧಗಳಾಗಿವೆ. ಅನೇಕ ಜನ ವಿದ್ಯಾರ್ಥಿಗಳು ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಈಗ ದೃಶ್ಯಕಲಾ ಕ್ಷೇತ್ರದಲ್ಲಿ ಸಂಶೋಧನ ಮಾಡುತ್ತಿದ್ದಾರೆ.

೨. ಡಿ. ಲಿಟ್ ಮಹಾಪ್ರಬಂಧಗಳು

ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದಲ್ಲಿ ಮೊದಲ ಬಾರಿಗೆ ದೃಶ್ಯಕಲೆಗಳಿಗೆ ಸಂಬಂಧಿಸಿದಂತೆ ಡಿ.ಲಿಟ್. ಸಂಶೋಧನಾ ಅಧ್ಯಯನಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದು, ಈ ಹಿನ್ನೆಲೆಯಲ್ಲಿ ಹೊರಬಂದ ಡಿ.ಲಿಟ್ ಪ್ರಬಂಧಗಳು ಹೀಗಿವೆ.

೨೦೦೧ರಲ್ಲಿ ದೇವದಾಸ ಕಳಸದ ಇವರ **"ಕರ್ನಾಟಕದ ರಂಗಭೂಮಿ, ರಂಗಸಜ್ಜಿಕೆ ಮತ್ತು ಪ್ರಸಾಧನ ಕಲೆ",**[೪೩] ೨೦೦೫ರಲ್ಲಿ ಬಂದ ಆನಂದ ಪೂಜಾರರ **"ಕರಾವಳಿಯ ಕಾವಿ ಚಿತ್ರಕಲೆ".**[೪೪] ಡಿ.ಎ. ಉಪಾಧ್ಯ ಅವರ **"ವಾಸ್ತು-ಶಿಲ್ಪ-ಚಿತ್ರಕಲೆಯ ಹಿನ್ನೆಲೆಯಲ್ಲಿ ದೃಶ್ಯಕಲೆಗಳ ತೌಲನಿಕ ಅಧ್ಯಯನ",**[೪೫] ೨೦೧೦ರಲ್ಲಿ ಎಂ.ಎಸ್. ಮೂರ್ತಿ ಅವರ **"ಮಕ್ಕಳ ಮನಸ್ಸಿನ ಚಿತ್ರಗಳು"**[೪೬] ಮುಖ್ಯವಾಗಿವೆ. ಈ ಡಿ.ಲಿಟ್ ಅಧ್ಯಯನಕ್ಕೆ ಯಾವುದೇ ರೀತಿಯ ವಿಶ್ವವಿದ್ಯಾಲಯದ ಪದವಿಗಳ ಅವಶ್ಯಕತೆ ಇರುವುದಿಲ್ಲ. ಆಯಾ ಕ್ಷೇತ್ರದಲ್ಲಿ ಅಧ್ಯಯನ ಮಾಡುವವರ ತಜ್ಞತೆಯನ್ನೇ ಮುಖ್ಯವಾಗಿ ಕನ್ನಡ ವಿಶ್ವವಿದ್ಯಾಲಯವು ಪರಿಶೀಲಿಸಿ ಇಂಥಹ ಅಧ್ಯಯನಕ್ಕೆ ಅವಕಾಶವನ್ನು ನೀಡುತ್ತಾ ಬಂದಿದೆ. ಕನ್ನಡ ವಿಶ್ವವಿದ್ಯಾಲಯದಲ್ಲಿ ಮಾತ್ರ ಇಂತಹ ಡಿ.ಲಿಟ್ ಸಂಶೋಧನ ಅಧ್ಯಯನಕ್ಕೆ ಅವಕಾಶವಿದೆ.

೩. ಎಂ.ಫಿಲ್. ಅಧ್ಯಯನಗಳು

ಕನಾಟಕದಲ್ಲಿ ಮೊದಲಬಾರಿಗೆ ಎಂ.ಫಿಲ್. ಸಂಶೋಧನಾ ಅಧ್ಯಯನವು ಪ್ರಾರಂಭಗೊಂಡಿದ್ದು ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಇದೊಂದು ಗಮನಾರ್ಹ ಅಂಶವಾಗಿದೆ. ಈಗ ಕನ್ನಡ ವಿಶ್ವವಿದ್ಯಾಲಯದಲ್ಲಿ ಮಾತ್ರ ಎಂ.ಫಿಲ್. ಸಂಶೋಧನಾ ಅಧ್ಯಯನ ನಡೆಯುತ್ತಿದೆ. ಹೀಗೆ ನಡೆದು ಬಂದ ಎಂ.ಫಿಲ್ ಸಂಶೋಧನಾ ಅಧ್ಯಯನಗಳು ಹೀಗಿವೆ. ೨೦೦೨ರಲ್ಲಿ ಮಲ್ಲಿಕಾರ್ಜುನ

---


೪೩. ಡಾ. ದೇವದಾಸ ಕಳಸದ : ಕರ್ನಾಟಕದ ರಂಗಭೂಮಿ, ರಂಗಸಜ್ಜಿಕೆ ಮತ್ತು ಪ್ರಸಾಧನ ಕಲೆ, ಡಿ.ಲಿಟ್ ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ ೨೦೦೧

೪೪. ಡಾ. ಆನಂದ ಪೂಜಾರ : ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ, ಡಿ.ಲಿಟ್ ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೫.

೪೫. ಡಾ. ಡಿ.ವಿ. ಉಪಾಧ್ಯ : ವಾಸ್ತು-ಶಿಲ್ಪ-ಚಿತ್ರಕಲೆಯ ಹಿನ್ನೆಲೆಯಲ್ಲಿ ದೃಶ್ಯಕಲೆಗಳ ತೌಲನಿಕ ಅಧ್ಯಯನ, ಡಿ.ಲಿಟ್ ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ - ೨೦೦೫.

೪೬. ಡಾ. ಎಂ.ಎಸ್. ಮೂರ್ತಿ: ಮಕ್ಕಳ ಮನಸ್ಸಿನ ಚಿತ್ರಗಳು, ಡಿ.ಲಿಟ್ ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೧೦

೪೭. ಮಲ್ಲಿಕಾರ್ಜುನ ಬಾಗೋಡಿ : ಚಿತ್ರಕಲಾವಿದ ಜೆ.ಎಸ್.ಖಂಡೇರಾವ ಒಂದು ಅಧ್ಯಯನ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ ೨೦೦೨.



ಬಾಗೋಡಿಯವರ **"ಚಿತ್ರಕಲಾವಿದ ಜೆ.ಎಸ್.ಖಂಡೇರಾವ : ಒಂದು ಅಧ್ಯಯನ"**,[೪೭] ೨೦೦೩ ರಲ್ಲಿ ಎ.ಎಸ್. ವಿಶ್ವನಾಥ ಅವರ **"ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣಗಳು"**,[೪೮] ೨೦೦೫ ರಲ್ಲಿ ಸಿ.ಡಿ. ಜಟ್ಟೆಣ್ಣನವರ ಅವರ **"ಎಂ.ವಿ. ಮಿಣಜಗಿ ಜೀವನ ಮತ್ತು ಕಲಾಬದುಕು"**,[೪೯] ಶಂಕರ ಕುಂದಗೋಳರ **"ಡಿ.ವಿ. ಹಾಲಭಾವಿಯವರ ಜೀವನ ಮತ್ತು ಕಲಾಬದುಕು"**,[೫೦] ೨೦೦೬ರಲ್ಲಿ ಸುಚಿತ್ರಾ ಲಿಂಗದಳ್ಳಿಯವರ **"ವಿಜಯನಗರದ ಭಿತ್ತಿ ಚಿತ್ರಕಲೆ"**,[೫೧] ರಾಜಕುಮಾರ ಎಸ್. ಕಾಳೆ ಅವರ **"ಔಂದ ಗ್ಯಾಲರಿ"**,[೫೨] ಕುರಿತು. ೨೦೦೭ರಲ್ಲಿ ಜಿತೇಂದ್ರ ಜಿ. ಕೋತಳಿಕರ ಅವರ **"ಕಲಾವಿದ ವಿದ್ಯಾಭೂಷಣರ ಕಲಾಕೃತಿಗಳು"**,[೫೩] ಬಿ.ಎಂ. ಪಾಟೀಲರ **"ನಿಪ್ಪಾಣಿ ವಾಡೆಯ ಭಿತ್ತಿ ಚಿತ್ರಗಳು"**,[೫೪] ಉಮೇಶ ಎ.ಎಸ್. **"ಕರ್ನಾಟಕ ಜೈನ ಚಿತ್ರಕಲೆ"**,[೫೫] ರವಿ ನಾಯಕರ **"ಕಿನ್ನಾಳ ಕಲೆ"**,[೫೬] ಶಶಿಕಾಂತ ಬಸರಿಕಟ್ಟಿಯವರ **"ಕಲಘಟಗಿಯ ಚಿತ್ರಕಲೆ"**,[೫೭] ಶೈಲಾ ಬರಡೋಲರ **"ಸಂತ ಕಲಾವಿದ ಶುಭಾರಾಯರ ಜೀವನ ಮತ್ತು ಕಲಾಕೃತಿಗಳು"**[೫೮] ಎಂಬ ಪ್ರಬಂಧಗಳು ಹೊರಬಂದಿವೆ.

೨೦೦೮ರಲ್ಲಿ ಕೃಷ್ಣವೇಣಿ **"ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ"**[೫೯] ಯೋಗೀಶ ಹೆಚ್. **"ಚಿತ್ರದುರ್ಗ ಜಿಲ್ಲೆಯ ಚಿತ್ರಕಲೆ"**,[೬೦] ಮಹಾಕೂಟೇಶ್ವರಗೌಡ ಪಾಟೀಲ **"ಬೆಳಗಾವಿ ಜಿಲ್ಲೆಯ ಚಿತ್ರಕಲೆ"**,[೬೧] ಸುರೇಶ ಬಡಿಗೇರ **"ಕನ್ನಡ ವಿಶ್ವವಿದ್ಯಾಲಯದ ಸಂಗ್ರಹದ ಹಸ್ತಪ್ರತಿಗಳ ಚಿತ್ರಕಲೆ"**,[೬೨] ಸಂತೋಷಕುಮಾರ ಕುಲಕರ್ಣಿ ಅವರ **"ದಾವಣಗೆರೆ ಜಿಲ್ಲೆಯ ಚಿತ್ರಕಲೆ"**,[೬೩] ಜಯರಾಜ ಚಿಕ್ಕಪಾಟೀಲರ **"ಕರ್ನಾಟಕದ**

---

೪೮. ಎ.ಎಸ್. ವಿಶ್ವನಾಥ : ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೩

೪೯. ಸಿ.ಡಿ. ಜಟ್ಟೆಣ್ಣವರ: ಎಂ.ವಿ.ಮಿಣಜಗಿ ಜೀವನ ಮತ್ತು ಕಲಾಬದುಕು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ.ಹಂಪಿ–೨೦೦೫.

೫೦. ಶಂಕರ ಕುಂದಗೋಳ : ಡಿ.ವಿ. ಹಾಲಭಾವಿಯವರ ಜೀವನ ಮತ್ತು ಕಲಾಬದುಕು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೬

೫೧. ಸುಚಿತ್ರಾ ಲಿಂಗದಳ್ಳಿ : ವಿಜಯನಗರದ ಭಿತ್ತಿಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೬.

೫೨. ರಾಜಕುಮಾರ ಎಸ್. ಕಾಳೆ : ಔಂದ ಗ್ಯಾಲರಿ ಎಂ.ಫಿಲ್ ಪ್ರಬಂಧ, ಗು.ವಿ.ಗು – ೨೦೦೭

೫೩. ಜಿತೇಂದ್ರ ಜಿ. ಕೋತಳಿಕರ : ಕಲಾವಿದ ವಿದ್ಯಾಭೂಷಣರ ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಗು.ವಿ.ಗು – ೨೦೦೭.

೫೪. ಬಿ.ಎಂ. ಪಾಟೀಲ : ನಿಪ್ಪಾಣಿ ವಾಡೆಯ ಭಿತ್ತಿ ಚಿತ್ರಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೭

೫೫. ಉಮೇಶ ಎ.ಎಸ್. : ಕರ್ನಾಟಕ ಜೈನ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೭

೫೬. ರವಿ ನಾಯಕ : ಕಿನ್ನಾಳ ಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೭

೫೭. ಶಶಿಕಾಂತ ಬಸರಿಕಟ್ಟಿ : ಕಲಘಟಗಿಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೭

೫೮. ಶೈಲಾ ಬರಡೋಲ : ಸಂತ ಕಲಾವಿದ ಶುಭಾರಾಯರ ಜೀವನ ಮತ್ತು ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ. ೨೦೦೭

೫೯. ಕೃಷ್ಣವೇಣಿ : ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೮

೬೦. ಯೋಗೀಶ ಹೆಚ್. : ಚಿತ್ರದುರ್ಗ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮

೬೧. ಮಹಾಕೂಟೇಶ್ವರಗೌಡ ಪಾಟೀಲ : ಬೆಳಗಾವಿ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮

೬೨. ಸುರೇಶ ಬಡಿಗೇರ : ಕನ್ನಡ ವಿ.ವಿ. ಸಂಗ್ರಹದ ಹಸ್ತಪ್ರತಿಗಳ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮

೬೩. ಸಂತೋಷಕುಮಾರ ಕುಲಕರ್ಣಿ : ದಾವಣಗೇರೆ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೮

೬೪. ಜಯರಾಜ ಚಿಕ್ಕಪಾಟೀಲ : ಕರ್ನಾಟಕದ ಜಾಹೀರಾತುಗಳಲ್ಲಿ ಸಾಂಸ್ಕೃತಿಕ ನೆಲೆಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೮

೬೫. ಮಹೇಶ ಉಮತಾರ : ಬಿ.ಪಿ. ಬಾಯಿರಿ ಕಲೆ ಮತ್ತು ಕಲಾ ಸಾಹಿತ್ಯ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮

ಜಾಹೀರಾತುಗಳಲ್ಲಿ ಸಾಂಸ್ಕೃತಿಕ ನೆಲೆಗಳು",[೧೪] ಮಹೇಶ ಉಮತಾರ ಅವರ **"ಬಿ.ಪಿ. ಬಾಯಿರಿ ಕಲೆ ಮತ್ತು ಕಲಾ ಸಾಹಿತ್ಯ"**[೧೫] ಗಿರಿಜಾ ಬಿರಾದಾರರ **"ವಿಜಾಪೂರ ಜಿಲ್ಲೆಯ ಚಿತ್ರಕಲೆ",**[೧೬] ಬಸಯ್ಯ ಗವಿಮಠ ಅವರ **"ಬಾಗಲಕೋಟ ಜಿಲ್ಲೆಯ ಚಿತ್ರಕಲೆ",**[೧೭] ಕೃಷ್ಣೆಗೌಡ ಹೆಚ್.ಎನ್. ಅವರ **"ಕರ್ನಾಟಕದಲ್ಲಿ ಟಿಬೇಟಿಯನ್ನರ ಚಿತ್ರಕಲೆ",**[೧೮] ಮಹಾಂತೇಶ ಪಲದಿನ್ನಿ ಅವರ **"ಕರ್ನಾಟಕದ ಲಜ್ಜಾಗೌರಿ ಶಿಲ್ಪಗಳು"**[೧೯] ಮತ್ತು ೨೦೦೯ರಲ್ಲಿ ಕಾಂತರಾಜ ಅವರ **"ಸಿಬಿ ದೇವಾಲಯದ ಭಿತ್ತಿ ಚಿತ್ರಕಲೆ",**[೨೦] ರಂಗಸ್ವಾಮಿ ಅವರ **"ಚಿತ್ರಕಲಾವಿದ ರುಮಾಲೆ ಚನ್ನಬಸಯ್ಯನವರ ಬದುಕು ಮತ್ತು ಕಲೆ"**[೨೧] ಶ್ಯಾಮ ತಾ. ಜಮಾದಾರ ಅವರ **ಕಲಾವಿದ ಸಿ.ಎನ್. ಪಾಟೀಲರ ಬದುಕು ಮತ್ತು ಕಲಾಕೃತಿಗಳು,**[೨೨] ೨೦೧೦ರಲ್ಲಿ ಭಾನುಮತಿ ಕೆ.ಎಲ್. ಅವರ **"ಚಿತ್ರಕಲಾವಿದ ಎಂ.ಜಿ. ವಾಚೇದಮಠ ಬದುಕು ಮತ್ತು ಕಲಾಕೃತಿಗಳು",**[೨೩] ದಿನೇಶ ಬಿ. ಅವರ **"ಚನ್ನಪಟ್ಟಣದ ಚಿತ್ತಾರ ಗೊಂಬೆಗಳು",**[೨೪] ವಾದಿರಾಜ ಎ. ಅವರ **"ಕಲಾವಿದ ಎಲ್. ಶಿವಲಿಂಗಪ್ಪನವರ ಜೀವನ ಕಲಾಕೃತಿಗಳು",**[೨೫] ಚಿಂತಾಮಣಿ ಅವರ **"ಕರ್ನಾಟಕದ ಚಿತ್ರಕಲೆಯಲ್ಲಿ ದಶಾವತಾರದ ಕಲ್ಪನೆ"**[೨೬] ಇವುಗಳೆಲ್ಲಾ ಎಂ.ಫಿಲ್ ಪ್ರಬಂಧಗಳಾಗಿವೆ.

ಇಲ್ಲಿಯವರೆಗೆ ಕರ್ನಾಟಕದಲ್ಲಿ ಒಟ್ಟು ಮೂವತ್ತೊಂದು ಎಂ.ಫಿಲ್. ಪದವಿಯ ಸಂಶೋಧನಾ ಪ್ರಬಂಧಗಳು ಹೊರಬಂದಿದ್ದು, ಗುಲಬರ್ಗಾ ವಿಶ್ವವಿದ್ಯಾಲಯದಿಂದ ಎರಡು ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ ಇಪ್ಪತ್ತೊಂಬತ್ತು ಎಂ.ಫಿಲ್. ಪ್ರಬಂಧಗಳು ಹೊರಬಂದಿವೆ. ಇದಲ್ಲದೆ ಇನ್ನೂ ಅನೇಕ ಪಿಹೆಚ್.ಡಿ., ಎಂ.ಫಿಲ್ ಮತ್ತು ಡಿ.ಲಿಟ್ ಪ್ರಬಂಧಗಳು ರಚನೆಯ ಹಂತದಲ್ಲಿವೆ. ಇವುಗಳಲ್ಲದೆ ಸ್ನಾತಕೋತ್ತರ ಮತ್ತು ಸ್ನಾತಕ ಪದವಿಗಳ ಹಂತದಲ್ಲಿಯೂ ಕಿರುಶೋಧ ಪ್ರಬಂಧಗಳು ರಚನೆಯಾಗುತ್ತಿರುವುದು ಗಮನಾರ್ಹ ಸಂಗತಿಯಾಗಿದೆ.

---

೧೬. ಗಿರೀಜಾ ಬಿರಾದಾರ : ವಿಜಾಪೂರ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮

೧೭. ಬಸಯ್ಯ ಗವಿಮಠ : ಬಾಗಲಕೋಟ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೮

೧೮. ಕೃಷ್ಣೇಗೌಡ ಹೆಚ್.ಎನ್.: ಕರ್ನಾಟಕದಲ್ಲಿ ಟಿಬೇಟಿಯನ್ನರ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮

೧೯. ಮಹಾಂತೇಶ ಪಲದಿನ್ನಿ : ಕರ್ನಾಟಕದ ಲಜ್ಜಾಗೌರಿ ಶಿಲ್ಪಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೮

೨೦. ಕಾಂತರಾಜ : ಸಿಬಿ ದೇವಾಲಯದ ಭಿತ್ತಿ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮

೨೧. ರಂಗಸ್ವಾಮಿ : ಚಿತ್ರಕಲಾವಿದ ರುಮಾಲೆ ಚನ್ನಬಸಯ್ಯನವರ ಬದುಕು ಮತ್ತು ಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೮


೨೨. ಶ್ಯಾಮ ತಾ. ಜಮಾದಾರ : ಕಲಾವಿದ ಸಿ.ಎನ್. ಪಾಟೀಲರ ಬದುಕು ಮತ್ತು ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮

೨೩. ಭಾನುಮತಿ ಕೆ.ಎಲ್. : ಚಿತ್ರಕಲಾವಿದ ಎಂ.ಜಿ. ವಾಚೇದಮಠ ಬದುಕು ಮತ್ತು ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮

೨೪. ದಿನೇಶ ಬಿ. : ಚನ್ನಪಟ್ಟಣದ ಚಿತ್ತಾರ ಗೊಂಬೆಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮

೨೫. ವಾದಿರಾಜ ಎ. : ಕಲಾವಿದ ಎಲ್. ಶಿವಲಿಂಗಪ್ಪನವರ ಜೀವನ ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮

೨೬. ರೇವಣಪ್ಪ ಚಿಂತಾಮಣಿ : ಕರ್ನಾಟಕದ ಚಿತ್ರಕಲೆಯಲ್ಲಿ ದಶಾವತರಾದ ಕಲ್ಪನೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮




ಇತ್ತೀಚಿಗೆ ಕನ್ನಡ ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಗುಲಬರ್ಗಾ ವಿಶ್ವವಿದ್ಯಾಲಯ, ಧಾರವಾಡ, ಶಿವಮೊಗ್ಗ, ದಾವಣಗೆರೆ ವಿಶ್ವವಿದ್ಯಾಲಯಗಳಲ್ಲಿ ಹಲವಾರು ವಿದ್ಯಾರ್ಥಿಗಳು ಅಧ್ಯಯನದಲ್ಲಿ ನಿರತರಾಗಿದ್ದಾರೆ. ಎ.ಟಿ.ಸಿ. (ಆರ್ಟ ಟೀಚರ್ ಕೋರ್ಸ್) ಐದು ವರ್ಷದ ವಿಶೇಷ ಪರಿಣಿತಿ, ಚಿತ್ರಶಿಲ್ಪ, ಗ್ರಾಫಿಕ್, ವಾಣಿಜ್ಯ ಕಲೆ, ಡಿಪ್ಲೋಮ ಅಂತಿಮ ವರ್ಷದ ತರಗತಿಗಳಲ್ಲಿ ಈ ಕೋರ್ಸ್‌ನ ಭಾಗವಾಗಿ ಕಿರು ಪ್ರಬಂಧಗಳನ್ನು ರಚಿಸಿದ್ದು, ಇವುಗಳ ಸಂಖ್ಯೆ ಮೂರು ಸಾವಿರಕ್ಕೂ ಅಧಿಕವಾಗಿವೆ. ಬ್ಯಾಚುಲರ್ ಆಫ್ ಫೈನ್ ಆರ್ಟ್ಸ. (ಬಿ.ಎಫ್.ಎ) ಬ್ಯಾಚುಲರ್ ಆಫ್ ವಿಜ್ಯುವಲ್ ಆರ್ಟ್ಸ (ಬಿ.ವಿ.ಎ.) ಪದವಿ ಫೈನ್ ಆರ್ಟ್ಸ್ (ಎಮ್.ಎಫ್.ಎ) ಸ್ನಾತಕೋತ್ತರ ಪದವಿ ತರಗತಿಗಳಿಗೆ ಅಧ್ಯಯನದ ಭಾಗವಾಗಿ ಈ ಕಿರು ಸಂಶೋಧನಾ ಪ್ರಬಂಧಗಳು ರಚನೆಯಾಗುತ್ತಿವೆ.

ಈ ಕಿರು ಪ್ರಬಂಧಗಳು ವಿದ್ಯಾರ್ಥಿಗಳು ಆಯಾ ಕೋರ್ಸಿನ ಅಧ್ಯಯನದ ಸಂದರ್ಭದಲ್ಲಿ ನಡೆಸಿದ ಸಂಶೋಧನಾ ಅಧ್ಯಯನಗಳಾಗಿದ್ದು, ಇವು ಮುಂದೆ ಸಂಶೋಧನ ಅಧ್ಯಯನಕ್ಕೆ ಅಭ್ಯರ್ಥಿಗಳು ತೊಡಗಿಸಿಕೊಳ್ಳಲು ಈ ಹಂತದ ಅಧ್ಯಯನಗಳು ತುಂಬಾ ಸಹಾಯಕಾರಿಯಾಗಿವೆ. ಮತ್ತು ಅನೇಕ ವೈವಿಧ್ಯಮಯವಾದ ವಿಷಯದ ಈ ಕಿರುಪ್ರಬಂಧಗಳು ಸಂಶೋಧನಾ ಅಧ್ಯಯನಕ್ಕೆ ಆಕರ ಸಾಮಾಗ್ರಿಯಾಗಿವೆ. ಹೀಗೆ ಕರ್ನಾಟಕದಲ್ಲಿ ತೊಂಭತ್ತರ ದಶಕದಿಂದ ಪ್ರಾರಂಭವಾದ ದೃಶ್ಯಕಲಾ ಸಂಶೋಧನ ಅಧ್ಯಯನವು ನಡೆದುಬಂದ ಹಿನ್ನೆಲೆಯ ಸ್ಥೂಲ ನೋಟವನ್ನು ಕೊಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಒಟ್ಟಾರೆ ಕರ್ನಾಟಕ ದೃಶ್ಯಕಲಾ ಕ್ಷೇತ್ರದ ಸಂಶೋಧನಾ ಅಧ್ಯಯನವು ಇನ್ನುಳಿದ ಕ್ಷೇತ್ರಗಳಲ್ಲಿ ನಡೆದ ಸಂಶೋಧನೆಯನ್ನು ಗಮನಿಸಿದರೆ ಈ ಕ್ಷೇತ್ರದಲ್ಲಿ ನಡೆದ ಸಂಶೋಧನ ಅಧ್ಯಯನ ತುಂಬಾ ಕಡಿಮೆ ಪ್ರಮಾಣದ್ದಾಗಿದೆ. "ಇಲ್ಲಿ ನಡೆದ ಸಂಶೋಧನಾ ಅಧ್ಯಯನಗಳು ಪ್ರಾಥಮಿಕ ಆಕರಗಳ ಸಂಗ್ರಹ ಸಮೀಕ್ಷೆ ರೂಪದ ಸಂಶೋಧನಾ ಅಧ್ಯಯನಗಳೇ ಹೆಚ್ಚಾಗಿವೆ. ಅಲ್ಲಲ್ಲಿ ವಿಶ್ಲೇಷಣಾತ್ಮಕ ಅಧ್ಯಯನಗಳು ಮತ್ತು ಅಧ್ಯಯನದ ಹಿಂದಿನ ತಾತ್ವಿಕ ಸಿದ್ಧಾಂತಗಳ ಪರಿಕಲ್ಪನೆಯನ್ನು ಕಟ್ಟಿಕೊಡುವ ಪ್ರಯತ್ನದ ಸಂಶೋಧನ ಅಧ್ಯಯನಗಳು ಸ್ವಲ್ಪ ಪ್ರಮಾಣದಲ್ಲಿ ನಡೆದಿವೆ ಎಂದು ಡಾ. ಎಸ್.ಸಿ. ಪಾಟೀಲ ಅವರು ವ್ಯಕ್ತಪಡಿಸಿದ ಅಭಿಪ್ರಾಯಗಳು ವಾಸ್ತವದ ಚಿತ್ರಣವಾಗಿದೆ."

ಕೆ.ವೆಂಕಟಪ್ಪನವರ ಕುರಿತು ಇಲ್ಲಿಯವರೆಗೆ ಬಂದ ಸಾಹಿತ್ಯ ಸಮೀಕ್ಷೆ

ಕೆ. ವೆಂಕಟಪ್ಪನವರ ಕುರಿತಾಗಿ ಹಲವಾರು ಕಲಾ ಸಾಹಿತ್ಯಗಳು ಇಲ್ಲವರೆಗೆ ಹಲವು ಕ್ರಮಗಳಲ್ಲಿ ಬಂದವೆ ಪುಸ್ತಕರೂಪ, ಪತಿಕಾ ಲೇಖನ, ತುಂಡು ಬರಹಗಳು, ಹೀಗೆ ಹಲವು ಬಗೆಯಲ್ಲಿ ಬಂದವೆ




ಅದೇ ರೀತಿಯಲ್ಲಿ ಮೊಟ್ಟಮೊದಲಿಗೆ ಅವರ ಮರಣದ ನಂತರ ೧೯೬೮ರಲ್ಲಿ ಜಯ ಅಪ್ಪಸ್ವಾಮಿಯವರು ಬರೆದ ವೆಂಕಟಪ್ಪ ಎಂಬ ಇಂಗ್ಲೀಷ್ ಭಾಷೆಯ ಪುಸ್ತಕವೊಂದು ಲಲಿತಕಲಾ ಅಕಾಡೆಮಿ ನವದೆಹಲಿ ಇವರಿಂದ ಪ್ರಕಾಶನಗೊಂಡಿದೆ. ಇದರಲ್ಲಿ ಇವರ ಜೀವನ ಕ್ರಮವನ್ನು ಕುರಿತು ಸಂಕ್ಷಿಪ್ತವಾಗಿ ಹೇಳಲಾಗಿದೆ, ಇದಾದನಂತರ ೧೯೮೩ರಲ್ಲಿ ಪಿ.ಆರ್. ತಿಪ್ಪೇಸ್ವಾಮಿಯವರು ಬರೆದ ಕೆ. ವೆಂಕಟಪ್ಪ ಎಂಬ ಪುಸ್ತಕವನ್ನು ಕರ್ನಾಟಕ ಲಲಿತಾ ಅಕಾಡೆಮಿಯಿಂದ ಪ್ರಕಟಿಸಲಾಯಿತು. ಇದರಲ್ಲಿಯೂ ಸಹ ಇವರ ಸಂಕ್ಷಿಪ್ತ ಜೀವನ ಮತ್ತು ಕೆಲವು ಕಲಾಕೃತಿಗಳನ್ನು ವಿವರಣೆ ಮಾಡಲಾಗಿದೆ.

೧೯೮೭ ರಲ್ಲಿ 'ಕೆ.ವೆಂಕಟಪ್ಪ ಸವಿ ನೆನಪು' ಎಂಬ ಪುಸ್ತಕವನ್ನು ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು ಇವರು ಪ್ರಕಟಿಸಿದ್ದು, ವೆಂಕಟಪ್ಪನವರ ಕುರಿತು ಬಂದಂತಹಃ ಬಿಡಿ ಲೇಖನಗಳನ್ನು ಹಾಕಲಾಗಿದೆ. ಎಸ್.ಎನ್. ಚಂದ್ರಶೇಖರವರು ಸಂಪಾದಿಸಿದ್ದು ಅವರ ಬದುಕಿನ ಹಲವು ವಿವರಗಳನ್ನು ಹೇಳಲಾಗಿದೆ. ೧೯೮೮ರಲ್ಲಿ 'ಕಲಾ ತಪಸ್ವಿ, ವೆಂಕಟಪ್ಪ' ಎಂಬ ಪುಸ್ತಕ ಇಂಗ್ಲೀಷ್ ಹಾಗೂ ಕನ್ನಡ ಆವೃತ್ತಿಯಲ್ಲಿ ಬಂದಿದ್ದು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು, ಇಲ್ಲಿ ಪ್ರಕಟವಾಗಿದೆ. ಇದರಲ್ಲಿ ಇವರ ಜೀವನದ ಮಹತ್ವದ ಕೆಲವು ವಿವರಗಳು ಸಂಗ್ರಹಗೊಂಡಿವೆ. ೧೯೯೦ರಲ್ಲಿ ವೆಂಕಟಪ್ಪ ಸಮಾಕಾಲಿನ ಪುನರಾವಲೋಕನ ಎಂಬ ಕೃತಿಯನ್ನು ಕೆ.ವಿ. ಸುಬ್ರಮಣ್ಯಂ ರವರು ಸಂಪಾದಿಸಿದ್ದು ಕರ್ನಾಟಕ ರಾಜ್ಯ ಪ್ರಾಚ್ಯವಸ್ತು ಸಂಗ್ರಹಲಯ ಇಲಾಖೆ ಹೊಸಪೇಟೆ ಇವರಿಂದ ಪ್ರಕಟಿತವಾಗಿದೆ. ಇಲ್ಲಿ ವೆಂಕಟಪ್ಪನವರ ಆತ್ಮ ಚರಿತ್ರೆಯ ಹಲವು ವಿವರಗಳ ಮತ್ತು ಬೇರೆ ಬೇರೆ ವ್ಯಕ್ತಿಗಳ ವಿವರಗಳನ್ನು ಇಲ್ಲಿ ಚರ್ಚಿಸಲಾಗಿದೆ.

೨೦೦೪ ರಲ್ಲಿ 'ಕಲಾತಪಸ್ವಿ ಕೆ. ವೆಂಕಟಪ್ಪ' ಎಂಬ ಪುಸ್ತಕವನ್ನು ಸಾ.ಕೃ ರಾಮಚಂದ್ರರಾವ್‌ರವರು ರಚಿಸಿದ್ದು ಇದರಲ್ಲಿ ವೆಂಕಟಪ್ಪನವರ ಹಲವಾರು ಕಲಾಕೃತಿಗಳು ಮತ್ತು ಬದುಕಿನ ಕೆಲವು ವಿವರಗಳನ್ನು ನೀಡಲಾಗಿದೆ. 'ಕೆ. ವೆಂಕಟಪ್ಪ' ಎಂಬ ಕೃತಿಯು ಲಲಿತಕಲಾ ಅಕಾಡೆಮಿಯಿಂದ ಪ್ರಕಟವಾಗಿದ್ದು, ಇದೇ ಸಂದರ್ಭದಲ್ಲಿ ಇವರ ಚಿತ್ರ ಸಂಪುಟವು ಸಹ ಪ್ರಕಟವಾಗಿದೆ. ಇದರಲ್ಲಿ ವೆಂಕಟಪ್ಪನವರು ರಚಿಸಿದ ಚಿತ್ರ, ಶಿಲ್ಪಗಳ ಛಾಯಾಚಿತ್ರಗಳನ್ನು, ಮತ್ತು ಜೀವನ ಸಾಧನೆಗಳನ್ನು ಕುರಿತಾದ ವಿವರಣೆಗಳಿವೆ.

ಒಟ್ಟಾರೆಯಾಗಿ ಇವರ ಕುರಿತು ಹಲವಾರು ಲೇಖನ ಹಾಗೂ ಪುಸ್ತಕಗಳು ಬಂದಿದ್ದು ಸಂಶೋಧನಾ ರೂಪದಲ್ಲಿ ಇಲ್ಲಿಯವರೆಗೆ ಯಾವ ವಿಶ್ವವಿದ್ಯಾಲಯಗಳು ಸಂಶೋಧನಾ ಪ್ರಬಂಧಗಳನ್ನು ಮಂಡಿಸದೇ ಇರುವುದನ್ನು ಗಮನಿಸಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. (ಅವರ ಸಮಗ್ರ ಸಾಹಿತ್ಯ ಕುರಿತು, ಏಳನೇ ಅಧ್ಯಾಯದಲ್ಲಿ ವಿವರವಾಗಿ ಚರ್ಚಿಸಲಾಗಿದೆ.)



ಅಧ್ಯಯನ ವಿಧಾನ

ವ್ಯಕ್ತಿಗತ ಅಧ್ಯಯನದ ವಿಧಾನದಲ್ಲಿ ಕಲಾವಿದ ಕೆ. ವೆಂಕಟಪ್ಪನವರ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಇಲ್ಲಿ ಎರಡು ರೀತಿಯ ಆಕರಗಳನ್ನು ಬಳಸಲಾಗಿದೆ.

೧. ಮೂಲ ಆಕರ ಸಾಮಗ್ರಿ ೨. ಆನುಷಂಗಿಕ ಆಕರ ಸಾಮಗ್ರಿ

ಈ ಎರಡೂ ಮೂಲಗಳಿಂದ ವಿಷಯ ಸಂಗ್ರಹ ಮಾಡಲಾಗುವುದು.

೧. ಮೂಲ ಆಕರ ಸಾಮಗ್ರಿ

ಮೂಲ ಆಕರ ಸಾಮಗ್ರಿಗಳಲ್ಲಿ ಮುಖ್ಯವಾದುದು ಕ್ಷೇತ್ರಕಾರ್ಯ, ಸ್ವತಃ ಕಲಾವಿದರ ಸಂದರ್ಶನ, ಅವ ರೊಂದಿಗಿನ ಚರ್ಚೆ, ಕಲಾಕೃತಿಗಳ ಛಾಯಾ ಚಿತ್ರ ಮಾಡುವುದು, ಅವರ ಸಮಕಾಲೀನ ಸಂದರ್ಶನಗಳು ಹಾಗೂ ಸಂಗ್ರಹಿತ ವಿಷಯಗಳ ಪಟ್ಟಿ ಸಿದ್ಧಪಡಿಸಿ ವಿವಿಧ ರೂಪದಲ್ಲಿ ಅಧ್ಯಯನ ಮಾಡಲಾಗುವುದು.


೨. ಆನುಷಂಗಿಕ ಆಕರ ಸಾಮಗ್ರಿ

ಕಲಾ ಸಂಶೋಧನಾ ಮಹಾಪ್ರಬಂಧಗಳು, ಪ್ರಕಟಿತ ಕಲಾ ಸಾಹಿತ್ಯ ಕೃತಿಗಳು, ನಿಘಂಟುಗಳು, ವಿಶ್ವಕೋಶಗಳು, ಪತ್ರಿಕೆಗಳು, ಕಲಾವಿದರ ಕಲಾಕೃತಿಗಳನ್ನುದ್ದೇಶಿಸಿ ಪ್ರಕಟವಾದ ಕಲಾವಿಮರ್ಶೆ ಮತ್ತು ಅಭಿಪ್ರಾಯಗಳು, ಲೇಖನಗಳು, ಅಭಿನಂದನ ಗ್ರಂಥಗಳು, ಸಂಶೋಧನಾ ಲೇಖನಗಳು ಇತ್ಯಾದಿ ರೀತಿಯ ಅನುಷಂಗಿಕ ಅಕರ ಸಾಮಗ್ರಿಗಳನ್ನು ಬಳಸಿಕೊಳ್ಳಲಾಗಿದೆ.

❖❖❖

ಅಧ್ಯಾಯ - ಎರಡು

ಕೆ. ವೆಂಕಟಪ್ಪರು ಮತ್ತು ಸಮಕಾಲೀನ ಸಂದರ್ಭ, ಕಲಾಕೃತಿಗಳ ಹರವು




ಅಧ್ಯಾಯ : ಎರಡು

ಕೆ. ವೆಂಕಟಪ್ಪ ಮತ್ತು ಸಮಕಾಲೀನ ಸಂದರ್ಭ ಹಾಗೂ ಕಲಾಕೃತಿಗಳ ಹರವು

ಭಾರತೀಯ ಕಲಾಪರಂಪರೆ ಧಾರ್ಮಿಕವಾಗಿ, ಐತಿಹಾಸಿಕವಾಗಿ ಹಾಗೂ ಸಾಮಾಜಿಕ ಜನ ಜೀವನ ಬಿಂಬಿಸುವಲ್ಲಿ ಬೇರೆಲ್ಲ ದೇಶಗಳಿಗಿಂತಲೂ ಶ್ರೀಮಂತವಾಗಿದೆ ಎಂದರೆ ಅತಿಶಯೋಕ್ತಿಯ ಮಾತಲ್ಲ. ಏಕೆಂದರೆ ಭಾರತೀಯ ಕಲೆ ಹಾಗೂ ಸಂಸ್ಕೃತಿಗೆ ಅಷ್ಟು ಶ್ರೀಮಂತ ಇತಿಹಾಸವನ್ನು ನಾವು ಐತಿಹ್ಯಗಳಿಂದ ತಿಳಿಯಬಹುದಾಗಿದೆ. ಉದಾಹರಣೆಗೆ ೫೦೦೦ ವರ್ಷಗಳ ಹಿಂದೆ ಸಿಂಧೂ ಬಯಲಿನ ನಾಗರಿಕತೆಯಲ್ಲಿ ಹುದುಗಿದ್ದ ಹರಪ್ಪ ಹಾಗೂ ಮೊಹೆಂಜೊದಾರೋದ ಶೋಧದಿಂದ ತಿಳಿದು ಬರುತ್ತದೆ. ಅವರ ಕಲಾ ನೈಪುಣ್ಯತೆಗೆ ಸಾಕ್ಷಿ ಎನ್ನುವಂತೆ ಅವರ ದಿನಬಳಕೆಯ ವಸ್ತುಗಳಲ್ಲಿನ ಕಲಾತ್ಮಕ ಕೆತ್ತನೆ ಹಾಗೂ ವರ್ಣಗಾರಿಕೆ, ಅವರು ಬಳಸುತ್ತಿದ್ದ ನಾಣ್ಯಗಳು ಮಣ್ಣಿನ ಹಾಗೂ ಲೋಹದ ಶಿಲ್ಪಗಳು, ಅವರಲ್ಲಿದ್ದ ನಗರ ವಾಸ್ತು ಪರಿಕಲ್ಪನೆ, ಎರಡಂತಸ್ತಿನ ಮನೆಯ ವಿನ್ಯಾಸ, ಒಳಚರಂಡಿ ವ್ಯವಸ್ಥೆ ಇನ್ನೂ ಹತ್ತು ಹಲವು ಉದಾಹರಣೆಗಳನ್ನು ನೀಡಬಹುದಾಗಿದೆ.

ನಾವು ಈ ನಾಗರಿಕತೆಯ ಪೂರ್ವಕ್ಕೆ ನೋಡುವುದಾದರೆ ಪ್ರಾಗಿತಿಹಾಸ ಕಾಲದಲ್ಲಿ ಭಾರತೀಯ ಕಲೆಗೆ ಸಂಬಂಧಪಟ್ಟಂತೆ ಹಲವಾರು ಮೈಲುಗಲ್ಲುಗಳು ದೊರೆಯುತ್ತವೆ. ಆ ಕಾಲದ ಜನರ ಜೀವನ, ಸಂಸ್ಕೃತಿ, ಸಂಸ್ಕಾರಗಳನ್ನು ಅವರು ರಚಿಸಿರುವ ಕಲಾಕೃತಿಯ ಮೂಲಕ ತಿಳಿಯಬಹುದು. ಅವರ




ರಚಿಸುತ್ತಿದ್ದ ಗೀರು ಚಿತ್ರಗಳು, ವರ್ಣ ಚಿತ್ರಗಳು, ಉಬ್ಬು ಶಿಲ್ಪಗಳು ಹೀಗೆ ಹಲವಾರು ಮಾಧ್ಯಮದಲ್ಲಿ ಚಿತ್ರಗಳನ್ನು ರಚಿಸಿರುವುದು ಇತಿಹಾಸ ಗರ್ಭದಿಂದ ಹೊರ ಹೊಮ್ಮುವ ಸಾಕ್ಷಿಗಳಾಗಿವೆ.

ಅದೇ ರೀತಿಯಲ್ಲಿ ಸಿಂಧೂ ನಾಗರಿಕತೆಯ ಉತ್ತರ ಪರ್ವವನ್ನು ನೋಡುವುದಾದರೆ, ಇಲ್ಲಿಯೂ ಸಹ ಕಲೆಯ ಕುರಿತಾದ ಹಲವಾರು ಸಾಕ್ಷಿಗಳು ಸಾಲು ಸಾಲಾಗಿ ದೊರಕುತ್ತಾ ಹೋಗುತ್ತವೆ. ಅಜಂತಾ ಭಿತ್ತಿ ಚಿತ್ರದಿಂದಿಡಿದು ಇಂದಿನ ಸಮಕಾಲೀನ ಕಲೆಯವರೆವಿಗೂ ಸಾವಿರಾರು ಹಂತಗಳು, ಪ್ರಭಾವ-ಪ್ರೇರಣೆ, ಮಾರ್ಪಾಡುಗಳು, ತಂತ್ರಗಳು ಮಾಧ್ಯಮಗಳನ್ನು ಮೀರಿ ಕಲಾಸಾಗರವನ್ನು ಸೇರಿ ಇತಿಹಾಸದ ಬುಗ್ಗೆಗಳಂತೆ ಮರುಕಳಿಸಿ ಮನುಕುಲದ ಇತಿಹಾಸಕ್ಕೆ ಜೀವಂತ ಸಾಕ್ಷಿಯಾಗಿದೆ.

ಭಾರತವು ಭೂಪಟದಲ್ಲಿ ಎಷ್ಟು ಸುಂದರವಾಗಿ ಕಾಣುತ್ತದೆಯೋ ಅಷ್ಟೇ ಸೌಂಧರ್ಯವನ್ನು ನಾಡು-ನುಡಿ, ಜ್ಞಾನ-ವಿಜ್ಞಾನ, ಸಂಸ್ಕೃತಿ-ಸಂಸ್ಕಾರ, ಕಲೆ-ಸಾಹಿತ್ಯವನ್ನು ತನ್ನ ಧಾರ್ಮಿಕ, ಆರ್ಥಿಕ ಹಾಗೂ ಸಾಮಾಜಿಕ ವಲಯದಲ್ಲೂ ಇದರ ಪ್ರಭಾವವನ್ನು ನಾವು ಕಾಣಬಹುದು. ಇದಕ್ಕೆ ಸಾಕ್ಷಿ ಎಂಬಂತೆ ಇಂದಿನ ಜಾಗತೀಕ ಸಮರದಲ್ಲಿ ಪ್ರಪಂಚದ ಮುಖ್ಯ ಹತ್ತು ದೇಶಗಳಲ್ಲಿ ಭಾರತವೂ ಒಂದಾಗಿದೆ. ಭಾರತವು ಸಾಂಸ್ಕೃತಿಕವಾಗಿ ಎಷ್ಟು ಶ್ರೀಮಂತ ರಾಷ್ಟ್ರವಾಗಿದೆಯೋ ಕಲೆಯಲ್ಲೂ ಸಹ ಇದಕ್ಕೆ ಹೊರತಾಗಿಲ್ಲ.

ಇಂತಹ ಮಾನ್ಯ ಸಂಸ್ಕಾರ ಭೂಮಿಯಲ್ಲಿ ಕಲೆಯಂತೆ ಕಲಾವಿದರಿಗೂ ಬರವಿಲ್ಲ. ಭಾರತವು ಪ್ರಪಂಚದ ಮಹಾನ್ ಕಲಾವಿದರ ಸಾಲಿಗೆ ಹಲವಾರು ಹಿರಿಯ ಕಲಾಚೇತನಗಳ ಕೊಡುಗೆಗಳನ್ನು ನೀಡಿದೆ, ಇಂದಿಗೂ ನೀಡುತ್ತಲಿದೆ. ಆ ಕಲಾಚೇತನದ ಸಾಲಿಗೆ ಕರುನಾಡ ಕಲಾವಿದ, ಕಲಾ ತಪಸ್ವಿ ಕೆ. ವೆಂಕಟಪ್ಪನವರು ಅಗ್ರಗಣ್ಯರು. ಇವರ ಕಲಾ ನೈಪುಣ್ಯತೆ, ಕಲಾ ಸಾಧನೆಗೆ ಪಾರವೇ ಇಲ್ಲ. ತಮ್ಮ ಜೀವನದಲ್ಲಿ ಏಕಾಂಗಿಯಾಗಿ ಕಲಾಆರಾಧನೆಯಲ್ಲಿ ಮುಕ್ತಿಯೊಂದಿದ ಹಿರಿಯ ಕಲಾ ಚೇತನ ಕೆ. ವೆಂಕಟಪ್ಪ. ಇವರು ತಮ್ಮ ಜೀವನ ಪುಟಗಳಲ್ಲಿ ಕಲೆ ಪುಟಗಳನ್ನು ಬಿಟ್ಟು ಮತ್ತಾವ ಪುಟಗಳನ್ನು ಮರೆತೂ ಕೂಡ ತೆರೆದಿಲ್ಲ. ಕಲಾಸರಸ್ವತಿಯನ್ನು ಆರಾಧಿಸುತ್ತಿದ್ದ ಇವರು ಬ್ರಹ್ಮಚಾರಿಯಾಗಿಯೇ ಕಲೆಯೊಂದಿಗೆ ಏಕಾಂತವಾಗಿ ತಮ್ಮ ಸಂಧ್ಯಾಕಾಲದವರೆವಿಗೂ ಕಲಾಜೀವನ ನಡೆಸಿದ, ಕಲೆಗಾಗಿ ಜೀವನವನ್ನೇ ಮುಡುಪಾಗಿಟ್ಟ ಕಲಾಮೂರ್ತಿ ಕೆ. ವೆಂಕಟಪ್ಪನವರು.

ನಾವು ಇವರ ಜೀವನವನ್ನು ಪೂರ್ಣವಾಗಿ ವಿವೇಚಿಸುತ್ತಾ ಹೋದರೆ ನಾನಾ ವಿಧವಾದ ಹಂತಗಳು ಇವರ ಜೀವನದಲ್ಲಿ ಬಂದು ಹೋಗುತ್ತವೆ. ಇವುಗಳ ಮುಖೇನವಾಗಿ ಇವರ ಜೀವನದ ಹರವು ನಮಗಾಗಬಹುದು. ಅವುಗಳಲ್ಲಿ ಮುಖ್ಯವಾಗಿ ಹುಟ್ಟು (೨೩ ಜೂನ್, ೧೮೮೬), ಬಾಲ್ಯದಲ್ಲಿ




ಮೈಸೂರು ಅರಮನೆಯ ಕಲಾ ಪ್ರೇರಣಾ ದಿನಗಳು, ಆನಂತರ ಅವರಿಗಿದ್ದ ಕಲಾ ನೈಪುಣ್ಯತೆಯು ಅರಸರ ಮನ ಗೆದ್ದದ್ದು, ಮೈಸೂರಿನ ಔದ್ಯಮಿಕ ಶಾಲೆ ಸೇರಿದ್ದು (೧೯೦೨), ಇದಾದ ನಂತರ ಮದ್ರಾಸ್ ಸರಕಾರಿ ಕಲಾಶಾಲೆಯ ಕಲಾಪರೀಕ್ಷೆಗಳಲ್ಲಿ ತೇರ್ಗಡೆಯಾದದ್ದು (೧೯೦೬), ಕಲ್ಕತ್ತೆಯ ಸರಕಾರಿ ಕಲಾಶಾಲೆಯನ್ನು ಸೇರಿದ್ದು (೧೯೦೯), ಅಲ್ಲಿ ಅಜಂತ ಭಿತ್ತಿ ಚಿತ್ರಗಳ ಪ್ರತಿ ಮಾಡಿಕೊಳ್ಳಲು ಹೋದದ್ದು (೧೯೧೧), ಮೈಸೂರಿಗೆ ಹಿಂದಿರುಗಿದ್ದು (೧ ಜೂನ್, ೧೯೧೬), ಮೈಸೂರು ಅರಮನೆಯಲ್ಲಿ ಕೆಲಸ ಮಾಡಲು ತೊಡಗಿದ್ದು (೧೯೧೮), ಬೆಂಗಳೂರಿನಲ್ಲಿ ಚಿತ್ರಶಾಲೆ ಕಟ್ಟಲು ನಿವೇಶನವನ್ನು ಕೊಂಡದ್ದು (೧೫ ಏಪ್ರಿಲ್, ೧೯೨೬), ಶ್ರೀ ಕೃಷ್ಣರಾಜ ಒಡೆಯರ್ ನಿಧನಾನಂತರ ಅರಮನೆಯೊಂದಿಗೆ ವಿರಸ ಒದಗಿ, ಮೈಸೂರು ಬಿಟ್ಟು ಬೆಂಗಳೂರಿಗೆ ಹೊರಟಿದ್ದು (೨೩ ಅಕ್ಟೋಬರ್, ೧೯೪೦), ಮಧುಮೇಹ ಕಾಯಿಲೆಯಿಂದ ಬಳಲಿ ಸೂರ್ಯಾಸ್ತ ಎಂಬ ಕಡೆಯ ವರ್ಣಚಿತ್ರ ರಚಿಸಿದ್ದು (೧೮ ನವೆಂಬರ್, ೧೯೫೭), ಕೊನೆಗೆ ಮಲ್ಲೇಶ್ವರಂನ ಸ್ವ ನಿವಾಸದಲ್ಲಿ ೨೫ ಮೇ, ೧೯೬೫ ಮಧ್ಯಾಹ್ನ ಒಂದು ಘಂಟೆಯ ಸುಮಾರಿಗೆ ಕಾಲಹಸ್ತವಾದದ್ದು. ಈ ರೀತಿಯ ಇನ್ನೂ ಹಲವಾರು ಇವರ ಹುಟ್ಟಿನಿಂದ ಕಾಲಹಸ್ತವಾಗುವವರೆಗಿನ ಕಲಾ ಜೀವನದ ಹರವು ಅರಿಯಲು ಪ್ರಯತ್ನಿಸಲಾಗುವುದು.

"ಕೆ. ವೆಂಕಟಪ್ಪನವರ ತಮ್ಮ ಬದುಕಿನುದ್ದಕ್ಕೂ ತಮ್ಮನ್ನು ತಾವು 'ಕಲೋಪಾಸಕ' ನೆಂದು ಕರೆದುಕೊಂಡರೇ ಹೊರತು 'ಕಲಾತಪಸ್ವಿ' ಎಂದು ಕರೆದುಕೊಳ್ಳಲಿಲ್ಲ. ಕಲಾಪ್ರಪಂಚದಲ್ಲಿ ತಾವು ಸಾಧಿಸಿದ ಔನ್ನತ್ಯಕ್ಕೆ ಒಪ್ಪುವಂಥ ವಿನಯ, ಸೌಜನ್ಯ ಅವರಲ್ಲಿ ಮನೆ ಮಾಡಿತ್ತು. ಬರಿಯ ಪ್ರಚಾರದ ಬೆನ್ನು ಬಿದ್ದಿರುವ ಇಂದಿನ ಕಲಾವಿದರನೇಕರಿಗೆ ಈ ಸೌಜನ್ಯ ಆದರ್ಶವಾಗಿದೆ. ಅಂತರಾಷ್ಟ್ರೀಯ ಖ್ಯಾತಿ ಪಡೆದ ರಾಷ್ಟ್ರಮಟ್ಟದ ಕಲಾವಿದರಲ್ಲಿ ಒಬ್ಬರಾದ ಶ್ರೀ ಕೆ. ವೆಂಕಟಪ್ಪನವರು ಭಾರತದ ಕಲಾ ಸಂಪತ್ತಿಗೆ ಕರ್ನಾಟಕ ಅರ್ಪಿಸಿದ ಹೆಮ್ಮೆಯ ಕಾಣಿಕೆ".[೧]

ಕೆ. ವೆಂಕಟಪ್ಪನವರ ಬಾಲ್ಯಪರಿಸರ

ಕೆ. ವೆಂಕಟಪ್ಪನವರ ಪೂರ್ವಜರ ಇತಿಹಾಸವನ್ನು ಹುಡುಕುತ್ತಾ ಹೋದರೆ ಇವರು ಮೂಲತಃ ವಿಜಯನಗರ ಕಾಲದ ಚಿತ್ರಗಾರ ಮನೆತನಕ್ಕೆ ಸೇರಿದವರು ಎಂದು ಊಹಿಸಬಹುದು. ಹದಿನಾರನೆ ಶತಮಾನದ ಕೊನೆಯಾರ್ಧದಲ್ಲಿ ವಿಜಯನಗರದ ಪತನದ ನಂತರ ಅಲ್ಲಿ ಕಲಾವಿದರು ಬೇರೆ ಬೇರೆ ರಾಜಾಶ್ರಯವನ್ನು ಹುಡುಕಿಕೊಂಡು ನೆರೆಯ ರಾಜ್ಯಗಳಾದ ಅಂಧ್ರ, ತಮಿಳುನಾಡಿನ ಅರಸುಗಳ ರಾಜಾಶ್ರಯಕ್ಕೆ ಹೋದರು. ವೆಂಕಟಪ್ಪನವರ ಪೂರ್ವಜರು ನೆರೆಯ ಚಿತ್ರದುರ್ಗದ ಪಾಳೇಗಾರರ ಅಶ್ರಯಕ್ಕೆ ಬಂದಿರಬಹುದೆಂದು ಊಹಿಸಬಹುದು. ದುರ್ಗದ ಅರಮನೆಯ ಕಲಾವಿದರಾಗಿ ಸೇರಿಕೊಂಡ


೦೧. ಕೆ. ವೆಂಕಟಪ್ಪ : ಕ.ಲ.ಅ ಬೆಂಗಳೂರು, ೧೯೮೩.ಪುಟ.೩೬



ಇವರ ಕುಟುಂಬ ಮುಂದೆ ಹೈದರಾಲಿಯ ಆಕ್ರಮಣದಿಂದಾಗಿ ಚಿತ್ರದುರ್ಗದಲ್ಲಿ ನಾಯಕರ ಅರಸನಾಗಿದ್ದ ಮದಕರಿನಾಯಕನು ಮರಣ ಹೊಂದಿದನು. ಆನಂತರ ರಾಜಾಶ್ರಯದಲ್ಲಿದ್ದ ಕಲಾವಿದರು ಮತ್ತೆ ಬೇರೆಡೆ ವಲಸೆ ಹೋದರು. ಈ ಸಂದರ್ಭದಲ್ಲಿ ಕೆ. ವೆಂಕಟಪ್ಪನವರ ಪೂರ್ವಜರು ಮೈಸೂರು ಸೇರಿದರು. ಹಾಗಾಗಿ ಕೆ. ವೆಂಕಟಪ್ಪನವರನ್ನು ಮೂಲತಃ ಚಿತ್ರದುರ್ಗದವರು ಎಂದು ಕರೆಯಲಾಗುತ್ತದೆ. ಇವರ ಮಾತೃಭಾಷೆ ತೆಲುಗು. ಹರಿತಸ ಗೋತ್ರದ, ಸೋಮವಂಶದ ಆರ್ಯ ಕ್ಷತ್ರಿಯ ಜನಾಂಗಕ್ಕೆ ಸೇರಿದವರು. ವೆಂಕಟಪ್ಪನವರಿಗೆ ಕಲೆ ರಕ್ತಗತವಾಗಿ ಬಂದಿದ್ದೆಂದು ಹೇಳಬಹುದು. ಇವರು ಕಲಾವಿದರ ವಂಶದಲ್ಲಿಯೇ ಹುಟ್ಟಿ ಬಂದವರು. ಇವರ ತಾತ ಪ್ರಸಿದ್ಧ ಚಿತ್ರಕಾರರಾಗಿದ್ದ ಚಿತ್ರದುರ್ಗದ ವೆಂಕಟಪ್ಪ ಎಂದು. ಅವರ ತಂದೆಯ ಹೆಸರು ದುರ್ಗದ ಕೃಷ್ಣಪ್ಪ ಎಂದು. ಇವರು ಮೈಸೂರು ಅರಮನೆಯ ಕಲಾವಿದರಾಗಿದ್ದರು. ಇವರ ತಾಯಿಯ ಹೆಸರು ರಂಗಮ್ಮ. ಕೃಷ್ಣಪ್ಪ, ರಂಗಮ್ಮ ದಂಪತಿಗೆ ಎರಡನೇ ಪುತ್ರನಾಗಿ ೨೩ ಜೂನ್, ೧೮೮೬ ರಲ್ಲಿ ಸರ್ವಜಿತ್ ಸಂವತ್ಸರದ ಆಷಾಢ ಶುದ್ಧ ದ್ವಿತೀಯ ದಿನದಂದು ಮೈಸೂರಿನಲ್ಲಿಯೇ ಜನಿಸಿದರು. ಅಂದು ಮೈಸೂರು ಅರಸರಾಗಿ ಶ್ರೀ ಚಾಮರಾಜೇಂದ್ರ ಒಡೆಯರ್ ರಾಜ್ಯಭಾರ ನಡೆಸುತ್ತಿದ್ದರು.

ಕ್ರಿ.ಶ. ೧೮೮೪ ರಲ್ಲಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಜನಿಸಿದರು. ಕೆ. ವೆಂಕಟಪ್ಪನವರಿಗೂ ನಾಲ್ವಡಿ ಕೃಷ್ಣರಾಜ ಒಡೆಯರಿಗೂ ಒಂದು ವರ್ಷ ವ್ಯತ್ಯಾಸ. ಒಡೆಯರ್ ಒಂದು ವರ್ಷ ಹಿರಿಯರು. ಕ್ರಿ.ಶ. ೧೮೯೪ ರಲ್ಲಿ ಶ್ರೀ ಚಾಮರಾಜ ಒಡೆಯರ್ ಕಲ್ಕತ್ತಾ ಪ್ರವಾಸದಲ್ಲಿದ್ದಾಗ ಇವರು ತೀರಿಕೊಂಡರು. ಆ ಸಂದರ್ಭದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅಪ್ರಾಪ್ತರಾದ ಕಾರಣ ನಾಡಿನ ಸಮಸ್ತ ಹೊಣೆಯನ್ನು ನಾಲ್ವಡಿ ಕೃಷ್ಣರಾಜರ ತಾಯಿಯಾದ ಕೆಂಪನಂಜಮ್ಮಣ್ಣಿಯವರು ವಹಿಸಿಕೊಂಡರು. ಮಹಾರಾಣಿಯವರ ಹಿರಿಮಗಳಾದ ಜಯಲಕ್ಷ್ಮಮ್ಮಣ್ಣಿಯವರ ಮದುವೆ ಕ್ರಿ.ಶ. ೧೮೯೭ ರ ಫೆಬ್ರವರಿ ತಿಂಗಳಲ್ಲಿ ವಿಜೃಂಭಣೆಯಿಂದ ಜರುಗಿತು. ಮದುವೆ ಮುಗಿದ ಕೆಲವೇ ದಿನಗಳಲ್ಲೇ ಅಂದರೆ ೨೮ ಫೆಬ್ರವರಿ, ೧೮೯೭ ರಂದು ಊಳಿಗದವಳೊಬ್ಬಳ ಅಚಾತುರ್ಯದಿಂದ ಬಹುಮಟ್ಟಿಗೆ ಮರದಿಂದ ನಿರ್ಮಿಸಲಾಗಿದ್ದ ಮೂರು ಮಹಡಿಯ ಸೆಜ್ಜೆ ಬೆಂಕಿಗೆ ಸುಲಭವಾಗಿ ಹರಡಿಕೊಂಡಿತು. ಅದರಲ್ಲಿದ್ದ ಪುಸ್ತಕ ಭಂಡಾರ, ಶಸ್ತ್ರಾಸ್ತ್ರ ಸಂಗ್ರಹದ ಕೋಣೆ, ಸಂಗೀತ-ವಾದ್ಯಭವನ, ಬಾಲ್‌ಖಾನೆ ಇವೆಲ್ಲವೂ ಬೆಂಕಿಯ ಜ್ವಾಲೆಗೆ ತುತ್ತಾಗಿ ಹೋದವು.


ಆ ಸಂದರ್ಭದಲ್ಲಿ ಮೈಸೂರಿನ ದಿವಾನರಾಗಿದ್ದ ಸರ್ ಕುಮಾರಪುರಂ ಶೇಷಾದ್ರಿ ಅಯ್ಯರ್‌ರವರು ಹೊಸ ಅರಮನೆಯನ್ನು ನಿರ್ಮಿಸಲೆಂದು ಮದರಾಸ್ ಸರಕಾರದ ವಾಸ್ತುಶಿಲ್ಪ ಸಲಹೆಗಾರನಾಗಿದ್ದ



ಹೆನ್ರಿ ಇರ್ವಿಂಗ್ ಎಂಬ ಬ್ರಿಟೀಷ್ ವಾಸ್ತು ಶಿಲ್ಪಿಗೆ ವಹಿಸಲಾಯಿತು. ಅವತ್ತಿಗಾಗಲೇ ಇರ್ವಿಂಗ್‌ರವರು ಸಿಮ್ಲಾದಲ್ಲಿ "ವೈಸ್‌ರೀಗಲ್ ಲಾಜ್" ಎಂಬ ಭವ್ಯ ಕಟ್ಟಡವನ್ನು ಕಟ್ಟಿ ಹೆಸರು ಮಾಡಿದ್ದರು. ಇರ್ವಿಂಗ್ ಮೈಸೂರಿಗೆ ಬಂದ ನಂತರ ದುರಸ್ತೆಗೊಂಡಿದ್ದ ಅರಮನೆಯನ್ನು ಕಂಡು ಹೊಸದಾದ ಅರಮನೆಯನ್ನು ಕಟ್ಟುವ ಅಪೇಕ್ಷೆ ಇಟ್ಟನು. ಶ್ರೀ ಪೂರ್ಣಯ್ಯನವರಿಗೆ ೧೮೦೦ ರಲ್ಲಿಯೇ ಈ ಅನಿಸಿಕೆ ಇದ್ದುದ್ದರಿಂದಾಗಿ ಹಲವಾರು ತಜ್ಞರನ್ನು ವಾಸ್ತು ಮೇಧಾವಿಗಳೊಡನೆ ಚರ್ಚಿಸಿ ಒಂದು ನಕ್ಷೆಯನ್ನು ಸಿದ್ಧಪಡಿಸಿಕೊಂಡಿದ್ದರು. ಹೆನ್ರಿ ಇರ್ವಿಂಗ್ ಈ ನಕ್ಷೆಯನ್ನು ನೋಡಿದಾಗ ಇದೇ ಸಮರ್ಪಕವಾದದ್ದು ಎಂದು ಭಾವಿಸಿ ಅರಮನೆಯ ನಿರ್ಮಾಣದ ಕಾಮಗಾರಿಗಾಗಿ ತಿರುಚ್ಚಿ, ಮದರಾಸು, ಕೊಲ್ಲಾಪುರ, ಜಯಪುರ ಮೊದಲಾದ ಕಡೆಗಳಿಂದ ಮೇಸ್ತ್ರಿಗಳು, ಗಾರೆ ಕೆಲಸದವರು, ಕಲ್ಲು ಕುಟ್ಟಿಗರು, ಶಿಲ್ಪಿಗಳು, ಚಿತ್ರಗಾರರು ಬೇರೆ ಬೇರೆ ನಾಡಿನಿಂದ ಬಂದು ನೆಲೆಸಿದರು.

ಕಟ್ಟಡದ ಗಾರೆಕೆಲಸ, ಮರಗೆಲಸ ಮುಗಿಯುತ್ತಾ ಬಂದಾಗ ಅಂಭಾವಿಲಾಸ ಒಡ್ಡೋಲಗದಲ್ಲಿ ಚಿತ್ರ ರಚಿಸಲು ತಿರುವಾಂಕೂರಿನ ರಾಜ ರವಿವರ್ಮ ಹಾಗೂ ಅವರ ಸಹೋದರನಾದ ರಾಜವರ್ಮರನ್ನು ಒಪ್ಪಿಸಿ ಕರೆತರಲಾಗಿತ್ತು. ಇವರ ಮೇಲ್ವಿಚಾರಣೆಯಲ್ಲಿ ಚಿತ್ರ ರಚನೆಯ ಕಾರ್ಯ ನಡೆಯಲಾರಂಭಿಸಿತು. ಅಲ್ಲಿ ವೆಂಕಟಪ್ಪನವರ ಪೂರ್ವಜರು ಸಹ ಕಾರ್ಯ ನಿರ್ವಹಿಸುತ್ತಿದ್ದರು. ಹನ್ನೆರಡು-ಹದಿನೈದು ವಯಸ್ಸಿನವರಾಗಿದ್ದ ವೆಂಕಟಪ್ಪನವರು ಆ ಸಂದರ್ಭದಲ್ಲಿ ಅದನ್ನೆಲ್ಲಾ ಗ್ರಹಿಸುತ್ತಿದ್ದರು. ಆ ವಯಸ್ಸಿಗಾಗಲೇ ಅವರು ರವಿವರ್ಮರಂತಹ ಹಿರಿಯ ಕಲಾವಿದರನ್ನು ನೋಡಿ ಅವರ ಕಲಾ ತಂತ್ರಗಾರಿಕೆಯನ್ನು ತಿಳಿಯುವ, ನೋಡುವ ಅವಕಾಶ ಆ ಚಿಕ್ಕವಯಸ್ಸಿಗೆ ವೆಂಕಟ್ಟಪನವರಿಗೆ ದೊರಕಿತ್ತು.

ಅರಮನೆ ಪೂರ್ಣ ಕಾಮಗಾರಿ ಮುಗಿಯುತ್ತಾ ಬಂದಂತೆ ಕ್ರಿ.ಶ. ೧೯೦೨ ರಲ್ಲಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ಗೆ ಹದಿನೆಂಟು ವರ್ಷ ತುಂಬಿದ್ದರಿಂದ ಮಹಾರಾಣಿಯವರು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ಗೆ ಮಹಾರಾಜರಾಗಿ ಅಧಿಕಾರ ಸೂತ್ರವನ್ನು ವಹಿಸಿಕೊಟ್ಟರು. ಅದೇ ವರ್ಷದಲ್ಲಿ ಕೆ. ವೆಂಕಟಪ್ಪನವರು ಇಂಡಸ್ಟ್ರಿಯಲ್ ಸ್ಕೂಲಿಗೆ ಸೇರಿದರು. ಇಲ್ಲಿ ಉದ್ಯಮಿಗಳಿಗೆ ಹಾಗೂ ಕಾರ್ಮಿಕರಿಗೆ ಶಿಕ್ಷಣವನ್ನು ನೀಡಲಾಗುತ್ತಿತ್ತು. ವೆಂಕಟಪ್ಪನವರು ಕಲಿತಿದ್ದೇನೋ ನಜರಬಾದಿನಲ್ಲಿರುತ್ತಿದ್ದ ಹಳೆಯ ಇಂಡಸ್ಟ್ರಿಯಲ್ ಸ್ಕೂಲಿನಲ್ಲೇ. ಇಲ್ಲಿ ಸುಮಾರು ಮೂರರಿಂದ ನಾಲ್ಕು ವರ್ಷ ಕಲಿತಿದ್ದಿರಬೇಕು. ಇದಾದನಂತರ ಕ್ರಿ.ಶ. ೧೯೦೬ ರಲ್ಲಿ ಮದರಾಸಿನ ಕಲಾ ಪರೀಕ್ಷೆಯನ್ನು ಪಡೆದು ಉತ್ತೀರ್ಣರಾದರು. ಇದಕ್ಕಾಗಿ ಇವರು ವಿಶಿಷ್ಟ ಕಲಿತ ಕಲಾಪ್ರಕಾರಗಳೆಂದರೆ ರೇಖಾಚಿತ್ರ, ವರ್ಣಚಿತ್ರ ಮತ್ತು ಶಿಲ್ಪದ ಕುರಿತಾಗಿ ವಿಶಿಷ್ಟ ಅಭ್ಯಾಸವನ್ನು ನಡೆಸಿ ಪರೀಕ್ಷೆಗಾಗಿ ಮದರಾಸಿಗೆ ಹೋಗಿ ಪರೀಕ್ಷೆ ಬರೆದು ಬಂದಿದ್ದರು.




ಕ್ರಿ.ಶ. ೧೯೦೬ ಕೆ. ವೆಂಕಟಪ್ಪನವರಿಗೆ ಆಗ ಇಪ್ಪತ್ತರ ಪ್ರಾಯದವರಾಗಿದ್ದರೂ ಅಂದಿಗೂ ಇನ್ನೂ ಚಿತ್ರ ರಚನಾಕಾರ್ಯ ನಡೆಯುತ್ತಿತ್ತು. ಅಲ್ಲಿ ವೆಂಕಟಪ್ಪನವರ ತಂದೆಯಾದ ಕೃಷ್ಣಪ್ಪನವರು ಚಿತ್ರ ರಚನಾ ಕಾರ್ಯದಲ್ಲಿ ನಿರತರಾಗಿರುತ್ತಿದ್ದರು. ಅಲ್ಲಿ ಹೋಗುತ್ತಿದ್ದ ಕೆ. ವೆಂಕಟಪ್ಪನವರು ತಂದೆ ಹಾಗೂ ಹಲವಾರು ಕಲಾವಿದರೊಂದಿಗೆ ಸೇರಿ ಅಲ್ಲಿಯೇ ಸಣ್ಣ ಪುಟ್ಟ ಕೆಲಸಗಳನ್ನು ಮಾಡುತ್ತಿದ್ದರು. ಕೆ. ವೆಂಕಟಪ್ಪನವರ ಕೆಲಸವನ್ನು ಅರಮನೆಯ ಹಲವಾರು ಹಿರಿಯ ಅಧಿಕಾರಿಗಳು ಮೆಚ್ಚಿ ಮಹಾರಾಜರಾದ ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರ್‌ರವರಿಗೆ ವಿಷಯ ಮುಟ್ಟಿಸಿದರು. ಆಗ ಮಹಾರಾಜರ ಆಪ್ತ ಕಾರ್ಯದರ್ಶಿಯಾಗಿದ್ದ ಆರ್.ಎಚ್. ಕ್ಯಾಂಪ್‌ಬೆಲ್‌ರವರು ಕಲಾಭಿಮಾನಿ ಯಾಗಿದ್ದರು. ಇವರು ಕೆ. ವೆಂಕಟಪ್ಪನವರ ಕಲೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಹೆಚ್ಚಿನ ಶಿಕ್ಷಣಕ್ಕೆ ಕೆ. ವೆಂಕಟಪ್ಪನವರವನ್ನು ಕಲ್ಕತ್ತಾ ಕಲಾಶಾಲೆಗೆ ಕಳುಹಿಸಬೇಕೆಂದು ಮಹಾರಾಜರಿಗೆ ಸಲಹೆ ನೀಡಿದರು.

ಇದಲ್ಲದೆ ಕೆ. ವೆಂಕಟಪ್ಪನವರ ಕಲೆಯ ಪೋಷಣೆಗೆ ನಿಂತವರಲ್ಲಿ ಇನ್ನೂ ಹಲವರಿದ್ದಾರೆ. ಒಮ್ಮೆ ಒಡ್ಡೋಲಗದ ಅಂಗಳದಲ್ಲಿ ಚಿತ್ರದ ರಚನಾ ಕಾರ್ಯ ನಡೆಯುತ್ತಿರುವಾಗ ಕಿಲ್ಲೆ–ದಪ್ತರ್ ಭಕ್ಷಿ ತರುಣ ವೆಂಕಟಪ್ಪನ ಕಲಾ ಕೌಶಲ್ಯವನ್ನು ಕಂಡರು. ಪುಳಕಿತರಾದ ಕಿಲ್ಲೆಯವರು ಮುಂದಿನ ಹೆಚ್ಚಿನ ಶಿಕ್ಷಣಕ್ಕಾಗಿ ವಿದ್ಯಾರ್ಥಿ ವೇತನವನ್ನು ಬೇರೆಡೆಯ ದೊಡ್ಡ ಕಲಾಶಾಲೆಗೆ ಕಳಿಸಬೇಕೆಂದು ಮಹಾರಾಜರಲ್ಲಿ ಕೆ. ವೆಂಕಟಪ್ಪನವರ ಪರವಾಗಿ ಹೇಳಿ ಮಹಾರಾಜರನ್ನು ಒಪ್ಪಿಸಿದರು.

ಇದೇ ವಿಷಯಕ್ಕೆ ಪೂರಕವಾಗಿ ಮತ್ತೊಂದು ಘಟನೆ ನಡೆದಿತ್ತು. ಹಿಂದೆ ಮಹಾರಾಣಿ ರೀಜೆಂಟ್ ಅವರ ಆಳ್ವಿಕೆಯ ಸಮಯದಲ್ಲಿ ಆಡಳಿತ ನೋಡಿಕೊಳ್ಳುತ್ತಿದ್ದ ಬ್ರಿಟೀಷ್ ಅಧಿಕಾರಿಗಳು ಯೋಜನೆಯೊಂದನ್ನು ಜಾರಿಗೆ ತಂದರು. ಈ ದೇಶದ ಪ್ರತಿಭಾಶಾಲಿಗಳಾದ ತರುಣರನ್ನು ಬ್ರಿಟೀಷರ ನೇರವಾದ ಆಡಳಿತಕ್ಕೆ ಒಳಪಟ್ಟ ಮುಂಬಯಿ, ಮದರಾಸ್ ಇನ್ನು ಮುಂತಾದ ಮುಂದುವರಿದ ಸ್ಥಳಗಳಿಗೆ ಅವಶ್ಯವಿದ್ದರೆ ಇಂಗ್ಲೆಂಡ್‌ಗೂ ಸಹ ಕಳಿಸಿ ಶಿಕ್ಷಣ ನೀಡಿ ಹಿಂದಿರುಗಿ ಬಂದ ಮೇಲೆ ಯೋಗ್ಯವಾದ ಕೆಲಸಗಳನ್ನು ಸಹ ನೀಡುವ ಇಚ್ಛೆ ಇಟ್ಟರು. ಇದಲ್ಲದೆ ವಿದ್ಯಾರ್ಥಿಗಳಿಗೆ ಮಾಸಿಕ ವಿದ್ಯಾರ್ಥಿ ವೇತನವಾಗಿ ಹದಿನೈದರಿಂದ, ಇಪ್ಪತ್ತು ರೂಪಾಯಿಗಳನ್ನು ನೀಡುವುದಾಗಿ ನಿರ್ಧರಿಸಿದ್ದರು.


ಆದರೆ ಮುಖ್ಯವಾಗಿ ಇಲ್ಲಿ ಉದ್ಯಮ, ವಿಜ್ಞಾನ, ವಾಣಿಜ್ಯ ಈ ವಿಭಾಗದಲ್ಲಿಯೇ ಉಚ್ಚ ಶಿಕ್ಷಣಕ್ಕೆಂದು ಹುಡುಗರನ್ನು ಕಳಿಸಲು ಏರ್ಪಾಡಿತ್ತು. ಆದರೆ ಕೆ. ವೆಂಕಟಪ್ಪನವರು ಇವ್ಯಾವ ವಿಷಯಕ್ಕೂ ಸೇರಿದವರಾಗಿರಲಿಲ್ಲ. ಕಲೆಯಿಂದ ದೇಶದ ಆರ್ಥಿಕ ಅಭಿವೃದ್ಧಿಯಾಗುತ್ತದೆ ಎಂಬ ಕಲ್ಪನೆಯೂ ಇರಲಿಲ್ಲ. ಈ ಎಲ್ಲಾ ಕಾರಣದಿಂದಾಗಿ ವೆಂಕಟಪ್ಪನವರಿಗೆ ಈ ಅವಕಾಶ ದೊರೆಯುತ್ತಿರಲಿಲ್ಲ. ಆದರೆ



ಕಿಲ್ಲೆ-ದಪ್ತರ್ ಭಕ್ಷಿ ಆಸಕ್ತಿ ವಹಿಸಿದ್ದರಿಂದ, ಖುದ್ದು ಮಹಾರಾಜರೇ ಸಲಹೆ ಮಾಡಿದ್ದರಿಂದ ಕೆ. ವೆಂಕಟಪ್ಪನವರು ಮದರಾಸಿನ ಸರಕಾರೀ ಕಲಾ ಪರೀಕ್ಷೆಗೆ ಕೂರುವಂತಾಯಿತು. ಮತ್ತೆ ಕಲ್ಕತ್ತೆಯ ಸರಕಾರಿ ಕಲಾಶಾಲೆಗೂ ಹೋಗುವಂತಹ ಅವಕಾಶ ದೊರೆತಂತಾಯಿತು. ಹೀಗೆ ಕ್ರಿ.ಶ. ೧೯೦೮ರಲ್ಲಿ ವಿದ್ಯಾರ್ಥಿ ವೇತನ ಪಡೆದು ಉನ್ನತ ಶಿಕ್ಷಣಕ್ಕೆಂದು ಕಲ್ಕತ್ತಾ ಕಲಾಶಾಲೆಗೆ ಹೊರಟು ನಿಂತರು. ಆ ವೇಳೆಗೆ ಕೆ. ವೆಂಕಟಪ್ಪನವರ ಕಣ್ಣಲ್ಲಿ ಇದ್ದದ್ದು ಇ.ಟಿ. ಹ್ಯಾವೆಲ್ ಬಳಿ ಕಲೆಯ ಪರಿಪೂರ್ಣ ವ್ಯಾಖ್ಯಾನ ತಿಳಿಯುವ ಕಾತುರತೆ ಇತ್ತು. ಹಿಂದೆ ನಿಂತು ವೆಂಕಟಪ್ಪನವರ ಕಲೆಯನ್ನು ಪ್ರೋತ್ಸಾಹಿಸಿದ ಕಿಲ್ಲೆಯವರ ಹಾಗೂ ಮಹಾರಾಜರಿಗೆ ಕೃತಜ್ಞತಾ ಭಾವದಿಂದ ನಮಿಸಿ ಪ್ರಯಾಣ ಕೈಗೊಂಡರು. ಅವತ್ತಿಗೆ ಹೊಸವರ್ಷ ಕಾಲಿಡುತ್ತಿತ್ತು.

ಒಟ್ಟಾರೆಯಾಗಿ ವೆಂಕಟಪ್ಪನವರ ಅಣು-ಅಣುವಿನಲ್ಲೂ ಕಲೆ ಎಂಬುದು ಮೈಗೂಡಿತು. ಇದು ಬಾಲ್ಯದ ಮೈಸೂರ ಪರಿಸರದಿಂದಲೇ ನಮಗೆ ತಿಳಿಯುತ್ತದೆ. ಇದಲ್ಲದೆ ವೆಂಕಟಪ್ಪನವರ ಪೂರ್ವಜ ವೃತ್ತಿಯೂ ಇದಾದ ಕಾರಣ ಕಲೆ ಎಂದಿಗೂ ಕಷ್ಟವೆನಿಸಲಿಲ್ಲ. ಇದಕ್ಕೆ ಪೂರಕವೆನ್ನುವಂರತೆ ಹಲವಾರು ಅವಕಾಶಗಳು ಮೈಸೂರಿನ ಅರಮನೆಯಲ್ಲಿಯೇ ಕೆ. ವೆಂಕಟಪ್ಪನವರಿಗೆ ದೊರೆತವು. ಅದನ್ನು ಸದುಪಯೋಗಪಡಿಸಿಕೊಂಡು ಹಾಗೂ ತಂದೆಯ ಹಾಗೂ ಅವರ ಸಹೋದ್ಯೋಗಿಗಳ ಮಾರ್ಗದರ್ಶನ ವೆಂಕಟಪ್ಪನವರಿಗೆ ದೊರೆಯಿತು.

ಇವರ ಕಲಾಸಕ್ತಿಗೆ ಹಾಗೂ ಕಲೆಗೆ ಕಿರಿಯವರಿದ್ದಾಗಲೇ ಎಷ್ಟರಮಟ್ಟಿಗೆ ಮಹತ್ವಗಳಿಸಿದ್ದರೆಂದರೆ, ಒಮ್ಮೆ ಅರಮನೆಯಲ್ಲಿ ಚಿತ್ರ ರಚನಾಕಾರ್ಯ ನಡೆಯುತ್ತಿತ್ತು. ಅವರ ತಂದೆ ಹಾಗೂ ಅವರ ಸಹೋದ್ಯೋಗಿಗಳ ಜೊತೆ ಸೇರಿ ಇವರೂ ಸಹ ಕೆಲಸ ಮಾಡುತ್ತಿದ್ದರು. ಆಗ ಇವರ ಕೆಲಸವನ್ನು ಕಂಡು ಹಿರಿಯರಿಗೆ ಕೊಟ್ಟಷ್ಟೆ ಮಜೂರಿಯನ್ನು ಇವರಿಗೂ ಕೊಡುತ್ತಿದ್ದರು. ಇದು ಹಿರಿಯ ಕಲಾವಿದನೊಬ್ಬನಿಗೆ ಮುಜುಗರ ತಂದು, ಅಸೂಯೆಯಿಂದ ಮಜೂರಿ ಕೊಡುವವರ ಬಳಿ ಹೋಗಿ "ಇದ್ಯಾವ ನ್ಯಾಯ? ಮೀಸೆ ಹೊತ್ತವರಿಗೂ ಒಂದೇ ಮಜೂರಿ, ಮೀಸೆ ಕಾಣದ ಹುಡುಗನಿಗೂ ಒಂದೇ ಮಜೂರಿಯೇ?" ಎಂದು ಕೇಳಿದರು. ಇದಕ್ಕೆ ಉತ್ತರವಾಗಿ ಮಜೂರಿದಾರರು "ನೀವು ಹೋಗಿ ಆ ಹುಡುಗನನ್ನೇ ಕೇಳಿ" ಎಂದು ಹೇಳಿದರು. ಆಗ ಆ ವ್ಯಕ್ತಿ ಬಂದು ವೆಂಕಟಪ್ಪನವರ ಮುಂದೆ ಅದೇ ಆಕ್ಷೇಪಣೆಯನ್ನೆತ್ತಲು, ವೆಂಕಟಪ್ಪ ತಟ್ಟನೆ "ಕೆಲಸ ಮಾಡುವುದು ಮೀಸೆಯಲ್ಲ ಕೈ" ಎಂದು ಖಾರವಾಗಿ ನುಡಿದರು. ವೆಂಕಟಪ್ಪನವರಿಗೆ ಆಗಿನಿಂದಲೂ ಅದೇ ಸ್ವಾಭಿಮಾನ, ಧೈರ್ಯ ಮೈಗೂಡಿತ್ತು.




ವೆಂಕಟಪ್ಪನವರ ಬಂಗಾಳದ ಕಲಾಶಾಲೆಯ ಬದುಕು

ಕ್ರಿ.ಶ. ೧೯೦೯ ರಲ್ಲಿ ಶ್ರೀ ಕೆ. ವೆಂಕಟಪ್ಪನವರು ಮೈಸೂರು ಸರಕಾರದಿಂದ ತಂದ ಪತ್ರ ಹಾಗೂ ವಿದ್ಯಾರ್ಥಿ ವೇತನವನ್ನು ಹೊತ್ತು ಬಂಗಾಳ ಮಹಾ ಸಂಸ್ಥಾನದ ಮುಖ್ಯ ತಾಣವಾದ ಕಲ್ಕತ್ತವನ್ನು ಬಂದು ಸೇರಿದರು. ಆಗ ವೆಂಕಟಪ್ಪನವರಿಗೆ ಇಪ್ಪತ್ತಮೂರರ ಪ್ರಾಯ. ಆ ವಯಸ್ಸಿಗೆ ವೆಂಕಟಪ್ಪನವರ ತಲೆಯ ಮೇಲೆ ಬಹಳಷ್ಟು ಜವಾಬ್ದಾರಿ ಹಾಗೂ ಹಲವಾರು ಆಸೆ–ಆಕಾಂಕ್ಷೆಯನ್ನು ಹೊತ್ತು ಬಂದಿದ್ದರು. ಆವತ್ತಿಗಾಗಲೇ ಅವರಲ್ಲಿ ಸ್ವಾಭಿಮಾನ ಜಾಗೃತವಾಗಿತ್ತು. ಅದು ಅವರ ನೈತಿಕ ಶಕ್ತಿಗೆ ಕನ್ನಡಿಯಾಗಿತ್ತು. ಈ ಶಕ್ತಿಯೇ ಶ್ರೀ ಕೆ. ವೆಂಕಟಪ್ಪನವರ ಏಕಾಂತ ಬದುಕಿನ ನಾಡಿ ಮಿಡಿತವಾಗಿ ಜೊತೆ ಜೊತೆ ಸಾಗಿತ್ತು. ಆ ಕಾಲಕ್ಕೆ ಕಲ್ಕತ್ತ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಿತ್ತು. ಅಲ್ಲಿ ಪಾಶ್ಚಾತ್ಯರ ಒತ್ತಡದ ಜೊತೆಗೆ ಭಾರತತ್ವ, ಸ್ಥಳೀಯ ಸಂಸ್ಕೃತಿ, ಸಂಸ್ಕಾರ ಆಗ ತಾನೆ ಮರುಜೀವ ಪಡೆಯುತ್ತಿದ್ದವು.

ಇಂತಹ ಸಂದರ್ಭದಲ್ಲಿ ಕೆ. ವೆಂಕಟಪ್ಪನವರು ಕಲ್ಕತ್ತೆಗೆ ಭೇಟಿ ನೀಡಿದ್ದರು. ಆಗ ಭಾರತೀಯರಲ್ಲಿ ಸ್ವಂತಿಕೆ, ಸ್ವಾಭಿಮಾನ, ಸ್ವಾವಲಂಬನೆ, ಸ್ವಾತಂತ್ರ್ಯದ ಬಿಸಿಗಾಳಿ ಬೀಸತೊಡಗಿತ್ತು. ಪಾಶ್ಚಾತ್ಯರ ಎಲ್ಲಾ ಕ್ರಮಗಳನ್ನು ಹಂತ ಹಂತವಾಗಿ ಧೂಡುತ್ತಾ ಬಂದರು. ಎಲ್ಲಾ ಕ್ಷೇತ್ರದಲ್ಲಿ ಸ್ವಾವಲಂಬನೆ ಬಂದಂತೆ, ಕಲೆಯಲ್ಲೂ ಸ್ವಾಭಿಮಾನ ಹಾಗೂ ಸ್ವಂತಿಕೆಯನ್ನು ಬಯಸಿದ್ದು ಇದೇ ನಾಡಿನಲ್ಲಿ ಕಂಪನಿ ಕಲಾ ಪದ್ಧತಿಯನ್ನು ತಿರಸ್ಕರಿಸಿ ಮೊದಲಬಾರಿಗೆ ಕಲೆಯ ಮುಖೇನ ದಂಗೆ ಪ್ರಾರಂಭಿಸಿದ್ದೇ ಬಂಗಾಳಿ ಕಲಾವಿದರು. ಕಂಪನಿ ಕಲೆ ಹಾಗೂ ಕಲಾವಿದರ ವಿರುದ್ಧವಾಗಿ ಭಾರತೀಯ ದೇಶಿ ಕಲೆಯನ್ನು ಇಲ್ಲಿ ಕಲಾವಿದರ ಬ್ರಿಟೀಷ್ ಸರಕಾರದ ವಿರೋಧದ ನಡುವೆಯೂ ಕಲಾಕೃತಿ ರಚಿಸಿ ಪ್ರದರ್ಶನ ಮಾಡಿದರು. ಇಂತಹ ಸಂದರ್ಭಕ್ಕೆ ಸರಿಯಾಗಿ ಅಲ್ಲಿಗೆ ವೆಂಕಟಪ್ಪನವರೂ ಕಲಾ ಅಭ್ಯಾಸಕ್ಕೆಂದು ಮೈಸೂರು ಸರಕಾರದ ಮುಖೇನವಾಗಿ ಇಲ್ಲಿಗೆ ಬಂದರು.


ಬಂಗಾಳದಲ್ಲಿಯ ಕಲಾಶಾಲೆ ಕ್ರಿ.ಶ. ೧೮೫೪ ರಲ್ಲಿಯೇ ಖಾಸಗಿ ಶಾಲೆಯಾಗಿ ಪ್ರಾರಂಭವಾಗಿತ್ತು. “ಇಂಡಸ್ಟ್ರಿಯಲ್ ಆರ್ಟ್ ಸೊಸೈಟಿ” ಎಂಬ ಔದ್ಯಮಿಕ ಆಸಕ್ತಿಯುಳ್ಳ ಸಂಸ್ಥೆಯು ಒಡಮೂಡಿಸಿದ ಶಾಲೆ ಅದು. ಈ ಶಾಲೆಯಲ್ಲಿ ಶಿಕ್ಷಣ ವಿಷಯಗಳೆಲ್ಲ ಮೊದಲು ಕೈಗಾರಿಕೆಗೆ ಸಂಬಂಧಪಟ್ಟವೇ ಆಗಿದ್ದವು. ಮುಖ್ಯವಾಗಿ ಮರದಲ್ಲಿ ಕೆತ್ತನೆ, ರಿತೋಗ್ರಫಿ, ಇವುಗಳ ಜೊತೆಗೆ ಅಲಂಕರಣ ಕಲೆಯು ಅಷ್ಟಿಷ್ಟು ದೊರಕುತ್ತಿತ್ತು. ಆ ಶಾಲೆಯ ಆರ್ಥಿಕ ದೃಷ್ಟಿಯಿಂದ ಕರಕುಶಲ ಕೈಗಾರಿಕೆಗಳನ್ನೇ ಕಲಿಸಬೇಕೆಂಬುದು ಆ ನಾಡಿನ ಆಡಳಿತಾಧಿಕಾರಿಯಾಗಿದ್ದ ಲಾರ್ಡ್ ಕರ್ಜನ್‌ನ ಆಗ್ರಹ. ಈ ಧೋರಣೆಯು ಇ.ಬಿ. ಹ್ಯಾವೆಲ್ ಬಂಗಾಳಿ ಕಲಾಶಾಲೆಗೆ ಬರುವವರೆವಿಗೂ ಮಾತ್ರವಿತ್ತು. ಇ.ಬಿ. ಹ್ಯಾವೆಲ್‌ರವರು



ಕ್ರಿ.ಶ. ೧೮೯೬ ರಲ್ಲಿ ಬಂಗಾಳಿ ಕಲಾಶಾಲೆಗೆ ಮುಖ್ಯಸ್ಥರಾಗಿ ಬಂದರು. ಹ್ಯಾವೆಲ್‌ರವರು ಈ ಕಲಾಶಾಲೆಗೆ ಬಂದ ಕೆಲವೇ ದಿನಗಳಲ್ಲಿ ಇಲ್ಲಿಯ ವಾತಾವರಣವನ್ನೇ ಬದಲಾಯಿಸಿದರು. ಕಲೆ ಔದ್ಯಮಿಕ ಅಂಗವಲ್ಲ, ಲಲಿತಕಲೆಯು ವಿಸ್ತೀರ್ಣವಿಲ್ಲದಷ್ಟು ವಿಸ್ತಾರವನ್ನು ಹೊಂದಿರುವಂತಹದ್ದು. ಕಲೆ ಎಂಬುದು ಕಾರ್ಮಿಕರ ಕೆಲಸವಲ್ಲ, ಇದು ಕಲಾವಿದರ ಕೆಲಸ, ಈ ಕೆಲಸಕ್ಕೆ ಯಾವುದು ಕಟ್ಟುಪಾಡು ಇರಬಾರದು. ಕಲೆ ಬರಿಯ ಮಾರುಕಟ್ಟೆ ಹಾಗೂ ಉದ್ಯಮಕ್ಕೆ ಸಂಬಂಧಿಸಿದ್ದಲ್ಲ. ಇದು ಕಲಾವಿದ ಮನದಾಳದ ಸ್ವಂತಿಕೆಯ ವಿಷಯ ಎಂದು ತಿಳಿದಿದ್ದರು. ಹ್ಯಾವೆಲ್‌ರವರು ಲಲಿತಕಲೆಯ ಅಗತ್ಯತೆಯನ್ನು ಮನಗಂಡಿದ್ದರು. ಆದರೂ ಈ ಕಲಾಶಾಲೆಯಲ್ಲಿ ಮರ ಕೆತ್ತನೆ, ರಿತೋಗ್ರಫಿ ಅಷ್ಟೇ ಅಲ್ಲದೆ ವರ್ಣಚಿತ್ರವನ್ನು ಕಲಿಯಲು ಅವಕಾಶವಿತ್ತರು. ಈ ಕಾರಣದಿಂದಾಗಿ ಮುಂದೆ ಭಾರತದಲ್ಲಿ ದೇಶಿಕಲೆ ಬಂಗಾಳದಲ್ಲಿ ಪುನರುಜ್ಜೀವನವಾಗುವಂತೆ ಮಾಡಿದ ಕೀರ್ತಿ ಹ್ಯಾವೆಲ್ಲರಿಗೆ ಸಲ್ಲುತ್ತದೆ.

ಇ.ಬಿ. ಹ್ಯಾವೆಲ್‌ರವರು ಭಾರತದಲ್ಲಿ ದೇಶೀ ಕಲೆಯ ಮರುಹುಟ್ಟಿಗೆ ಮೊದಲು ಬುನಾದಿ ಹಾಕಿದವರು. ಹಾವೆಲ್‌ರವರು ಕ್ರಿ.ಶ. ೧೮೬೧ ರಲ್ಲಿ ಇಂಗ್ಲೆಂಡ್‌ನಲ್ಲಿ ಜನಿಸಿದರು. ಇವರು ತಮ್ಮ ೨೩ ನೇ ವಯಸ್ಸಿನಲ್ಲಿ ಭಾರತಕ್ಕೆ ಬಂದದ್ದು. ಇವರು ಪಾಶ್ಚಾತ್ಯ ಚಿತ್ರ ಪದ್ಧತಿಯನ್ನು ಚೆನ್ನಾಗಿ ಅರಿತವರಾಗಿದ್ದರು. ಆದರೆ ಕ್ರಿ.ಶ. ೧೮೮೪ ರಲ್ಲಿ ಭಾರತದ ಮದ್ರಾಸಿ ಕಲಾಶಾಲೆಗೆ ಬಂದಿದ್ದು ಇಲ್ಲಿಯ ಕಲಾವಿದ್ಯಾರ್ಥಿಗಳಿಗೆ ತಮ್ಮ ದೇಶಗಳ ಕಲಾವೈಭವವನ್ನು ತಿಳಿಸಿ ಆ ಕಲಾಪದ್ಧತಿಯನ್ನು ಇಲ್ಲಿಯ ವಿದ್ಯಾರ್ಥಿಗಳಿಗೆ ಕಲಿಸಬೇಕು ಎಂಬುದು ಇವರ ಮೊದಲ ಉದ್ದೇಶವಾಗಿತ್ತು. ಆದರೆ ಭಾರತಕ್ಕೆ ಬಂದ ಕೆಲ ವರ್ಷಗಳಲ್ಲಿ ಹ್ಯಾವೆಲ್‌ರವರು ಭಾರತೀಯ ಪರಂಪರೆ, ಮಹತ್ವ ಹಾಗೂ ಈ ಕಲೆಯ ಕಲಾಕೃತಿಯ ಹಿಂದಿರುವ ಗೌಪ್ಯತೆಯನ್ನು ಅರಿತು ಪುಳಕಿತರಾದರು.


ನಂತರ ಈ ಕಲೆಯ ಮಹತ್ವ ಹಾಗೂ ಹಿನ್ನೆಲೆಯನ್ನು ತಿಳಿಯಲು ಇದರ ಕುರಿತಾಗಿ ಅಭ್ಯಾಸ ನಡೆಸಿದರು. ಆನಂತರದ ದಿನಗಳಲ್ಲಿ ಭಾರತೀಯ ವಿದ್ಯಾರ್ಥಿಗಳಿಗೆ ಪಾಶ್ಚಾತ್ಯ ಪದ್ಧತಿಯ ಕಲೆಯನ್ನು ಏತಕ್ಕಾಗಿ ಕಲಿಸಬೇಕು ಎಂದು. ಇವರ ಕಲೆಯೇ ಶ್ರೀಮಂತವಾಗಿದೆ ಹಾಗೂ ಪ್ರಭಾವಿ ವಸ್ತುನಿಷ್ಟ ಕಲೆ ಇದಾಗಿದೆ ಎಂದು ತಿಳಿದು ಇಲ್ಲಿಯ ವಿದ್ಯಾರ್ಥಿಗಳಿಗೆ ಭಾರತೀಯ ಸಾಂಪ್ರದಾಯಿಕ ಕಲೆಯ ಮಹತ್ವ ಹಾಗೂ ಅದರ ಹಿರಿಮೆಯನ್ನು ತಿಳಿಸತೊಡಗಿದರು. ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಗಳ ಬಲದಿಂದ ಭಾರತೀಯರು ತಮ್ಮ ಕಲೆಯನ್ನೇ ನಿರ್ಲಕ್ಷಿಸಿ ಕೈ ಬಿಟ್ಟಿರುವುದನ್ನು ಕಂಡು ಮರುಗಿದರು. ಹ್ಯಾವೆಲ್ ಭಾರತೀಯ ಕಲೆಯ ಹಿರಿಮೆಯನ್ನು ಇಲ್ಲಿನ ಜನರಿಗೂ ಹಾಗೂ ಪ್ರಪಂಚದ ಎಲ್ಲಾ ಕಲಾಕಾರರಿಗೂ ತಿಳಿಸಿಕೊಡಬೇಕೆಂಬ ಸಂಕಲ್ಪ ತೊಟ್ಟರು.



ವೆಂಕಟಪ್ಪನವರು ಬಂಗಾಳ ಕಲಾಶಾಲೆಗೆ ಬರುಷ್ವರಲ್ಲಿ ಹ್ಯಾವೆಲ್‌ರವರು ಇಲ್ಲಿ ಇರಲಿಲ್ಲ. ಆದರೆ ಅವರು ಮಾಡಿದ ಸಾಧನೆಯ ಚೇತನ ಬೆಳಗುತ್ತಲೇ ಇತ್ತು. ಪಾಶ್ಚಾತ್ಯ ಕಲೆಯಿಂದ ಬೇಸತ್ತಿದ್ದ ಹ್ಯಾವೆಲ್‌ರು ಭಾರತೀಯ ಪುನರುಜ್ಜೀವನಕ್ಕೆ ಕಂಕಣ ತೊಟ್ಟು ನಿಂತಿದ್ದರು. ಭಾರತೀಯ ಸಂಸ್ಕೃತಿ, ಸಂಸ್ಕಾರ, ಕಲೆ ಹಾಗೂ ಕಲೆಯ ಹಿಂದಿರುವ ಮಹತ್ವ, ವೈಶಿಷ್ಟ್ಯ ಇವನ್ನು ಜನರಿಗೆ ಮತ್ತೆ ದೊರಕಿಸಿಕೊಡುವ ಸಂಕಲ್ಪವನ್ನು ಮಾಡಿ ಇವರು ಬಂಗಾಳಿ ಕಲಾಶಾಲೆಯಲ್ಲಿ ಒಂದು ಬಗೆಯ ಆಂದೋಲನವನ್ನೇ ನಡೆಸಿ ಪರಿವರ್ತನೆಯ ಹಾದಿಯನ್ನು ತೋರಿದರು. ಕಲಾಶಾಲೆಯ ಗೋಡೆಗಳ ಮೇಲೆ ತೂಗುತ್ತಿದ್ದ ಪಾಶ್ಚಾತ್ಯ ಕಲಾಪದ್ಧತಿಯ ಕಲಾ ಕೃತಿಗಳನ್ನು ಇಳಿಸಿ ಅಲ್ಲಿಗೆ ಭಾರತೀಯ ದೇಶೀ ಕಲೆಗಳಾದ ರಾಜಸ್ಥಾನಿ, ಮೊಘಲ್, ಭಾರತೀಯ ಸಾಂಪ್ರದಾಯಿಕ ಕಲೆಗಳನ್ನು ಗೋಡೆಗಳ ಮೇಲೆ ಕಾಣುವಂತೆ ಮಾಡಿದರು. ಇವರಿಗೆ ಸ್ಫೂರ್ತಿಯಾಗಿ ಆನಂದ ಕುಮಾರಸ್ವಾಮಿ, ಅವನೀಂದ್ರನಾಥ್ ಠಾಕೂರ್, ಜಾನ್‌ವುಡ್‌ರೊಪ್, ಶ್ರೀ ರಾಮಕೃಷ್ಣ ಈ ಆಂದೋಲನದಲ್ಲಿ ಪ್ರಮುಖ ಪಾತ್ರವಹಿಸಿದ್ದರು.

ಈ ಎಲ್ಲಾ ಕ್ರಿಯೆಗಳು ವೆಂಕಟಪ್ಪನವರು ಬಂಗಾಳಿ ಕಲಾಶಾಲೆಗೆ ಬರುವಷ್ವರಲ್ಲಿ ನಡೆದಿದ್ದವು. ಕ್ರಿ.ಶ. ೧೯೦೬ರ ವೇಳೆಗೆ ತಮ್ಮ ದೇಹದ ಆರೋಗ್ಯ ಹದಗೆಟ್ಟು ಚಿಕಿತ್ಸೆಗೆಂದು ಇಂಗ್ಲೆಂಡಿಗೆ ಮರಳಿದರು. ಅಲ್ಲಿಗೆ ಹೋದ ಹ್ಯಾವೆಲ್‌ರವರು ಮತ್ತೆ ಭಾರತಕ್ಕೆ ಮರಳಲೇ ಇಲ್ಲ. ಆಗ ಅವನೀಂದ್ರನಾಥರೇ ಹಂಗಾಮಿ ಮುಖ್ಯಸ್ಥರಾದರು. ಮೂರು ವರ್ಷಗಳ ಕಾಲ ಕಾರ್ಯ ನಿರ್ವಹಿಸಿದರು. ಕ್ರಿ.ಶ. ೧೯೦೯ ರಲ್ಲಿ ವೆಂಕಟಪ್ಪನವರು ಬಂಗಾಳಿ ಕಲಾಶಾಲೆಗೆ ಬರುವ ಕೆಲ ತಿಂಗಳ ಹಿಂದೆ ಪೆರ್ಸಿ ಬ್ರೌನ್ ಎಂಬ ಇಂಗ್ಲೀಷ್ ಅಧಿಕಾರಿ ಮುಖ್ಯಸ್ಥರಾಗಿ ನೇಮಕ ವಾಗಿದ್ದರು.


ಇದಾದ ಕೆಲವು ತಿಂಗಳಲ್ಲಿ ಪೆರ್ಸಿ ಬ್ರೌನ್‌ರ ವರ್ತನೆ, ಧೋರಣೆಗಳು ಮತ್ತು ಹ್ಯಾವೆಲ್‌ರವರು ದೇಶಿ ಸಾಂಪ್ರದಾಯಿಕ ಕಲೆಗೆ ನೀಡುತ್ತಿದ್ದ ಗೌರವವನ್ನು ಪೆರ್ಸಿ ಬ್ರೌನ್ ನೀಡದೆ ಕಲಾವಿದ್ಯಾರ್ಥಿಗಳ ಬಂಗಾಳಿ ಕಲಾಂದೋಲನಕ್ಕೆ ಬ್ರೌನ್ ವಿರೋಧ ವ್ಯಕ್ತಪಡಿಸಿದರು. ಈ ಎಲ್ಲಾ ಕಾರಣಗಳು ಅವನೀಂದ್ರರ ಸುಪ್ತ ಕಲಾಮನಸ್ಸನ್ನು ವಿಚಲಿತಗೊಳಿಸತೊಡಗಿದವು. ಈ ಪರಿಸ್ಥಿತಿಯ ಪ್ರಾರಂಭದ ಹಂತದಲ್ಲಿ ಕೆ. ವೆಂಕಟಪ್ಪನವರು ಬಂಗಾಳಿ ಕಲಾಶಾಲೆಗೆ ಬಂದರು. ವೆಂಕಟಪ್ಪನವರಿಗೆ ಪ್ರಾರಂಭದಲ್ಲೇ ನಿರಾಸೆ ಕಾದಿತ್ತು. ಮದರಾಸಿಗೆ ಕಲಾಪರೀಕ್ಷೆಗೆ ಹೋಗುವಾಗಲೇ ವೆಂಕಟಪ್ಪನವರಿಗೆ ಹ್ಯಾವೆಲ್‌ರ ಮೇಲೆ ಎಲ್ಲಿಲ್ಲದ ಆಸಕ್ತಿ. ತಾನು ಅವರ ಮಾರ್ಗದರ್ಶನದಲ್ಲಿ ಕಲಿಯಬೇಕೆಂಬುದು ಅವರ ಬಹುದಿನದ ಕನಸು ನೆರವೇರದಿರುವುದು ಅವರ ವೇದನೆಗೆ ಕಾರಣವಾಯಿತು.



ಮುಂದೆ ವೆಂಕಟಪ್ಪನವರು ಬಂಗಾಳದ ಕಲಾಶಾಲೆಯಲ್ಲಿ ಕಲಾಭ್ಯಾಸವನ್ನು ಪ್ರಾರಂಭಿಸಿದರು. ತನ್ನ ಆಸಕ್ತಿ ಕ್ಷೇತ್ರವಾದ ವರ್ಣಚಿತ್ರ ರಚನೆಯಲ್ಲಿ ಪರಿಣಿತಿಯನ್ನು ಹೊಂದಬಯಸಿದರು. ಇವರ ಕಲಾಸಕ್ತಿಯನ್ನು ಗಮನಿಸುತ್ತಿದ್ದ ಅವನೀಂದ್ರನಾಥರು ಅದನ್ನು ಪ್ರೋತ್ಸಾಹಿಸಲು ಮುಂದಾದರು. ವೆಂಕಟಪ್ಪನವರಿಗೆ ಇದ್ದ ಸೌಂಧರ್ಯ ಪ್ರಜ್ಞೆ, ಚಿತ್ರ ಸಂಯೋಜನೆಯ ವೈಖರಿ, ವರ್ಣಗಾರಿಕೆಯ ಗಹನತೆಯನ್ನು ಕಂಡ ಅವನೀಂದ್ರರಿಗೆ ವೆಂಕಟಪ್ಪನವರಲ್ಲಿದ್ದ ಸಾಂಪ್ರದಾಯಿಕ ಕಲೆಯ ಹಿಡಿತ ಮಹತ್ತರವೆನಿಸಿತು. ತನ್ನ ತಂದೆ ಹಾಗೂ ಅವರ ಸಹೋದ್ಯೋಗಿಗಳ ಜೊತೆಯಲ್ಲಿ ಚಿತ್ರಗಾರಿಕೆ ಮಾಡಿದ ಅನುಭವ ಅಗಾಧವಾಗಿತ್ತು. ವೆಂಕಟಪ್ಪನವರು ಆ ಕಾಲಕ್ಕೆ ಸಾಂಪ್ರದಾಯಿಕ ಕಲೆಯಲ್ಲಿ ಪ್ರೌಢಿಮೆಯನ್ನು ಪಡೆದಿದ್ದರು. ಆದುದರಿಂದ ಇವರು ಅಭ್ಯಾಸ ಮಾಡುತ್ತಿದ್ದ ಅಕಾಡೆಮಿಕ್ ಶೈಲಿಯಲ್ಲೂ ಸಾಂಪ್ರದಾಯಿಕ ಸೊಗಡಿನ ಛಾಯೆ ಎದ್ದು ಕಾಣುತ್ತಿತ್ತು. ಈ ವಿಷಯನ್ನು ಸೂಕ್ಷ್ಮವಾಗಿ ಅರಿತ ಅವನೀಂದ್ರರು ಈ ಬಾಲಕ ಕೆಲ ವರ್ಷಗಳ ಮುಂಚೆಯೇ ಏಕೆ ಬರಬಾರದಿತ್ತು ಎಂದು ಭಾವಿಸಿದರು. ಆಡಳಿತಾಂಗದ ಬಿಕ್ಕಟ್ಟಿನ ಮಧ್ಯೆಯೂ ಅವನೀಂದ್ರರು ದೇಶೀಕಲೆಯ ಪ್ರಚೋದನೆಯನ್ನು ಕೈ ಬಿಟ್ಟಿರಲಿಲ್ಲ. ಇದೇ ವಿಷಯಕ್ಕೆ ಪೆರ್ಸಿ ಬ್ರೌನ್‌ರವರಿಗೂ ಅವನೀಂದ್ರರಿಗೂ ಶೀತಲ ಸಮರಗಳು ಆಂತರಿಕವಾಗಿ ನಡೆಯುತ್ತಲೇ ಇದ್ದವು.

ಇದೇ ರೀತಿಯಲ್ಲಿ ಕೆಲವಾರು ವರ್ಷ ಮನಸ್ಥಾಪಗಳು ಆಂತರಿಕವಾಗಿದ್ದರೂ ವಿದ್ಯಾರ್ಥಿಗಳ ಬಳಿ ಎಂದಿಗೂ ಅವನೀಂದ್ರರು ಹಂಚಿಕೊಂಡಿರಲಿಲ್ಲ. ಆದರೆ ಹಿರಿಯ ಭಾರತೀಯ ವಿದ್ಯಾರ್ಥಿಗಳು ಅವನೀಂದ್ರರನ್ನು ಹೆಚ್ಚಾಗಿ ಪ್ರೀತಿಸುವುದು ಪೆರ್ಸಿ ಬ್ರೌನ್‌ರಿಗೆ ತಾಳದ ವಿಷಯವಾಗಿತ್ತು. ಅವನೀಂದ್ರರಿಗೆ ಐದು ವರ್ಷದೊಳಗಾಗಿ ಅಂದರೆ ಕ್ರಿ.ಶ. ೧೯೧೧ರ ಹೊತಿಗೆ ಅಧ್ಯಾಪಕ ವೃತ್ತಿಯನ್ನು ಬಿಟ್ಟು ತಮ್ಮ ಹಿರಿಯರಿದ್ದ "ಜೋಡಾಶಂಖೋ" ಎಂಬ ಅರಮನೆಯಲ್ಲಿ ಸ್ಟುಡಿಯೋ ಒಂದನ್ನು ತೆರೆದು ತನ್ನ ಇಚ್ಛಾ ಮಾಧ್ಯಮದ ಹಾಗೂ ಶೈಲಿ ಪ್ರಕಾರದ ರಚನೆಯಲ್ಲಿ ನಿರತರಾಗಬೇಕು ಎಂಬುದು ಹಾಗೂ ಹಲವಾರು ಸಹ ಮನಸ್ಸಿನ ಸಹ ಕಲಾವಿದರ ಸಂಗಡ ಸೇರಿ ಕೃತಿ ರಚನಾ ಕಾರ್ಯದಲ್ಲಿ ನಿರತರಾಗಬೇಕೆಂಬ ಬಯಕೆಯ ಚಿಗುರು ಕ್ರಿ.ಶ. ೧೯೧೧ರಲ್ಲಿಯೇ ಅವನೀಂದ್ರರಿಗೆ ಮೂಡಿತು.


ಆದರೆ ಇನ್ನು ಮುಂದೆ ಅಂದರೆ ಕ್ರಿ.ಶ. ೧೯೧೫ರವರೆಗೆ ಈ ಆಸೆಯನ್ನು ತಳ್ಳುತ್ತಾ ಬಂದರು. ೧೯೧೫ರ ಹೊತ್ತಿಗೆ ಪೆರ್ಸಿ ಬ್ರೌನ್‌ರ ಆಡಳಿತಾಧಿಕಾರ ಅವನೀಂದ್ರರಿಗೆ ಮುಳ್ಳಾಗಿ ಪರಿವರ್ತನೆಯಾಯಿತು. ಅವರ ಕಲಾಭಿರುಚಿ, ಅವರ ವ್ಯವಹಾರ ಯಾವುದೂ ಅವನೀಂದ್ರರಿಗೆ ಹಿಡಿಸದೆ ತಾವಾಗಿಯೇ ಕ್ರಿ.ಶ. ೧೯೧೫ರಲ್ಲಿ ಕಲಾಶಾಲೆಯನ್ನು ಬಿಟ್ಟು ಜೋಡಾಶಂಖೋದಲ್ಲಿ ಕಲಾಭ್ಯಾಸ ಹಾಗೂ ಕಲಾ ಕ್ರಾಂತಿಗೆ



ನಾಂದಿಯಾಡಿದರು. ಇವರ ಜೊತೆಯಲ್ಲಿ ಇವರ ಅನುಯಾಯಿ ವಿದ್ಯಾರ್ಥಿಗಳು ಸಹ ಶಾಲೆಯನ್ನು ಬಿಟ್ಟು ಇವರ ಜೊತೆಯಲ್ಲಿಯೇ ಹೊರಬಂದರು. ಅವರಲ್ಲಿ ನಂದಲಾಲ ಬೋಸರೂ ಒಬ್ಬರಾಗಿದ್ದರು. ಆದರೆ ಯಾವುದೇ ಕಾರಣಕ್ಕೂ ವೆಂಕಟಪ್ಪನವರು ಬರುವಂತಿರಲಿಲ್ಲ. ಏಕೆಂದರೆ ಅವರು ಮೈಸೂರು ಸಂಸ್ಥಾನದ ವತಿಯಿಂದ ಬಂದ ಕಲಾ ವಿದ್ಯಾರ್ಥಿಯಾಗಿದ್ದು. ಇವರು ಸರಕಾರದಿಂದ ವಿದ್ಯಾರ್ಥಿವೇತನವನ್ನು ಸಹ ಪಡೆಯುತ್ತಿದ್ದರು. ಆದುದರಿಂದ ಅವರು ಅಭ್ಯಾಸವನ್ನು ಪೂರ್ಣ ಮುಗಿಸಲೇಬೇಕಿತ್ತು. ಯಾವುದೇ ಕಾರಣದಿಂದಲೂ ಅಭ್ಯಾಸವನ್ನು ಕೈ ಬಿಡುವಂತಿರಲಿಲ್ಲ. ಅವನೀಂದ್ರರ ನೆಚ್ಚಿನ ಶಿಷ್ಯರಾದರೂ ಇವರು ಅವನೀಂದ್ರರ ಜೊತೆ ಹೋಗಲಾಗಲಿಲ್ಲ. ಇದರಿಂದ ತುಂಬಾ ವ್ಯಥೆ ಪಟ್ಟು ಕೆಲ ತಿಂಗಳ ನಂತರ ಸಂಜೆ ಹೊತ್ತು ಜೋಡಶಂಖೋಗೆ ಹೋಗಲಾರಂಭಿಸಿದರು.

ಕೆ. ವೆಂಕಟಪ್ಪನವರು ಬಂಗಾಳಿ ಕಲಾಶಾಲೆಗೆ ಸೇರುವಷ್ಟರಲ್ಲಿ ಅಲ್ಲಿಯ ಪ್ರಮುಖ ಆಕರ್ಷಣೆಯಾಗಿದ್ದವರೆಂದರೆ ಅವನೀಂದ್ರರೆ. ಇವರು ಭಾರತೀಯ ಕಲೆಯ ಪುನರುಜ್ಜೀವನದ ನೇತಾರರೆಂದರೆ ಅತಿಶಯೋಕ್ತಿಯಲ್ಲ. ನಾಡಿನ ಶ್ರೇಷ್ಠ ಕಲಾವಿದರಲ್ಲಿ ಒಬ್ಬರಾಗಿ ಕಲಾಕ್ಷೇತ್ರಕ್ಕೆ ಹಲವು ಕಲಾವಿದರನ್ನು ಕೊಡುಗೆಯಾಗಿ ನೀಡಿರುವ ಕೀರ್ತಿ ಇವರದು. ಇವರ ಅಚ್ಚುಮೆಚ್ಚಿನ ಶಿಷ್ಯ ವೃಂದದಲ್ಲಿ ಮೊದಲನೆಯವರು ನಂದಲಾಲ ಬೋಸ್. ಆ ನಂತರ ಲಕ್ನೋದ ಅಶೀತ ಕುಮಾರರು, ಜಯಪುರದ ಶೈಲೇಂದ್ರನಾಥ ದೇಯವರು, ಲಾಹೋರಿನ ಸಮರೇಂದ್ರ ಗುಪ್ತ, ಆಂಧ್ರಪ್ರದೇಶದಲ್ಲಿಯ ಪ್ರಮೋದ್ ಕುಮಾರ್ ಚಟ್ಟೋಪಾಧ್ಯಾಯರು, ಕಲ್ಕತ್ತಾದ ಮುಕುಲ್ ದೇ ರವರು ಹಾಗೂ ದೆಹಲಿಯ ಶಾರದ ಉಕೆಲ್ ಈ ಎಲ್ಲಾ ಮಹನೀಯರು ಅವನೀಂದ್ರರ ನೆಚ್ಚಿನ ಶಿಷ್ಯರಾಗಿದ್ದರು. ಈ ಎಲ್ಲರ ನಡುವೆ ನಮ್ಮವರೇ ಆದ ಕೆ. ವೆಂಕಟಪ್ಪನವರ ಮೇಲೂ ಅವನೀಂದ್ರರಿಗೆ ಎಲ್ಲಿಲ್ಲದ ಪ್ರೀತಿ. ನಂದಲಾಲರನ್ನು ಬಿಟ್ಟರೆ ಉಳಿದವರೆಲ್ಲರೂ ಕೆ. ವೆಂಕಟಪ್ಪನವರ ಸಹಪಾಠಿಗಳಾಗಿದ್ದವರು. ನಂದಲಾಲರು ಮಾತ್ರ ಒಂದೆರಡು ವರ್ಷಕ್ಕೆ ಹಿರಿಯರು.


ಕೆ. ವೆಂಕಟಪ್ಪನವರು ಕಲಿತಿದ್ದು ಬಂಗಾಳಿ ಕಲಾಶಾಲೆಯ ಮರಗಿಡಗಳ ತಪ್ಪಲಿನಲ್ಲಿ. ಅವನೀಂದ್ರರ ಪ್ರಕಾರ ನೇರ ಶಿಕ್ಷಣ ಪದ್ಧತಿ ಇಲ್ಲಿ ಎಲ್ಲವನ್ನೂ ನೇರವಾಗಿ, ಸರಳವಾಗಿ, ಗುಣದೋಷ ರಹಿತವಾಗಿ ಪೂರ್ವ ಸಿದ್ಧತೆ ಇಲ್ಲದೇ ಕಲಿಯುವಂತಹದ್ದು. ಇದು ಅವನೀಂದ್ರರ ಪದ್ಧತಿಯಾಗಿತ್ತು. ಇದೇ ಶಿಕ್ಷಣವನ್ನು ಕೆ. ವೆಂಕಟಪ್ಪನವರು ಪಡೆದರು. ಇದಕ್ಕೆ ಪೆರ್ಸಿ ಬ್ರೌನ್‌ರ ವಿರೋಧವಿತ್ತು. ಇದೇ ಸಂದರ್ಭದಲ್ಲಿ ಲಂಡನ್ನಿನ "ದಿ ಇಂಡಿಯನ್ ಸೊಸೈಟಿ"ಗೆ ಸೇರಿದ ಲೇಡಿ ಹೆರಿಂಗ್ ಹ್ಯಾಮ್ ಎಂಬ ಕಲಾಭಿಮಾನಿ ಠ್ಯಾಗೂರರ ವಂಶಸ್ಥೆಯಾದ ನಿವೇದಿತಾಳ ಪರಿಚಯವಿದ್ದ ಕಾರಣ ಅವಳ ಬಳಿಯಲ್ಲಿ



ವಿಶ್ವವಿಖ್ಯಾತ ಅಜಂತಾದ ಗುಹೆಗಳ ಭಿತ್ತಿ ಚಿತ್ರಗಳನ್ನು ಯಥಾವತ್ತಾದ ಪ್ರತಿಗಳನ್ನು ಮಾಡಿಸಲು ಕಲಾವಿದರ ಸಹಾಯ ಬೇಕು ಎಂದು ಕೇಳಿದಾಗ ಆಕೆ ಅವನೀಂದ್ರರ ಪರಿಚಯವನ್ನು ಮಾಡಿಸಿದರು. ಲೇಡಿ ಹೆರಿಂಗ್ ಹ್ಯಾಮ್ ಅವನೀಂದ್ರರ ಬಳಿ ತನ್ನ ಮನದ ಆಭಿಲಾಶೆಯನ್ನು ತೋಡಿಕೊಂಡಾಗ ಕ್ರಿ.ಶ. ೧೯೦೯ರಲ್ಲಿ ಮೊದಲ ಬಾರಿಗೆ ನಂದಲಾಲ ಬೋಸರ ಹೆಸರನ್ನು ಸೂಚಿಸಿ ಇವರನ್ನು ಕಳಿಸಿಕೊಟ್ಟರು. ಇವರಿಬ್ಬರು ಸೇರಿ ಕೆಲವು ದಿನಗಳ ಕಾಲ ಅಜಂತಾದಲ್ಲಿಯೇ ತಂಗಿದ್ದು, ಚಿತ್ರ ರಚನೆ ಮಾಡಿಕೊಂಡು ಆಕೆ ಮರಳಿ ಇಂಗ್ಲೆಂಡಿಗೆ ತೆರಳಿದಳು. ಇದಾದ ಎರಡು ವರ್ಷಗಳಲ್ಲಿಯೇ ಮರಳಿ ಮತ್ತೆ ಬಂದ ಲೇಡಿ ಹೆರಿಂಗ್ ಹ್ಯಾಮ್ ಅವನೀಂದ್ರರಲ್ಲಿ ಇನ್ನು ಕೆಲವು ಕಲಾವಿದರನ್ನು ಕಳಿಸುವಂತೆ ಕೇಳಿದಾಗ ನಂದಲಾಲರ ಜೊತೆಗೆ ವೆಂಕಟಪ್ಪನವರವನ್ನು ಚಿತ್ರ ರಚನೆಗೆಂದು ಹಾಗೂ ಅಶೀತಕುಮಾರ ಹೌಲ್‌ದಾರ್ ಹಾಗೂ ಸಮರೇಂದ್ರ ಗುಪ್ತರನ್ನು ಸಹಾಯಕರನ್ನಾಗಿ ಕಳಿಸಿಕೊಟ್ಟರು.

ಈ ನಾಲ್ವರೂ ಹಾಗೂ ಲೇಡಿ ಹೆರಿಂಗ್ ಹ್ಯಾಮ್ ಸೇರಿ ಕೆಲವು ತಿಂಗಳುಗಳ ಕಾಲ ಅಜಂತಾದಲ್ಲಿಯೇ ಇದ್ದು ಚಿತ್ರ ರಚನೆಯನ್ನು ಮಾಡತೊಡಗಿದರು. ಇಲ್ಲಿ ಅವರಿಗಾದ ಅನುಭವ ಅಪಾರವಾದದ್ದು. ಇಲ್ಲಿ ವೆಂಕಟಪ್ಪನವರು ಕಲಿತದ್ದು, ಮನನ ಮಾಡಿಕೊಂಡಿದ್ದು ಬಹಳ. ವೆಂಕಟಪ್ಪನವರಿಗಾಗಲೇ ಮೈಸೂರು ಅರಮನೆಯಲ್ಲಿ ಚಿತ್ರ ರಚನೆಯನ್ನು ಮಾಡಿದ್ದ ಅನುಭವ ಅಪಾರವಾಗಿತ್ತು. ಇದರ ಸಹಾಯದಿಂದಲೇ ವೆಂಕಟಪ್ಪನವರು ಅಜಂತಾದಲ್ಲೂ ತಮ್ಮ ಕಲಾ ಹಿರಿಮೆಯನ್ನು ಮೆರೆದರು. ಇಲ್ಲಿ ವೆಂಕಟಪ್ಪನವರು ಕಲಿತದ್ದು ರೇಖಾಚಿತ್ರದ, ವರ್ಣ ವಿನ್ಯಾಸ ಸಂಯೋಜನೆ, ವಸ್ತು ವಿಷಯದ ಆಯ್ಕೆ, ನೆರಳೂ ಬೆಳಕಿನ ಪರ್ಯಟನೆ ಇವೆಲ್ಲದರ ಗಹನತೆಯ ಅನುಭವ ಹಾಗೂ ಅರಿವು ವೆಂಕಟಪ್ಪನವರಿಗೆ ದೊರೆತಿತ್ತು. ಇವರ ಕಲಾದಿನಗಳಲ್ಲಿ ಅಜಂತಾ ದಿನಗಳು ಶ್ರೇಷ್ಠವಾದವು.

ಈ ರೀತಿಯಾಗಿ ಪ್ರತಿ ಮಾಡಿಸಿಕೊಂಡು ಹೋದ ಲೇಡಿ ಹೆರಿಂಗ್‌ರವರು ಇಂಗ್ಲೆಂಡಿನಲ್ಲಿ ಎಲ್ಲ ಕಲಾಕೃತಿಯನ್ನು "ದಿ ಇಂಡಿಯನ್ ಹೌಸ್"ನಲ್ಲಿ ಚಿತ್ರ ಕಲಾ ಪ್ರದರ್ಶನವನ್ನು ಏರ್ಪಡಿಸಿದರು. ದುರದೃಷ್ಟವಶಾತ್ ಬೆಂಕಿ ಅನಾಹುತದಿಂದಾಗಿ ಇಂಡಿಯನ್ ಹೌಸ್‌ನಲ್ಲಿದ್ದ ಎಲ್ಲಾ ಕಲಾಕೃತಿಗಳು ನಾಶವಾದವು. ನಂದಲಾಲ್‌ರು ಹಾಗೂ ವೆಂಕಟಪ್ಪನವರು ರಚಿಸಿದ ಅಜಂತಾದ ಎಲ್ಲಾ ಕಲಾಕೃತಿಗಳು ನಾಶವಾಗಿ ಹೋದವು. ಇದಾದನಂತರ ಕೆ. ವೆಂಕಟಪ್ಪನವರಿಗೆ ಹಲವಾರು ಸ್ನೇಹಿತರ ಬಳಗ ಹುಟ್ಟಿಕೊಂಡಿತು. ಅಲ್ಲದೇ ಇವರನ್ನು ಸಮಾಜದಲ್ಲಿ ಹಾಗೂ ಕಲಾವಲಯದಲ್ಲಿ ಗುರುತಿಸಲಾರಂಭಿಸಿದರು. ಹಿರಿಯ ಕಲಾ ವಿಮರ್ಶಕರ ಪರಿಯಚವೂ ಇವರಿಗಾಗತೊಡಗಿತು. ಅವರಲ್ಲಿ ಗಗನೇಂದ್ರನಾಥ್, ಜೇಮ್ಸ್ ಕಸಿನ್ಸ್, ಆನಂದ ಕುಮಾರಸ್ವಾಮಿ ಇನ್ನು ಹಲವಾರು ಅದರಲ್ಲೂ ಗಗನೇಂದ್ರರಿಗಂತೂ ಇವರ




ಮೇಲೆ ಎಲ್ಲಿಲ್ಲದ ಪ್ರೀತಿ. ಇವರೊಬ್ಬ ಕವಿ, ಕಲಾವಿದ, ಭಾವುಕ ಜೀವಿ, ಕಲಾ ರಸಿಕ, ಆಧ್ಯಾತ್ಮ ಚಿಂತಕ ಹಾಗೂ ರಾಜಮನೆತನಕ್ಕೆ ಸೇರಿದವರಾಗಿದ್ದರು. ಈ ಎಲ್ಲಾ ಗುಣ ಗಹನತೆಗಳಿಂದ ವೆಂಕಟಪ್ಪನವರಿಗೂ ಗಗನೇಂದ್ರರಲ್ಲಿ ಗೌರವ ಭಾವನೆ ಮೂಡಲು ಕಾರಣವಾದವು. ಇವರು ಪೂರಿ ಜಗನ್ನಾಥದಲ್ಲಿ ಮಾಡಿಕೊಂಡಿದ್ದಾಗ ಅಲ್ಲಿಗೆ ಹಲವಾರು ಕಲಾ ವಿದ್ಯಾರ್ಥಿಗಳನ್ನು ಕರೆಸಿಕೊಂಡು ಕಲಾಕೃತಿಗಳನ್ನು ಮಾಡಿಸಿಕೊಳ್ಳುತ್ತಿದ್ದರು. ಒಮ್ಮೆ ಕ್ರಿ.ಶ. ೧೯೧೪ರ ಮೇ ತಿಂಗಳಲ್ಲಿ ಗಗನೇಂದ್ರರು ತಮ್ಮ ಖರ್ಚಿನಲ್ಲಿಯೇ ವೆಂಕಟಪ್ಪನವರನ್ನು ಡಾರ್ಜಿಲಿಂಗಿಗೆ ಕರೆದುಕೊಂಡು ಚಿತ್ರ ರಚನೆಯನ್ನು ಸಹ ಮಾಡಿಸಿದ್ದರು. ವೆಂಕಟಪ್ಪನವರಿಗೆ ಹಿಮಾಲಯದ ಮೊದಲ ಅನುಭವ ಅದಾಗಿತ್ತು. ಇವರಲ್ಲಿ ಆ ಅನುಭವ ೫೦ ವರ್ಷ ವಯಸ್ಸು ಕಳೆದರೂ ಅದು ಮಾಸಲಿಲ್ಲ. ವೆಂಕಟಪ್ಪನವರಿಗೆ ಬೆಟ್ಟಗುಡ್ಡಗಳ ಮೇಲೆ ವ್ಯಾಮೋಹ ಬಂದದ್ದೇ ಇದೇ ಕಾರಣದಿಂದಿರಬಹುದು. ಇವರು ಮೈಸೂರಿನಲ್ಲಿ ಇರುವಾಗ ಆಗಾಗ ಊಟಿಗೆ ಹೋಗುತ್ತಿದ್ದು, ಇದೇ ಅನುಭವವನ್ನು ಮೆಲುಕು ಹಾಕಲು.

ಕೆ. ವೆಂಕಟಪ್ಪನವರು ಬರುಬರುತ್ತಾ ಬಹಳಷ್ಟು ಕಾರ್ಯಕ್ಷೇತ್ರಗಳಲ್ಲಿ ತೊಡಗಿಸಿಕೊಳ್ಳಲಾರಂಭಿಸಿದರು. ಕಲಾಸಾಧನೆ, ಕಲಾಕೃತಿಗಳ ರಚನೆ ಇವರ ಮುಖ್ಯ ಉದ್ದೇಶಗಳಲ್ಲಿ ಒಂದಾಗಿತ್ತು. “ಇಂಡಿಯನ್ ಸೊಸೈಟಿ ಆಫ್ ಓರಿಯಂಟಲ್ ಆರ್ಟ್” ಎಂಬ ಸಂಸ್ಥೆ ಭಾರತ, ಚೀನ, ಜಪಾನ ದೇಶಗಳ ಕಲಾಪ್ರಕಾರಗಳನ್ನು ಆಳವಾಗಿ ಅಭ್ಯಸಿಸಲು ಈ ದೇಶಗಳ ಲಲಿತಕಲೆ ಮತ್ತು ಕರಕುಶಲ ಕಲೆಗಳಲ್ಲಿ ಶಿಕ್ಷಣವನ್ನು ಒದಗಿಸಲೆಂದು ಕ್ರಿ.ಶ. ೧೯೦೭ರಲ್ಲಿ ಕೋಲ್ಕತ್ತಾದಲ್ಲಿ ಸ್ಥಾಪಿತವಾಗಿತ್ತು. ಇದರ ನೇತಾರರಾಗಿ ಗಗನೇಂದ್ರನಾಥ ಠಾಕುರ್, ಅವನೀಂದ್ರನಾಥ ಠಾಕುರ್, ಸರ್ ಜಾನ್ ವುಡ್ ರೊಫ್ ಮೊದಲಾದವರು. ಆಗಿನ ಬಂಗಾಳ ಸರಕಾರದ ಪ್ರೋತ್ಸಾಹದಿಂದ ಪ್ರಾರಂಭವಾದ ಈ ಸಂಸ್ಥೆಗೆ ಬಂಗಾಳದ ಗೌರ್ನರ್ ಲಾರ್ಡ್ ರೊನಾಲ್ಡ್ ಷೇ ಪೋಷಕರಾಗಿದ್ದು. ಈ ಸಂಸ್ಥೆ ಮೊಟ್ಟಮೊದಲ ಕಾರ್ಯದರ್ಶಿಯಾಗಿ ಅವನೀಂದ್ರನಾಥ ಠಾಕುರ್ ಮತ್ತು ನಾರ್ಮನ್ ಬ್ಲಂಟ್ ಎಂಬ ಬ್ರಿಟೀಷ್ ಅಧಿಕಾರಿ ಕಾರ್ಯ ನಿರ್ವಹಿಸಿದರು. ಮುಂದೆ ಗಗನೇಂದ್ರನಾಥರೂ ಕಾರ್ಯದರ್ಶಿಗಳಾದರು.[೨]

ಈ ಸಂಸ್ಥೆಯಿಂದ ಆಗಾಗ ಭಾರತೀಯ ಮಧ್ಯಯುಗೀನ, ಸಾಂಪ್ರದಾಯಿಕ ಕಲೆ ಹಾಗೂ ಚೀನಾ, ಜಪಾನ್ ದೇಶಗಳ ಸಾಂಪ್ರದಾಯಿಕ ಕಲೆಯೂ ಸಹ ಪ್ರದರ್ಶನವಾಗುತ್ತಿದ್ದವು. ಈ ಸಂಸ್ಥೆಯಿಂದ ಅವನೀಂದ್ರರು ಅಂದುಕೊಂಡಿದ್ದ ಕನಸುಗಳು ಜನರಿಗೆ ಮುಟ್ಟಲಾರಂಭಿಸಿದವು. ಈ ಸಂಸ್ಥೆಯಿಂದ “ರೂಪಂ” ಎಂಬ ಕಲಾಪತ್ರಿಕೆಯೂ ಸಹ ಹೊರಬರುತ್ತಿತ್ತು. ಸುಪ್ರಸಿದ್ಧ ಕಲಾ ವಿಮರ್ಶಕ ಅರ್ಧೇಂದು ಕುಮಾರ ಗಂಗೂಲಿ ಇದರ ಸಂಪಾದಕರಾಗಿದ್ದರು. ಈ ಸಂಸ್ಥೆಯೊಂದಿಗೆ ವೆಂಕಟಪ್ಪನವರು ಸಕ್ರಿಯವಾಗಿ

೦೨. ಸಾ.ಕೃ.ರಾಮಚಂದ್ರರಾವ್ : ಕಲಾತಪಸ್ವಿ ಕೆ. ವೆಂಕಟಪ್ಪ, ಪ್ರಾ.ಸಂ.ನಿ. ಹೊಸಪೇಟೆ, ೨೦೦೪. ಪುಟ – ೩೨



ಸಂಬಂಧವನ್ನು ಹೊಂದದಿದ್ದರೂ ಇಲ್ಲಿ ಕಾರ್ಯನಿರ್ವಾಹಕರಾಗಿದ್ದು ನಂದಲಾಲ ಬೋಸ್, ಅಶೀತಕುಮಾರ ಹೌಲ್‌ದಾರ್, ಅರ್ಧೇಯ ಕುಮಾರ ಗಂಗೂಲಿ ಇವರೆಲ್ಲರೂ ವೆಂಕಟಪ್ಪನವರ ಸ್ನೇಹಿತರಾದ ಕಾರಣ ಇವರ ಮುಖೇನ ಇವರೂ ಸಹ ಆಗಾಗ ಇಲ್ಲಿಗೆ ಬಂದು ಹೋಗುತ್ತಿದ್ದರು. ವೆಂಕಟಪ್ಪನವರು ಮೈಸೂರಿಗೆ ಹಿಂದಿರುಗಿದ ಮೇಲೂ ಸಹ ಇವರ ಕಲಾಕೃತಿಗಳು ಈ ಸಂಸ್ಥೆಯಿಂದ ಮಾರಾಟವಾದವು. ಜೇಮ್ಸ್ ಕಸಿನ್ಸ್, ಕಾರ್ಲ್ ಖಂಡಲವಾಲ್, ಟ್ರೆಷರಿವಾಲ್ ಮೊದಲಾದ ಕಲಾವಿದರು ವೆಂಕಟಪ್ಪನವರ ಕೃತಿ ಸಂಗ್ರಹಣೆಯಲ್ಲಿ ಮುಂದಾದರು. ಈ ಸಂಸ್ಥೆಯ ಮೂಲಕವೇ ವೆಂಕಟಪ್ಪನವರಿಗೆ ಈ ಎಲ್ಲಾ ಕಲಾ ಪ್ರೇಮಿಗಳ ಪರಿಚಯವಾದದ್ದು.


ಇಂಗ್ಲೆಂಡಿನ ದೊರೆಯಾಗಿದ್ದ ಐದನೇ ಜಾರ್ಜ್ ಕ್ರಿ.ಶ. ೧೯೧೧ ರಲ್ಲಿ ಭಾರತಕ್ಕೆ ಭೇಟಿ ನೀಡಿದ್ದರು. ಆಗ ದೇಶದ ಸಾಂಸ್ಕೃತಿಕ ರಾಜಧಾನಿಯಾಗಿದ್ದ ಕಲ್ಕತ್ತಾಕ್ಕೂ ಭೇಟಿ ನೀಡಿದ್ದರು. ಇವರ ಸ್ವಾಗತ ಸಮಾರಂಭದ ಸಾರ್ವಜನಿಕ ಮಂಟಪವನ್ನು ನಿರ್ಮಾಣ ಮಾಡುವ ಹೊಣೆಯನ್ನು ಪ್ರಾಂತ್ಯ ಸರಕಾರಿ ಕಲಾಶಾಲೆಗೆ ನೀಡಲಾಗಿತ್ತು. ಅಲ್ಲಿಯ ಅಧ್ಯಾಪಕರಾಗಿದ್ದ ಅವನೀಂದ್ರನಾಥರು ಈ ಕಾರ್ಯವನ್ನು ತಮ್ಮ ನೆಚ್ಚಿನ ಶಿಷ್ಯರಾಗಿದ್ದ ನಂದಲಾಲ ಬೋಸ್ ಹಾಗೂ ವೆಂಕಟಪ್ಪ ಇವರಿಬ್ಬರನ್ನು ತೊಡಗಿಸಿದರು. ಇವರಿಗೆ ನೆರವಾಗಲೆಂದು ಅಶೀತ ಕುಮಾರ ಹೌಲ್‌ದಾರರನ್ನು ಮತ್ತಿತರ ವಿದ್ಯಾರ್ಥಿಗಳನ್ನು ಕಳಿಸಲಾಗಿತ್ತು. ಇವರು ನಿರ್ವಹಿಸಿದ ಕೆಲಸದ ಬಗೆ, ಸೊಬಗು, ಅಚ್ಚುಕಟ್ಟು ಎಲ್ಲರಿಗೂ ಮೆಚ್ಚುಗೆಯಾದವು. ಪತ್ರಿಕೆಗಳಲ್ಲೂ ಇದರ ಪ್ರಶಂಸೆ ಪ್ರಕಟವಾಯಿತು.[೩]

ಕಲಾವಿದ್ಯಾರ್ಥಿಯ ಹಿಮಾಲಯದ ಯಾತ್ರೆ

ವೆಂಕಟಪ್ಪನವರು ಲೌಕಿಕ ಜಗತ್ತಿಗಿಂತಲೂ ಆಧ್ಯಾತ್ಮಿಕ ಜಗತ್ತನ್ನು ನಂಬಿದವರು. ಅವರ ಮುಖಭಾವದಲ್ಲಿಯೇ ದೈವತ್ವ ಗೋಚರಿಸುತ್ತಿತ್ತು. ಹೀಗಿದ್ದಾಗ ಒಮ್ಮೆ ಕೊಲ್ಕತ್ತದ ಕಲಾಶಾಲೆಯಲ್ಲಿ ಓದುವಾಗ ಏಪ್ರಿಲ್ ತಿಂಗಳ ಬೇಸಿಗೆ ರಜೆ ಬಂದಿತು. ಈ ಸಂದರ್ಭದಲ್ಲಿ ಅಲ್ಲಿಯ ಸುತ್ತಮುತ್ತಲಿನ ಊರಿನ ವಿದ್ಯಾರ್ಥಿಗಳು ಅವರವರ ಊರುಗಳಿಗೆಂದು ಹೋದರು. ಆ ಸಂದರ್ಭದಲ್ಲಿ ವೆಂಕಟಪ್ಪನವರು ಹಿಮಾಲಯಕ್ಕೆ ತೆರಳುವ ಮನಸ್ಸು ಮಾಡಿದರು. ಕಲಾವಿದರುಗಳಿಗೆ ಹಿಮಾಲಯವು ಸ್ಫೂರ್ತಿ ಕೊಡುವ ತಾಣವಾದ್ದರಿಂದ ಹಾಗೂ ಹಿಂದೂಗಳ ಧಾರ್ಮಿಕ ಪವಿತ್ರ ತಾಣವಾದ್ದರಿಂದ ಇವರು ಹಿಮಾಲಯಕ್ಕೆ ಹೋಗುವ ಮನಸ್ಸು ಮಾಡಿದರು.

ಹಿಮಾಲಯಕ್ಕೆ ಹೊರಡುವ ಮುನ್ನ ಗುರುಗಳಾದ ಅವನೀಂದ್ರರ ಮನೆಗೆ ತೆರಳಿದರು. ಅವನೀಂದ್ರರು

೦೩. ಸಾ.ಕೃ.ರಾಮಚಂದ್ರರಾವ್ : ಕಲಾತಪಸ್ವಿ ಕೆ. ವೆಂಕಟಪ್ಪ, ಪ್ರಾ.ಸಂ.ನಿ. ಹೊಸಪೇಟೆ, ೨೦೦೪. ಪುಟ – ೩೩




ಕಲಾ ವಿದ್ಯಾರ್ಥಿಗಳಿಂದ ಅವರ ಅಧ್ಯಯನಕ್ಕೆಂದು ರಾಮಾಯಣ ಕಲಾಕೃತಿಗಳನ್ನು ಮಾಡಿಸುತ್ತಿದ್ದರು. ವೆಂಕಟಪ್ಪನವರು ಕಡೆಯ ಮೂರು ಕಲಾಕೃತಿಗಳನ್ನು ಅವನೀಂದ್ರನಾಥರಿಗೆ ನೀಡಬೇಕಿತ್ತು. ಆದ ಕಾರಣ ಇಲ್ಲಿ ಬಂದಿದ್ದರು. ಆ ಚಿತ್ರಗಳಲ್ಲಿ ನಂದಲಾಲರು ಹಾಗೂ ವೆಂಕಟಪ್ಪನವರು ರಚಿಸುತ್ತಿದ್ದ ಚಿತ್ರಗಳೆಂದರೆ ಅವನೀಂದ್ರರಿಗೆ ಬಹು ಪ್ರೀತಿ. ಇವರ ಕಲಾಕೃತಿಗಳಲ್ಲಿಯ ವರ್ಣಗಾರಿಕೆ, ರೇಖಾ ವಿನ್ಯಾಸ, ಸಂಯೋಜನೆ, ಸೃಜನಶೀಲತೆ ಇವೆಲ್ಲವುಗಳು ಅವನೀಂದ್ರರ ಮನಸೆಳೆಯುತ್ತಿದ್ದವು.

ಕ್ರಿ.ಶ. ೧೯೧೩ ಏಪ್ರಿಲ್ ಹನ್ನೆರಡರಂದು ಹಿಮಾಲಯ ಯಾತ್ರೆಗೆ ಸಿದ್ಧರಾಗಿ ಕಲ್ಕತ್ತೆಯಿಂದ ವಾರಣಾಸಿಗೆ ಹೊರಟರು. ವಾರಾಣಾಸಿಗೆ ಬಂದಿಳಿದರು. ಬಹುಶಃ ಇಲ್ಲಿಂದ ಇವರ ದಿನಚರಿಯನ್ನು ಬರೆಯುವ ಅಭ್ಯಾಸ ಸಂಪೂರ್ಣವಾಗಿ ಪ್ರಾರಂಭವಾಯಿತು. ಹಿಂದೆಯೂ ನಾವು ಕಾಣಬಹುದು. ಆದರೆ ಅವು ಬರಿಯ ಲೆಕ್ಕಚಾರಕ್ಕೆ ಹಣಕಾಸಿನ ವ್ಯವಹಾರವನ್ನು ಕಾಣಬಹುದು. ಎರಡು ದಿನಗಳ ಕಾಲ ಅಯೋಧ್ಯೆಗೆ ಹೋಗಿ ರಾಮನ ಜನ್ಮಸ್ಥಳವನ್ನು ಸಂದರ್ಶಿಸಿ ವಾರಣಾಸಿಗೆ ಮರಳಿದರು. ಅಲ್ಲಿಂದ ಹರಿದ್ವಾರಕ್ಕೆ ಹೊರಟು, ಅದೇ ತಿಂಗಳು ೨೨ನೇ ತಾರೀಖು ರೈಲಿನಲ್ಲಿ ಡೆಹರಾಡೂನ್ ನಗರವನ್ನು ಮುಟ್ಟಿದರು. ಅಲ್ಲಿಂದ ಮುಂದೆ ರಾಜಪುರಕ್ಕೆ ಆರು ಮೈಲಿಗಳ ದೂರ ನಡೆದು ಹೋದರು. ಮುಂದೆ ಬಂದೌರ್, ಉತ್ತರಕಾಶಿ, ಮಾನೇರಿ ಬೆಟ್ಟಗಳನ್ನು ಹಾದು ಮೇ ತಿಂಗಳ ಮೊದಲ ದಿನಗಳಲ್ಲಿ ಗಂಗೋತ್ರಿಗೆ ಬಂದಿಳಿದರು.

ಡೆಹ್ರಾಡೂನಿನಿಂದ ಒಟ್ಟು ನೂರು ಮೈಲಿಗಳನ್ನು ಕಾಲ್ನಡಿಗೆಯಲ್ಲಿಯೇ ಕ್ರಮಿಸಿದರು. ಈ ದಾರಿಯಲ್ಲಿ ಅವರ ಆಹಾರ ತೀರ ಅಲ್ಪ. ಬಹುಮಟ್ಟಿಗೆ ಬ್ರೆಡ್ ಹಾಗೂ ಹಾಲು, ರಾತ್ರಿಯ ವೇಳೆ ಉಪವಾಸವೇ ಗತಿಯಾಗಿತ್ತು. ಸಾಗುತ್ತ ಸಾಗುತ್ತಾ ಗಂಗೋತ್ರಿಯನ್ನು ತಲುಪಿದರು. ಆ ಕ್ಷಣ ಭಾವಪರವಶರಾದ ವೆಂಕಟಪ್ಪನವರು "ಜಯ್ ಗಂಗಾ ಮಾ ಕೀ ಜಯ್ ಜಯ್ ಭಗೀರಥ್ ಕೀ ಜಯ್" ಎಂದು ತಮ್ಮ ದಿನಚರಿಯಲ್ಲಿ ಚೆಂದದಿಂದ, ಧ್ಯಾನದಿಂದ ಬರೆದಿದ್ದಾರೆ. ಈ ಸಾಲನ್ನು ಅಲ್ಲಿಯ ಯಾತ್ರಿಕರು ಗಂಗೋತ್ರಿಯನ್ನು ಕಂಡ ಕೂಡಲೇ ಉದ್ಗರಿಸುವ ಧ್ವನಿಯಾಗಿತ್ತು. ಇಲ್ಲಿ ಎರಡು ದಿನಗಳ ಕಾಲ ಕಳೆದು ಆನಂತರ ತ್ರಿಜಗೀ ನಾರಾಯಣ ಮತ್ತು ಹರಿಶಿಲಾ ಮಾರ್ಗವಾಗಿ ಕೇದಾರನಾಥದ ಕಡೆ ಹೊರಟರು. ಈ ಪಯಣದಿಂದ ಅವರ ಮನಸ್ಸಿನ ಮೇಲೆ ಆಧ್ಯಾತ್ಮಿಕ ಪರಿಣಾಮದ ಕುರುಹುಗಳು ಕಾಣ ಸಿಗುತ್ತವೆ. ಇದೇ ಮೇ ತಿಂಗಳ ಆರನೆ ತಾರೀಖಿನಂದು "ಸ್ವ ಸಹಾಯವೇ ಅತ್ಯುತ್ತಮ ಸಹಾಯ" ಎಂಬ ಇಂಗ್ಲೀಷ್ ಸುಭಾಷಿತವೊಂದನ್ನು ಎದ್ದು ಕಾಣುವಂತೆ ಬರೆದಿರುವುದು ಇದಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ.[೪]

---

೦೪. ಸಾ.ಕೃ.ರಾಮಚಂದ್ರರಾವ್ : ಕಲಾತಪಸ್ವಿ ಕೆ. ವೆಂಕಟಪ್ಪ, ಪ್ರಾ.ಸಂ.ನಿ. ಹೊಸಪೇಟೆ. ೨೦೦೪. ಪುಟ – ೩೪




ಈ ಕಾರಣದಿಂದಲೇ ಅವರು ಕಲ್ಕತ್ತೆಗೆ ಬಂದಾಗಿನಿಂದಲೂ ತಮ್ಮ ಆಹಾರವನ್ನು ತಾವೇ ತಯಾರಿಸಿಕೊಳ್ಳುವುದು, ತಮ್ಮ ಬಟ್ಟೆಯನ್ನು ತಾವೇ ಶುಭ್ರಗೊಳಿಸಿಕೊಳ್ಳುವುದು, ತಮ್ಮ ಆರ್ಥಿಕ ಪರಿಸ್ಥಿತಿಯನ್ನು ತಾವೇ ಸರಿದೂಗಿಸಿಕೊಳ್ಳುವುದು. ಆದ ಕಾರಣ ಬೇರೊಬ್ಬರ ಸಹಾಯನ್ನು ಪಡೆಯಲು ಅವರು ಅಂದಿನಿಂದಲೇ ಒಪ್ಪುತ್ತಿರಲಿಲ್ಲ. ತಮ್ಮ ಕಾಲ ಮೇಲೆ ತಾವು ನಿಲ್ಲದೆ ಬೇರೆಯವರ ಸಹಾಯ ಅವಲಂಬಿಸುವುದು ನಾಚಿಕೆಯ ಸಂಗತಿ ಎಂದು ತೀರ್ಮಾನಿಸಿದ್ದು. ಗಂಗೋತ್ರಿಯಿಂದ ಕೇದಾರನಾಥಕ್ಕೆ ಹೋಗುವ ದಾರಿಯಲ್ಲಿ ಸಾಗುವ ಯಾತ್ರಿಕರು ಅಲ್ಲಿಯ ತೀರ್ಥೆಯಲ್ಲಿ ಮಿಂದು ಪ್ರಿಯವೆನಿಸುವ ಯಾವುದಾದರೊಂದು ವಸ್ತುವನ್ನು ಅಥವಾ ಯಾವುದಾದರೊಂದು ಅಭ್ಯಾಸವನ್ನು ಕೈಬಿಡಬೇಕೆಂಬ ವಾಡಿಕ ಪುರಾಣದಿಂದಲೂ ಇದೆ. ಈ ಕಾರಣದಿಂದಾಗಿ ಬೇರೆಯವರಿಂದ ಯಾವ ವಸ್ತುವನ್ನಾಗಲಿ, ಸೇವೆಯನ್ನಾಗಲಿ ಉಚಿತವಾಗಿ ಸ್ವೀಕರಿಸುವುದಿಲ್ಲವೆಂದು ವ್ರತವನ್ನು ಕೈಗೊಂಡರು. ಈ ಸಂಗತಿಯು ಬೇರೆಯವರಿಗೆ ಅನ್ವಯ ರೂಪವಾಗಿದೆ. ಇದು ಯೋಗಸಾಧಕರ ನಡುವೆ ಅರಿಗ್ರಹವ್ರತವೆನಿಸಿಕೊಳ್ಳುತ್ತದೆ. ಬೇರೊಬ್ಬರ ನೆರವನ್ನು ಅವಲಂಬಿಸದೆ ಬದುಕುವುದು ತೀರಾ ಕಷ್ಟ. ವೆಂಕಟಪ್ಪನವರು ಕೈಗೊಂಡಿದ್ದು ಇದೇ ಕಠೋರವಾದ ವ್ರತವನ್ನೇ ಬದುಕಿನುದ್ದಕ್ಕೂ ಅಳವಡಿಸಕೊಂಡು ಬಂದರು.

ವೀಣೆಯ ಗೆಳೆತನ

ವೆಂಕಟಪ್ಪನವರಿಗೆ ವೀಣೆಯನ್ನು ಕಲಿಯುವ ಹುಚ್ಚು, ಪ್ರೇಮ ಎರಡೂ ಇರಲಿಲ್ಲ. ಇದು ಅವರ ಬಾಳಿನ ಆಕಸ್ಮಿಕ, ಅನಿರೀಕ್ಷಿತ ಸಂದರ್ಭ. ಹಿಮಾಲಯ ಯಾತ್ರೆಯನ್ನು ಮುಗಿಸಿ ಕಲ್ಕತ್ತಾಗೆ ಹಿಂದಿರುಗಿದ ಎರಡು ತಿಂಗಳಲ್ಲಿ ಈ ಅವಕಾಶ ಹುಡುಕಿಕೊಂಡು ತಮಿಳುನಾಡಿನಿಂದ ಕಲ್ಕತ್ತೆಯ ವೆಂಕಟಪ್ಪನವರ ಮನೆಯ ಬಾಗಿಲ ತನಕ ಒದಗಿ ಬಂದಿತು. ಅಂದು ಕ್ರಿ.ಶ. ೧೯೧೩ ಆಗಸ್ಟ್ ಏಳನೇ ತಾರೀಖು ತಮಿಳುನಾಡಿನ ಶ್ರೀರಂಗಂನ ರಾಮಸ್ವಾಮಿ ಅಯ್ಯಂಗಾರರೆಂಬ ಸಂಗೀತ ವಿದ್ವಾಂಸರು ಕಲ್ಕತ್ತೆಗೆ ಬಂದರು. ಅವರು ವೀಣೆಯನ್ನು ನುಡಿಸುವ ವೈಣಿಕರು. ಮೈಸೂರು ವೀಣೆ ಶೇಷಣ್ಣನವರ ಶಿಷ್ಯರು. ಕಲ್ಕತ್ತೆಯಲ್ಲಿ ದಕ್ಷಿಣ ಭಾರತದಿಂದ ಹಲವು ಮಂದಿ ಹೋಗಿ ಅಲ್ಲಿಯೇ ನೆಲೆಸಿದ್ದರು.

ಇಲ್ಲಿಯ ದಕ್ಷಿಣ ಭಾರತದ ಮಕ್ಕಳಿಗೆ ವೀಣಾಭ್ಯಾಸದ ಅಗತ್ಯವಾಗಿ ಉಪನ್ಯಾಸಕರು ಬೇಕಿರುವರೆಂಬ ವಿಷಯವನ್ನು ತಿಳಿದು ಈ ವೃತ್ತಿಯಿಂದ ತಮ್ಮ ಜೀವನೋಪಾಯಕ್ಕೆ ಅನುಕೂಲದ ದೃಷ್ಟಿಯಿಂದ ರಾಮಸ್ವಾಮಿಯವರು ಶ್ರೀರಂಗಂನಿಂದ ಕಲ್ಕತ್ತಾಗೆ ಬಂದರು. ಇಲ್ಲಿ ವೆಂಕಟಪ್ಪನವರು ಮೈಸೂರಿನವರೆಂದು ತಿಳಿದು ಇವರ ಮನೆಗೆ ಬಂದರು. ವೆಂಕಟಪ್ಪನವರ ಮನೆಯಲ್ಲಿ ವೀಣೆಯನ್ನು ಕಂಡರು. ಅಲ್ಲಿ ವೆಂಕಟಪ್ಪನವರಿಗೆ "ವೀಣೆಯ ಅಭ್ಯಾಸವಿದೆಯೇ?" ಎಂದು ಕೇಳಿದಾಗ, "ಇಲ್ಲ ಅದನ್ನು ನಮ್ಮ




ಗುರುಗಳಾದ ಅವನೀಂದ್ರರು ಬ್ರಿಟೀಷ್ ಅಧಿಕಾರಿಯೊಬ್ಬರಿಗೆ ದಕ್ಷಿಣ ಭಾರತದ ವೀಣೆ ಬೇಕೆಂದು ಕೇಳಿದಾಗ ಅವನೀಂದ್ರರು ನನ್ನ ಮೂಲಕ ಮೈಸೂರಿಗೆ ತರಿಸಿದರು. ಆದರೆ ನಾನು ತರುವ ಹೊತ್ತಿಗೆ ಬ್ರಿಟೀಷ್ ಅಧಿಕಾರಿ ಸ್ವದೇಶಕ್ಕೆ ಮರಳಿದರು. ಆದ ಕಾರಣ ನನ್ನ ಮನೆಯಲ್ಲಿದೆ" ಎಂದರು. ಆಗ ವೆಂಕಟಪ್ಪನವರಿಗೆ ವೀಣೆಯ ವ್ಯಾಮೋಹವಿರಲಿಲ್ಲ. ಆ ಕಾಲಕ್ಕೆ ಕಲ್ಕತ್ತೆ ಮಹಾದೊಡ್ಡ ನಗರವಾಗಿತ್ತು. ಅಲ್ಲಿ ಸಂಗೀತ ವಿದ್ಯೆಯನ್ನು ಹೇಳಿಕೊಟ್ಟರೆ ತನ್ನ ಜೀವನಕ್ಕೆ ಒಂದಿಷ್ಟು ಹಣ ಸಂಪಾದಿಸಬಹುದೆಂದರು ಬಂದವರು. ವೆಂಕಟಪ್ಪನವರ ಮನೆ ಇದ್ದದ್ದು ಕಲ್ಕತ್ತೆಯ ಬೋಬಜಾರಿನ ಶೋಭಾರಾಮ ಬಸಕ ರಸ್ತೆಯಲ್ಲಿ, ಹದಿನೇಳನೇ ನಂಬರ್‌ನ ಮನೆಯಲ್ಲಿ. ವೆಂಕಟಪ್ಪನವರು ಕಲಾವಿದರಾದ ಕಾರಣ ರಾಮಸ್ವಾಮಿಯವರು ವೆಂಕಟಪ್ಪನವರಿಗೆ ನೀವು ಬಯಸಿದರೆ ವೀಣಾಭ್ಯಾಸ ಮಾಡಿಸುವುದಾಗಿ ಹೇಳಿದರು. ಅದಕ್ಕೆ ಪ್ರತಿಮಾತಿಲ್ಲದೆ ವೆಂಕಟಪ್ಪನವರು ಒಪ್ಪಿದರು. ಇದಾದ ಮತ್ತೊಂದು ದಿನ ಶುಭ ಘಳಿಗೆಯನ್ನು ನೋಡಿ ಅಭ್ಯಾಸ ಪ್ರಾರಂಭಿಸಿದರು.

ದಿನಗಳು ಕಳೆದಂತೆ ವೆಂಕಟಪ್ಪನವರ ಸಂಗೀತದಲ್ಲಿ ಅವರ ಆಸಕ್ತಿ ಹೆಚ್ಚತೊಡಗಿತ್ತು. ಇದನ್ನು ಕಂಡ ರಾಮಸ್ವಾಮಿ ಅಯ್ಯಂಗಾರ್‌ರು ಸಹ ಅದಕ್ಕೆ ಸ್ಪಂದಿಸುತ್ತ ಪ್ರಾರಂಭಿಕ ಎಲ್ಲಾ ವಿದ್ಯೆಗಳನ್ನು ಹೇಳಿಕೊಡಲಾರಂಭಿಸಿದರು. ಹೀಗೆ ಎರಡು-ಮೂರು ತಿಂಗಳುಗಳು ಕಳೆದರು ವೆಂಕಟಪ್ಪನವರನ್ನು ಬಿಟ್ಟರೆ ಬೇರೆ ಯಾವ ವಿದ್ಯಾರ್ಥಿಯು ಅವರ ಸುತ್ತಮುತ್ತ ಸುಳಿಯಲಿಲ್ಲ. ಇದರಿಂದ ನಿರಾಶೆ ಹೊಂದಿದ ರಾಮಸ್ವಾಮಿ ಯವರು ಹೀಗೆ ಆದರೆ ಇಲ್ಲಿ ಜೀವನದ ಅಗತ್ಯ ಪೂರೈಕೆಗಳಿಗೆ ಕಷ್ಟವಾಗುವುದೆಂದು ಗ್ರಹಿಸಿ ತಾವು ಮರಳುವ ಇಂಗಿತವನ್ನು ವೆಂಕಟಪ್ಪನವರಲ್ಲಿಟ್ಟರು. ಆಗ ಅವರ ಮನವಿಯನ್ನು ಒಪ್ಪಿ ನವೆಂಬರ್ ತಿಂಗಳಲ್ಲಿ ರಾಮಸ್ವಾಮಿ ಅಯ್ಯಂಗಾರ್‌ರನ್ನು ಬೀಳ್ಕೊಟ್ಟರು. ಆ ಸಮಯದಲ್ಲಿ ಅವರ ಮಾತೃಭಾಷೆಯಲ್ಲಿ "ನಾ ಇಂಗೆ ವಂದತ್ತಿಲೆ ಉಂಗಳಕ್ಕು ಮಾತ್ರಂ ಅನಕೂಲಮಾಚ್" ಎಂದು ಹೇಳಿದರು. ಇದರ ಅರ್ಥ "ನಾ ಇಲ್ಲಿಗೆ ಬಂದದ್ದು ತಮಗೆ ಮಾತ್ರ ಅನುಕೂಲವಾಯಿತು" ಎಂದು ಈ ಮಾತಿನೊಂದಿಗೆ ನವೆಂಬರ್ ಐದರಂದು ಕಲ್ಕತ್ತೆಯಿಂದ ತಮಿಳುನಾಡಿನ ಶ್ರೀರಂಗಂಗೆ ತೆರಳಿದರು.[೧೫]

ರಾಮಸ್ವಾಮಿ ಅಯ್ಯಂಗಾರ್‌ರವರು ನಿರಾಶಾಭಾವದಿಂದ ಕಲ್ಕತ್ತಾದಿಂದ ತೆರಳಿದ ಮೇಲೆ ತಮ್ಮ ವೀಣಾಭ್ಯಾಸವನ್ನು ಮೊಟುಕುಗೊಳಿಸದೆ ಶ್ರದ್ಧೆಯಿಂದ ಅಭ್ಯಾಸಿಸಲಾರಂಭಿಸಿದರು. ತಾವು ಕಲಿತಿದ್ದ ಮೂರು ತಿಂಗಳ ಅಭ್ಯಾಸವನ್ನು ಮನನ ಮಾಡಿಕೊಂಡು ಹಲವು ಸಂಗೀತ ಶಾಸ್ತ್ರದ ಗ್ರಂಥಗಳನ್ನು ಅಭ್ಯಾಸಿಸಿ ಅವುಗಳ ಆಧಾರದ ಮೇಲೆ ಪ್ರಯೋಗ ನಡೆಸಲಾರಂಭಿಸಿದರು. ಇದು ಅವರ ಸಂಶೋಧನಾ


೧೫. ಸಾ.ಕೃ.ರಾಮಚಂದ್ರರಾವ್ : ಕಲಾತಪಸ್ವಿ ಕೆ. ವೆಂಕಟಪ್ಪ, ಪ್ರಾ.ಸಂ.ನಿ. ಹೊಸಪೇಟೆ, ೨೦೦೪. ಪುಟ - ೩೮



ಪ್ರವೃತ್ತಿಯನ್ನು ತೋರಿಸುತ್ತದೆ. ಇದಾದ ಒಂದೇ ವರ್ಷದಲ್ಲಿ "ಶೃತಿ ವೀಣೆ" ಯೊಂದನ್ನು ಸಿದ್ಧಪಡಿಸಿದರು. ಭಾರತೀಯ ಸಂಗೀತದಲ್ಲಿ ಶೃತಿ ತುಂಬ ಪ್ರಮುಖವಾದ ಅಂಶವೆಂದು ವಿವರಣೆ ಇದೆ. ಆದರೆ ಶಾಸ್ತ್ರೀಯ ಗ್ರಂಥಗಳಲ್ಲಿ ಹೇಳಿರುವ ಇಪ್ಪತ್ತೆರಡು ಶೃತಿಗಳ ಔಚಿತ್ಯ, ಅವುಗಳ ಅಗತ್ಯ, ಪ್ರಯೋಜನಗಳನ್ನು ತಿಳಿಯಪಡಿಸಲೆಂದು ಅವರು ಈ ವಾದ್ಯವನ್ನು ತುಂಬಾ ಶ್ರಮವಹಿಸಿ ತಯಾರಿಸಿದರು. ಕ್ರಿ.ಶ. ೧೯೧೪ರ ಜನವರಿ ತಿಂಗಳಲ್ಲಿ ಪೂರ್ಣಗೊಳಿಸಿ ಈ ವಾದ್ಯವನ್ನು ಅವರು ಮೈಸೂರಿನ ಸಂಗೀತ ವಿದ್ವಾಂಸರೂ, ಶಾಸ್ತ್ರಜ್ಞರೂ, ಸಂಗೀತದಲ್ಲಿ ಮನಃಶಾಸ್ತ್ರ ಎಂಬ ಮಹಾ ಪುಸ್ತಕವನ್ನು ಬರೆದವರಾಗಿದ್ದ ಶ್ರೀ. ಹೆಚ್. ಪಿ. ಕೃಷ್ಣರಾಯರಿಗೆ ಕಳುಹಿಸಿಕೊಟ್ಟರು.

ಅದೇ ಸಂದರ್ಭದಲ್ಲಿ ಪ್ರಾಚೀನ ಶೃತಿಗಳ ವಿಚಾರವಾಗಿ ವಿಫುಲವಾದ ಸಂಶೋಧನೆ ನಡೆಸಿದ್ದ ಕೃಷ್ಣರಾಯರಿಗೆ ವೆಂಕಟಪ್ಪನವರು ಸಿದ್ಧಪಡಿಸಿದ್ದ ಶೃತಿ ವೀಣೆಯನ್ನು ಮೆಚ್ಚಿಕೊಂಡರು. ಇದಾದ ನಂತರ ಬಹುದಿನಗಳ ಕಾಲ ಇವರಿಬ್ಬರ ನಡುವೆ ಪತ್ರವ್ಯವಹಾರ ನಡೆದಿದ್ದಕ್ಕೆ ಉದಾಹರಣೆ ಇವೆ. ಈ ಸಂಗತಿಯಿಂದ ವೆಂಕಟಪ್ಪನವರು ತುಂಬಾ ಸಂತೋಷಗೊಂಡರು. ಇದು ಅವರ ಬದುಕಿನ ಶ್ರೇಷ್ಠ ಸಾಧನೆಯಲ್ಲೊಂದು ಎಂಬುದು ಅಚಲ ನಂಬಿಕೆಯಾಗಿತ್ತು. ಆನಂತರ ವೆಂಕಟಪ್ಪನವರು ಮೈಸೂರಿಗೆ ಬಂದ ನಂತರವೂ ಈ ವೀಣೆಯನ್ನು ಹಲವಾರು ಹಿರಿಯ ವೀಣಾ ವಿದ್ವಾಂಸರ ಬಳಿ ಪಾರಮರ್ಶಿಸಿದರು. ಅವರುಗಳೆಂದರೆ, ಟೈಗರ್ ವರದಾಚಾರ್ಯ, ಬಿಡಾರಾಂ ಕೃಷ್ಣಪ್ಪನವರು, ವೀಣೆ ವೆಂಕಟಗಿರಿಯಪ್ಪನವರು, ರಾಳ್ಳಪಲ್ಲಿಯ ಅನಂತಕೃಷ್ಣಶರ್ಮ, ಶ್ರೀರಂಗಂನ ರಾಮಸ್ವಾಮಿ ಅಯ್ಯಂಗಾರ್, ಕೆ. ವಾಸುದೇವಾಚಾರ್ಯ, ಟಿ. ಚೌಡಯ್ಯ, ಮುತ್ತಯ್ಯ ಭಾಗವತರು, ಅರಿಯಕುಡಿ ರಾಮಾನುಜ ಅಯ್ಯಂಗಾರರು ಮೊದಲಾದವರೆಲ್ಲ ಈ ಶೃತಿ ವೀಣೆಯನ್ನು ನೋಡಿ, ಅದರ ಸಾಧಕ ಬಾಧಕಗಳ ಪೂರ್ವಾಪರಗಳನ್ನು ವೆಂಕಟಪ್ಪನವರಿಗೆ ಅರಿವು ಮೂಡಿಸಿದರು.


ಕ್ರಿ.ಶ. ೧೯೧೬ರಲ್ಲಿ ಮೈಸೂರಿನಲ್ಲಿ ಜರುಗಿದ ವಸ್ತು ಪ್ರದರ್ಶನದಲ್ಲಿ ಈ ವೀಣೆ ಪ್ರದರ್ಶನಗೊಂಡಿತು. ಇದಾದನಂತರ ಅಂದಿನ ಅರಸರಾಗಿದ್ದ ನಾಲ್ವಡಿ ಕೃಷ್ಣರಾಜರಿಗೂ ಈ ವೀಣೆಯನ್ನು ತೋರಿಸಿದರು. ಆದರೂ ಇವರ ಶ್ರಮಕ್ಕೆ ತಕ್ಕ ಮನ್ನಣೆ ದೊರಕಲಿಲ್ಲ. ಇದು ಅವರ ವೀಣಾಭ್ಯಾಸದ ಇನ್ನೂ ಹೆಚ್ಚಿನ ಸಾಧನೆಗೆ ಕೊಡಲು ಪೆಟ್ಟು ಬಿದ್ದಂತಾಯಿತು. ಮುಂದೆ ಕಲ್ಕತ್ತೆಯನ್ನು ಬಿಡುವ ಸಂದರ್ಭ ಬಂದಿತು. ಇದಾದ ಒಂದು ವರ್ಷದ ಹಿಂದೆ ಅಂದರೆ ಕ್ರಿ.ಶ. ೧೯೧೪ ರ ಮೇ ತಿಂಗಳಿನಲ್ಲಿ ಗಗನೇಂದ್ರನಾಥರ ಸಂಗಡ ವೆಂಕಟಪ್ಪನವರನ್ನು ಚಿತ್ರ ರಚಿಸಲೆಂದು ಡಾರ್ಜಿಲಿಂಗಿಗೆ ಕರೆದೊಯ್ದರು. ಈ ಸಂದರ್ಭದಲ್ಲಿ ಅಲ್ಲಿ ಸುಂದರಮಯ, ರಮ್ಯ ತಾಣಗಳನ್ನು ಚಿತ್ರಿಸತೊಡಗಿದರು. ಹಲವಾರು ಗುಡ್ಡಬೆಟ್ಟಗಳ ನಿಸರ್ಗ



ಚಿತ್ರಗಳನ್ನು ರಚಿಸುತ್ತಿರುವಾಗ ಮೇ ಇಪ್ಪತ್ತರಂದು ವೆಂಕಟಪ್ಪನವರಿಗೆ ತುರ್ತು ಸಂದೇಶವೊಂದನ್ನು ಕಳುಹಿಸಿ, ಮರುದಿನ ತನ್ನನ್ನು ಡಾರ್ಜಿಲಿಂಗ್ ಮತ್ತು ಘೂಂಗಳ ನಡುವೆ ಇರುವ "ರಿಬ್ರೇಟ್" ಎಂಬಲ್ಲಿ ಕಾಣಬೇಕೆಂದು ಆ ಸಂದರ್ಶನದಲ್ಲಿತ್ತು. ಅದರ ಪ್ರಕಾರವಾಗಿ ಮರುದಿನ ವೆಂಕಟಪ್ಪನವರು "ರಿಬ್ರೇಟ್' ಗೆ ಹೋಗಿ ಕಲ್ಕತ್ತಾ ಶಾಲೆಯ ಮುಖ್ಯಸ್ಥರಾಗಿದ್ದ ಪರ್ಸಿ ಬ್ರೌನ್‌ರವನ್ನು ಕಂಡರು. ಅವರು ವೆಂಕಟಪ್ಪನವರನ್ನು ಕಂಡು ಸಂತೋಷಗೊಂಡು "ರಾಜ್ಯ ಸರಕಾರದಲ್ಲಿ ಕಲಾ ಸಲಹೆಗಾರನ ಕೆಲಸ ಒಂದನ್ನು ಸೃಷ್ಠಿಸಲಾಗಿದೆ. ಇದಕ್ಕೆ ತಕ್ಕ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಜವಾಬ್ದಾರಿ ನನ್ನ ಮೇಲಿದೆ, ಆದ ಕಾರಣ ಆ ವೃತ್ತಿಗೆ ಸರಿಯಾದ ಯೋಗ್ಯ ಕಲಾವಿದನೆಂದರೆ ನೀನೇ. ಅದಕ್ಕೆ ನಿನ್ನನ್ನು ಸೂಚಿಸಬೇಕೆಂದಿದ್ದೇನೆ, ಅದಕ್ಕಾಗಿ ನಿನ್ನ ಅಭಿಪ್ರಾಯವನ್ನು ಒಮ್ಮೆ ಕೇಳೋಣ ಎಂದು ಕರೆಸಿದೆ" ಎಂದು ವೆಂಕಟಪ್ಪನವರಿಗೆ ಹೇಳಿದರು. ಇದಕ್ಕೆ ಉತ್ತರವಾಗಿ ವೆಂಕಟಪ್ಪನವರು ನನ್ನನ್ನು ಕಲಾಶಿಕ್ಷಣಕ್ಕೆಂದು ವಿದ್ಯಾರ್ಥಿ ವೇತನವನ್ನು ನೀಡಿ ಕಲ್ಕತ್ತೆಗೆ ಕಳುಹಿಸಿದ್ದು ಮೈಸೂರು ಮಹಾರಾಜರ ಸರಕಾರ. ಆದುದರಿಂದ ನನ್ನ ಮೊದಲ ಸೇವೆ ಅಲ್ಲಿಯೇ ಸಲ್ಲಬೇಕಾದುದು ಧರ್ಮ. ಮೈಸೂರಿನಲ್ಲಲ್ಲದೆ ಬೇರೆಲ್ಲಿಯೂ ನಾನು ಉದ್ಯೋಗವನ್ನು ಕೈಗೊಳ್ಳುವುದಿಲ್ಲವೆಂದು ತಮ್ಮ ನಿರ್ಧಾರವನ್ನು ಬ್ರೌನರಿಗೆ ತಿಳಿಸಿದರು. ಈ ವಿಷಯವನ್ನು ಕೇಳಿದ ಬ್ರೌನರಿಗೆ ಆ ಸಮಯಕ್ಕೆ ನಿರಾಶೆಯಾಯಿತು. ಆದರೆ ಅವರ ನೇರ ನುಡಿ, ಸ್ವಾಭಿಮಾನ, ಕರ್ತವ್ಯ ನಿಷ್ಠೆಯ ಆಶಯವನ್ನು ಮೆಚ್ಚಿದರು.

ಇದಾದ ಒಂದು ವರ್ಷದಲ್ಲಿಯೇ ವೆಂಕಟಪ್ಪನವರ ಅಧ್ಯಯನ ಪೂರ್ಣವಾಯಿತು. ಕ್ರಿ.ಶ. ೧೯೧೫ ರ ಏಪ್ರಿಲ್ ತಿಂಗಳಲ್ಲಿ ಕಲಾಶಾಲೆಗೆ ಬೇಸಿಗೆ ರಜೆಯೂ ದೊರೆಯಿತು. ಆಗ ವೆಂಕಟಪ್ಪನವರು ದಕ್ಷಿಣದ ಕಡೆ ಸಂಚಾರಕ್ಕೆ ಹೊರಟು ಬರುವ ಮಾರ್ಗದಲ್ಲಿ ತಮಿಳುನಾಡಿನ ತಿರುಚ್ಚಿರಪಳ್ಳಿಯ ಬಳಿಯಲ್ಲಿರುವ ಶ್ರೀರಂಗಂಗೆ ಬಂದರು. ಇಲ್ಲಿ ಅವರ ವೀಣಾ ಗುರುಗಳಾದ ರಾಮಸ್ವಾಮಿ ಅಯ್ಯಂಗಾರರನ್ನು ಕಂಡು ಅವರಿಗೆ ತಾನು ಮಾಡಿರುವ ಶೃತಿ ವೀಣೆಯನ್ನು ತೋರಿಸಿ ಅಲ್ಲಿಯೇ ಕೆಲವು ಕಾಲ ತಂಗಿದ್ದರು. ಅಲ್ಲಿ ಹಲವಾರು ವೀಣಾ ವಿದ್ವಾಂಸರ ಪರಿಚಯವೂ ಆಯಿತು.

ಕರ್ನಾಟಕ ಶಾಸ್ತ್ರೀಯ ಸಂಗೀತಾಭ್ಯಾಸವನ್ನು ಪಡೆದರು ಹಾಗೂ ಇಲ್ಲಿಯವರೇ ಆದ ಸುಪ್ರಸಿದ್ಧ ವಯಲಿನ್ ವಿದ್ವಾಂಸರಾಗಿದ್ದ ಮಾರುಂಗಪುರಿ ಗೋಪಾಲಕೃಷ್ಣ ಅಯ್ಯರ್‌ರವರ ಪರಿಚಯವೂ ಆಯಿತು. ಇವರ ಅಪ್ರತಿಮ ವಯಲಿನ್ ವಾದನವನ್ನು ಕಂಡು ಬೆರಗಾದರು. ಈ ಎಲ್ಲಾ ಪ್ರಕಾರಗಳು ವೆಂಕಟಪ್ಪನವರ ಸಂಗೀತದ ಅರಿವನ್ನು ಹೆಚ್ಚಿಸಿ ಅದರಲ್ಲಿಯೇ ಸಿದ್ಧಿ ಪಡೆಯಬೇಕೆಂಬ ಹಂಬಲದಿಂದ ಮುಂದೆ ಮೈಸೂರಿಗೆ ತೆರಳಿದರು.



ಮರಳಿ ಮೈಸೂರಿಗೆ (೧೯೧೬-೧೯೪೦)


ವೆಂಕಟಪ್ಪನವರು ಕಲ್ಕತ್ತಾವನ್ನು ಬಿಟ್ಟಿದ್ದು ಕ್ರಿ.ಶ. ೧೯೧೬, ಮೇ ಹದಿನೈದನೆ ತಾರೀಖು. ಆದರೆ ಮೈಸೂರಿಗೆ ಬಂದಿಳಿದಿದ್ದು ಜೂನ್ ತಿಂಗಳು ಒಂದನೇ ತಾರೀಖು. ಈ ಮಧ್ಯದಲ್ಲಿ ಅವರು ಊಟಿ, ಕೂನೂರು, ಫರ್ನ್‌ಹಿಲ್, ಕೊಯಿಮತ್ತೂರು, ತಿರುಪ್ಪೂರು, ಮೆಟ್ಟುಪಾಳಯಗಳನ್ನು ಕಂಡು ಬಂದರು. ಶ್ರೀರಂಗಂನಲ್ಲಿ ರಾಮಸ್ವಾಮಿಯವರನ್ನು ಕಂಡರು ಹಾಗೂ ತಿರುಪ್ಪೂರಿನಲ್ಲಿ ವೀಣೆಯ ತಂತಿಗಳನ್ನು ಕೊಂಡರು. ಈ ಎಲ್ಲಾ ಕಾರ್ಯಕ್ರಮಗಳನ್ನು ಮುಗಿಸಿ ಬರುವ ವೇಳೆಗೆ ಜೂನ್ ಒಂದನೇ ತಾರೀಖು ಬಂದಿತ್ತು. ಮೈಸೂರಿಗೆ ಬಂದ ಮೂರು ದಿನಗಳ ನಂತರ ಮಹಾರಾಜರ ಆಪ್ತ ಕಾರ್ಯದರ್ಶಿಯಾಗಿದ್ದ ಮಿರ್ಜಾ ಇಸ್ಮಾಯಿಲ್ ಅವರನ್ನು ಅರಮನೆಯ ಕಚೇರಿಯಲ್ಲಿ ಭೇಟಿ ಮಾಡಿ ತಾವು ಕಲ್ಕತ್ತೆಯ ಸರಕಾರಿ ಕಲಾಶಾಲೆಯಲ್ಲಿ ಶಿಕ್ಷಣ ಪಡೆದಿರುವ ವರದಿಯನ್ನು ಒಪ್ಪಿಸಿ ಇನ್ನು ಮುಂದೆ ಮಹಾರಾಜರ ಸೇವೆಗೆ ತಾವು ಸಿದ್ಧರಾಗಿರುವುದನ್ನು ನಿವೇದಿಸಿಕೊಂಡರು. ಇದರ ಪೂರ್ವದಲ್ಲಿಯೇ ಅಂದರೆ ವೆಂಕಟಪ್ಪನವರು ಕಲ್ಕತ್ತೆಯನ್ನು ಬಿಡುವ ಮೊದಲೆ ಕ್ರಿ.ಶ. ೧೯೧೬ ಫೆಬ್ರವರಿ ಹದಿನೇಳನೇ ತಾರೀಖಿನಂದು ಕಲ್ಕತ್ತಾ ಸರಕಾರಿ ಕಲಾಶಾಲೆಯ ಮುಖ್ಯಸ್ಥರಾಗಿದ್ದ ಪರ್ಸಿ ಬ್ರೌನ್ ವೆಂಕಟಪ್ಪನವರ ಕುರಿತಾಗಿ ಒಂದು ಪತ್ರವನ್ನು ಬರೆದಿದ್ದರು. ಅದು ಕೆಳಗಿನಂತಿದೆ.

"ಮೈಸೂರು ಸರಕಾರವು ವೆಂಕಟಪ್ಪನಿಗೆ ಕಲ್ಕತ್ತೆಯ ಸರಕಾರಿ ಕಲಾಶಾಲೆಯಲ್ಲಿ ಶಿಕ್ಷಣ ಪಡೆಯಲೆಂದು ನೀಡುತ್ತಿದ್ದ ವಿದ್ಯಾರ್ಥಿ ವೇತನದ ಅವಧಿಯು ಮುಗಿದಿದೆ. ವೆಂಕಟಪ್ಪ ತುಂಬಾ ನಿಷ್ಠೆಯಿಂದ ಇಲ್ಲಿ ಏಳು ವರ್ಷಗಳ ಕಾಲ ವಿದ್ಯಾಭ್ಯಾಸ ಮಾಡಿದ್ದಾರೆ. ಫಲವಾಗಿ, ಈಗ ಅವರು ವರ್ಣಚಿತ್ರ ಮತ್ತು ಶಿಲ್ಪ ಎರಡೂ ವಿಭಾಗಗಳನ್ನು ಮುಗಿಸಿ, ಇವೆರಡರಲ್ಲಿ ಯಾವ ವಿಭಾಗವನ್ನಾದರೂ ಯಶಸ್ವಿಯಾಗಿ ನಿರ್ವಹಿಸುವ ಸಾಮರ್ಥ್ಯವನ್ನು ಪಡೆದುಕೊಂಡಿದ್ದಾರೆ. ಇಷ್ಟು ಮಾತ್ರವಲ್ಲದೆ ತಮ್ಮ ವಿದ್ಯಾಭ್ಯಾಸದ ವಿಷಯದಲ್ಲಿ ತದೇಕ ಚಿತ್ತದಿಂದ ಅನುಸಂಧಾನ ನಡೆಸಿದ್ದಾರೆ. ಅವರಿಗೆ ಕಲಾತ್ಮಕವಾದ ಮನೋವೃತ್ತಿಯೂ ಇರುವುದು ಮುಖ್ಯವಾದ ಸಂಗತಿ"[೧೬]

ಕಲೆಯ ಉಚ್ಚ ಮಟ್ಟದ ವಿವರಗಳಲ್ಲಿ ಅದರಲ್ಲಿಯೂ ಹಾಲುಗಲ್ಲಿನ ಶಿಲ್ಪ ಮತ್ತು ಕಂಚಿನ ಎರಕದ ಕೆಲಸ ಇವುಗಳಲ್ಲಿ ವಿಶೇಷ ಶಿಕ್ಷಣವನ್ನು ಪಡೆಯಲು ಇಂಗ್ಲೆಂಡಿಗೆ ಹೋಗುವ ಬಯಕೆ ಆವರಿಸಿದೆ. ವೈಯಕ್ತಿವಾಗಿ ವೆಂಕಟಪ್ಪ ಎಂದೂ ಆದರ್ಶ ವಿದ್ಯಾರ್ಥಿ, ಶಾಂತ ಸ್ವಭಾವದವರು. ಸಭ್ಯರು ಎಂಬುದನ್ನು ಕಂಡುಕೊಂಡಿದ್ದೇನೆ, ಅವರನ್ನು ಕಳುಹಿಸಿದ ಸಂಸ್ಥಾನಕ್ಕೆ ಕೀರ್ತಿಯನ್ನು ತರುವವರು" ಎಂಬುದಾಗಿ ಆಂಗ್ಲ ಭಾಷೆಯ ಪತ್ರ ಇದಾಗಿತ್ತು. ಈ ಪತ್ರ ಮಹಾರಾಜರ ಆಪ್ತ ಕಾರ್ಯದರ್ಶಿಯ

---

೧೬. ಸಾ.ಕೃ.ರಾಮಚಂದ್ರರಾವ್ : ಕಲಾತಪಸ್ವಿ ಕೆ. ವೆಂಕಟಪ್ಪ, ಪ್ರಾ.ಸಂ.ನಿ. ಹೊಸಪೇಟೆ. ೨೦೦೪. ಪುಟ – ೪೨




ಹೆಸರಿಗೆ ಬಂದಿತ್ತು. ಆಗ ಆ ಅಧಿಕಾರದಲ್ಲಿದ್ದ ಮಿರ್ಜಾ ಇಸ್ಮಾಯಿಲ್ ಪತ್ರವನ್ನು ತಮ್ಮ ಶಿಫಾರಸ್ಸಿನೊಂದಿಗೆ ಆಗ ದಿವಾನರಾಗಿದ್ದ ಸರ್.ಎಂ. ವಿಶ್ವೇಶ್ವರಯ್ಯರವರ ಕಛೇರಿಗೆ ಕಳುಹಿಸಿದ್ದರು.

ವೆಂಕಟಪ್ಪನವರು ಮೈಸೂರಿಗೆ ಬಂದು ಮಿರ್ಜಾರವರನ್ನು ಭೇಟಿ ಮಾಡುವ ವೇಳೆಗೆ ಪತ್ರ ದಿವಾನರ ಕಛೇರಿಯನ್ನು ತಲುಪಿತ್ತು. ಆಗ ಮಿರ್ಜಾರವರು ದಿವಾನರಿಗೆ ನೆನಪಿನ ಪತ್ರವನ್ನು ಬರೆಯುವುದಾಗಿ ವೆಂಕಟಪ್ಪನವರಿಗೆ ತಿಳಿಸಿದರು ಹಾಗೂ ದಿವಾನರು ನಿರ್ಧಾರವನ್ನು ಕೈಗೊಳ್ಳುವವರೆಗೂ ಅರಮನೆಯ ಸುತ್ತಮುತ್ತ ಕೆಲವು ನಿಸರ್ಗ ಚಿತ್ರವನ್ನು ರಚಿಸುವಂತೆ ಸೂಚಿಸಿದರು. ಆ ಸಲಹೆಯನ್ನು ಒಪ್ಪಿ ವೆಂಕಟಪ್ಪನವರು ಒಂದು ತಿಂಗಳು ಕಳೆಯುವಷ್ಟರಲ್ಲಿ ಮೂರು ವಿಭಿನ್ನ ಆಯಾಮಗಳಲ್ಲಿ ನಿಸರ್ಗ ಚಿತ್ರಗಳನ್ನು ರಚಿಸಿ ಮಿರ್ಜಾರವರಿಗೆ ಒಪ್ಪಿಸಿದರು. ಆ ಕಲಾಕೃತಿಗಳನ್ನು ನೋಡಿದ ಮಿರ್ಜಾರವರು ಹೃದಯಪೂರ್ವಕವಾಗಿ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಮಹಾರಾಜರಿಗೆ ತೋರಿಸುವುದಾಗಿ ಆಶ್ವಾಸನೆಯನ್ನು ವೆಂಕಟಪ್ಪನವರಿಗೆ ನೀಡಿದರು. ಆ ಮಾತಿನಂತೆಯೇ ಆ ಮೂರು ಕಲಾಕೃತಿಗಳನ್ನು ಮಹಾರಾಜರಿಗೆ ತೋರಿಸಿದರು. ಇದಕ್ಕೆ ಮಹಾರಾಜರೂ ಸಹ ಮೆಚ್ಚುಗೆಯನ್ನು ವ್ಯಕ್ತಪಡಿಸಿ "ಮೈಸೂರು ನಗರದ ವಿಹಂಗಮ ನೋಟವನ್ನು ಪೆನ್ಸಿಲ್‌ನಲ್ಲಿ ರಚಿಸಲು ತಿಳಿಸಿ" ಎಂದು ಮಿರ್ಜಾರವರಿಗೆ ಆದೇಶಿಸಿದರು. ಈ ಅದೇಶದಂತೆ ವೆಂಕಟಪ್ಪನವರು ಆಗಸ್ಟ್ ಒಂದನೇ ತಾರೀಖಿನಂದು ಚಿತ್ರಗಳನ್ನು ಪೂರ್ಣಗೊಳಿಸಿ ಮಿರ್ಜಾರವರಿಗೆ ಒಪ್ಪಿಸಿದರು. ಇದನ್ನು ಕಂಡ ಮಿರ್ಜಾರವರು ಸಂತೋಷದಿಂದ ಮರುದಿನವೇ ಮಹಾರಾಜರಿಗೆ ನಕ್ಷೆ ಮಾದರಿಯ ಚಿತ್ರಗಳನ್ನು ತೋರಿಸಿದರು. ಅವರೂ ಸಹ ತುಂಬಾ ಸಂತೋಷವನ್ನು ವ್ಯಕ್ತಪಡಿಸಿದರು. ಮಹಾರಾಜರ ಸಂತೋಷದ ಸಂಕೇತವಾಗಿ ಐವತ್ತು ರೂ.ಗಳಷ್ಟು ಸಂಭಾವನೆಯನ್ನು ವೆಂಕಟಪ್ಪನವರಿಗೆ ನೀಡಿ ಗೌರವಿಸಿದರು.

ಈ ಎಲ್ಲಾ ಕಾರಣಗಳಿಂದ ಸಂತೋಷಗೊಂಡಿದ್ದ ಮಿರ್ಜಾರವರು ವೆಂಕಟಪ್ಪನವರ ಕುರಿತಾಗಿ ಪೆರ್ಸಿ ಬ್ರೌನ್‌ರವರು ಬರೆದ ಪತ್ರದ ಕುರಿತಾಗಿ ಖುದ್ದು ತಾವೇ ದಿವಾನರೊಂದಿಗೆ ಮಾತನಾಡಿದರು. ಆಗ ದಿವಾನರು "ಈಗ ಮಹಾಯುದ್ಧದ ಸಮಯವಾದ್ದರಿಮದ ವೆಂಕಟಪ್ಪ ಹೊರ ರಾಷ್ಟ್ರಕ್ಕೆ ಹೋಗುವುದು ಬೇಡ, ಮೈಸೂರಿನಲ್ಲಿಯೇ ಇದ್ದುಕೊಂಡು ಕೆಲಸ ಮಾಡುತ್ತಿರಲಿ. ಯುದ್ಧ ಮುಗಿದ ಮೇಲೆ ಯೂರೋಪ್ ರಾಷ್ಟ್ರಕ್ಕೆ ಕಳಿಸೋಣ" ಎಂದು ತಮ್ಮ ನಿರ್ಧಾರವನ್ನು ತಿಳಿಸಿದರು.

ಮಿರ್ಜಾರವರು ಈ ವಿಷಯವನ್ನು ವೆಂಕಟಪ್ಪನವರಿಗೆ ತಿಳಿಸಿದರು. ಇದರಿಂದ ವೆಂಕಟಪ್ಪನವರಿಗೆ ತುಂಬಾ ಬೇಸರವಾಗಿ ತಾವು ಅಂದುಕೊಂಡ ಬಯಕೆ ಕೈಗೂಡಲಿಲ್ಲವಲ್ಲ ಎಂದು ಮನದಲ್ಲಿಯೇ ನೊಂದುಕೊಂಡರು. ಆದರೆ ಅದರ ಹಿಂದೆ ದಿವಾನರ ಯಾವುದೇ ದುರುದ್ದೇಶವಿರಲಿಲ್ಲ. ಅಂದಿನ



ಪರಿಸ್ಥಿತಿಯೂ ಅದೇ ರೀತಿಯಲ್ಲಿತ್ತು. ಆ ಮಹಾಯುದ್ಧ ಇಡೀ ಜಗವನ್ನೇ ನಡುಗಿಸಿತ್ತು. ಯೂರೋಪಿನಲ್ಲಂತೂ ಅನಿಶ್ಚಿತ ಆತಂಕಮಯ ಪರಿಸ್ಥಿತಿ ಮೊಳಗಿತ್ತು. ಆಗ ವಿದೇಶಗಳಿಗೆ ಪ್ರಯಾಣ ಮಾಡುವುದಾಗಲೀ, ಆ ದೇಶಗಳಲ್ಲಿ ಇರುವುದಾಗಲೀ ಕ್ಷೇಮವಲ್ಲದ ವಿಷಯವಾಗಿತ್ತು.


ಇದಾದ ಮೇಲೆ ಯುದ್ಧ ಮುಗಿಯುವವರೆವಿಗೂ ಯಾವ ಹೊರ ರಾಷ್ಟ್ರಗಳಿಗೆ ಹೋಗುವುದು ಕಷ್ಟ ಸಾಧ್ಯದ ವಿಷಯವಾಗಿತ್ತು. ಆದ ಕಾರಣ ದಿವಾನರ ಆಪ್ತ ಕಾರ್ಯದರ್ಶಿಯನ್ನು ವೆಂಕಟಪ್ಪ ಭೇಟಿ ಮಾಡಿದಾಗ '"ಈ ಬೇರೆಡೆಗೆ ಹೋಗಿ ಅಭ್ಯಾಸ ಮಾಡುವ ಅವಕಾಶ ದೊರೆಯುವವರೆವಿಗೂ ಅರಮನೆಯಲ್ಲಿ ಯಾವುದಾದರೊಂದು ಕೆಲಸಕ್ಕೆ ಸೇರಿಕೊಳ್ಳಿ" ಎಂದು ಸೂಚಿಸಿದರು. ಅದಕ್ಕೆ ವೆಂಕಟಪ್ಪನವರು "ನನ್ನ ಕಲಾಶಿಕ್ಷಣ ಇನ್ನೂ ಪೂರೈಸಿಲ್ಲ. ಅದು ಪೂರೈಸದೆ ಯಾವ ಕೆಲಸಕ್ಕೂ ಸೇರಿಕೊಳ್ಳುವುದಿಲ್ಲ" ಎಂದು ಹಠವಿಡಿದರು. ಹೀಗೆ ಹಲವು ತಿಂಗಳು ಕಳೆದರೂ ಸಮಸ್ಯೆ ಬಗೆಹರಿಯಲಿಲ್ಲ. ವೆಂಕಟಪ್ಪನವರ ದಾರಿ ಯಾವುದು ಎಂಬುದು ನಿಶ್ಚಯವಾಗಲಿಲ್ಲ. ಇದರಿಂದ ವೆಂಕಟಪ್ಪನಿಗೂ ಆತಂಕ, ಸರಕಾರಕ್ಕೂ ಸಂಕಟವಾಯಿತು.[೭]

ಕ್ರಿ.ಶ. ೧೯೧೭ ನೇ ಮಾರ್ಚ್ ತಿಂಗಳಿನಲ್ಲಿ ಸಂಸ್ಥಾನದ ವಿದ್ಯಾ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್ ವೆಂಕಟಪ್ಪನವರಿಗೆ ಪತ್ರ ಬರೆದು "ಮತ್ತೆ ಒಂದೆರಡು ವರ್ಷಗಳ ಕಾಲ ಕಲ್ಕತ್ತೆಯಲ್ಲಿಯೇ ಇದ್ದುಕೊಂಡು ಕಲಾಭ್ಯಾಸವನ್ನು ಮುಂದುವರೆಸಿರಿ, ಇದಕ್ಕೆ ಸರಕಾರದಿಂದ ವಿದ್ಯಾರ್ಥಿವೇತನವನ್ನು ಸಹ ನೀಡಲಾಗುವುದು" ಎಂದು ಸೂಚಿಸಿದರು. ಇದಕ್ಕೆ ಉತ್ತರವಾಗಿ ವೆಂಕಟಪ್ಪನವರು "ನಾನು ಕಲ್ಕತ್ತೆಯಲ್ಲಿ ಈಗಾಗಲೇ ಏಳು ವರ್ಷಗಳ ಕಾಲ ಅಭ್ಯಸಿಸಿದ್ದು, ಮತ್ತೆ ಏನು ಅಲ್ಲಿ ಕಲಿಯುವುದಿಲ್ಲ. ಇದರಿಂದ ಸರಕಾರದ ಹಣ ಹಾಗೂ ನನ್ನ ಶ್ರಮ ಹಾಗೂ ಸಮಯ ಎರಡು ವ್ಯರ್ಥವಾದಂತೆ" ಎಂದು ಕ್ರಿ.ಶ. ೧೯೧೭, ಮಾರ್ಚ್ ೩೧ ರಂದು ವಿನಯಪೂರ್ವಕವಾಗಿ ಉತ್ತರಿಸಿದರು.

ಮೈಸೂರು ಸರಕಾರದಿಂದ ವಿದ್ಯಾರ್ಥಿ ವೇತನ ವೆಂಕಟಪ್ಪನವರಿಗೆ ನೀಡಲು ಸಿದ್ಧವಾದರು. ಮತ್ತೆ ಕಲ್ಕತ್ತೆಗೆ ಹೋಗುವುದಿಲ್ಲ ಎಂದಾಗ ಆ ಹಣವನ್ನು ಯಾವ ಕಾರ್ಯಕ್ಕೆ ಸೂಚಿಸುವುದು ಎಂಬುದು ಅಲ್ಲಿ ಅಧಿಕಾರಿಗಳಿಗೆ ತಲೆನೋವಿನ ವಿಷಯವಾಗಿ ಪರಿಣಮಿಸಿತು. ಆಗ ಅಧಿಕಾರಿಗಳು ಈ ವಿಷಯವನ್ನು ವೆಂಕಟಪ್ಪನವರ ಗಮನಕ್ಕೆ ತರಲು ವೆಂಕಟಪ್ಪನವರು "ನನಗೆ ಸಂಗೀತದ ಮೇಲೆ ಮೊದಲಿನಿಂದಲೂ ಆಸಕ್ತಿ ಇದೆ, ಇದರ ಅಭ್ಯಾಸಕ್ಕಾಗಿ ನಾನು ಈಗಾಗಲೇ ಬಹಳಷ್ಟು ಪರಿಶ್ರಮ ಪಟ್ಟಿದ್ದೇನೆ. ಮುಂದೆ ಮೈಸೂರು ಆಸ್ಥಾನದ ಸಂಗೀತ ವಿದ್ವಾಂಸರಿಂದ ನನಗೆ ಸಂಗೀತ ಶಿಕ್ಷಣವನ್ನು ಪಡೆದುಕೊಳ್ಳಲು ಅನುಕೂಲವಾಗುವಂತೆ ವಿದ್ಯಾರ್ಥಿ ವೇತನವನ್ನು ಚಿತ್ರಕಲೆಯಿಂದ ಸಂಗೀತ ಕ್ಷೇತ್ರಕ್ಕೆ

---

೦೭. ಸಾ.ಕೃ.ರಾಮಚಂದ್ರರಾವ್ : ಕಲಾತಪಸ್ವಿ ಕೆ. ವೆಂಕಟಪ್ಪ, ಪ್ರಾ.ಸಂ.ನಿ. ಹೊಸಪೇಟೆ, ೨೦೦೪. ಪುಟ – ೪೮




ವರ್ಗಾವಣೆ ಮಾಡಿಕೊಡಿ" ಎಂದು ಕೇಳಿದರು. ಈ ಬೇಡಿಕೆಯೂ ಸಹ ಅಧಿಕಾರಿಗಳಿಗೆ ಧರ್ಮಸಂಕಟಕ್ಕೆ ಸಿಕ್ಕಿಸಿದಂತಾಯಿತು.

ಈ ಎಲ್ಲಾ ಗೊಂದಲಗಳ ನಡುವೆ ವೆಂಕಟಪ್ಪನವರು ಕ್ರಿ.ಶ. ೧೯೧೭, ಆಗಸ್ಟ್ ೨೭ ನೇ ತಾರೀಖಿನಂದು ನೇರವಾಗಿ ಮಹಾರಾಜರಿಗೆ ಅರ್ಜಿಯೊಂದನ್ನು ಸಲ್ಲಿಸಿದರು. ಅದರಲ್ಲಿ "ದೈವೀ ಸ್ವರೂಪರಾದ ಮಹಾರಾಜರೇ ದಯಮಾಡಿ ಆಸ್ಥಾನದ ವಿದ್ವಾಂಸರಾದ ವೈಣಿಕ ಶಿಖಾಮಣಿ ಶೇಷಣ್ಣನವರ ಬಳಿಯೋ ಅಥವಾ ವೈಣಿಕ ಪ್ರವೀಣ ಸುಬ್ಬಣ್ಣನವರ ಬಳಿಯೋ ವೀಣೆಯನ್ನು ಕಲಿಯುವುದಕ್ಕೆ ಆದೇಶಿಸಬೇಕು" ಎಂದು ಹೃದಯಾಳದಿಂದ ಬೇಡಿದರು. ರಾಜರಿಗೆ ವೆಂಕಟಪ್ಪನವರ ವಿಷಯವಾಗಿ ವಿಶೇಷವಾದ ಆಸಕ್ತಿ ಇದ್ದ ಕಾರಣ ಅಧಿಕಾರಿಗಳಿಗೆ ಇದರ ಬಗ್ಗೆ ಬೇಗನೆ ಸೂಕ್ತ ಕ್ರಮ ಕೈಗೊಳ್ಳಲು ಆದೇಶಿಸಿದರು.

ಕ್ರಿ.ಶ. ೧೯೧೮ ಜನವರಿ ತಿಂಗಳಲ್ಲಿ ಅರಮನೆಯ ಇಲಾಖೆಯು ವೆಂಕಟಪ್ಪನವರನ್ನು ಕರೆಸಿ "ಅರಮನೆಯ ಸಂಗೀತ ಶಾಲೆಗೆ ಸೇರಲು ಇಷ್ಟವಿದೆಯೇ?" ಎಂದು ಕೇಳಿದಾಗ ವೆಂಕಟಪ್ಪನವರು ನಗುಮುಖದಿಂದ ಒಪ್ಪಿದರು. ಹೀಗೆ ಮೈಸೂರಿನಲ್ಲೂ ಸಂಗೀತ ಸರಸ್ವತಿ ಅವರ ಬೆನ್ನು ಬಿಡದೆ ಕಾಡಿ ಅವರಿಗೆ ಒಲಿಯುವ ಪ್ರಸಂಗ ನಿರ್ಮಾಣವಾಯಿತು. ತಮ್ಮ ಮೊದಲ ಗುರುಗಳಾದ ರಾಮಸ್ವಾಮಿ ಅಯ್ಯಂಗಾರರಿಗೆ ಗುರುಗಳಾಗಿದ್ದ ವೀಣೇ ಶೇಷಣ್ಣನವರ ಬಳಿಯಲ್ಲಿ ಸಂಗೀತ ಕಲಿಯುವುದು ವೆಂಕಟಪ್ಪನವರ ಮಹದಾಸೆಯಾಗಿತ್ತು. ಆದರೆ ಆ ಸಮಯಕ್ಕೆ ಶೇಷಣ್ಣನವರನ್ನು ವೀಣಾವಾದನದಲ್ಲಿ ಮೀರಿಸುವ ಮಹನೀಯರಾರು ಇರಲಿಲ್ಲ. ಸುತ್ತಮುತ್ತ ರಾಜ್ಯಗಳಲ್ಲಿ ಶೇಷಣ್ಣನವರು ಸರ್ವಶ್ರೇಷ್ಠರಾಗಿದ್ದರು. ಆದ ಕಾರಣ ವೆಂಕಟಪ್ಪನವರಿಗೆ ಶೇಷಣ್ಣನವರು ನನಗೆ ಪಾಠ ಹೇಳಲು ಒಪ್ಪುತ್ತಾರೆ ಎಂಬ ನಂಬಿಕೆಯೂ ಕಡಿಮೆ. ಏಕೆಂದರೆ ಶೇಷಣ್ಣನವರ ಕೀರ್ತಿ ಆ ಮಟ್ಟಿಗೆ ಪ್ರಚಲಿತವಾಗಿತ್ತು. ಅವರಲ್ಲಿ ಅಭ್ಯಾಸ ಮಾಡಲೆಂದು ಬೇರೆ ಬೇರೆ ನಾಡಿನಿಂದ ಹಲವಾರು ಶ್ರೀಮಂತವರ್ಗದ ಜನರು ರಾಜ ಸಂಬಂಧಿಗಳು ಕಾಯುತ್ತಿದ್ದರು.

ಇದಲ್ಲದೆ ಮಹಾರಾಜರಿಗೂ ಶೇಷಣ್ಣನವರೇ ಸ್ವಂತ ವೀಣೆಯನ್ನು ಹೇಳಿಕೊಡುತ್ತಿದ್ದರು. ಇಂತಹ ಪರಿಸ್ಥಿತಿಯಲ್ಲಿ ವೆಂಕಟಪ್ಪನವರಿಗೆ ಸಂಗೀತದ ಬಾಲ್ಯ ಶಿಕ್ಷಣದಿಂದ ಪ್ರಾರಂಭಿಸುವುದು ಕಷ್ಟ ಸಾಧ್ಯವಾಗಿತ್ತು. ಆಗ ಅರಮನೆಯಲ್ಲಿಯೇ ಸಂಗೀತ ಶಾಲೆಯೊಂದನ್ನು ತೆರೆಯಲಾಗಿತ್ತು. ಇಲ್ಲಿ ಶಿಕ್ಷಣ ನೀಡುತ್ತಿದ್ದವರು ಅರಮನೆಯ ಕಲಾವಿದರಾದ ವೀಣೆ ಸುಬ್ಬಣ್ಣ, ಬಿಡಾರಾಂ ಕೃಷ್ಣಪ್ಪ ಮತ್ತಿತರ ಅವರ ಹಿರಿಯ ಶಿಷ್ಯರು ಇಲ್ಲಿಯೇ ಪಾಠ ಬೋಧನೆಯಲ್ಲಿ ನಿರತಾಗಿರುತ್ತಿದ್ದರು. ಆದರೆ ಇಲ್ಲಿ ವಿದ್ಯಾರ್ಥಿಗಳ ಆಯ್ಕೆ ಕಟ್ಟುನಿಟ್ಟಿನ




ವಿಷಯವಾಗಿತ್ತು. ಕೆಲವೇ ಕೆಲವು ಗಣ್ಯ ಮನೆತನದವರು, ರಾಜ ಬಂಧುಗಳು, ಶ್ರೀಮಂತರ ಮನೆಯ ಅಭ್ಯರ್ಥಿಗಳಿಗೆ ಮಾತ್ರ ಅವಕಾಶವಿತ್ತು. ಇಲ್ಲಿಯ ಆಯ್ಕೆಯ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದುದು ಮಹಾರಾಜರ ನೆಂಟರೂ, ದರ್ಬಾರ್ ಬಕ್ಷಿಯೂ ಆಗಿದ್ದ ಲಿಂಗರಾಜ ಅರಸು ಅವರದ್ದು. ಆಗ ವೆಂಕಟಪ್ಪನವರ ಮನವಿ ಪತ್ರವನ್ನು ರಾಜರು ದರ್ಬಾರ್ ಬಕ್ಷಿಯ ಕೂಡ ಕಳಿಸಿದ್ದರು.

ಕ್ರಿ.ಶ. ೧೯೧೮ ಜನವರಿ ಮೂವತ್ತನೇ ತಾರೀಕು ಬಕ್ಷಿಯವರು ವೆಂಕಟಪ್ಪನವರನ್ನು ಕರೆಸಿಕೊಂಡು ಇವರನ್ನು ಪರೀಕ್ಷಿಸಲು ವೀಣೆ ಸುಬ್ಬಣ್ಣನವರನ್ನೂ, ಬಿಡಾರಾಂ ಕೃಷ್ಣಪ್ಪನವರನ್ನೂ ಕೇಳಿಕೊಂಡರು. ಆಗ ವೆಂಕಟಪ್ಪನವರು ಎಲ್ಲಾ ಪರೀಕ್ಷೆಗಳಲ್ಲಿಯೂ ಜಯಶೀಲರಾದರು. ಆದ ಕಾರಣ ವಿದ್ಯಾರ್ಥಿ ವೇತನದೊಂದಿಗೆ ಸಂಗೀತ ಶಾಲೆಯನ್ನು ಸೇರಲು ಅಪ್ಪಣೆ ದೊರೆಯಿತು. ಈ ವಿಷಯದಿಂದ ಸಂತಸಗೊಂಡ ವೆಂಕಟಪ್ಪನವರು ಅಂದಿನಿಂದಲೇ ವಿದ್ಯಾಭ್ಯಾಸವನ್ನು ಪ್ರಾರಂಭಿಸಿದರು.

ಆದರೆ ವೆಂಕಟಪ್ಪನವರು ಚಿತ್ರಕಲೆಯನ್ನು ಬಿಟ್ಟು ಸಂಗೀತ ಕ್ಷೇತ್ರದಲ್ಲಿ ಪಳಗುತ್ತಿರುವುದನ್ನು ಕಂಡ ಮಿರ್ಜಾರವರಿಗೆ ಆತಂಕವಾಯಿತು. ಖುದ್ದಾಗಿ ಮಿರ್ಜಾರವರೇ ವೆಂಕಟಪ್ಪನವರನ್ನು ಕರೆಸಿ "ಇಲ್ಲಿಯವರೆಗೆ ನೀನು ಚಿತ್ರ ಮತ್ತು ಶಿಲ್ಪ ಕಲೆಯಲ್ಲಿ ಮಾಡಿದ ಪರಿಶ್ರಮ, ಸಮಯ, ಹಣ ಎಲ್ಲವೂ ವ್ಯರ್ಥವಾದಂತೆಯೇ. ಹಾಗಾಗಿ ನಿನ್ನ ಕ್ಷೇತ್ರದಲ್ಲಿಯೇ ಏನನ್ನಾದರೂ ಸಾಧಿಸು" ಎಂದು ತಿಳಿ ಹೇಳಿದರು. ಸ್ವತಃ ಮಿರ್ಜಾರವರೆ ಮಹಾರಾಜರ ಜಲವರ್ಣ ಹಾಗೂ ತೈಲವರ್ಣ ಚಿತ್ರ ರಚಿಸಲು ಅಪ್ಪಣೆ ಮಾಡಿದರು. ಆಗವೆಂಕಟಪ್ಪನವರು "ಆನೆ ದಂತದ ಮೇಲೆ ಮಹಾರಾಜರ ಜಲವರ್ಣದ ಚಿತ್ರವನ್ನು ರಚಿಸುವೆ" ಎಂದು ಹೇಳಿದಾಗ ಮಿರ್ಜಾರವರು ಒಪ್ಪಿ ವೆಂಕಟಪ್ಪನವರಿಗೆ ಆನೆಯ ದಂತದ ಹಲಗೆಯನ್ನು ದೊರಕಿಸಿಕೊಟ್ಟರು ಹಾಗೂ ರಾಜರ ಭಾವ ಚಿತ್ರಗಳನ್ನು ಸಹ ಕಳಿಸಿಕೊಟ್ಟರು. ಅಪ್ಪಣೆಯಂತೆ ಚಿತ್ರಗಳನ್ನು ಸಹ ರಚಿಸಿ ಮಿರ್ಜಾರವರಿಗೆ ನೀಡಿದರು.

ದರ್ಬಾರ್ ಬಕ್ಷಿಗಳಾದ ಲಿಂಗರಾಜ ಅರಸುರವರು ವೆಂಕಟಪ್ಪನವರಿಗೆ ಸಂಗೀತ ಶಿಕ್ಷಣ ಕಲಿಸಲು ವೈಣಿಕ ಪ್ರವೀಣ ಸುಬ್ಬಣ್ಣನವರಿಗೆ ಒಪ್ಪಿಸಿದರು. ವೆಂಕಟಪ್ಪನವರಿಗೆ ಶೇಷಣ್ಣನವರಲ್ಲಿ ಕಲಿಯ ಬೇಕೆಂಬ ಆಸಕ್ತಿ ಇದ್ದರೂ ಸಹ ಅಧಿಕಾರಿಗಳ ಸೂಚನೆಯಂತೆ ಸುಬ್ಬಣ್ಣನವರ ಬಳಿ ಕಲಿಯಬೇಕಾಯಿತು. ಕಾರಣ ಶೇಷಣ್ಣನವರ ವೇಳೆ ರಾಗಾಲಾಪನೆ, ತಾನ, ಪಲ್ಲವಿ ಈ ಉಚ್ಛ ಶಿಕ್ಷಣಕ್ಕೆ ಮಾತ್ರ ಮೀಸಲಾಗಿತ್ತು. ಬಹುಮಟ್ಟಿಗೆ ವೀಣೆಯ ಮೊದಲ ಪಾಠವನ್ನು ಸುಬ್ಬಣ್ಣನವರೇ ಹೇಳಿಕೊಡುತ್ತಿದ್ದರು. ಅವರ ಬಿಡುವಿನಲ್ಲಿ ಅವರ ಹಿರಿಯ ಶಿಷ್ಯವರ್ಗದವರು ಹೇಳಿಕೊಡುತ್ತಿದ್ದರು.

ಒಮ್ಮೆ ಸುಬ್ಬಣ್ಣನವರು ವೆಂಕಟಪ್ಪನವರಿಗೆ ಮೋಹನರಾಗದ ಸ್ವರವನ್ನು ನುಡಿಸಲು ಹೇಳಿದರು. ವೆಂಕಟಪ್ಪನವರು ರಾಮಸ್ವಾಮಿಯವರು ಕಲಿಸಿದಂತೆ ನುಡಿಸಿದರು. ರಾಮಸ್ವಾಮಿಯವರಿಗೆ ಶೇಷಣ್ಣನವರ




ಶಿಕ್ಷಣ ದೊರೆತಿತ್ತು. ಆದರೆ ಸುಬ್ಬಣ್ಣನವರಿಗೆ ವೆಂಕಟಪ್ಪನವರು ನುಡಿದ ಭಂಗಿ ಹಾಗೂ ಲಯ ಹಿಡಿಸಲಿಲ್ಲ. ಇದರಿಂದ ತಮ್ಮ ಹಿರಿಯ ಶಿಷ್ಯನಾದ ಸುಬ್ರಮಣ್ಯರೆಂಬುವವರಿಂದ ಎಡಗೈ ಬೆರಳುಗಳನ್ನು ತಿದ್ದುವಂತೆ ಹೇಳಿದರು. ಈ ಸಂಗತಿ ವೆಂಕಟಪ್ಪನವರಿಗೆ ಸರಿ ಕಾಣಲಿಲ್ಲ.

ಇದಲ್ಲದೆ ಸುಬ್ಬಣ್ಣನವರು ಸರಿಯಾಗಿ ಶಾಲೆಗೂ ಬರುತ್ತಿರಲಿಲ್ಲ. ವಿದ್ಯಾರ್ಥಿಗಳು ಶಾಲೆಗೆ ಬಂದು ದಿನವೆಲ್ಲ ಕಾದರೂ ಸುಬ್ಬಣ್ಣನವರು ಮಾತ್ರ ಅಲ್ಲಿಗೆ ಸುಳಿದೂ ಕೂಡ ಹೋಗುತ್ತಿರಲಿಲ್ಲ. ಶಿಸ್ತಿನ ವೆಂಕಟಪ್ಪನವರಿಗೆ ಈ ಸಂಗತಿಯೂ ನುಂಗಲಾರದ ತುತ್ತಾಗಿ ಪರಿಣಮಿಸಿತು. ಇದರಿಂದ ತಮ್ಮ ಆಸೆಯನ್ನು ದರ್ಬಾರಿನ ಬಕ್ಷಿ ಲಿಂಗರಾಜು ಅರಸರಲ್ಲಿ ತೋಡಿಕೊಂಡರು. ಅವರು ವೆಂಕಟಪ್ಪನವರಿಗೆ ಸಮಾಧಾನ ಹೇಳಿ ಶಾಲೆಯಲ್ಲಿ ಮುಂದುವರೆಯುವಂತೆ ತಿಳಿಸಿದರು. ಇವರಿಗೆ ತಾವು ಸಿದ್ಧಪಡಿದ ಶೃತಿ ವೀಣೆಯನ್ನು ಸಹ ತೋರಿಸಿದರು. ಇದರಿಂದ ಬಕ್ಷಿಯವರು ಸಂತಸಗೊಂಡು "ಶೇಷಣ್ಣನವರು ಈಗ ಬಿಡುವಿನ ವೇಳೆಯಲ್ಲಿಲ್ಲ, ಸ್ವಲ್ಪ ದಿವಸಗಳು ಕಳೆಯಲಿ, ನಿನ್ನ ಅಭ್ಯಾಸಕ್ಕೆ ಶೇಷಣ್ಣನವರನ್ನು ವ್ಯವಸ್ಥೆ ಮಾಡುತ್ತೇನೆ" ಎಂದು ಭರವಸೆಯನ್ನಿತ್ತರು. ಅದೇ ವರ್ಷ ಮಾರ್ಚ್ ನಾಲ್ಕನೇ ತಾರೀಖಿನಂದು ಸಂಜೆಯ ವೇಳೆ ಅಭ್ಯಾಸಕ್ಕೆ ಗುರುಗಳಿಗಾಗಿ ಕಾಯುತ್ತಿದ್ದರೂ ಸುಬ್ಬಣ್ಣನವರು ಬರಲೇ ಇಲ್ಲ. ಆ ಸಂದರ್ಭಕ್ಕೆ ಸರಿಯಾಗಿ ಶೇಷಣ್ಣನವರು ಆ ಮಾರ್ಗವಾಗಿ ಬಂದರು. ಸಂಗೀತ ಶಾಲೆಯಲ್ಲಿ ವಿದ್ಯಾರ್ಥಿಗಳೆಲ್ಲಾ ಸುಮ್ಮನೆ ಕುಳಿತಿರುವುದನ್ನು ಗಮನಿಸಿ ಶಾಲೆಯ ಒಳಗೆ ಪ್ರವೇಶಿಸಿ ಸಂಗತಿಯನ್ನು ವಿಚಾರಿಸಿದರು.

ವಿದ್ಯಾರ್ಥಿಗಳ ದುಃಖವನ್ನು ಕೇಳಿದ ಶೇಷಣ್ಣನವರು ಬೇಸರವನ್ನು ವ್ಯಕ್ತಿಪಡಿಸಿ ತಾವೇ ಪಾಠವನ್ನು ಹೇಳಿಕೊಡಲು ಪ್ರಾರಂಭಿಸಿದರು. ಎಲ್ಲರ ಅಭ್ಯಾಸವನ್ನು ಪರೀಕ್ಷಿಸುವಾಗ ವೆಂಕಟಪ್ಪನವರ ಸರದಿ ಬಂದಿತು. ವೆಂಕಟಪ್ಪನವರು ಮೋಹನರಾಗದ ಸ್ವರವನ್ನೇ ನುಡಿಸಿ ತಾವು ರಾಮಸ್ವಾಮಿಯವರ ಬಳಿಯಲ್ಲಿ ಕಲಿತಿದ್ದು ಈ ರೀತಿಯಾಗಿ. ಆದರೆ ಇಲ್ಲಿ ನನಗೆ ಕಲಿಸುತ್ತಿರುವುದು ಈ ರೀತಿಯಾಗಿ ಎಂದು ಎರಡರ ಭೇದವನ್ನು ತೋರಿಸಿದರು. ಶೇಷಣ್ಣನವರಿಗೆ ನನ್ನ ಶಿಷ್ಯ ರಾಮಸ್ವಾಮಿ ಶಿಷ್ಯನೆಂದೊಡನೆ ವೆಂಕಟಪ್ಪನವರನ್ನು ಕಂಡು ಸಂತೋಷವಾಯಿತು. ಅಂದಿನ ಪಾಠ ಮುಗಿದ ಮೇಲೆ ವೆಂಕಟಪ್ಪನವರನ್ನು ಕರೆದು "ರಾಮಸ್ವಾಮಿ ಹೇಳಿಕೊಟ್ಟಿರುವುದೇ ಸರಿ, ಅದನ್ನೇ ಅಭ್ಯಾಸ ಮಾಡು" ಎಂದು ಹೇಳಿದರು ಹಾಗೂ ಸಂಜೆಯ ವೇಳೆ ತಾನೆ ತಮ್ಮ ಮನೆಯಲ್ಲಿ ಪಾಠ ಹೇಳುವುದಾಗಿಯೂ ತಿಳಿಸಿದರು. ಇದರಿಂದ ವೆಂಕಟಪ್ಪನವರಿಗೆ ಸ್ವರ್ಗವೇ ತಮ್ಮದಾದಷ್ಟು ಸಂತೋಷವಾಯಿತು.

"ಆದರೆ ಸುಬ್ಬಣ್ಣನವರಿಂದ ವಿದ್ಯಾರ್ಥಿಗಳನ್ನು ಕಸಿದುಕೊಂಡೆ ಎಂಬ ಮಾತು ಬರಬಾರದು, ಆದ ಕಾರಣ ನಾನು ಬಕ್ಷಿಯವರ ಬಳಿಯಲ್ಲಿ ಹೋಗಿ ಶೇಷಣ್ಣನವರು ಒಪ್ಪಿದ್ದಾರೆ. ನನಗೆ ಅವರ




ಬಳಿಯಲ್ಲಿ ಕಲಿಯಲು ಅಕಾಶ ಮಾಡಿಕೊಡಿ ಎಂದು ಕೇಳು" ಎಂದು ವೆಂಕಟಪ್ಪನವರಿಗೆ ಶೇಷಣ್ಣನವರೇ ಉಪಾಯ ಮಾರ್ಗವನ್ನು ಹೇಳಿಕೊಟ್ಟರು. ಅದರಂತೆ ವೆಂಕಟಪ್ಪನವರು ಮಾಡಿದರು. ಆದರೆ ಬಕ್ಷಿಯವರು "ಮುಂದೆ ನೋಡೋಣ" ಎಂದರು. ಆಗ ಶೇಷಣ್ಣನವರೇ ಈ ವಿಷಯವಾಗಿ ಬಕ್ಷಿಯವರ ಬಳಿ ಚರ್ಚಿಸಿದರು ಹಾಗೂ ಬಿಡಾರಾಂ ಕೃಷ್ಣಪ್ಪನವರ ಕಡೆಯಿಂದಲೂ ಹೇಳಿಸಿ ಬಕ್ಷಿಯವರನ್ನು ಒಪ್ಪುವಂತೆ ಮಾಡಿದರು. ಕ್ರಿ.ಶ. ೧೯೧೮ ರ ಮಾರ್ಚ್ ಹದಿನಾಲ್ಕನೇ ತಾರೀಖು ಪಿಂಗಳನಾಮ ಸಂವತ್ಸರದ ಫಾಲ್ಗುಣ ಶುದ್ಧ ಗುರುವಾರದಂದು ಮೊದಲ ದಿನದ ಪಾಠವನ್ನು ಪ್ರಾರಂಭಿಸಿದರು. ಮೊದಲಿಗೆ ಕೇದಾರ ರಾಗದ ಕೀರ್ತನೆಯಿಂದ ಪ್ರಾರಂಭಿಸಿದರು. ವೆಂಕಟಪ್ಪನವರು ಪಲ್ಲವಿಯನ್ನು ಕಲಿತ ರೀತಿಯನ್ನು ಕಂಡು ಶೇಷಣ್ಣನವರು ಸಂತೋಷದಿಂದ ಹಿಗ್ಗಿ ಹೋದರು.

ಈ ವಿಷಯದಿಂದ ಪುಳಕಿತಗೊಂಡ ವೆಂಕಟಪ್ಪನವರಿಗೆ ಶೇಷಣ್ಣನವರ ಮೇಲೆ ಎಲ್ಲಿಲ್ಲದ ಗೌರವ. ಅವರ ವಿದ್ವತ್ತು, ಮನೋಧರ್ಮ, ಸೌಜನ್ಯವೂ, ವಿನಯವೂ, ಸರಳ ಸ್ವಭಾವವೂ ಈ ಎಲ್ಲಾ ಅಂಶಗಳು ವೆಂಕಟಪ್ಪನವರಿಗೆ ಶೇಷಣ್ಣನವರ ಮುಖ ಭಾವ ಶಿಲ್ಪವನ್ನು ಮಾಡಲೇಬೇಕೆಂಬ ಆಲೋಚನೆ ಬಂದು ಅವರಲ್ಲಿ ಮನವಿ ಮಾಡಿದರು. ಇದಕ್ಕೆ ಶೇಷಣ್ಣನವರು ಒಪ್ಪಿ ದಿನವೂ ವೆಂಕಟಪ್ಪನವರ ಸ್ಟುಡಿಯೋಗೆ ಹೋಗಿ ಬರಲೊಪ್ಪಿದರು. ಕ್ರಿ.ಶ. ೧೯೧೮ ರ ಜುಲೈ ತಿಂಗಳ ಸುಮಾರಿಗೆ ಶಿಲ್ಪದ ಕೆಲಸವನ್ನು ಪ್ರಾರಂಭಿಸಿದರು. ಜುಲೈ ಹತ್ತರಿಂದ ಆಗಸ್ಟ್ ಆರನೇ ತಾರೀಖಿನ ನಡುವೆ ಹಲವು ದಿನಗಳು ಶೇಷಣ್ಣನವರು ಬೆಳಗ್ಗೆ ಒಂದು ಗಂಟೆ ಮಧ್ಯಾಹ್ನ ಒಂದು ಗಂಟೆಯಂತೆ ಪ್ರತಿ ದಿನವೂ ವೆಂಕಟಪ್ಪನವರ ಸ್ಟುಡಿಯೋಕ್ಕೆ ಬಂದು ಕೂರುತ್ತಿದ್ದರು.[೧೮]

ಪ್ಲಾಸ್ಟರ್ ಆಫ್ ಪ್ಯಾರಿಸ್‌ನ ಮಾಧ್ಯಮದಲ್ಲಿ ಮಾಡುತ್ತಿದ್ದ ಈ ಶಿಲ್ಪವನ್ನು ಆಗಸ್ಟ್ ತಿಂಗಳ ಕಡೆಯ ವಾರದೊಳಗಾಗಿ ಮುಗಿಸಿದರು. ಇದೊಂದು ಅದ್ಭುತವಾದ ಶಿಲ್ಪಕೃತಿಯಾಗಿ ಪೂರ್ಣಗೊಂಡಿತು. ವೈಣಿಕ ಮಾಂತ್ರಿಕ ಶೇಷಣ್ಣನವರ ಭಾವ ಅಚ್ಚು ಹೊತ್ತಿದ ರೀತಿಯಲ್ಲಿ ಆ ಕೃತಿ ಮೂಡಿ ಬಂದಿತ್ತು. ಈ ಕೃತಿಯನ್ನು ನೋಡಿಕೊಂಡು ಹೋಗಲು ಮೈಸೂರಿನ ಕಲಾ ರಸಿಕರೂ, ಸಂಗೀತ ವಿದ್ವಾಂಸರೂ, ಗಣ್ಯರೂ, ದಿನವೂ ವೆಂಕಟಪ್ಪನವರ ಸ್ಟುಡಿಯೋಗೆ ಬಂದು ಹೋಗುವ ಪರಿಪಾಠ ಒಂದು ತಿಂಗಳವರೆವಿಗೂ ನಡೆಯಿತು. ಇದರಿಂದ ಶೇಷಣ್ಣನವರ ಪ್ರಸಿದ್ಧಿಯೊಂದಿಗೆ ವೆಂಕಟಪ್ಪನವರ ಕಲೆಗಾರಿಕೆಯ ಯಶಸ್ಸು ಹರಡಿಕೊಂಡಿತು. ಇದರಿಂದಾಗಿ ವೆಂಕಟಪ್ಪನವರ ಚಿತ್ರ ಶಿಲ್ಪಕೃತಿಯ ಜಾಗೃತಿಯಾಗಿದ್ದನ್ನು ನಾವಿಲ್ಲಿ ಕಾಣಬಹುದು.


---

೧೮. ಸಾ.ಕೃ.ರಾಮಚಂದ್ರರಾವ್ : ಕಲಾತಪಸ್ವಿ ಕೆ. ವೆಂಕಟಪ್ಪ, ಪ್ರಾ.ಸಂ.ನಿ. ಹೊಸಪೇಟೆ, ೨೦೦೪. ಪುಟ –೫೨



ವೆಂಕಟಪ್ಪನವರು ಮೈಸೂರಿಗೆ ಹಿಂದಿರುಗುವ ವೇಳೆಗೆ ಅವರ ತಂದೆ-ತಾಯಿಯವರು ತೀರಿಕೊಂಡಿದ್ದರು. ಇದ್ದ ಒಬ್ಬಳೇ ತಂಗಿಗೆ ಮದುವೆಯಾಗಿತ್ತು. ಮೊದಲಿನಿಂದಲೂ ಒಂಟಿಯಾಗಿದ್ದ ಅವರು ಅವರ ಬಂಧುಗಳಿದ್ದರೂ ಅವರ ಬಳಿಗೆ ಹೋಗುವ ಮನೋಧರ್ಮ ಅವರದಲ್ಲ. ಮೊದಲು ಹಳೆಯ ಅಗ್ರಹಾರದಲ್ಲಿ ಗೋಪಾಲರಾಜೆ ಅರಸಿನವರ ಛತ್ರದಲ್ಲಿಯೇ ಇರುತ್ತಿದ್ದರು. ನಂತರ ಸಂತೆಪೇಟೆಯಲ್ಲಿ ಉಡುಪಿ ಹೋಟಲೊಂದರಲ್ಲಿ ಕೋಣೆಯೊಂದನ್ನು ಬಾಡಿಗೆಗೆ ತೆಗೆದುಕೊಂಡು ಅಲ್ಲಿಯೇ ಇರುತ್ತಿದ್ದರು. ಆ ಹೋಟಲ್ಲಿನ ಪರಿಚಾರಕನಾಗಿದ್ದ ನರಸಿಂಹನೆಂಬ ಮಾಣಿ ಹುಡುಗ ವೆಂಕಟಪ್ಪನವರ ಮೆಚ್ಚಿನ ಭಂಟನಾದನು. ಇವನಿಗೆ ವೆಂಕಟಪ್ಪನವರು ಎಂದರೆ ಪ್ರೀತಿ, ಗೌರವ. ಇವರು ರಾತ್ರಿಯ ವೇಳೆ ಹೋಟೆಲ್‌ಗೆ ತಡವಾಗಿ ಬಂದರೂ ಅವರಿಗೆ ಊಟವನ್ನು ಬಿಸಿಯಾಗಿ ಕಾದಿರಿಸುತ್ತಿದ್ದನು. ಇದರಿಂದ ವೆಂಕಟಪ್ಪನವರಿಗೂ ಆ ಮಾಣಿಯ ಮೇಲೆ ತುಂಬಾ ಪ್ರೀತಿ. ಅವನ ಆ ನಿಷ್ಠೆಯ ಸೇವೆಗೆ ಋಣಿಯಾಗಿ ವೆಂಕಟಪ್ಪನವರು ಅವನದೊಂದು ಮುಖಭಾವ ಶಿಲ್ಪವನ್ನು ಮಾಡಬೇಕೆಂದು ನಿರ್ಧರಿಸಿದರು. ಶೇಷಣ್ಣನವರ ಶಿಲ್ಪವನ್ನು ಮಾಡಿದ ವರ್ಷವೇ ಈ ಶಿಲ್ಪವನ್ನೂ ಸಹ ಮಾಡಿ ಮುಗಿಸಿದರು. ಈ ಶಿಲ್ಪವೂ ಸಹ ಬಹುಜನರ ಮೆಚ್ಚುಗೆಗೆ ಪಾತ್ರವಾಯಿತು. ಈ ಕೃತಿಯಿಂದ ವೆಂಕಟಪ್ಪನವರಿಗೆ ಇನ್ನಷ್ಟು ಅಭಿಮಾನಿಗಳು ಹುಟ್ಟಿಕೊಂಡರು. ವೆಂಕಟಪ್ಪನವರು ಕಲ್ಕತ್ತೆಯಿಂದ ಮೈಸೂರಿಗೆ ಹಿಂದಿರುಗಿದ ಮೇಲೆ ಅವನೀಂದ್ರನಾಥರೊಂದಿಗೆ ನಿಕಟವಾಗಿ ಸಂಪರ್ಕವನ್ನು ಇಟ್ಟುಕೊಂಡಿದ್ದರು. ಪತ್ರ ವ್ಯವಹಾರವಷ್ಟೇ ಅಲ್ಲದೆ ಆಗಾಗ ಇಲ್ಲಿಂದ ಏನಾದರೂ ಕಾಣಿಕೆಯನ್ನು ಕಳುಹಿಸುತ್ತಿದ್ದರು. ಮಾವಿನ ಹಣ್ಣಿನ ಕಾಲದಲ್ಲಿ ಒಂದು ನೂರು ರಸಪುರಿ, ಬಾದಾಮಿ ಮಾವಿನ ಹಣ್ಣುಗಳನ್ನು ರೈಲಿನ ಮೂಲಕ ಕಳುಹಿಸುತ್ತಿದ್ದರು. ಒಮ್ಮೆ ಇವರು ಸಂಪೂರ್ಣವಾಗಿ ಚಿತ್ರ ರಚನೆಯನ್ನು ಬಿಟ್ಟು ಸಂಗೀತಕ್ಕೆ ಮಾರು ಹೋಗಿದ್ದಾರೆಂಬ ವಿಷಯ ಬೇರೆ ಯಾರಿಂದಲೋ ಅವನೀಂದ್ರರ ಕಿವಿ ಮುಟ್ಟಿತು. ಇದರಿಂದ ಬೇಸರಗೊಂಡ ಅವನೀಂದ್ರರು ವೆಂಕಟಪ್ಪನವರಿಗೆ ಈ ಪ್ರಶ್ನೆಯನ್ನು ಕೇಳಿದರು. ಇದಕ್ಕೆ ಉತ್ತರವಾಗಿ ವೆಂಕಟಪ್ಪನವರು ೧೯೨೧ರಲ್ಲಿ "ವೀಣೆಯ ಹುಚ್ಚು" ಎಂಬ ಕಲಾಕೃತಿಯನ್ನು ಅವನೀಂದ್ರರಿಗೆ ಉತ್ತರವಾಗಿ ಕಳಿಸಿಕೊಟ್ಟರು. ಇದಕ್ಕೆ ಪ್ರತ್ಯುತ್ತರವಾಗಿ ಅವನೀಂದ್ರನಾಥರು ಮತ್ತೊಂದು ಪತ್ರವನ್ನು, ಕಲಾಕೃತಿಯನ್ನು ಎರಡನ್ನೂ ಕಳುಹಿಸಿಕೊಟ್ಟರು. ಆ ಪತ್ರ ಕೆಳಗಿನಂತಿದೆ.

"ಚಿತ್ರದ ಸಂವಿಧಾನ ಚೆನ್ನಾಗಿದೆಯೆಂದು ನನ್ನ ಅನಿಸಿಕೆ. ಆದರೆ ವಸ್ತು ನನಗೆ ಏಕೋ ಹಿಡಿಸಿಲ್ಲ. ನಿನಗೆ ವೀಣೆಯ ಹುಚ್ಚು ಇರಬಹುದು, ಚಿತ್ರ ಕಲೆಯ ಹುಚ್ಚು ಇರಬಹುದು, ಆದರೆ ಚಿತ್ರಕ್ಕೆ ಇಳಿಸಲು ಇಂಥ ಹುಚ್ಚು ಸಾಕೆ? ಹಾಗೆಯೇ ಒಬ್ಬನಿಗೆ ಕುಡಿಯುವ ಚಟ ಇರಬಹುದು, ಆದರೆ ಅದು ಎಲ್ಲರ




ಆಸಕ್ತಿಗೆ ಪಾತ್ರವಾಗಬಲ್ಲುದೆ? ನಿನ್ನ ಚಿತ್ರದಲ್ಲಿ ಶಾಶ್ವತವಾದ ಆಸಕ್ತಿಯನ್ನು ಕೆರಳಿಸಬಹುದಾದಂಥ ಏನಾದರೂ ವಸ್ತುವಿರಬೇಕು. ಹಾಗಿದ್ದರೆ ಮಾತ್ರ ನಿನ್ನ ಚಿತ್ರ ಹಲವರಿಗೆ ಹಿಡಿಸೀತು" ಎಂಬ ಉತ್ತರವನ್ನು ವೆಂಕಟಪ್ಪನವರಿಗೆ ಕಳುಹಿಸಿಕೊಟ್ಟರು.

ಈ ಸಂಗತಿ ನಡೆದ ಮರುವರ್ಷವೇ ವಿಶ್ವಕವಿ ರವೀಂದ್ರನಾಥ ಠ್ಯಾಗೂರರು ಮೈಸೂರಿಗೆ ಬಂದಿದ್ದರು. ಅವನೀಂದ್ರರ ಹಿರಿಯವರಾದ ರವೀಂದ್ರರು ವೆಂಕಟಪ್ಪನವರು ಕಲ್ಕತ್ತಾದಲ್ಲಿ ಇರುವಾಗ ಚೆನ್ನಾಗಿ ಬಲ್ಲವರಾಗಿದ್ದರು. ಕ್ರಿ.ಶ. ೧೯೨೨ರ ಸೆಪ್ಟಂಬರ್ ತಿಂಗಳ ಕಡೆಯ ವಾರ ರವೀಂದ್ರರು ಮೈಸೂರಿಗೆ ಬಂದು ಬೇಸಿಗೆ ಅರಮನೆಯಲ್ಲಿ ತಂಗಿದ್ದರು. ಆ ತಿಂಗಳ ೨೭ ನೆಯ ಸಂಜೆ ಕಾಲೇಜ್ ಟೆನಿಸ್ ಕೋರ್ಟ್‌ನಲ್ಲಿ ಅವರ ಭಾಷಣವನ್ನು ಏರ್ಪಡಿಸಲಾಗಿತ್ತು. ಇವರ ಜೊತೆಗೆ ಅವರ ಗೆಳೆಯರಾದ ದೀನಬಂಧು ಚಾರ್ಲಿ ಆಂಡ್ರೂಸರೂ ಸಹ ರವೀಂದ್ರ ಜೊತೆಯಲ್ಲಿ ಆಗಮಿಸಿದ್ದರು. ಇದಾದ ಮರುದಿನ ಅಂದರೆ ಸೆಪ್ಟಂಬರ್ ೨೮ರಂದು ರವೀಂದ್ರರನ್ನು ಕಾಣಲೆಂದು ಕೆ. ವೆಂಕಟಪ್ಪನವರು ಒಬ್ಬ ಫೋಟೋಗ್ರಾಫರ್ ಸಂಗಡ ಕರೆದುಕೊಂಡು ಅವರು ವಸತಿ ಇದ್ದ ಬೇಸಗೆ ಅರಮನೆಗೆ ಬೆಳಗ್ಗೆ ಹತ್ತು ಮುಕ್ಕಾಲದ ಹೊತ್ತಿಗೆ ಬಂದರು. ಅರಮನೆಯ ಹೊರಗೆ ಆಂಡ್ರೂಸರನ್ನು ಭೇಟಿಯಾದರು. ಆಗ ಆಂಡ್ರೂಸರು ಒಳಗೆ ಹೋಗಿ ರವೀಂದ್ರರಿಗೆ ವೆಂಕಟಪ್ಪನವರು ಬಂದಿರುವ ವಿಷಯವನ್ನು ತಿಳಿಸಿದರು. ವಿಷಯ ತಿಳಿದ ತಕ್ಷಣವೇ ಬಹು ಪ್ರೀತಿಯಿಂದ ಮಂದಸ್ಮಿತ ನಗುವಿನೊಂದಿಗೆ ಹೊರ ಬಂದು "ಏನು ವೆಂಕಟಪ್ಪ ನೀನಿನ್ನೂ ಸನ್ಯಾಸಿಸಿಯಾಗಿಲ್ಲ?" ಎಂದು ಉದ್ಗರಿಸುತ್ತಾ ಪ್ರೀತಿಯಿಂದ ವೆಂಕಟಪ್ಪನವರನ್ನು ಒಳಗೆ ಬರಮಾಡಿಕೊಂಡರು. ಈ ವಿಷಯವನ್ನು ಗಮನಿಸಿದರೆ ವೆಂಕಟಪ್ಪನವರ ವಿರಕ್ತ ಮನಸ್ಸು ಕಲ್ಕತ್ತಾದಲ್ಲಿಯೇ ಎಲ್ಲರಿಗೂ ತಿಳಿದಿತ್ತು. ವೆಂಕಟಪ್ಪನವರ ಬ್ರಹ್ಮಚರ್ಯ ಅಂದಿನ ದಿನಗಳಲ್ಲಿಯೇ ಪಾಲಿಸುತ್ತಿದ್ದರು ಎಂಬುದು ತಿಳಿದು ಬರುತ್ತದೆ.

ಒಳಗೆ ಕರೆದೊಯ್ದು ರವೀಂದ್ರರು ವೆಂಕಟಪ್ಪನವರ ಬೆಳವಣಿಗೆಯ ಭವಿಷ್ಯದ ಚಿಂತನೆಯ ಮಾರ್ಗವನ್ನು ಮಾತನಾಡುತ್ತಾ ಹಿಂದಿನ ರಾತ್ರಿ ನಡೆದ ವೀಣಾವಾದನದ ವಿಷಯವನ್ನು ಚರ್ಚಿಸುತ್ತಾ "ಹಿರಿಯರಾದ ಶೇಷಣ್ಣನವರೂ ಚೆನ್ನಾಗಿ ವೀಣೆಯನ್ನು ನುಡಿಸುತ್ತಾರೆ. ಆದರೆ ಸಂಗಮೇಶ್ವರ ಶಾಸ್ತ್ರಿಗಳ ವೀಣಾವಾದನ ಸಹೃದಯಿಯ ಮನಸ್ಸನ್ನು ಛೇದಿಸಿ ಮನಸ್ಸನ್ನು ಮುಕ್ತಿ ಮಾರ್ಗದೆಡೆಗೆ ಕರೆದುಕೊಂಡು ಮನಕ್ಕೆ ಆನಂದವನ್ನು ಉಂಟು ಮಾಡುತ್ತವೆ" ಎಂದರು. ಈ ಸಂದರ್ಭದಲ್ಲಿ ಪೋಟೋಗ್ರಾಫರ್ ರವೀಂದ್ರರನ್ನು ಸುತ್ತವರೆದು ಹಲವು ಭಂಗಿಗಳ ಫೋಟ ಕ್ಲಿಕ್ ಮಾಡುತ್ತಿದ್ದನು.

ಸುಮಾರು ಮುಕ್ಕಾಲುಗಂಟೆಯ ಕಾಲ ಕವಿ ಹಾಗೂ ಕಲವಿದರಿಬ್ಬರು ತಮ್ಮ ಮನಗಳನ್ನು ತೆರೆದು ಸ್ವಚ್ಛಂದವಾಗಿ ಮಾತಿನ ಲೋಕದಲ್ಲಿ ವಿಹರಿಸಿದರು. ರವೀಂದ್ರರು ಕಲ್ಕತ್ತಾಗೆ ತೆರಳಿದ ಮೇಲೆ




ಬಂದಾಗ ತೆಗೆದ ಫೋಟೋಗಳ ಸಹಾಯದಿಂದ ಕ್ರಿ.ಶ. ೧೯೨೩ ಜೂನ್ ಮೂವತ್ತನೇ ತಾರೀಖಿನಂದು ರವೀಂದ್ರರ ಮುಖಭಾವ ಚಿತ್ರವನ್ನು ರಚಿಸಲು ಪ್ರಾರಂಭಿಸಿದರು. ರವೀಂದ್ರರನ್ನು ಮನದಲ್ಲಿಯೇ ಆರಾಧಿಸಿಕೊಂಡು ಅವರ ಮುಖಭಾವವನ್ನು ಸ್ಮರಿಸುತ್ತಾ ಹಾಗೂ ಬೇರೆ ಬೇರೆ ದಿಕ್ಕಿನಿಂದ ತೆಗೆದ ಫೋಟೋಗಳನ್ನು ಆಧಾರವಾಗಿಟ್ಟುಕೊಂಡು ಪ್ಲಾಸ್ಟರ್ ಆಫ್ ಪ್ಯಾರಿಸ್ ಮಾಧ್ಯಮದಲ್ಲಿ ಆಗಸ್ಟ್ ೨೬ ರ ಸುಮಾರಿಗೆ ಸಂಪೂರ್ಣಗೊಳಿಸಿದರು.

ವೆಂಕಟಪ್ಪನವರು ಈ ಸಂದರ್ಭದಲ್ಲಿಯೇ ಸರಣಿ ಮಾದರಿಯಲ್ಲಿ ಚಿತ್ರಗಳ ಶಿಲ್ಪಗಳ ರಚನೆಯಲ್ಲಿ ತೊಡಗಿದರು. ರವೀಂದ್ರ ಶಿಲ್ಪವನ್ನು ಮಾಡುವ ಪೂರ್ವದಲ್ಲಿಯೇ ಹಲವಾರು ವರ್ಣಚಿತ್ರಗಳನ್ನು ಚಿತ್ರಿಸಿದರು. ೧೯೨೩ರ ಫೆಬ್ರವರಿ ತಿಂಗಳಲ್ಲಿ "ರಾತ್ರಿಯ ಪೂಜೆ" ಎಂಬ ಜಲವರ್ಣದ ಚಿತ್ರವೊಂದನ್ನು ಮದರಾಸ್ ಲಲಿತಕಲಾ ಪ್ರದರ್ಶನಕ್ಕೆ ಕಳುಹಿಸಿದರು. ಅದೇ ವರ್ಷ ಮಾರ್ಚ್ ತಿಂಗಳಲ್ಲಿ ರಾಜಮಹೇಂದ್ರವರದ ಆಂಧ್ರ ಲಲಿತಕಲಾ ಸಂಘದವರು ಏರ್ಪಡಿಸಿದ್ದ ಕಲಾಪ್ರದರ್ಶನಕ್ಕೆಂದು "ಶಿವರಾತ್ರಿ, ಪಕ್ಷಿ, ವೀಣೆ ಹುಚ್ಚು" ಹಾಗೂ ದಂತದ ಫಲಕ ಕಿರುಚಿತ್ರವೊಂದನ್ನು ಅಲ್ಲಿ ಕಳಿಸಿದ್ದರು. ಈ ರೀತಿಯಾಗಿ ಹಲವಾರು ಕಲಾ ಚಟುವಟಿಕೆಯಲ್ಲಿ ವೆಂಕಟಪ್ಪನವರು ತಮ್ಮನ್ನು ತಾವು ಅರ್ಪಿಸಿಕೊಂಡು ಕಾರ್ಯ ನಿರ್ವಹಿಸುತ್ತಿದ್ದರು. ಈ ರೀತಿಯ ಚೇತನಪೂರಕ ಕಾರ್ಯ ಚಟುವಟಿಕೆಗೆ ಅವರ ಏಕಾಂಗಿತನವೂ ಕಾರಣವಾಗಿತ್ತು ಎಂದು ಗ್ರಹಿಸಬಹುದಾಗಿದೆ.


ವೆಂಕಟಪ್ಪನವರ ಜಾತಕದಲ್ಲಿ ಅಂಗಾರಕ ದೋಷವಿರುವುದರಿಂದ ನೇತ್ರ ದೋಷವನ್ನು ಸೂಚಿಸುತ್ತದೆ. ಇದಕ್ಕೆ ತಾಳೆಯಾಗುವಂತೆ ಅವರು ರವೀಂದ್ರರ ಮುಖಭಾವವನ್ನು ರಚಿಸುವ ಸಮಯದಲ್ಲಿ ಕಣ್ಣಿನ ಬೇನೆ ಹೆಚ್ಚಾಯಿತು. ಈ ತೊಂದರೆ ೧೯೨೦ರಿಂದಲೇ ಇವರನ್ನು ಕಾಡತೊಡಗಿತ್ತು. ೧೯೨೩ರ ಹೊತ್ತಿಗೆ ಹೆಚ್ಚಾಯಿತು. ಇದರಿಂದ ವಿಚಲಿತರಾಗದೆ ಅರಮನೆಯ ವೈದ್ಯಾಲಯದಲ್ಲಿ ವೈದ್ಯರಾಗಿದ್ದ ಶ್ರೀನಿವಾಸಚಾರ್ಯರ ಬಳಿ ತೋರಿಸಿಕೊಂಡ ನಂತರ ಸ್ವಲ್ಪ ಮಟ್ಟಿನ ಗುಣ ಕಾಣತೊಡಗಿತು. ಆದರೆ ಇದೇ ವರ್ಷ ಅಕ್ಟೋಬರ್ ತಿಂಗಳಲ್ಲಿ ಬೇನೆ ತಾರಕಕ್ಕೇರಿತು. ಆಗ ಯಾವ ಚಿಕಿತ್ಸೆಯು ಫಲಕಾರಿಯಾಗಲಿಲ್ಲ.

ಆಗ ಇವರ ವೀಣಾ ಗುರುಗಳಾದ ಶೇಷಣ್ಣನವರು ಜ್ಯೋತಿಷ್ಯವನ್ನು ಸಹ ಬಲ್ಲವರಾದ ಕಾರಣ ವೆಂಕಟಪ್ಪನವರ ಜಾತಕವನ್ನು ತರಿಸಿಕೊಂಡು ನೋಡಿದಾಗ ಅಂಗಾರಕ ದೋಷವನ್ನು ಪತ್ತೆ ಹಚ್ಚಿದರು. ನವೆಂಬರ್ ತಿಂಗಳಲ್ಲಿ ಗುರು ಆಸ್ಥಾನಕ್ಕೆ ಬರುವುದರಿಂದ ಆ ದಿನದಿಂದ ಬೇನೆ ಕಡಿಮೆಯಾಗುವುದೆಂದು ಹೇಳಿದರು. ಮುಂದೆ ವೆಂಕಟಪ್ಪನವರ ಕಲಾಕೃತಿಗೆ ಬಹು ಬೆಲೆ ಬರುವುದರಿಂದ ಅವರ ಯೋಗ್ಯತೆಯೂ, ಯೋಗವೂ ಹೆಚ್ಚಾಗುತ್ತದೆ ಎಂದು ಭವಿಷ್ಯ ನುಡಿದಿರುವುದನ್ನು ತಮ್ಮ ದಿನಚರಿಯಲ್ಲಿ ದಾಖಲೀಕರಿಸಿದ್ದಾರೆ.



ಅದು ನಿಜವೂ ಆಗಿದೆ. ಇದರಿಂದ ವೆಂಕಟಪ್ಪನವರಿಗೆ ದೈವ ಭವಿಷ್ಯಗಳಲ್ಲೂ ನಂಬಿಕೆ ಇರುವುದು ಸ್ಪಷ್ಟವಾಗಿ ತೋರುತ್ತದೆ. ಇದಾದ ನಂತರ ಒಂದು ವರ್ಷಗಳ ಕಾಲ ವೀಣಾಭ್ಯಾಸ ಸ್ನೇಹಿತರ ಸಂಗಡ ಸೇರಿ ನಗರ ವೀಕ್ಷಣೆಯಲ್ಲಿ ನಿರತರಾದರು. ಸ್ವಲ್ಪ ಸಮಯದ ನಂತರ ಕ್ರಿ.ಶ. ೧೯೨೪ರ ಜನವರಿ ತಿಂಗಳಲ್ಲಿ ಮಹಾರಾಜರ ಸಂಬಂಧಿಯಾದ ಸರ್ದಾರ್ ಗೋಪಾಲರಾಜೆಯವರು ಖುದ್ದಾಗಿ ವೆಂಕಟಪ್ಪನವರನ್ನು ಭೇಟಿಯಾದರು. ಇವರಿಗೆ ಅಂಗಸಾಧನೆಯಲ್ಲಿ ಎಲ್ಲಿಲ್ಲದ ಆಸಕ್ತಿ. ಆದ ಕಾರಣ ತಮ್ಮ ಅಂಗವಿನ್ಯಾಸದ ಚಿತ್ರವೊಂದನ್ನು ಬರೆಸುವ ಸಲುವಾಗಿ ವೆಂಕಟಪ್ಪನವರನ್ನು ಭೇಟಿ ಮಾಡಿದರು. ಗೋಪಾಲ ರಾಜೆಯವರು ಆಡಳಿತಾಧಿಕಾರಿಯಾಗಿಯಲ್ಲದೆ, ಒಬ್ಬ ಸ್ನೇಹಿತರನಾಗಿ, ಹಿತೈಷಿಯಾಗಿಯಲ್ಲದೆ ವೆಂಕಟಪ್ಪನವರ ಅಭಿಮಾನಿಯೂ ಆಗಿದ್ದರು. ಗೋಪಾಲರಾಜೆಯವರು ಕೇಳಿದ ಅವರ ಅಂಗ ಚಿತ್ರವನ್ನು ಮಾಡಿಕೊಡುವುದಾಗಿ ವೆಂಕಟಪ್ಪನವರು ಒಪ್ಪಿದರು. ಅದೇ ವರ್ಷ ಮೇ ತಿಂಗಳಲ್ಲಿ ಪ್ರಾರಂಭಿಸಿ ಜೂನ್ ತಿಂಗಳ ಮೊದಲ ವಾರದಲ್ಲಿ ಈ ಚಿತ್ರ ರಚನೆಯನ್ನು ಮುಗಿಸಿದರು. ಗೋಪಾಲ ರಾಜೆಯವರು ಈ ಚಿತ್ರವನ್ನು ಕಂಡು ಬಹು ಸಂತೋಷಪಟ್ಟು ಒಡೆಯರ್‌ರವರಿಗೂ ಈ ಚಿತ್ರವನ್ನು ತೋರಿಸಿದರು. ಇದನ್ನು ಕಂಡ ಒಡೆಯರ್ ಬಹು ಪ್ರೀತಿಯ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಆಗ ವೆಂಕಟಪ್ಪನವರು ತಾವೇ ಖುದ್ದು ಈ ಚಿತ್ರವನ್ನು ಅರಸರ ಬಂಗಲೆಗೆ ಒಯ್ದು ಇದನ್ನು ಇಡುವ ಸ್ಥಳವನ್ನು ಸೂಚಿಸಿದರು. ಇದರ ಜೊತೆಗೆ ತಾವು ರಚನೆ ಮಾಡಲಾಗಿದ್ದ ಉದಕಮಂಡಲದ ನಿಸರ್ಗ ಚಿತ್ರವನ್ನು ಸಹ ಅರಸರಿಗೆ ಒಪ್ಪಿಸಿದರು. ಇದಾದ ಸ್ವಲ್ಪ ದಿನದಲ್ಲಿಯೇ ವೆಂಕಟಪ್ಪನವರಿಗೆ ಕರೆಯೊಂದು ಬಂದಿತು. ಮಹಾರಾಜರ ಆಪ್ತ ಕಾರ್ಯದರ್ಶಿಯಾದ ತಂಬೂಚೆಟ್ಟಿಯವರನ್ನು ವೆಂಕಟಪ್ಪನವರ ಸ್ಟುಡಿಯೋಗೆ ಕಳಿಸಿ ಅರಮನೆಯ ದಿವಾನಖಾನೆಯಲ್ಲಿ ವೃತ್ತಾಕಾರದ ಚೌಕಟ್ಟುಗಳಲ್ಲಿ ಪ್ಲಾಸ್ಟರ್ ಆಫ್ ಪ್ಯಾರಿಸ್ ಮಾಧ್ಯಮದಲ್ಲಿ ಯಾವುದಾದರೂ ಉಬ್ಬು ಶಿಲ್ಪಗಳನ್ನು ಮಾಡುವಂತೆ ಅರಸರ ಅಪ್ಪಣೆಯಾಗಿದೆ ಎಂದು ಹೇಳಿದರು.


ಸೆಪ್ಟಂಬರ್ ಎಂಟನೇ ತಾರೀಖು ವೆಂಕಟಪ್ಪನವರು ಅರಮನೆಗೆ ಹೋಗಿ ಆ ಚೌಕಟ್ಟುಗಳನ್ನು ನೋಡಿ ಬಂದರು. ಆಗ ಅವರ ಜೊತೆಗಿದ್ದ ತಂಬೂಚೆಟ್ಟಿ "ಈ ಎಲ್ಲಾ ಶಿಲ್ಪಕಲೆಗೆ ಎಷ್ಟು ವೆಚ್ಚ ತಗುಲಬಹುದು ?" ಎಂದು ಪ್ರಶ್ನಿಸಿದರು. ಅದಕ್ಕೆ ವೆಂಕಟಪ್ಪನವರು "ಮೊದಲೇ ಎಷ್ಟೆಂದು ಹೇಳಲಾಗದು, ಮೊದಲು ಕೆಲಸ ಮಾಡಿ ಮುಗಿಸುತ್ತೇನೆ, ಆನಂತರ ಮಹಾರಾಜರು ಕೊಟ್ಟಷ್ಟೇ ನನಗೆ ಸಂತೋಷ" ಎಂದು. ಆಗ ತಂಬೂಚೆಟ್ಟಿಯವರು "ಯಾವಾಗ ಕೆಲಸವನ್ನು ಪ್ರಾರಂಭಿಸುವಿರಿ?" ಎಂದು ವೆಂಕಟಪ್ಪನವರಿಗೆ ಕೇಳಿದಾಗ "ಈಗ ನಾನು ಕೂಚ್‌ಬಿಹಾರ್ ಮಹಾರಾಜರ ಕಿರುಚಿತ್ರದ ಕೆಲಸದಲ್ಲಿ ತೊಡಗಿದ್ದೇನೆ. ಅದು ಮುಗಿಯುವ ವರೆವಿಗೂ ಈ ಕೆಲಸವನ್ನು ಆರಂಭಿಸಲಾರೆ, ಇದಾದ ನಂತರ ನಾನು ಅರಮನೆಯ ಕೆಲಸವನ್ನು ಪ್ರಾರಂಭಿಸುವೆನು" ಎಂದು ನೇರವಾಗಿ ಹೇಳಿದರು.



ತಂಬೂಚೆಟ್ಟಿಯವರಿಗೆ ವೆಂಕಟಪ್ಪನವರ ಮಾತಿನ ಧಾಟಿ ಕುಪಿತಗೊಳಿಸಿತ್ತು. "ನಾನು ಮಹಾರಾಜರ ಆಪ್ತ ಕಾರ್ಯದರ್ಶಿ, ಅದರಲ್ಲೂ ಮಹಾರಾಜರು ಒಪ್ಪಿಸಿದ ಕೆಲಸವನ್ನು ಎಷ್ಟು ಉದ್ಧಟತನದಿಂದ ಸ್ವೀಕರಿಸುತ್ತಾರೆ" ಎಂದು ಕುಪಿತಗೊಂಡು, ಇರಲಿ ಇವನಿಗೆ ಮಾಡಿಸುತ್ತೇನೆಂದು ಮಹಾರಾಜರ ಬಳಿಗೆ ಹೋಗಿ ಅಲ್ಲಿ ನಡೆದ ಸಂಗತಿಯನ್ನು ಸವಿಸ್ತಾರವಾಗಿ ಮಹಾರಾಜರಿಗೆ ಹೇಳಿದರು. ಇದರಿಂದ ಮಹಾರಾಜರು ಕುಪಿತಗೊಳ್ಳುವರು ಎಂದು ಭಾವಿಸಿದ್ದ ತಂಬೂಚೆಟ್ಟಿಯವರಿಗೆ ಅಚ್ಚರಿ ಕಾದಿತ್ತು. ಈ ವಿಷಯವನ್ನು ಕೇಳಿದ ರಾಜರು ನಗುತ್ತ "ವೆಂಕಟಪ್ಪ ಈ ರೀತಿ ಹೇಳಿದನೆ? ಸಂತೋಷ. ಅವನಿಗೆ ಮನಸ್ಸಿಗೆ ಬಂದ ಸಮಯದಲ್ಲಿ ಚಿತ್ರವನ್ನು ರಚಿಸಲೆಂದು ತಿಳಿಸಿ" ಎಂದು ರಾಜರು ನಗುತ್ತಲೇ ಉತ್ತರಿಸಿದರು. ರಾಜರಿಗೂ ಸಹ ವೆಂಕಟಪ್ಪನವರ ಮನೋಭಾವ ತಿಳಿದಿತ್ತು. ಅವರ ಹಿರಿಮೆಯನ್ನು ರಾಜರೇ ಗುರುತಿಸಿದ್ದರು.

ಕ್ರಿ.ಶ. ೧೯೨೬ ಜನವರಿ ತಿಂಗಳಲ್ಲಿ ಸರ್ ಆಲಿಬಿಯನ್ ಬ್ಯಾನರ್ಜಿ ಬಂಗಾಳಿ ಮೂಲದವರು ಮೈಸೂರು ದಿವಾನರಾಗಿ ಕೆಲಸ ನಿರ್ವಹಿಸುವಾಗ ಅವರ ಪರಿಚಿತರಾಗಿದ್ದ ಕೂಚ್‌ಬಿಹಾರ್ ಸಂಸ್ಥಾನದ ಮಹಾರಾಣಿ ಮೈಸೂರು ಅರಮನೆಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಮಹಾರಾಜರ ದಂತ ಫಲಕದ ಜಲವರ್ಣಚಿತ್ರವನ್ನು ಕಂಡು ಸಂತಸದಿಂದ ತನ್ನ ಕಾಲಹಸ್ತರಾಗಿದ್ದ ಪತಿಯವರ ಚಿತ್ರ ಒಂದನ್ನು ಇದೇ ಮಾದರಿಯಲ್ಲಿ ಮಾಡಿಸಿಕೊಡುವಂತೆ ಕೇಳಿದಳು. ಆದರೆ ಕೆ. ವೆಂಕಟಪ್ಪನವರು ಆ ಮಹಾರಾಜರನ್ನು ನೋಡಿರದ ಕಾರಣ ಅದಕ್ಕೆ ಒಪ್ಪಿಗೆ ನೀಡಲಿಲ್ಲ. ಆಗ ಯುವರಾಜರಾಗಿದ್ದ ನರಸಿಂಹರಾಜ ಒಡೆಯರ್‌ರವರ ಒತ್ತಾಯದ ಮೇಲೆ ಅರೆಮನಸ್ಸಿನಿಂದ ಒಪ್ಪಿ ಕೂಚ್‌ಬಿಹಾರ್ ಮಹಾರಾಣಿಯ ಗಂಡನ ಭಾವಚಿತ್ರವನ್ನು ತರಿಸಿಕೊಂಡರು. ಆ ಮಹಾರಾಜರ ಎರಡೂ ಭಾವಚಿತ್ರಗಳನ್ನು ರಚಿಸಿದರು.

ಒಂದು ಭಾರತೀಯ ಉಡುಪನ್ನು ಧರಿಸಿರುವುದು, ಮತ್ತೊಂದು ಪಾಶ್ಚಾತ್ಯ ಉಡುಪನ್ನು ಧರಿಸಿರುವಂತೆ ಎರಡರ ಪೈಕಿ ಭಾರತೀಯ ಉಡುಪನ್ನು ಧರಿಸಿರುವ ಭಾವಚಿತ್ರವನ್ನು ಒಪ್ಪಿಕೊಂಡರು. ಮತ್ತೊಂದು ಭಾವ ಚಿತ್ರದಲ್ಲಿ ಸ್ವಲ್ಪಮಟ್ಟಿನ ತಿದ್ದುಪಡಿಗಳನ್ನು ಸೂಚಿಸಿದರು. ಅದರಂತೆಯೇ ಕೆ. ವೆಂಕಟಪ್ಪನವರು ಆ ಅಂಶಗಳನ್ನು ತಿದ್ದುಪಡಿ ಮಾಡಿದರು. ಅದಾದ ಮೇಲೆ ಮತ್ತೊಂದು ಮಾರ್ಪಾಡು ಮಾಡಬೇಕೆಂದು ತಿಳಿಸಿದರು. ಅದು ಮೂಲ ಭಾವಚಿತ್ರವನ್ನು ತಿರುಚುವಂತಿತ್ತು. ಇದಕ್ಕೆ ವೆಂಕಟಪ್ಪನವರು ಒಪ್ಪಲಿಲ್ಲ. ಇದರಿಂದ ಆಕೆ ಮೊದಲು ಕೊಡುವುದಾಗಿ ಒಪ್ಪಿದ್ದ ಸಂಭಾವನೆಗಿಂತ ಕಡಿಮೆ ಸಂಭಾವನೆಯನ್ನು ಕೊಡುವುದಾಗಿ ತಿಳಿಸಿದರು. ಇದರಿಂದ ಕುಪಿತಗೊಂಡ ವೆಂಕಟಪ್ಪನವರು "ನಿಮಗೆ ಈ ಚಿತ್ರವನ್ನು ಕೊಡುವುದಿಲ್ಲ, ಅದು ನನ್ನಲ್ಲಿಯೇ ಇರಲಿ" ಎಂದು ಆನಂತರ ಆಕೆಯ ಬೇಡಿಕೆಯಾಗಲಿ, ಯುವರಾಜರ




ಒತ್ತಾಯವಾಗಲಿ ಯಾವುದೂ ಫಲಕಾರಿಯಾಗಲಿಲ್ಲ. ಆ ಚಿತ್ರ ವೆಂಕಟಪ್ಪನವರ ಬಳಿಯಲ್ಲಿಯೇ ಉಳಿಯಿತು. ಹಲವು ವರ್ಷಗಳ ನಂತರ ಮದರಾಸಿನ ರಾಜ್ಯಪಾಲರು ಆ ಚಿತ್ರವನ್ನು ಇಷ್ಟಪಟ್ಟ ಕಾರಣ ಅವರ ಅಪೇಕ್ಷೆಯಂತೆ ಈ ಚಿತ್ರವನ್ನು ಮದರಾಸ್ ನ್ಯಾಷನಲ್ ಆರ್ಟ್ ಗ್ಯಾಲರಿಗೆ ಉಚಿತವಾಗಿ ನೀಡಿದರು. ಇದು ಅವರ ಹಿರಿಮೆ, ಸ್ವಾಭಿಮಾನ, ಉದಾರ ಗುಣವನ್ನು ತೋರಿಸುತ್ತದೆ.

ಕ್ರಿ.ಶ. ೧೯೨೬ರ ಜನವರಿ ತಿಂಗಳಲ್ಲಿ ವೆಂಕಟಪ್ಪನವರು ರುದ್ರಪ್ಪ ಎಂಬ ವೀಣೆಯನ್ನು ಮಾಡುವ ಬಡಗಿಯನ್ನು ಕರೆಸಿ ಶಾಸ್ತ್ರಶುದ್ಧ ವೀಣೆಯನ್ನು ಮಾಡಿಸಿಕೊಳ್ಳುವ ಆಸೆಯಿಂದ ಅದರ ಅಳತೆ, ಯಾವ ರೂಪದಲ್ಲಿ ಅದು ಬರಬೇಕೆಂಬುದನ್ನು ತಿಳಿಸಿದರು. ಅದನ್ನು ಒಪ್ಪಿಕೊಂಡು ರುದ್ರಪ್ಪ ಕೆಲವೇ ದಿನಗಳಲ್ಲಿ ವೀಣೆಯೊಂದನ್ನು ತಯಾರಿಸಿಕೊಂಡು ಬಂದನು. ಅದರಿಂದ ವೆಂಕಟಪ್ಪನವರು ತುಂಬಾ ಸಂತಸಗೊಂಡು ಐವತ್ತು ರೂಪಾಯಿಯನ್ನು ರುದ್ರಪ್ಪನಿಗೆ ನೀಡಿದರು. ಆ ವೀಣೆಯನ್ನು ರುದ್ರಪ್ಪರ ಮುಂದೆ ನುಡಿಸಿ ನೋಡಿದರು. ಆಗ ರುದ್ರಪ್ಪ ವೀಣೆಯನ್ನು ನನಗೂ ಕಲಿಸಿ ಎಂದು ವೆಂಕಟಪ್ಪನವರ ಬಳಿ ಕೇಳಿಕೊಂಡರು. ಅದಕ್ಕೆ ಒಪ್ಪಿದ ವೆಂಕಟಪ್ಪನವರು "ಬುಧವಾರ ೧೯೨೬, ಜನವರಿ ಹದಿನೇಳನೇ ತಾರೀಖು ಒಳ್ಳೆಯ ದಿನವಿದೆ, ಅದು ಸಂಗೀತಾಭ್ಯಾಸಕ್ಕೆ ಸರ್ವಶ್ರೇಷ್ಠವಾದ ದಿನ. ಅಂದಿನಿಂದಲೇ ಪಾಠ ಪ್ರಾರಂಭಿಸೋಣ" ಎಂದರು. ಬಹುಶಃ ಇವರ ಜೀವನದಲ್ಲಿ ಇವರೆ ಪ್ರಥಮ ಶಿಷ್ಯರಾದ ಅದೃಷ್ಟವಂತರು.

ಚಿತ್ರಕಲೆಯಲ್ಲಿಯೂ ಪ್ರಥಮವಾಗಿ ಇಬ್ಬರು ಶಿಷ್ಯರನ್ನು ಪಡೆದರು. ಆಂಧ್ರ ಮೂಲದ ರಾಮಮೋಹನ ಶಾಸ್ತ್ರಿ ಹಾಗೂ ಆನಂದಮೋಹನ ಶಾಸ್ತ್ರಿ ಎಂಬ ಸಹೋದರರು ೧೯೨೬ ಮಾರ್ಚ್ ತಿಂಗಳ ಇಪ್ಪತ್ತಾರನೆಯ ತಾರೀಖು ಮೈಸೂರಿಗೆ ಬಂದು ವೆಂಕಟಪ್ಪನವರನ್ನು ಕಂಡರು. ಇವರನ್ನು ಸ್ಟುಡಿಯೋಗೆ ಕರೆದೊಯ್ದು ಆನಂತರ ಮೈಸೂರು ಹೋಟೆಲ್ ಎಂಬಲ್ಲಿ ಇವರಿಗೆ ವಸತಿ, ಊಟವನ್ನು ಏರ್ಪಾಡು ಮಾಡಿಸಿದರು. ಆ ತಿಂಗಳ ಮೂವತ್ತನೇ ತಾರೀಖು ಇವರಿಗೆ ಕಲಾಶಿಕ್ಷಣವನ್ನು ಪ್ರಾರಂಭಿಸಿದರು.


ರಾಮಮೋಹನ್ ಎಂಬ ಹಿರಿಯ ಸಹೋದರ ಕೆಲವು ದಿನಗಳ ನಂತರ ಮಚಲಿಪಟ್ಟಣಕ್ಕೆ ಹಿಂದಿರುಗಿ ಅಲ್ಲಿನ ಕಲಾಶಾಲೆಯಲ್ಲೇ ಶಿಕ್ಷಕನಾಗಿ ಸೇರಿಕೊಂಡನು. ಆನಂತಮೋಹನ್ ಮಾತ್ರ ಹಲವಾರು ತಿಂಗಳುಗಳ ಕಾಲ ವೆಂಕಟಪ್ಪನವರ ಬಳಿಯಲ್ಲಿಯೇ ಇದ್ದು, ಅವರಲ್ಲಿ ಕಲಾಭ್ಯಾಸವನ್ನು ಪಡೆದನು. ವೆಂಕಟಪ್ಪನವರು ಇವನನ್ನು ತುಂಬಾ ಹಚ್ಚಿಕೊಂಡಿದ್ದರು. ಕೆಲವು ದಿನಗಳ ನಂತರ ಆನಂದಮೋಹನ್‌ರ ಆರೋಗ್ಯದಲ್ಲಿ ವ್ಯತ್ಯಾಸವಾದ್ದರಿಂದ ಮದರಾಸಿಗೆ ಹೋದರು. ಅಲ್ಲಿಯೇ ಕ್ಷಯರೋಗದಿಂದ ಬಳಲಿ ೧೯೨೯ರಲ್ಲಿ ತೀರಿಕೊಂಡರು. ಈ ವಿಷಯದಿಂದ ವೆಂಕಟಪ್ಪನವರಿಗೆ ತನ್ನ ಮಗನನ್ನು ಕಳೆದುಕೊಂಡಂತಹ ಸಂಕಟವಾಯಿತು. ಇದರಿಂದ ವೆಂಕಟಪ್ಪನವರು ಕುಗ್ಗಿದರು.



ಆನಂದಮೋಹನ ಶಾಸ್ತ್ರಿಯನ್ನು ಕಳೆದುಕೊಂಡ ವೆಂಕಟಪ್ಪನವರು ಒಂದು ಕಲಾಶಾಲೆಯನ್ನು ತೆರೆಯಬೇಕು, ಅಲ್ಲಿಯ ವಿದ್ಯಾರ್ಥಿಗಳಿಗೆ ಚಿತ್ರಕಲೆ ಹಾಗೂ ಸಂಗೀತ ಎರಡರ ಅಭ್ಯಾಸವಾಗುವಂತೆ ಮಾಡಬೇಕೆಂದುಕೊಂಡು ಆಗ ಅವರ ಹಲವಾರು ಸ್ನೇಹಿತರ, ಹಿತೈಶಿಗಳ ಸಲಹೆಗಳನ್ನು ಪಡೆದು ಮೈಸೂರಿಗಿಂತ ಜನಸಂಖ್ಯೆಯಲ್ಲಿ ವಾಣಿಜ್ಯವಾಗಿ ಬೆಂಗಳೂರೇ ಉತ್ತಮ, ಇದರಿಂದ ಅಲ್ಲಿಯೇ ಶಾಲೆಯನ್ನು ತೆರೆಯಬೇಕೆಂದು ಇಚ್ಛಿಸಿ ಇದಕ್ಕಾಗಿ ೧೯೨೬ರ ಏಪ್ರಿಲ್ ತಿಂಗಳಲ್ಲಿ ಬೆಂಗಳೂರಿನಲ್ಲಿ ಮಲ್ಲೇಶ್ವರಂನಲ್ಲಿ ವೈ.ವಿ. ಕೃಷ್ಣಮೂರ್ತಿಯವರಿಗೆ ಸೇರಿದ ಎರಡು ನಿವೇಶನಗಳನ್ನು ಅಳಿಯ ಕೃಷ್ಣರಾಯರ ಮೂಲಕ ಕೊಂಡುಕೊಂಡರು. ಏಪ್ರಿಲ್ ತಿಂಗಳ ಹದಿನೈದನೆಯ ದಿನ ಆ ನಿವೇಶನಗಳು ವೆಂಕಟಪ್ಪನವರ ಹೆಸರಿಗೆ ದಾಖಲಾದವು. ಆದರೆ ವೆಂಕಟಪ್ಪನವರಿಗೆ ಬೇಗನೆ ಕಲಾಶಾಲೆಯನ್ನು ಕಟ್ಟುವ ಆಲೋಚನೆಯೂ ಅವರಿಗಿರಲಿಲ್ಲ. ಮೈಸೂರನ್ನು ಬಿಡುವ ಪರಿಸ್ಥಿತಿಯೂ ಅವರಿಗಿರಲಿಲ್ಲ. ಮುಂದೆ ಭವಿಷ್ಯದಲ್ಲಿ ಕಟ್ಟೋಣ ಎಂಬ ಸಂಕಲ್ಪವನ್ನು ಹೊಂದಿದ್ದರು. ಇದಾದ ಮುಂದಿನ ತಿಂಗಳೇ ೧೯೨೬ ಮೇ ಒಂಭತ್ತರಂದು ಊಟಿಗೆ ಪ್ರಯಾಣ ಬೆಳೆಸಿದರು.


ಬೇಸಿಗೆಯಲ್ಲಿ ವಿಪರೀತ ಬಿಸಿಲಿದ್ದ ಕಾರಣ ರಾಜರೂ, ಶ್ರೀಮಂತರೂ, ಅಧಿಕಾರಿಗಳು ಊಟಿಯ ತಣ್ಣನೆ ಹವೆಯಿಂದಾಗಿ ಊಟಿ(ಉದಕಮಂಡಲಂ)ಗೆ ಭೇಟಿ ನೀಡುತ್ತಿದ್ದುದರಿಂದ ಊಟಿ ಬೇಸಿಗೆಯ ತಾಣವೆಂದೇ ಪ್ರಸಿದ್ಧವಾಗಿತ್ತು. ಆದ್ದರಿಂದ ದೇಶ ವಿದೇಶಗಳಿಂದ ಪ್ರವಾಸಿಗರು ಬಂದು ಇಲ್ಲಿಯೇ ಬೇಸಿಗೆ ದಿನಗಳನ್ನು ಕಳೆಯುತ್ತಿದ್ದರು. ಅಲ್ಲಿಯ ಪ್ರಕೃತಿ ಸೌಂದರ್ಯ ವಿಶೇಷ ಆಕರ್ಷಣೀಯವಾಗಿತ್ತು. ವೆಂಕಟಪ್ಪನವರಿಗೂ ಇಲ್ಲಿಯ ಗುಡ್ಡ, ಬೆಟ್ಟ, ಕಾಡು, ನೀಲಾದ್ರಿ ಶ್ರೇಣಿ, ನೀಲಗಿರಿ ಮರಗಳು ಹಾಗೂ ಕಾಡು ಹೂವುಗಳು ಎಲ್ಲವೂ ನೋಡುಗರ ಮನ ಸೆಳೆದಿದ್ದವು. ೧೯೨೬ ಅಕ್ಟೋಬರ್ ಇಪ್ಪತ್ತನೇ ತಾರೀಖು ಊಟಿಗೆ ಬಂದರು. ಇಲ್ಲಿಗೆ ಬಂದಿರುವ ಉದ್ದೇಶ ಬೇಸಿಗೆಯ ನೆಪವಾದರೂ ಮೂಲ ಉದ್ದೇಶ ಇಲ್ಲಿಯ ಪ್ರಕೃತಿ ಸೌಂದರ್ಯದ ವಿವಿಧ ಭಂಗಿಗಳನ್ನು ಜಲವರ್ಣದಲ್ಲಿ ಚಿತ್ರಿಸುವುದಾಗಿತ್ತು. ಮತ್ತವರ ಜೊತೆ ವೀಣೆಯನ್ನು ಕೊಂಡೊಯ್ದಿದ್ದರು. ಬೆಳಗ್ಗೆ ಎಲ್ಲ ಊಟಿಯನ್ನು ಸುತ್ತಿಕೊಂಡು ನಿಸರ್ಗದ ಮಡಿಲಲ್ಲಿ ಪ್ರಕೃತಿಯ ಚಿತ್ರಗಳನ್ನು ರಚಿಸುತ್ತಿದ್ದರೆ, ರಾತ್ರಿಯ ವೇಳೆ ಸಾವಧಾನವಾಗಿ ಕುಳಿತು ವೀಣೆಯ ಅಭ್ಯಾಸವನ್ನು ಮಾಡುತ್ತಿದ್ದರು. ಈ ಸಂಗತಿ ಆ ವ್ಯಕ್ತಿಯ ಕಲಿಕೆ ಆಸಕ್ತಿಯನ್ನು ತಿಳಿಸುತ್ತದೆ. ತಾವು ಎಲ್ಲಿಯೇ ಇರಲಿ, ಯಾವ ಪರಿಸ್ಥಿತಿಯಲ್ಲೇ ಇರಲಿ, ಕಲಿಯಬೇಕು, ಹೊಸದನ್ನು ಅನ್ವೇಷಿಸಬೇಕೆಂಬ ತುಡಿತ ಇವರಲ್ಲಿ ನಾವು ಕಾಣಬಹುದು.

ಊಟಿಯಲ್ಲಿ ವೆಂಕಟಪ್ಪನವರಿಗೆ ತುಂಬಾ ನೆಚ್ಚಿನ ಸ್ಥಳವೆಂದರೆ ಎಲ್ಕ್–ಹಿಲ್ ಎನ್ನುವುದು. ಇಲ್ಲಿ ಕುಳಿತು ಸೂರ್ಯೋದಯ, ಮಧ್ಯಾಹ್ನದ ಸುಡುಬಿಸಿಲು, ಸಂಜೆ, ರಾತ್ರಿ, ಮಳೆ, ಮೋಡಗಳು ಕವಿತಿರುವುದು



ಹೀಗೆ ಹಲವಾರು ಪ್ರಕೃತಿಯ ವಿವಿಧ ವೈಪರೀತ್ಯಗಳನ್ನು ತಮ್ಮ ಜಲವರ್ಣದಲ್ಲಿ ಹಿಡಿದಿಡಲು ಪ್ರಯತ್ನಿಸಿದ್ದಾರೆ. ತಾವು ಕಂಡ, ನೋಡಿದ ಸೊಬಗನ್ನು ನೋಡಿ, ಆನಂದಿಸಿ, ಅನುಭವಿಸಿ, ಅಧ್ಯಯನಕ್ಕೆ ಒಳಪಡಿಸಿ ಚಿತ್ರಗಳನ್ನು ಮುಂಜಾನೆಯಿಂದ ಮಧ್ಯರಾತ್ರಿಯವರೆವಿಗೂ ಪ್ರಕೃತಿಯ ಭವ್ಯ ವ್ಯತ್ಯಾಸವನ್ನು ವರ್ಣಚಿತ್ರಗಳ ಮುಖೇನ ಹಿಡಿದಿಡುವ ಪ್ರಯತ್ನವನ್ನು ವೆಂಕಟಪ್ಪನವರು ಊಟಿಯಲ್ಲಿ ಮಾಡಿದರು. ಈ ಚಿತ್ರಗಳು ಅವರಿಗೆ ತುಂಬ ಪ್ರೀತಿಯನ್ನು ನೀಡಿದವು. ಅವುಗಳನ್ನು ಯಾರಿಗೂ ಮಾರಲು ವೆಂಕಟಪ್ಪನವರು ಇಚ್ಛಿಸಲಿಲ್ಲ. ತಾವು ಬೆಂಗಳೂರಿನಲ್ಲಿ ಕಲಾಶಾಲೆಯನ್ನು ತೆರೆದ ಮೇಲೆ ಈ ಕೃತಿಗಳು ವಿದ್ಯಾರ್ಥಿಗಳಿಗೆ ಉಪಯೋಗವಾಗಲೆಂದು ಕಾದಿರಿಸಲಾಯಿತು. ಇದೇ ಸಮಯದಲ್ಲಿ ತಮ್ಮ ನೆಚ್ಚಿನ ಗುರುಗಳಾದ ಶೇಷಣ್ಣನವರು ೧೯೨೬ ರ ಜುಲೈ ಇಪ್ಪತ್ತೈದನೆಯ ತಾರೀಖಿನಂದು ಸಾವನ್ನಪ್ಪಿದರೆಂಬ ಪತ್ರ ಮೈಸೂರಿನ ವೆಂಕಟಪ್ಪನವರ ಮಿತ್ರರಾದ ಸಿ. ಆನಂದರಾವ್ ಎಂಬುವವರಿಂದ ಬಂದಿತು. ಇದನ್ನು ಓದಿದ ತಕ್ಷಣ ದುಃಖ ಒಡಮೂಡಿತು. ತನ್ನನ್ನು ತಾನರಿಯದೆ ಕಲ್ಲೇ ಕರಗುವಂತೆ ಬಿಕ್ಕಿ ಬಿಕ್ಕಿ ಅಳುತ್ತ ಕಣ್ಣೀರಾಕಿದರು. ಅಲ್ಲಿಂದ ತಾವಿದ್ದ ಹೋಟಲ್ಲಿಗೆ ಬಂದು ತಲೆಯ ಮೇಲೆ ತಣ್ಣೀರು ಸುರಿದುಕೊಂಡು ಸಚೇಲ ಸ್ನಾನ ಮಾಡಿದರು. ವಿದ್ಯಾಗುರುಗಳೆಂದರೆ ತಂದೆಯ ಸಮಾನರೆನ್ನುವುದು ವೆಂಕಟಪ್ಪನವರ ಅಭಿಪ್ರಾಯ. ಅಂದು ಪೂರ್ತಿಯಾಗಿ ಉಪವಾಸವನ್ನಾಚರಿಸುತ್ತಾ, ಕಣ್ಣೀರ ಧಾರೆಯನ್ನು ಸುರಿಸುತ್ತಾ ತಾವು ಅವರೊಡನೆ ಕಳೆದ ದಿನಗಳನ್ನು ನೆನೆಯುತ್ತಿದ್ದರು. ಸಂಜೆ ಸುಮಾರು ಐದು ಗಂಟೆಗೆ ವೆಂಕಟಪ್ಪನವರ ಒಡನಾಡಿಯಾಗಿದ್ದ ನಂಜಪ್ಪ ಚಟ್ಟಿಯವರು ಬಂದು ಸಮಾಧಾನ ಮಾಡಿದರೂ ವೆಂಕಟಪ್ಪನವರ ದುಃಖ ನೆನೆಯುತ್ತಾ ಪೂರ್ತಿಯಾಗಿ ಬಳಲಿದರು. ಇದಾದ ಮರುದಿನ ಆ ದುಃಖವನ್ನಿರಿಸಿಕೊಂಡು ಚಿತ್ರಾಭ್ಯಾಸದಲ್ಲಿ ತೊಡಗಿದರು. ವೆಂಕಟಪ್ಪನವರು ೧೯೨೬ ಅಕ್ಟೋಬರ್ ತಿಂಗಳಲ್ಲಿ ಮತ್ತೆ ಮೈಸೂರಿಗೆ ಹಿಂದಿರುಗಿದರು. ಇಲ್ಲಿಗೆ ಬಂದ ಮೇಲೆ ವೀಣಾಭ್ಯಾಸದ ಗೋಜಿಗೆ ಹೋಗದೆ ತಮ್ಮ ಸ್ಟುಡಿಯೋದಲ್ಲಿಯೇ ಚಿತ್ರಾಭ್ಯಾಸ ನಡೆಸಿದರು. ಅರಮನೆಯ ಅಂಭಾವಿಲಾಸ ಕೋಣೆಯ ಗೋಡೆಯ ಖಾಲಿ ಜಾಗಗಳಿಗೆ ಪ್ಲಾಸ್ಟರ್ ಆಫ್ ಪ್ಯಾರಿಸ್ ಶಿಲ್ಪಗಳನ್ನು ಮಾಡಲು ತಯಾರಿ ನಡೆಸಿದರು. ಈ ಸಂದರ್ಭದಲ್ಲಿ ಜೇಡಿಮಣ್ಣಿನಿಂದ ಮೊದಲು ಶಿಲ್ಪ ರಚಿಸಿಕೊಂಡು ಆನಂತರ ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ಎರಕ ಹೊಯ್ದು ಕೃತಿಗಳನ್ನು ನಿರ್ಮಿಸುವ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು.


೧೯೨೮ರ ಮಧ್ಯಭಾಗದ ಸುಮಾರಿಗೆ ಅರಮನೆಯ ಅಂಭಾವಿಲಾಸದಲ್ಲಿಯ ಗೋಡೆ ಫಲಕಗಳ ಕಾರ್ಯ ಮುಗಿಯುತ್ತಾ ಬಂದಿತು. ಇಲ್ಲಿ ಕಾಳಿದಾಸನ ಕೃತಿಯಲ್ಲಿಯಲ್ಲಿಯ ಶಾಕುಂತಲೆ ಆಶ್ರಮದಿಂದ ತೆರಳುವ ಸಮಯದಲ್ಲಿ ಜಿಂಕೆ ಅವಳ ಸೆರಗನ್ನು ಹಿಡಿದು ಬಿಡಲಾರದೆ ಎಳೆಯುತ್ತಿರುವುದು. ಈ



ಕೃತಿಯನ್ನು ಅಕ್ಟೋಬರ್ ೨೬ರಂದು ಮುಗಿಸಿ ೨೮ ರಂದು ಪಡಿಯಚ್ಚು ಸಿದ್ಧಪಡಿಸಲಾಯಿತು. ಮರುದಿನ ಮುಂಜಾನೆಯಿಂದ ಸಂಜೆಯವರೆವಿಗೂ ಊಟ, ನಿದ್ದೆ ಇಲ್ಲದೆ ದುಡಿದ ಮೇಲೆ ಪ್ಲಾಸ್ಟರ್ ಆಫ್ ಪ್ಯಾರಿಸ್ ಫಲಕ ಮೂಡಿ ಬಂದಿತು.

ಈ ಕೃತಿಯು ಮಹಾರಾಜರಿಂದ ಮೆಚ್ಚುಗೆಗೆ ಪಾತ್ರವಾಯಿತು. ಇದರ ನಡುವೆ ಮತ್ತೆ ಊಟಿಗೆ ಹೋಗಿ ಬಂದರು. ಸೆಪ್ಟಂಬರ್ ಇಪ್ಪತ್ತಮೂರರಂದು ಹಿಂದಿರುಗಿದ ಮೇಲೆ ಅರಮನೆ ಅಂಬಾವಿಲಾಸದ ಗೋಡೆಯ ಮೇಲೆ ಅಲಂಕರಿಸಲೆಂದು ದ್ವಿಆಯಾಮದ ಫಲಕಗಳ ಕಾರ್ಯದಲ್ಲಿ ತೊಡಗಿದರು. ಸಿದ್ಧಾರ್ಥನ ರಾಜ್ಯ ಪರಿತ್ಯಾಗದ ಚಿತ್ರಣ ಈ ಕಾಲದಲ್ಲೇ ಸಿದ್ಧವಾಯಿತು. ಅಜಂತ ಗುಹೆಯಲಿನ ಭಿತ್ತಿ ಚಿತ್ರಗಳಲ್ಲೊಂದು ಬುದ್ದನ ಭಿಕ್ಷಾಟನೆ ಆಧರಿಸಿ ಒಂದು ಅರ್ಧಶಿಲ್ಪದ ಫಲಕವನ್ನು ಆರಂಭಿಸಿದ್ದು. ಮರುವರ್ಷ ಜನವರಿ ಇಪ್ಪತ್ತಾರನೇ ತಾರೀಖು ಮಹಾರಾಜರು ಅವರ ಬಾಲ್ಯದ ಗುರುಗಳಾದ ಭೀಮರಾಯರೆಂಬುವವರು ಅನಾರೋಗ್ಯದಿಂದ ಅರಮನೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಅವರು ತೀವ್ರವಾಗಿ ಅನಾರೋಗ್ಯದಿಂದ ಬಳಲುತ್ತಿದ್ದುದರಿಂದ ಅವರನ್ನು ತೀವ್ರನಿಗಾ ಘಟಕದಲ್ಲಿರಿಸಿ ಪಾಲನೆ ಮಾಡಲಾಗುತ್ತಿತ್ತು. ಆಗ ಮಹಾರಾಜರು ತಮ್ಮ ಗುರುಗಳನ್ನು ನೋಡಲೆಂದು ಬಂದು ಅವರನ್ನು ಗಮನಿಸಿದ ನಂತರ ವೆಂಕಟಪ್ಪನವರ ಸ್ಟುಡಿಯೋ ಸಹ ಅದೇ ಕಟ್ಟಡದ ಮೇಲೆ ಇದ್ದ ಕಾರಣ ಮಹಾರಾಜರು ಸ್ಟುಡಿಯೋಗೆ ಹೋಗುವ ಅಪೇಕ್ಷೆ ಪಟ್ಟರು. ಆಗ ವೆಂಕಟಪ್ಪನವರು ಇವರ ಆಗಮನವನ್ನು ಸಡಗರ, ಸಂಭ್ರಮದಿಂದ ಸ್ವಾಗತಿಸಿದರು. ಮಹಾರಾಜರು ವೆಂಕಟಪ್ಪನವರ ಸ್ಟುಡಿಯೋಗೆ ಭೇಟಿ ನೀಡಿದ ಸಮಯದಲ್ಲಿ ವೆಂಕಟಪ್ಪನವರ ಸಂತಸಕ್ಕೆ ಪಾರವೇ ಇರಲಿಲ್ಲ. ಸ್ವರ್ಗದ ಇಂದ್ರನೇ ಧರೆಗಿಳಿದು ಬಂದಂತಹ ಅನುಭವ ವೆಂಕಟಪ್ಪನವರಿಗಾಯಿತು. ಮಹಾರಾಜರು ಸ್ಟುಡಿಯೋಗೆ ಬಂದಾಗ ಪೂರ್ತಿಯಾಗದ ಶಿಲ್ಪಗಳ ಮೇಲೆ ಬೆಳಕಿನ ಪ್ರಭಾವದಿಂದ ನೆರಳು ಬೆಳಕಿನ ವೈಖರಿಯಿಂದಾಗಿ ಶಿಲ್ಪದಲ್ಲಿನ ಸೂಕ್ಷ್ಮ ಕೆತ್ತನೆ ಕಾಣುತ್ತಿತ್ತು. ಆ ಕೃತಿಗಳಲ್ಲಿ ಹೊಮ್ಮುತ್ತಿದ್ದ ಭಾವಸಂಪತ್ತನ್ನು ಕಂಡು ಮಹಾರಾಜರು ತುಂಬು ಹೃದಯದಿಂದ ವೆಂಕಟಪ್ಪನವರ ಕಾರ್ಯ ವೈಖರಿಯನ್ನು ಶ್ಲಾಘಿಸಿದರು.


ಪುನಃ ಪುನಃ ಸ್ಪರ್ಶಿಸಿ ಶಿಲ್ಪಗಳ ಅನುಭವವನ್ನು ಪಡೆಯುತ್ತ ಮಹಾರಾಜರು ಭಾವ ಪರವಶರಾದರು. ಇದಾದ ಕೆಲವು ತಿಂಗಳಲ್ಲಿ ಹಲವಾರು ಗಣ್ಯರು ವೆಂಕಟಪ್ಪನವರ ಸ್ಟುಡಿಯೋಗೆ ಭೇಟಿ ನೀಡಿದರು. ಅವರುಗಳಲ್ಲಿ ಪ್ರಮುಖವಾಗಿ ಮೈಸೂರು ಸಂಸ್ಥಾನದ ಯುವರಾಜರಾದ ನರಸಿಂಹರಾಜ ಒಡೆಯರ್, ಅಮೆರಿಕಾದ ಸುಪ್ರಸಿದ್ಧ ನರ್ತಕಿ ರಾಗಿಣಿದೇವಿ, ಗಾಯಕರಾದ ಅರಿಯಕ್ಕುಡಿ ರಾಮಾನುಜ ಅಯ್ಯಂಗಾರ್, ಖ್ಯಾತ ವಯಲಿನ್ ವಾದಕ ಮಾರುಂಗಪುರಿ ಗೋಪಾಲಕೃಷ್ಣ ಅಯ್ಯಂಗಾರ್, ವೇಣುವಾದನ ಪ್ರವೀಣರಾದ



ಬೆಂಗಳೂರಿನ ನರಸಿಂಗರಾವ್ ಇವರುಗಳೆಲ್ಲರೂ ವೆಂಕಟಪ್ಪನವರ ಶೃತಿ ವೀಣೆ, ಚಿತ್ರ ಶಿಲ್ಪಗಳನ್ನು ಕಂಡು ಮನಸೋತು ಪ್ರಶಂಸೆ ವ್ಯಕ್ತಪಡಿಸಿದರು.

೧೯೩೨ರ ಆಗಸ್ಟ್ ೨೧ ನೇ ತಾರೀಖಿನಂದು ಅರಮನೆಯ ಅಂಭಾವಿಲಾಸದಲ್ಲಿ ವೆಂಕಟಪ್ಪನವರು ಮಾಡಲಾಗಿದ್ದ ಮೈಸೂರು ಲಾಂಛನದ ಕುರಿತಾಗಿ ಚರ್ಚೆ ನಡೆಯುತ್ತಿತ್ತು. ಇವರು ಮಾಡಿದ ಫಲಕವು ಸೂಕ್ಷ್ಮ ಕೆತ್ತನೆಯಿಂದ ಕೂಡಿದ್ದರಿಂದ ಅದರ ಮೇಲೆ ಬಂಗಾರದ ಲೇಪನವನ್ನು ಮಾಡುವುದೋ? ಬೇಡವೋ? ಎಂಬ ಚರ್ಚೆ ನಡೆಯುತ್ತಿತ್ತು. ಆ ಸಂದರ್ಭದಲ್ಲಿ ಹಲವಾರು ವಿದ್ವಾಂಸರು ಬೇಡ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಆದರೆ ಮಹಾರಾಜರು "ವೆಂಕಟಪ್ಪನನ್ನು ಕೇಳಿ ಅವರು ಇಷ್ಟ ಪಟ್ಟಂತೆ ಮಾಡೋಣ" ಎಂದು ಅಪ್ಪಣೆ ಮಾಡಿದರು. ಒಡನೆ ಲೆಫ್ಟಿನೆಂಟ್ ಕರ್ನಲ್ ಆದ ಎ.ವಿ. ಸುಬ್ರಮಣ್ಯರಾಜೆಯವರು ವೆಂಕಟಪ್ಪನವರನ್ನು ಅಂಭಾವಿಲಾಸಕ್ಕೆ ಕರೆತಂದರು. ವೆಂಕಟಪ್ಪನವರು ಬಂದು ಅಲ್ಲಿಯ ಪರಿಸರ ಕಲಾಕೃತಿಯನ್ನು ಗಮನಿಸಿ ರಾಜಲಾಂಛನದಲ್ಲಿರುವ ಶರಭಕ್ಕೆ ಬಂಗಾರದ ಹೊಂದಿಕೆಯಿಲ್ಲದ ಹಾಗೆಯೇ ಇರುವುದು ಸೂಕ್ತ ಎಂದು ಅಭಿಪ್ರಾಯ ಪಟ್ಟು ಮೊದಲಿನ ತರವಿರುವುದೇ ಸೂಕ್ತ ಇಲ್ಲವಾದರೆ ಆ ಲೇಪನದಿಂದ ಅದರಲ್ಲಿಯ ಸೂಕ್ಷ್ಮ ಕೆತ್ತನೆ ಮುಚ್ಚಿ ಹೋಗುತ್ತವೆ ಇದರಿಂದ ಮೂಲಕೃತಿಗೆ ಅಪಚಾರ ಮಾಡಿದಂತಾಗುವುದೆಮದು ಹೇಳಿದರು.

೧೯೩೩ರ ಸೆಪ್ಟಂಬರ್ ತಿಂಗಳಲ್ಲಿ ಬಂಗಾಲ ಪ್ರಾಂತ್ಯದ ರಾಮಕೃಷ್ಣಾಶ್ರಮ 'ಉದ್ಬೋದನ' ಎಂಬ ಪತ್ರಿಕೆಯಲ್ಲಿ ವೆಂಕಟಪ್ಪನವರು ಮಾಡಿದ ಶಿಲ್ಪಗಳಾದ 'ಸಿದ್ಧಾರ್ಥನ ರಾಜ್ಯ ಪರಿತ್ಯಾಗ' ಮತ್ತು 'ರಾಮನಿಂದ ಹನುಮಂತನಿಗೆ ಅಂಗುಲಿ ಪ್ರಧಾನ' ಎಂಬ ಎರಡು ದ್ವಿಆಯಾಮದ ಶಿಲ್ಪಗಳ ಛಾಯಾಚಿತ್ರಗಳನ್ನು ಮುದ್ರಣ ದೋಷದಿಂದಾಗಿ ತಿರುಗುಮುರುಗಾಗಿ ರಾಮ ಜನಿವಾರ ಬಲಭುಜದ ಮೇಲೆ ಬಂದು ಎಡಗೈಯಿಂದ ಹನುಮಂತನಿಗೆ ಉಂಗುರ ನೀಡುವ ರೀತಿಯಲ್ಲಿತ್ತು. ಆಗ ಈ ಪತ್ರಿಕೆಯನ್ನು ನೋಡಿದ ವೆಂಕಟಪ್ಪನವರು ಕುಪಿತಗೊಂಡು ಆ ಪತ್ರಿಕೆಯ ಸಂಪಾದಕರಾದ ಸ್ವಾಮೀಜಿಯವರಿಗೆ ಪತ್ರ ಬರೆದರು. ಅದಕ್ಕೆ ಉತ್ತರವಾಗಿ ಸ್ವಾಮೀಜಿ ಮುಂದಿನ ಸಂಚಿಕೆಯಲ್ಲಿ ಕ್ಷಮೆ ಯಾಚಿಸಿದರು. ಆದರೂ ಅದರಿಂದ ಸಮಾಧಾನಗೊಳ್ಳದ ವೆಂಕಟಪ್ಪನವರು ಇದು ಕಲಾವಿದನಿಗೆ ಮಾಡಿದ ಅವಮಾನ, ಹಿಂದೂ ದೇವತೆಗಳಿಗೆ ಮಾಡಿದ ಅಪಚಾರವೆಂದು ಕಲ್ಕತ್ತೆಯ ಕೋರ್ಟ್‌ನಲ್ಲಿ ಸ್ವಾಮೀಜಿಯ ವಿರುದ್ಧವಾಗಿ ಮೊಕದ್ದಮೆಯನ್ನು ಸಲ್ಲಿಸಿದರು. ಅದಕ್ಕೆ ಕೋರ್ಟ್ ಸ್ವಾಮೀಜಿಯ ವರ್ತನೆಯನ್ನು ಖಂಡಿಸಿ ಒಂದು ರೂಪಾಯಿ ದಂಡವನ್ನು ವಿಧಿಸಿತು. ಇದರಿಂದ ವೆಂಕಟಪ್ಪನವರಿಗಿದ್ದ ಕಾಳಜಿ, ಜಾಗೃತಿ ಹಾಗೂ ಇದರಿಂದ ಸಮಾಜದ ಮೇಲಾಗುವಂತಹ ಪರಿಣಾಮದ ಅರಿವು ಆಗಲೇ ವೆಂಕಟಪ್ಪನವರಿಗಿತ್ತು.




ಕಲ್ಕತ್ತ ಕೋರ್ಟ್ ತೀರ್ಪನ್ನು ಕೇಳಲು ಬಂದಿದ್ದ ವೆಂಕಟಪ್ಪನವರು ಅವರ ಗುರುಗಳಾದ ಅವನೀಂದ್ರರನ್ನು ಹಾಗೂ ಪೆರ್ಸಿ ಬ್ರೌನ್‌ರವನ್ನು ಭೇಟಿಯಾಗಿ ನೇರವಾಗಿ ಬೆಂಗಳೂರಿಗೆ ಹಿಂದಿರುಗಿದರು. ಇಲ್ಲಿ ಇವರ ತಂಗಿಯ ಮನೆ ಇದ್ದರೂ ಸಹ ಮಾರ್ಡನ್ ಇಂಡಿಯನ್ ಲಾಡ್ಜ್ ಎಂಬಲ್ಲಿ ವಾಸ್ತವ್ಯ ಮಾಡಿದರು. ೧೯೩೮ ರ ನವೆಮಬರ್ ೧೦ ನೇ ತಾರೀಖು ಬೆಂಗಳೂರಿನ ನಿವೇಶನದಲ್ಲಿ ಗುದ್ದಲಿ ಪೂಜೆ ನೆರವೇರಿಸಿ ನಿಧಾನವಾಗಿ ಕಟ್ಟಡ ಕಾಮಗಾರಿಯನ್ನು ಪ್ರಾರಂಭಿಸಿದರು.

೧೯೪೦ ಆಗಸ್ಟ್ ೩ ರಂದು ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜರು ಬೆಂಗಳೂರಿನಲ್ಲಿ ತೀರಿಕೊಂಡರು. ಮಹಾರಾಜರು ತೀರಿಕೊಂಡಿದ್ದು ವೆಂಕಟಪ್ಪನವರಿಗೆ ಅತೀವ ದುಃಖವನ್ನು ತಂದಿತು. ರಾಜರ್ಷಿ, ಕಲಾರಸಿಕ, ಮಹಾನುಭಾವನೆಂದು ರಾಜ್ಯದ ಪ್ರಜೆಗಳೆಲ್ಲ ದುಃಖಪಟ್ಟರು. ಮೈಸೂರು ಅರಸೊತ್ತಿಗೆಯಲ್ಲಿ ಸುವರ್ಣಯುಗ ಅಂತ್ಯವಾಯಿತು ಎಂದು ಶೋಕಿಸಿದರು. ಮಹಾರಾಜರ ಶವಸಂಸ್ಕಾರ ಆಗಸ್ಟ್ ಆರನೇ ತಾರೀಖಿನಂದು ಮೈಸೂರಿನಲ್ಲೇ ನಡೆಯಿತು. ಇಲ್ಲಿ ವೆಂಕಟಪ್ಪನವರೂ ಸಹ ಪಾಲ್ಗೊಂಡಿದ್ದರು.

ನಾಲ್ವಡಿ ಕೃಷ್ಣರಾಜರು ಇದ್ದಾಗಿನಿಂದಲೇ ವೆಂಕಟಪ್ಪನವರ ಮೇಲೆ ಅರಮನೆಯಲ್ಲಿ ಪಿತೂರಿ ನಡೆಯುತ್ತಲೇ ಇದ್ದವು. ಈ ವಿಷಯ ವೆಂಕಟಪ್ಪನವರಿಗೂ ತಿಳಿದಿತ್ತು. ಆದರೆ ಮಹಾರಾಜರು ವೆಂಕಟಪ್ಪನವರ ಪರವಾಗಿದ್ದ ಕಾರಣ ಮಹಾರಾಜರು ಹಾಗೂ ವೆಂಕಟಪ್ಪನವರು ಇಬ್ಬರೂ ಸಹ ಬೇರೆಯವರ ಬಗ್ಗೆ ಅವರ ವಿಷಯಗಳ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಈ ಕಾರಣದಿಂದಾಗಿ ಅರಮನೆಯ ಅಧಿಕಾರಿಗಳು ಸಹ ವೆಂಕಟಪ್ಪನವರನ್ನು ಕಂಡರೆ ಭಯಪಡುತ್ತಿದ್ದರು. ಆದರೆ ಮಹಾರಾಜರು ತೀರಿಕೊಂಡ ನಂತರ ಆ ಎಲ್ಲ ಅಧಿಕಾರಿವರ್ಗ ಆಡಳಿತಾತ್ಮಕವಾಗಿ ವೆಂಕಟಪ್ಪನವರ ಮೇಲೆರಗಿದರು. ಇದರಿಂದ ಸ್ವಾಭಿಮಾನಿ ವೆಂಕಟಪ್ಪನವರಿಗೆ ಮೈಸೂರಿನಲ್ಲಿ ಉಳಿಯುವುದು ಕಸಿವಿಸಿಯಾಗಿ ವಿರಕ್ತಭಾವ ಮೂಡಿತು.

ಮಹಾರಾಜರು ಆಗಸ್ಟ್ ತಿಂಗಳಲ್ಲಿ ತೀರಿಕೊಂಡರು. ಇದಾದ ಒಂದು ತಿಂಗಳಲ್ಲಿ ವೆಂಕಟಪ್ಪನವರು ಮೈಸೂರು ಬಿಡುವ ಸಂದರ್ಭ ಬಂದಿತು. ಆಗಸ್ಟ್ ಇಪ್ಪತ್ಮೂರನೆ ತಾರೀಖಿನಂದು ಕೀರ್ತಿಶೇಷರು ಹಾಗೂ ರಾಮರಾವ್ ಎಂಬ ಅರಮನೆಯ ಆಡಳಿತವರ್ಗದವರು ವೆಂಕಟಪ್ಪನರ ಸ್ಟುಡಿಯೋಗೆ ಬಂದು ಅಂಭಾವಿಲಾಸಕ್ಕೆ ಮಾಡಿಸಲಾಗುತ್ತಿದ್ದ ಶಿಲ್ಪಗಳ ಫಲಕಗಳು ಸಾಕು, ಬೇರಾವ ಫಲಕಗಳು ಅರಮನೆಗೆ ಬೇಕಾಗಿಲ್ಲವೆಂದು ಹಾಗೂ ಹೆಚ್ಚಿನ ವಿವರಗಳಿಗೆ ಮಹಾರಾಜರ ಆಪ್ತ ಕಾರ್ಯದರ್ಶಿಯವರಾದ ತಂಬೂಚೆಟ್ಟಿಯವರನ್ನು ಕಾಣಬೇಕೆಂದು ತಿಳಿಸಿದರು. ವೆಂಕಟಪ್ಪನವರು ಹೋಗಿ ತಂಬೂಚೆಟ್ಟಿಯವರನ್ನು




ಕಂಡಾಗ "ದಸರಾ ಕಾರ್ಯಕ್ರಮ ಮುಗಿದ ಕೂಡಲೇ ಅರಮನೆಗೆ ಸೇರಿದ ಜಾಗದಲ್ಲಿರುವ ನಿಮ್ಮ ಸ್ಟುಡಿಯೋವನ್ನು ಖಾಲಿ ಮಾಡಿ" ಎಂದು ಹೇಳಿದರು. ವೆಂಕಟಪ್ಪನವರು ಅದಕ್ಕೆ ಪ್ರತಿಯಾಗಿ "ಮತ್ತೆ ಇನ್ನುಳಿದ ಶಿಲ್ಪದ ಫಲಕಗಳು" ಎಂದು ಪ್ರಶ್ನಿಸಿದಾಗ "ಈಗ ಸದ್ಯಕ್ಕೆ ಮಹಾರಾಜರಿಗೆ ಇದ್ಯಾವುದರ ಮೇಲೂ ಒಲವಿಲ್ಲ, ಮುಂದೆ ನೋಡೋಣ" ಎಂದು ಉಡಾಫೆ ಮಾತುಗಳನ್ನಾಡಿದರು.

ಇದಾದ ಮರುದಿನವೇ ವೆಂಕಟಪ್ಪನವರಿಗೆ ಮಹಾರಾಜರಿಂದ ಪತ್ರ ಬಂದಿತು. ಅದರಲ್ಲಿ ಈಗ ಮುಗಿಸಿರುವ ನಟರಾಜ ಶಿಲ್ಪವನ್ನು ಅಂಭಾವಿಲಾಸದಲ್ಲಿ ತಂದಿರಿಸಬೇಕು ಎಂದು ಸೂಚಿಸಲಾಗಿತ್ತು. ಆಗ ಮರುದಿನ ಸಂಜೆಯೇ ಈ ಕಾರ್ಯವನ್ನು ವೆಂಕಟಪ್ಪನವರು ನೆರವೇರಿಸಿದರು. ಇದಾದ ಬಳಿಕ ೧೯೪೦ ಅಕ್ಟೋಬರ್ ಐದರಂದು ತಮ್ಮ ಸ್ಟುಡಿಯೋವನ್ನು ಖಾಲಿ ಮಾಡಿಕೊಟ್ಟರು. ಮರುದಿನ ಮುಂಜಾನೆ ಮೈಸೂರಿನ ಋಣ ಮುಗಿಸಿಕೊಂಡು ಬಾಧಿತ ಮನಸ್ಸಿನ ನೋವಿನೊಂದಿಗೆ ಬೆಂಗಳೂರಿನ ಪರ್ವಕ್ಕೆ ಕಾಲಿಟ್ಟರು. ತಮ್ಮ ಹಿಂದಿನ ನಲಿವಿಗಿಂತಲೂ ಈಗಿನ ಅವರ ಮನಸ್ಸಿನ ಮೇಲಾದ ಆಘಾತ ಹೇಳತೀರದ್ದು. ಬೆಂಗಳೂರಿನ ಮಲ್ಲೇಶ್ವರಂನ ಪ್ರೌಢಶಾಲೆಯ ಬಳಿಯಿದ್ದ ಹೈಲ್ಯಾಂಡ್ ಹೋಟಲ್‌ನಲ್ಲಿ ವಸತಿ ಮಾಡಿ ತಾವು ಮೊದಲೇ ಗಳಿಸಿದ್ದ ನಿವೇಶನದಲ್ಲಿ ೧೯೩೮ರಲ್ಲಿಯೇ ಗುದ್ದಲಿ ಪೂಜೆ ಮಾಡಲಾಗಿತ್ತು. ಕಟ್ಟಡ ನಿರ್ಮಾಣದ ಹೊಣೆಯನ್ನು ಕಂಟ್ರಾಕ್ಟರ್ ಕೆ. ಸಿದ್ದಪ್ಪನೆಂಬುವವರಿಗೆ ಒಪ್ಪಿಸಲಾಗಿತ್ತು. ಬೆಂಗಳೂರಿಗೆ ಬಂದ ಬಳಿಕ ವೆಂಕಟಪ್ಪನವರು ಮನೆಯ ನಿರ್ಮಾಣದಲ್ಲಿ ಪೂರ್ತಿಯಾಗಿ ತೊಡಗಿಸಿಕೊಂಡರು. ಇದಾದ ಮೇಲೆ ಆಗಾಗ ಮೈಸೂರಿಗೆ ಬಂದು ಹೋಗುವ ಪರಿಪಾಠವಿತ್ತು. ಅದರೆ ಇರುತ್ತಿದ್ದುದು ಮಾತ್ರ ಕೆಲವೇ ಘಂಟೆಗಳು.

ಬೆಂಗಳೂರಿನ ಕೊನೆಯ ನೆನಪುಗಳು (೧೯೪೦ ರಿಂದ ೧೯೬೦)

ವೆಂಕಟಪ್ಪನವರು ಬೆಂಗಳೂರಿಗೆ ಬಂದ ಹೊಸದರಲ್ಲಿ ಮಲ್ಲೇಶ್ವರಂ ಹೈಲ್ಯಾಂಡ್ ಹೋಟೆಲ್‌ನಲ್ಲಿ ಉಳಿದಿದ್ದರು. ಇಲ್ಲಿ ಕೆಲಕಾಲ ಉಳಿದ ವೆಂಕಟಪ್ಪನವರು ತಮ್ಮ ನಿವೇಶನದ ಕಾಮಗಾರಿಯ ಕುರಿತು ಯೋಚಿಸಿ ಮೊದಲಿಗೆ ಆ ಕೆಲಸವನ್ನು ಹಂತ ಹಮತವಾಗಿ ಮುಗಿಸಲಾರಂಭಿಸಿದರು. ಇದರ ನಡುವೆಯೇ ಮೈಸೂರಿಗೆ ಹೋಗಿ ಕುಂಬಯ್ಯ ಎಂಬುವವರನ್ನು ಕಂಡು ತಮ್ಮ ಮನೆಯಲ್ಲಿದ್ದ ಸಾಮಾನುಗಳನ್ನು ತುಂಬಿ ಬೆಂಗಳೂರಿಗೆ ಕಳಿಸಿ ಎಂಬುದಾಗಿ ಹೇಳಿ ಮರಳಿ ಬೆಂಗಳೂರಿಗೆ ಬಂದು ಮಲ್ಲೇಶ್ವರಂನ ಏಳನೇ ಅಡ್ಡರಸ್ತೆಯಲ್ಲಿರುವ ೨೭೬ನೇ ನಂಬರಿನ ಮನೆ ಡಿ. ಕೃಷ್ಣಸ್ವಾಮಿ ಅಯ್ಯಂಗಾರ್‌ರವರಿಗೆ ಸೇರಿತ್ತು. ಅವರನ್ನು ಕಂಡು ಆ ಮನೆಯನ್ನು ಬಾಡಿಗೆಗೆ ಪಡೆದರು. ಆ ದಿನ ರಾತ್ರಿಯ ವೇಳೆಗೆ ಸಾಮಾನು ಲಾರಿ ಬೆಂಗಳೂರಿಗೆ ಹೊತ್ತು ತಂದಿತು. ಇದರ ನಡುವೆಯೇ ತಮ್ಮ ವಕೀಲ ಮಿತ್ರರಾದ




ಎಂ.ಎ. ದೊರೆಸ್ವಾಮಿ ಅಯ್ಯಂಗಾರರನ್ನು ಕಂಡು ಅರಮನೆಯಲ್ಲಿ ಅಧಿಕಾರಿಗಳಿಂದಾದ ಅನ್ಯಾಯವನ್ನು ಖಂಡಿಸಿ ಮಹಾರಾಜರ ಹಾಗೂ ಅರಮನೆಯ ಸಿಬ್ಬಂದಿಯ ಮೇಲೆ ಮೊಕದ್ದಮೆಯನ್ನು ಹೇರುವ ಕುರಿತ ಚರ್ಚೆ ನಡೆಯುತ್ತಲೇ ಇತ್ತು.

ಕೆಲ ದಿನಗಳ ನಂತರ ಮುನ್ಸಿಪಲ್ ಕಮಿಷನರ್‌ರಿಂದ ಮನೆ ಕಟ್ಟಲು ಅನುಮತಿ ದೊರೆಯಿತು. ೧೯೪೦ ಡಿಸೆಂಬರ್ ನಾಲ್ಕರಂದು ಮನೆ ಕಟ್ಟುವ ಕಾರ್ಯವನ್ನು ಪ್ರಾರಂಭಿಸಿದರು. ೧೯೪೧ ಜೂನ್ ನಾಲ್ಕರಂದು ಮನೆಯ ಗೃಹಪ್ರವೇಶವನ್ನು ನಡೆಸಿದರು. ಅಂದೇ ತಮ್ಮ ಸ್ಟುಡಿಯೋವನ್ನು ಪ್ರಾರಂಭಿಸಿ ಪ್ರತಿ ವರ್ಷ ಆ ದಿನದಂದು ಸ್ಟುಡಿಯೋದ ವಾರ್ಷಿಕೋತ್ಸವವನ್ನು ಆಚರಿಸುತ್ತಿದ್ದರು. ಆದರೆ ಆ ಮನೆಗೆ ಹೋದ ನಂತರ ಮನಃಶಾಂತಿ ಇಲ್ಲದಂತಾಯಿತು. ಇದರಿಂದಾಗಿ ಮನನೊಂದು ಗೋಪಾಲಕೃಷ್ಣರಾಯರನ್ನು ಕಂಡು ತಮ್ಮ ಜಾತಕ ಪರಿಶೀಲನೆ ಮಾಡಿಸಿದರು. ಕೆಲವು ದೋಷಗಳನ್ನು ಸೂಚಿಸಿ ಅದೇ ವರ್ಷ ಸೆಪ್ಟಂಬರ್ ಹದಿನೆಂಟರಂದು ಶಾಂತಿಗಾಗಿ ನಲ್ವತ್ತೆಂಟು ದಿನಗಳ ಕಾಲ ಪೂಜೆಯನ್ನು ಪ್ರಾರಂಭಿಸಿದರು. ಇದಾದ ಕೆಲವು ತಿಂಗಳ ನಂತರ ಬೆಂಗಳೂರಿನ ಸುಪ್ರಸಿದ್ಧ ವಕೀಲರಾಗಿದ್ದ ಎಂ.ಎ. ಗೋಪಾಲಸ್ವಾಮಿಯವರನ್ನು ಕಂಡು ಅರಮನೆಯ ಅಧಿಕಾರಿ ವರ್ಗ ಹಾಗೂ ಮಹಾರಾಜರ ವಿರುದ್ಧವೂ ಮೊಕದ್ದಮೆಯನ್ನು ಹೂಡಿದರು. ವಕಾಲತ್ತಿಗೆ ನೇಮಿಸಿದರು.

ಈ ಸಂಗತಿಗಳು ನಡೆದ ಕೆಲವು ತಿಂಗಳ ನಂತರ ಅವರ ಮನಸ್ಸು ನಿರಾಳವಾಗಿತ್ತೆಂದು ತೋರುತ್ತದೆ. ಇದಾದ ಕೆಲ ತಿಂಗಳಲ್ಲಿ ಅಂದರೆ ಜುಲೈ–ಆಗಸ್ಟ್ ವೇಳೆಗೆ ಅವರ ಮನೆ ಪಕ್ಕದ್ದಲ್ಲಿದ್ದ ನಿವೇಶನದಲ್ಲಿ ಮರಿಗೌಡ ಎಂಬ ವ್ಯಕ್ತಿ ವಾಸವಾಗಿದ್ದನು. ಇವನು ವೆಂಕಟಪ್ಪನವರ ವಿರುದ್ಧವಾಗಿ ವಿನಾಕಾರಣ ಜಗಳಕ್ಕಿಳಿಯುತ್ತಿದ್ದ. ಮನಬಂದಂತೆ ಬೈದಾಡಿ ವೆಂಕಟಪ್ಪನವರನ್ನು ನಿಂದಿಸುವುದಲ್ಲದೆ ಕೊಲೆಯ ಬೆದರಿಕೆಯನ್ನು ಹಾಕಿದ. ಇದರಿಂದ ದಿನವೂ ಮನನೊಂದ ವೆಂಕಟಪ್ಪನವರು ಮಲ್ಲೇಶ್ವರಂನ ಪೋಲೀಸರಿಗೆ ದೂರಿತ್ತರು. ಇದರಿಂದ ಯಾವುದೇ ಪ್ರಗತಿ ಕಾಣದಿದ್ದಾಗ ಜಿಲ್ಲಾ ಮ್ಯಾಜಿಸ್ಟ್ರೇಟರಿಗೂ ಮನವಿ ಸಲ್ಲಿಸಿ ತಮಗೆ ರಕ್ಷಣೆ ನೀಡುವಂತೆ ಕೋರಿದರು. ದಿನಕಳೆದಂತೆ ನಿಧಾನವಾಗಿ ಈ ಗಲಾಟೆ ಕ್ಷೀಣಿಸತೊಡಗಿತು.

ವೆಂಕಟಪ್ಪನವರಿಗೆ ನೆರೆ ಮನೆಯ ಗುಡಿಸಿಲಿನಲ್ಲಿರುವ ಕೂಲಿಯಾಗಲಿ, ಇಡೀ ನಾಡಿನ ಆಳರಸನಾಗಲಿ ಅವರಿಗೆ ಲೆಕ್ಕಕ್ಕಿಲ್ಲ. ತಮಗೆ ಅನ್ಯಾಯವಾದರೆ ಪ್ರತಿಭಟಿಸುವ ಮನಸ್ಸು ಅವರದ್ದು. ಇಲ್ಲಿಯ ತಗಾದೆ ಏನೆಂದರೆ, ೧೯೨೭ರಿಂದ ನಾಲ್ವಡಿ ಕೃಷ್ಣರಾಜರ ಅಪ್ಪಣೆಯ ಮೇರೆಗೆ ಅಂಭಾವಿಲಾಸ ಆದಾಯಕೆ ಪ್ಲಾಸ್ಟರ್ ಆಫ್ ಪ್ಯಾರಿಸ್‌ನ ಫಲಕಗಳನ್ನು ತಯಾರಿಸುವ ಜವಬ್ದಾರಿಯನ್ನು ಮಹಾರಾಜರು ವೆಂಕಟಪ್ಪನವರಿಗೆ ವಹಿಸಿದ್ದು. ಅವುಗಳಲ್ಲಿ ಕೆಲವು ಪೂರ್ಣವಾಗಿದ್ದವು ಹಾಗೂ ಕೆಲವು ಅಪೂರ್ಣ. ಆದರೆ ನಾಲ್ವಡಿ



ಕೃಷ್ಣರಾಜರು ತೀರಿಕೊಂಡ ಬಳಿಕ ಅರಮನೆಯ ಅಧಿಕಾರಿಗ ವರ್ಗ ಹಾಗೂ ಅಂದಿನ ಮಹಾರಾಜರು ಇಲ್ಲಿಯವರೆಗೆ ನೀವು ಮಾಡಿರುವ ಶಿಲ್ಪಗಳೇ ಸಾಕು, ಮುಂದ್ಯಾವ ಶಿಲ್ಪಗಳನ್ನು ನಿರ್ಮಿಸಬೇಡಿ, ಇದ್ಯಾವುದರ ಮೇಲೆ ಮಹಾರಾಜರಿಗೆ ಆಸಕ್ತಿ ಇಲ್ಲವೆಂದು ಮಹಾರಾಜರ ಆಪ್ತ ಕಾರ್ಯದರ್ಶಿಯು ಖುದ್ದು ವೆಂಕಟಪ್ಪನವರನ್ನು ಕಂಡು ತಿಳಿಸುತ್ತಾರೆ.


ಇದಲ್ಲದೆ ತಾವು ಮಾಡಿಕೊಂಡಿದ್ದ ಸ್ಟುಡಿಯೋ ಅರಮನೆಯ ಆಸ್ತಿಯಾದ್ದರಿಂದ ಅದನ್ನು ಖಾಲಿ ಮಾಡುವಂತೆ ಸೂಚಿಸಲಾಗಿತ್ತು. ಈ ವಿಷಯ ವೆಂಕಟಪ್ಪನವರಿಗೆ ಬೇಸರ ತಂದಿತ್ತು. ಆದಕಾರಣ ಹಿಂದಿನ ಮಹಾರಾಜರ ಅಪ್ಪಣೆಯನ್ನು ಅವರು ಮಾಡಬೇಕೆಂದಿದ್ದ ಹಾಗೂ ಅರ್ಧದಷ್ಟು ಸಾಗುತ್ತಿರುವ ಕೆಲಸವನ್ನು ಪೂರ್ಣಗೊಳಿಸುವುದು ಇಂದಿನ ರಾಜರ ಕೆಲಸ ಎಂಬುದು ವೆಂಕಟಪ್ಪನವರ ವಾದ. ಈ ವಿಷಯಕ್ಕೆ ಒಪ್ಪದಿದ್ದರೆ ತಯಾರಿಕಾ ವೆಚ್ಚವಾದ ಒಟ್ಟು ನಲ್ವತ್ತು ಸಾವಿರವನ್ನು ಮಹಾರಾಜರು ಅರಮನೆಯಿಂದ ಕಟ್ಟಿಕೊಡಲಿ ಎಂದು ನ್ಯಾಯ ಕೇಳಲು ಬೆಂಗಳೂರಿನ ವಕೀಲರಾಗಿದ್ದ ಎಂ.ಎ. ಗೋಪಾಲಸ್ವಾಮಿ ಅಯ್ಯಂಗಾರರನ್ನು ೧೯೪೩ರ ಸೆಪ್ಟಂಬರ್ ಐದರಂದು ತಮ್ಮ ಪರವಾದ ವಕೀಲರನ್ನಾಗಿ ನೇಮಿಸಿಕೊಂಡು ಮಹಾರಾಜರಿಗೆ ನೋಟೀಸನ್ನು ಜಾರಿ ಮಾಡಿದರು.[೧೯]

ಇದಕ್ಕೆ ಎದುರಾಳಿಯಿಂದ ಬಂದ ಉತ್ತರ ವೆಂಕಟಪ್ಪ ಹಾಗೂ ಇವರ ವಕೀಲರಿಗೆ ಸಮಾಧಾನ ತರುವಂತಹದ್ದಾಗಿರಲಿಲ್ಲ. ಇದರಿಂದ ಬೇಸರಗೊಂಡು ಅದೇ ತಿಂಗಳ ಮೂವತ್ತರಂದು ಜಿಲ್ಲಾ ಕೋರ್ಟಿನಲ್ಲಿ ನಲ್ವತ್ತು ಸಾವಿರ ರೂಪಾಯಿಗಳಿಗಾಗಿ ಅರಮನೆಯ ಮೇಲೆ ದಾವಾ ಹೂಡಿದರು. ಇದಕ್ಕೆ ಉತ್ತರವಾಗಿ ೧೯೪೪ರ ಜನವರಿ ಆರನೇ ತಾರೀಖಿನಂದು ಜಿಲ್ಲಾ ಕೋರ್ಟ್ ವೆಂಕಟಪ್ಪನವರ ಪರ ವಕೀಲ ಎಂ.ಎ. ಗೋಪಾಲಸ್ವಾಮಿಯವರ ಅರ್ಜಿಯನ್ನು ನಿರಾಕರಿಸುವ ಮೂಲಕ ಮತ್ತೆ ವೆಂಕಟಪ್ಪನವರಿಗೆ ನಿರಾಶೆಯನ್ನು ಮೂಡಿಸಿತು.

ವೆಂಕಟಪ್ಪನವರ ನಿರಾಶೆಯನ್ನು ಕಂಡ ವಕೀಲ ಸಹೋದರರು ನಿಮಗೆ ನ್ಯಾಯ ಸಿಗಲೇಬೇಕೆಂದು, ಇದಕ್ಕೆ ಸರಿಯಾದ ಉಪಾಯ ಮಾಡೋಣವೆಂದು ಸಮಾಧಾನ ಮಾಡಿದರು. ಆಗ ವೆಂಕಟಪ್ಪನವರು ಹೈಕೋರ್ಟಿನ ಮೆಟ್ಟಿಲೇರೋಣ ಎಂದು ಕೇಳಿದಾಗ ವಕೀಲರಿಬ್ಬರು ವೆಂಕಟಪ್ಪನವರ ಅನುಮತಿಯ ಮೇರೆಗೆ ಮದರಾಸಿನ ಸುಪ್ರಸಿದ್ಧ ನ್ಯಾಯವಾದಿ ವಿ.ವಿ. ಶ್ರೀನಿವಾಸ ಅಯ್ಯಂಗಾರರ ಸಲಹೆಯನ್ನು ಕೇಳಿದರು. ಅದಕ್ಕೆ ಅವರು ಕೇಸನ್ನು ಸಂಪೂರ್ಣವಾಗಿ ಪರಿಶೀಲಿಸಿ ಉಚ್ಚ ನ್ಯಾಯಾಲಯದ ಪರಾಮರ್ಶೆಗೆಂದು ಅಪೀಲ್ ಹೋಗುವುದು ಸೂಕ್ತವೆಂದು ಸೂಚಿಸಿದರು. ನಿಮ್ಮ ಅಭ್ಯಂತರವಿಲ್ಲದಿದ್ದರೆ ಸ್ವತಃ ನಾನೇ ಉಚ್ಚನ್ಯಾಯಾಲಯದಲ್ಲಿ ಈ ಕೇಸನ್ನು ವಾದ ಮಾಡುವುದಾಗಿ ಅಭಿಪ್ರಾಯಪಟ್ಟರು.

---

೧೯. ಸಾ.ಕೃ.ರಾಮಚಂದ್ರರಾವ್ : ಕಲಾತಪಸ್ವಿ ಕೆ. ವೆಂಕಟಪ್ಪ, ಪ್ರಾ.ಸಂ.ನಿ. ಹೊಸಪೇಟೆ. ೨೦೦೪.




ಇದಕ್ಕೆ ವಕೀಲ ಸಹೋದರರು ಹಾಗೂ ವೆಂಕಟಪ್ಪನವರು ಇಬ್ಬರು ಒಪ್ಪಿ ಸಮ್ಮತಿ ಸೂಚಿಸಿದರು. ಅದರಂತೆಯೇ ೧೯೪೪ ಜೂನ್ ಐದರಂದು ವೆಂಕಟಪ್ಪನವರ ಕಟ್ಟಳೆ ಉಚ್ಚ ನ್ಯಾಯಾಲಯದ ಮೆಟ್ಟಿಲೇರಿತು. ಇದು ಅಂದಿನ ಮಟ್ಟಿಗೆ ಅರಮನೆ ಅಪೀಲ್ ಎಂದೆ ಪ್ರಸಿದ್ಧವಾಯಿತು. ಸತತವಾಗಿ ಎರಡು ವರ್ಷಗಳ ಕಾಲ ವಾದವಿವಾದಗಳು ನ್ಯಾಯಾಲಯದಲ್ಲಿ ನಡೆದ ಮೇಲೆ ಅರಮನೆಯವರು ೧೯೪೬ ರ ಜೂನ್ ತಿಂಗಳಲ್ಲಿ ಹೊರ ಒಪ್ಪಂದ ಮಾಡಿಕೊಳ್ಳುವ ಹವಣಿಕೆ ಮಾಡಿದರು.

ಆದರೆ ವೆಂಕಟಪ್ಪನವರಿಗೆ ಪ್ರತಿಪಕ್ಷದವರ ಮಾತಿನ ಧೋರಣೆ ಹಿಡಿಸದೆ ಆ ಹವಣಿಕೆಯನ್ನು ತಿರಸ್ಕರಿಸಿದರು. ಮುಂದೆ ೧೯೪೬ರ ಅಕ್ಟೋಬರ್ ಇಪ್ಪತ್ತೇಳನೇ ತಾರೀಖಿನಂದು ಉಚ್ಚನ್ಯಾಯಾಲಯವು ಅರಮನೆಯ ನ್ಯಾಯಾಲಯದ ಪರಿಧಿಗೆ ಬರುವುದಿಲ್ಲವೆಂದು ವೆಂಕಟಪ್ಪನವರ ಅಹವಾಲುಗಳನ್ನು ತಿರಸ್ಕರಿಸಿ ತೀರ್ಮ ನೀಡಿತು. ವೆಂಕಟಪ್ಪನವರಿಗೆ ಈ ವಿಷಯದಲ್ಲಿ ಸೋಲಾದರೂ ಜನಮಾನಸದಲ್ಲಿ ನ್ಯಾಯ ವೆಂಕಟಪ್ಪನವರ ಪರವಾಗಿ ಹೊರಹೊಮ್ಮಿತು. ದಿನಪತ್ರಿಕೆಗಳೂ ಸಹ ವೆಂಕಟಪ್ಪನವರ ಪರವಾಗಿ ನಿಂತು ಹಲವಾರು ವರದಿಗಳನ್ನು ಪ್ರಕಟಿಸಿದವು. ವೆಂಕಟಪ್ಪನವರು ಹೂಡಿದ ಮೊಕದ್ದಮೆ ನ್ಯಾಯಾಲಯದಲ್ಲಿ ತಿರಸ್ಕೃತವಾದ ಮೇಲೆ ಅರಮನೆಯ ಪರವಾಗಿ ನ್ಯಾಯಾಲಯದಲ್ಲಿ ವಕಾಲತ್ತು ವಹಿಸಿದ್ದ ಮಿರ್ಲೆ ಲಕ್ಷ್ಮೀನಾರಾಯಣಪ್ಪ ವೆಂಕಟಪ್ಪನವರ ಪರವಾಗಿ ವಾದಿಸಿದ್ದ ಬೆಂಗಳೂರಿನ ಎಂ.ಎ. ಗೋಪಾಲಸ್ವಾಮಿಯವರಿಗೆ ಪತ್ರ ಬರೆದು "ಐದು ಸಾವಿರ ರೂಪಾಯಿಗಳನ್ನು ಪರಿಹಾರವಾಗಿ ಕೊಡುತ್ತೇವೆ. ಅರಮನೆಗೆಂದು ಮಾಡಿಕೊಟ್ಟಿರುವ ಶಿಲ್ಪಗಳನ್ನು ತಮಗೆ ಇಷ್ಟ ಬಂದ ಹಾಗೆ ವಿನಿಯೋಗಿಸಿಕೊಳ್ಳುವುದಾಗಿ ಮಹಾರಾಜರು ಅಭಿಪ್ರಾಯಿಸಿದ್ದಾರೆ" ಎಂದು ಸೂಚಿಸಲಾಗಿತ್ತು.

ಈ ವಿಷಯವನ್ನು ಎಂ.ಎ. ಗೋಪಾಲಸ್ವಾಮಿಯವರು ವೆಂಕಟಪ್ಪನವರಿಗೆ ತಿಳಿಸಿದರು. ವೆಂಕಟಪ್ಪನವರು ಒಂದು ಕ್ಷಣವೂ ಯೋಚಿಸದೆ "ಯಾವುದೇ ಕಾರಣಕ್ಕೂ ಇದಕ್ಕೆ ನಾನು ಸಮ್ಮತಿಸುವುದಿಲ್ಲ" ಎಂದು ತಿಳಿಸಿ ಎಂದರು. ಈ ಉದ್ದೇಶದಿಂದ ಗೋಪಾಲಸ್ವಾಮಿ ಅಯ್ಯಂಗಾರರು ಅರಮನೆಗೆ ಒಂದು ಪತ್ರ ಬರೆದರು. ಅದನ್ನು ವೆಂಕಟಪ್ಪನವರ ಗಮನಕ್ಕೆ ತಂದರು. ಪತ್ರ ನೋಡಿದ ವೆಂಕಟಪ್ಪನವರು "ಈ ಕಾಗದದ ಧ್ವನಿ ನನಗೆ ರುಚಿಸುವುದಿಲ್ಲ. ಅದು ಇನ್ನೂ ಜೋರಾಗಿ ಖಂಡತುಂಡವಾಗಿರಬೇಕು, ಮಹರಾಜರ ದಾನದ ಹಣವನ್ನು ನಾನು ಸ್ವೀಕರಿಸಲು ಎಷ್ಟು ಮಾತ್ರಕ್ಕೂ ಸಿದ್ಧನಾಗಿಲ್ಲ ಎಂಬುದನ್ನು ಸ್ಪಷ್ಟವಾಗಿ ಕಾಣಿಸಿ" ಎಂಬುದಾಗಿ ಸೂಚಿಸಿದರು.


ಈ ಸಂಗತಿಯ ನಡುವೆಯೇ ನೆರೆಹೊರೆಯವರ ಪ್ರತಿನಿತ್ಯದ ಕಾಟ ಹೆಚ್ಚಾಗತೊಡಗಿತು. ಪಕ್ಕದ ನಿವೇಶನದ ಮರೀಗೌಡನಿಂದಿಡಿದು ಮಲ್ಲೇಶ್ವರಂನಲ್ಲಿ ವಾಸವಾಗಿದ್ದ ಕೂಲಿಗಾರರು ಇವರ ನಿವೇಶನದಲ್ಲಿ



ಬೆಳೆದ ಹುಲ್ಲನ್ನು ಕೊಯ್ಯುವುದು, ಮನೆಯ ಮುಂದೆ ಬೆಳೆಸಲಾಗಿದ್ದ ಹೊಂಗೆಯ ಮರವನ್ನು ಕತ್ತರಿಸಿಕೊಂಡು ಹೋಗುವುದು, ಇವರು ಮನೆಯ ಮುಂಭಾಗದಲ್ಲಿ ನಿಂತಿದ್ದರೆ ಅವಾಚ್ಯ ಶಬ್ದಗಳಿಂದ ನಿಂದಿಸುವುದು, ಇವರು ಮನೆಯಲ್ಲಿ ಇಲ್ಲದಿರುವಾಗ ಮನೆಯ ಮೇಲೆ ಕಲ್ಲು ಎಸೆಯುವುದು, ಹೊಲಸನ್ನು ಅವರ ಮನೆಯಲ್ಲಿ ತಂದು ಹಾಕುವುದು ಇವೆಲ್ಲವೂ ಅವರ ನಿತ್ಯ ತಲೆನೋವಿನ ಸಂಗತಿಗಳಾಗಿ ಪರಿಣಮಿಸಿದವು. ಆರಕ್ಷಕ ಠಾಣೆಯಲ್ಲಿ ದೂರಿಟ್ಟರೂ ಯಾವುದೇ ಕ್ರಮಗಳು ಕೈಗೊಳ್ಳದಿದ್ದಾಗ ವೆಂಕಟಪ್ಪನವರು ಮನನೊಂದು ಜೀವಿಸಲಾರಂಭಿಸಿದರು. ಮನಃಶಾಂತಿ ಎಂಬುದು ಮರೀಚಿಕೆಯಾಗಿ ಹೋಯಿತು.

ಈ ಎಲ್ಲಾ ಘಟನೆಗಳಿಂದ ವೆಂಕಟಪ್ಪನವರು ಎಲ್ಲಾ ವಿಷಯದಲ್ಲಿಯೂ ಆಸಕ್ತಿಯನ್ನು ಕಳೆದುಕೊಂಡರು. ನಿರಾಶೆ, ನಿರಾಸಕ್ತಿ ಈ ಶಬ್ದಗಳಿಗೆ ಅರ್ಥವೇ ತಿಳಿಯದ ವ್ಯಕ್ತಿಯಲ್ಲಿ ಈ ಅಂಶಗಳು ಮನೆ ಮಾಡಿದವು. ಹಿಂದೆ ಮೈಸೂರಿನಲ್ಲಿ ಮಾಡಿದ ಕಲಾಕೃತಿಗಳನ್ನು ಬಿಟ್ಟರೆ ಬೇರ್‍ಯಾವ ಹೊಸ ಕಲಾಕೃತಿಗಳನ್ನು ಇವರು ಮಾಡಲಿಲ್ಲ. ಹಿಂದೆ ಮಾಡಿದ ಕಲಾಕೃತಿಗಳನ್ನು ತಿದ್ದಿ, ತೀಡಿ ಇನ್ನೂ ನಯಗೊಳಿಸಿ ಸೂಕ್ಷ್ಮಾತಿಸೂಕ್ಷ್ಮ ವಿವರಗಳನ್ನು ತೋರಿಸುವ ಸಲುವಾಗಿ ಹಾಗೂ ಬೇರಾವ ಹೊಸ ಕಲಾಕೃತಿಗಳನ್ನು ಮಾಡಲು ಆಸಕ್ತಿ ಇಲ್ಲದೆ ಈ ಕೆಲಸ ಮಾಡುತ್ತಿದ್ದರು. ೧೯೪೩ ಮಾರ್ಚ್ ತಿಂಗಳ ಹೊತ್ತಿಗೆ ಅವರ ಕೈಬೆರಳುಗಳು ಸೆಟೆದುಕೊಳ್ಳಲು ಪ್ರಾರಂಭಿಸಿದವು. ಇದರಿಂದಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯಲಾರಂಭಿಸಿದರು. ಅವರಿಗೆ ಆಗ ಐವತ್ತೆಂಟು ವರ್ಷ ವಯಸ್ಸಾಗಿತ್ತು. ಈ ಕಾಯಿಲೆ ಹಾಗೂ ವಯಸ್ಸು ಅವರನ್ನು ಕೂರಲು, ನಡೆದಾಡಲು ಕಷ್ಟವಾಗುವಂತೆ ಮಾಡಿತು. ಇದರಿಂದ ಸುಮ್ಮನೆ ಕೂರುವ ಜಾಯಮಾನ ಅವರದಲ್ಲ. ಅವರು ರಚಿಸುತ್ತಿದ್ದ ಶಿಲ್ಪ, ಚಿತ್ರಗಳನ್ನು ಅವರ ಸ್ಟುಡಿಯೋದ ಎರಡೂ ಕೋಣೆಗಳಲ್ಲಿಯೂ ಪ್ರದರ್ಶನಕ್ಕೆ ಸಿದ್ಧಗೊಳಿಸಿದರು. ನಂತರ ತಾವೇ ನಿಂತು ಬಂದವರಿಗೆ ಕಲಾಕೃತಿಗಳ ಪೂರ್ಣ ಮಾಹಿತಿಯನ್ನು ನೀಡತೊಡಗಿದರು. ಪ್ರದರ್ಶನವನ್ನು ನೋಡಲು ನಿರ್ಧಿಷ್ಟ ಸಮಯವನ್ನು ಸಹ ನಿಗಧಿಪಡಿಸಿದ್ದರು. ಇದರಿಂದ ಅವರು ಕಳೆದು ಹೋದ ಮನಃಶಾಂತಿಯ ಪರ್ಯಟನೆ ಆರಂಭಿಸಿದರು.

೧೯೪೩ರ ಸುಮಾರಿಗೆ ಡಿ.ವಿ.ಜಿ.ಯವರಮಗನಾದ ಸುಪ್ರಸಿದ್ಧ ವಿಜ್ಞಾನಿಯಾದ ಬಿ.ಜಿ.ಎಲ್. ಸ್ವಾಮಿಯವರು ವೆಂಕಟಪ್ಪನವರ ಬಳಿ ಕೆಲಕಾಲ ಚಿತ್ರಕಲೆಯನ್ನು ಕಲಿತರು. ಆದರೆ ಇವರಿಗೆ ಚಿತ್ರಕಲೆ ಕೈಗತ್ತಲಿಲ್ಲ ಎಂಬ ಕಾರಣದಿಂದ ತರಬೇತಿಯನ್ನು ಅರ್ಧದಲ್ಲಿಯೇ ಮೊಟಕುಗೊಳಿಸಿದರು. ಇದರಿಂದಾಗಿ ವೆಂಕಟಪ್ಪನವರು ಮತ್ಯಾರಿಗೂ ಚಿತ್ರಕಲೆಯ ಶಿಕ್ಷಣವನ್ನು ಹೇಳಿಕೊಡಬಾರದೆಂಬ ನಿಲುವಿಗೆ ಬಂದರು.




ಆದರೆ ೧೯೪೪ರ ರಲ್ಲಿ ಮಲ್ಲೇಶ್ವರಂನ ಇವರ ನಿವಾಸಕ್ಕೆ ಹಲವಾರು ವಿದ್ಯಾರ್ಥಿಗಳು ಚಿತ್ರಕಲೆಯನ್ನು ಕಲಿಸಿಕೊಡಬೇಕೆಂದು ಕೋರಿದರು. ಆಗ ಕೆಲವಾರು ನಿಯಮಗಳ ಮೇರೆಗೆ ವೆಂಕಟಪ್ಪನವರು ಚಿತ್ರಕಲೆಯನ್ನು ವಿದ್ಯಾರ್ಥಿಗಳಿಗೆ ಹೇಳಿಕೊಡಲು ಒಪ್ಪಿದರು. ಮೊದಲನೆಯದಾಗಿ ವಿದ್ಯಾರ್ಥಿಗಳಿಗೆ ಹದಿನಾಲ್ಕು ವರ್ಷ ಮೀರಿರಬಾರದು, ಮತ್ತೊಂದು ಕಲಾ ವಿದ್ಯಾರ್ಥಿಗೆ ಇತರೆ ಬೇರಾವ ಅಭ್ಯಾಸಗಳು ಇರಬಾರದೆಂಬ ನಿಲುವು ಅವರದಾಗಿತ್ತು. ವಿಪರ್ಯಾಸವೆಂದರೆ ಇವರ ಓಲಿಕೆಗಳ ವಿದ್ಯಾರ್ಥಿಗಳು ದೊರೆಯದೆ ಇರುವುದು. ಇದರ ನಡುವೆ ಸುಮ್ಮನೆ ಕೂರದೆ ಹಳೆಯ ಕಲಾಕೃತಿಗಳನ್ನು ಮತ್ತೆ ಮತ್ತೆ ಕ್ರಿಯಾಶೀಲತೆಯಿಂದ ಚಂದಗೊಳಿಸುವುದು, ಅವನ್ನು ನಾಜೂಕಾಗಿ, ಸೂಕ್ಷ್ಮಾತಿಸೂಕ್ಷ್ಮಗೊಳಿಸುವುದು, ಸುಂದರಗೊಳಿಸುವುದು ಇವರ ಕಾರ್ಯವಾಗಿ ಹೋಯಿತು.

೧೯೪೬ ರ ಫೆಬ್ರವರಿ ತಿಂಗಳಲ್ಲಿ ವಿಜ್ಞಾನಿಯಾಗಿದ್ದ ಎಚ್.ಜೆ. ಭಾಭಾ ಅವರು ತಮ್ಮ ತಾಯಿಯೊಂದಿಗೆ ವೆಂಕಟಪ್ಪನವರ ಸ್ಟುಡಿಯೋಗೆ ಬಂದರು. ಅಲ್ಲಿನ ಕಲಾಕೃತಿಗಳನ್ನೆಲ್ಲ ನೋಡಿದ ಮೇಲೆ ಮೂರು ವರ್ಷಗಳ ಹಿಂದೆಯೇ ಬೇಡಿಕೆ ಇಟ್ಟು ನಕಾರ ಉತ್ತರ ಪಡೆದಿದ್ದ ಭಾಭಾರವರು ಮತ್ತದೇ ಬೇಡಿಕೆಯನ್ನು ತಮ್ಮ ತಾಯಿ ಮೂಲಕ ಇಡಿಸಿದರು. ಇವರು ವೆಂಕಟಪ್ಪನವರ ಬಳಿ ತಮ್ಮ ಪತಿಯ ಭಾವಚಿತ್ರವನ್ನು ತಾವು ಮಾಡಿಕೊಡಲೇಬೇಕೆಂಬ ಕೋರಿಕೆಯನ್ನು ಇಟ್ಟರು. ಅದಕ್ಕೆ ವೆಂಕಟಪ್ಪನವರು "ನಾನು ನೋಡದ ವ್ಯಕ್ತಿಯ ಚಿತ್ರವನ್ನು ಭಾವಪೂರ್ಣವಾಗಿ ಅಭಿವ್ಯಕ್ತಿಸಲು ಸಾಧ್ಯವಾಗದು" ಎಂದು ಹೇಳಿದರು. ಆದರೆ ಭಾಭಾರ ತಾಯಿ ಅವರ ಪತಿಯ ಭಾವಚಿತ್ರವನ್ನು ನೀಡಿ ಅವರ ವ್ಯಕ್ತಿತ್ವವನ್ನು ಸವಿವರವಾಗಿ ವೆಂಕಟಪ್ಪನವರಿಗೆ ವಿವರಿಸಿದರು. ಅದಕ್ಕೆ ವೆಂಕಟಪ್ಪನವರು "ನಾನು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ. ಆದರೆ ಅವರ ಛಾಯೆ ನನ್ನ ಮನಸ್ಸಿನಲ್ಲಿ ಮೂಡದೇ ಇದ್ದರೆ ನಾನು ಈ ಚಿತ್ರವನ್ನು ರಚಿಸಲಾರೆ" ಎಂದರು ಆದರೆ ಎಷ್ಟು ಧ್ಯಾನಮಜ್ಞರಾಗಿ ಆ ಭಾವ ಚಿತ್ರವನ್ನು ನೋಡಿದರೂ ಆ ವ್ಯಕ್ತಿಯ ಛಾಯೆಗಳು ವೆಂಕಟಪ್ಪನವರ ಸ್ಮೃತಿಯನ್ನು ಮುಟ್ಟಿ ಅಭಿವ್ಯಕ್ತವಾಗಲು ಸಾಧ್ಯವಾಗದಿದ್ದಾಗ ಕೊನೆಗೆ ೧೯೪೮ ಜೂನ್ ಹದಿನೇಳರಂದು ಆ ಭಾವ ಚಿತ್ರವನ್ನು ಎಚ್.ಜೆ. ಭಾಭಾರವರಿಗೆ ಹಿಂದಿರುಗಿಸಿದ್ದರು.[೧೦]

೧೯೪೬ ನವೆಂಬರ್ ತಿಂಗಳಿನಲ್ಲಿ ಇವರಿಗೆ ತಮ್ಮ ಕಲಾಕೃತಿಗಳು ಹಾಗೂ ತಾವು ಅಲ್ಲಿಯವರೆವಿಗೂ ಪಡೆದಂತಹ ಪ್ರಶಸ್ತಿ ಪತ್ರ, ಪುರಸ್ಕಾರಗಳನ್ನು ಪ್ರದರ್ಶಿಸುವ ಮಹದಾಸೆ ಬಂದಿತು. ಆ ತಿಂಗಳ ಇಪ್ಪತ್ತೂರನೇ ತಾರೀಖಿನಂದು ಮೂರು ದಿನಗಳ ಕಾಲ ತಮ್ಮ ಕಲಾ ಸ್ಟುಡಿಯೋವನ್ನು ಮಧ್ಯಾಹ್ನ ಮೂರು ಗಂಟೆಯಿಂದ ಐದುಗಂಟೆಯವರೆವಿಗೂ ಸಾರ್ವಜನಿಕ ಪ್ರದರ್ಶನಕ್ಕೆಂದು ತೆರೆದಿಟ್ಟರು. ಬಹು ಸಂಖ್ಯೆಯಲ್ಲಿ ಕಲಾಭಿಮಾನಿಗಳು ಬಂದು ಕಲಾಕೃತಿಗಳನ್ನು ನೋಡಿ ಸವಿದರು. ವರ್ಷದ ಕೆಲದಿನಗಳಲ್ಲಿ

---


೧೦. ಸಾ.ಕೃ.ರಾಮಚಂದ್ರರಾವ್ : ಕಲಾತಪಸ್ವಿ ಕೆ. ವೆಂಕಟಪ್ಪ, ಪ್ರಾ.ಸಂ.ನಿ. ಹೊಸಪೇಟೆ, ೨೦೦೪. ಪುಟ – ೯೬



ಮಾತ್ರ ಈ ರೀತಿಯ ಕಲಾಪ್ರದರ್ಶನವನ್ನು ಆಯೋಜಿಸುತ್ತಿದ್ದರು. ಉಳಿದ ವೇಳೆಯಲ್ಲಿ ಕಲಾಸಕ್ತರು ಮುಂಚೆಯೇ ಸಮಯವನ್ನು ನಿಗಧಿಪಡಿಸಿಕೊಂಡು ಬಂದಲ್ಲಿ ಮಾತ್ರ ಸ್ಟುಡಿಯೋಗೆ ಪ್ರವೇಶವಿರುತ್ತಿತ್ತು. ಆಯೋಜಿತ ಪ್ರದರ್ಶನದಲ್ಲಿ ಮಾತ್ರ ತಮ್ಮ ಜಲವರ್ಣದ ವರ್ಣಚಿತ್ರಗಳನ್ನು ಪ್ರದರ್ಶಿಸುತ್ತಿದ್ದರು. ಬೇರೆ ಸಮಯದಲ್ಲಿ ಇವನ್ನು ಕಟ್ಟಿಡುತ್ತಿದ್ದರು. ಸಾಮಾನ್ಯವಾಗಿ ಸ್ಟುಡಿಯೋದಲ್ಲಿ ಶಿಲ್ಪಗಳು ಯಾವಾಗಲೂ ಇರುತ್ತಿದ್ದವು.

೧೯೪೪ರಲ್ಲಿ ಇಂಥಹದ್ದೇ ಒಂದು ಸಾರ್ವಜನಿಕ ಸಂದರ್ಶನ ಏರ್ಪಾಡಾಗಿತ್ತು. ಆ ಸಂದರ್ಭದಲ್ಲಿ ಲೋಹದಿಂದ ಎರಕ ಹೊಯ್ದ ದ್ವಿಆಯಾಮದ "ಬೋಧಿಸತ್ವನ" ಉಬ್ಬು ಶಿಲ್ಪವನ್ನು ಹೈಸ್ಕೂಲ್ ಉಪನ್ಯಾಸಕರೊಬ್ಬರು ಆಕಸ್ಮತ್ತಾಗಿ ಬೀಳಿಸಿದರು. ಇದರಿಂದ ಕೋಪಗೊಂಡ ವೆಂಕಟಪ್ಪನವರು ಆ ಪ್ರದರ್ಶನದಲ್ಲಿಯೂ ಹಾಗೂ ಮುಂದಿನ ಪ್ರದರ್ಶನದಲ್ಲಿಯೂ ಒಡೆದು ಹೋದ ಕೃತಿಯನ್ನು ಯಥಾವತ್ತಾಗಿ ಪ್ರದರ್ಶಿಸಿ ಆ ಕೃತಿಯ ಮೇಲೆ "ಎರಡು ಡಿಗ್ರಿಯನ್ನು ಪಡೆದುಕೊಂಡಿರುವ ಸುಶಿಕ್ಷತರಿಂದ ಹಾಳಾದ ನತದೃಷ್ಟ ಕೃತಿ ಇದು" ಎಂಬುದಾಗಿ ಇಂಗ್ಲೀಷಿನಲ್ಲಿ ಬರೆದ ಹಣೆಪಟ್ಟಿಯನ್ನು ಆ ಕೃತಿಗೆ ಹಚ್ಚಿ ಪ್ರದರ್ಶಿಸಿದರು. ೧೯೨೮ ರಲ್ಲಿ ಮೈಸೂರಿನ ಅರಮನೆಯ ಅಂಭಾವಿಲಾಸಕ್ಕೆ ಮಾಡಿದ ಶಾಕುಂತಲೆಯ ನಿರ್ಗಮನ ಶಿಲ್ಪದ ಮೂಲ ಅಚ್ಚು ವೆಂಕಟಪ್ಪನವರ ಬಳಿಯೇ ಇದ್ದಿತು. ಇದರಿಂದ ೧೯೪೪ರಲ್ಲಿ ಆ ಅಚ್ಚನ್ನು ಬಳಸಿ ಮತ್ತೊಂದು ಶಾಕುಂತಲಾ ನಿರ್ಗಮನದ ಕೃತಿಯನ್ನು ನಿರ್ಮಿಸಿದರು. ಮೊದಲಿಗಿಂತಲೂ ಸೂಕ್ಷ್ಮಾತಿಸೂಕ್ಷ್ಮ ಸ್ಪಷ್ಟತೆಯನ್ನು ಕಾಣಿಸುವಲ್ಲಿ ಯಶಸ್ವಿಯಾಗಿ ೧೯೪೯ರ ಫೆಬ್ರವರಿ ತಿಂಗಳಲ್ಲಿ ಈ ಕೃತಿಯನ್ನು ಮುಗಿಸಿದರು. ೧೯೨೩ರಲ್ಲಿ ಮಾಡಲಾಗಿದ್ದ ರವೀಂದ್ರನಾಥರ ಶಿಲ್ಪವನ್ನು ಸಂಸ್ಕರಣೆಗೆ ಎತ್ತಿಕೊಂಡು ೧೯೪೯ರ ಏಪ್ರಿಲ್ ೩ ರಂದು ಪ್ರಾರಂಭವಾಗಿ ೧೯೫೦ ರ ಜನವರಿ ನಾಲ್ಕರಂದು ಮುಗಿಯಿತು. ೧೯೪೯ರ ಮೇ ತಿಂಗಳಲ್ಲಿ ಆಕಸ್ಮಿಕವಾಗಿ ವೆಂಕಟಪ್ಪನವರ ಕೈತಾಗಿ ೧೯೧೮ರಲ್ಲಿ ಮಾಡಿದ ಮಾಣಿ ಶಿಲ್ಪ ಕೆಳಗೆ ಬಿದ್ದು ಚೂರು ಚೂರಾಯಿತು. ಇದರಿಂದ ವೆಂಕಟಪ್ಪನವರ ಮನಸ್ಸಿಗೆ ತುಂಬಾ ಬೇಸರವಾಯಿತು. "ಭೂಮಿಯ ಮೇಲಿರುವ ಎಲ್ಲಾ ವಸ್ತುಗಳ ಗತಿಯೇನು ? ನಾಶ ಯಾವಾಗ ಎಂಬುದನ್ನು ಭಗವಂತನೇ ಬಲ್ಲ" ಎಂಬುದಾಗಿ ತಮ್ಮ ದಿನಚರಿಯಲ್ಲಿ ಬರೆದುಕೊಂಡಿದ್ದಾರೆ. ೧೯೫೦ರ ಜನವರಿ, ಫೆಬ್ರವರಿ ತಿಂಗಳಲ್ಲಿ ಮಾಣಿ ಶಿಲ್ಪದ ದುರಸ್ತಿ ಕಾರ್ಯ ಮುಗಿಯಿತು.

ಅದೇ ವರ್ಷ ಸೆಪ್ಟಂಬರ್ ಐದರಂದು ಈ ಶಿಲ್ಪದ ವಸ್ತುವಾಗಿದ್ದ ಮಾಣಿ ತನ್ನ ಹೆಂಡತಿ ಮಕ್ಕಳೊಂದಿಗೆ ವೆಂಕಟಪ್ಪನವರ ಸ್ಟುಡಿಯೋಗೆ ಬಂದನು. ಆಗ ವೆಂಕಟಪ್ಪನವರು ಬಹು ಪ್ರೀತಿಯಿಂದ ಇವರನ್ನು ಸ್ವಾಗತಿಸಿ ತಮ್ಮ ಎಲ್ಲಾ ಕಲಾಕೃತಿಗಳನ್ನು ತೋರಿಸಿ ವಿವರಿಸಿದರು. ಮೈಸೂರು ಹೋಟೆಲ್‌ನಲ್ಲಿ




ಮಾಣಿಯಾಗಿದ್ದ ನರಸಿಂಹನಿಗೆ ಇಲ್ಲಿಗೆ ಬಂದಾಗ ೩೨ ವರ್ಷ ವಯಸ್ಸಾಗಿತ್ತು. ಅಂದು ಬಾಲ್ಯದಲ್ಲಿ ತಾನು ಇದ್ದ ನೆನಪನ್ನು ಆ ಶಿಲ್ಪದಲ್ಲಿ ಕಂಡು ಸಂತಸಗೊಂಡನು. ನಂತರ ವೆಂಕಟಪ್ಪನವರು ಮಾಣಿ ಹಾಗೂ ಇವನ ಕುಟುಂಬವನ್ನು ಬೀಳ್ಕೊಟ್ಟರು.

೧೯೫೧ರಲ್ಲಿ ಜುಲೈ ಹದಿನೈದರಂದು ಭಾರತದ ಪ್ರಧಾನಿಯಾಗಿದ್ದ ಪಂಡಿತ್ ಜವಾಹರಲಾಲ್ ನೆಹರು ಬೆಂಗಳೂರಿಗೆ ಬಂದಿದ್ದರು. ವೆಂಕಟಪ್ಪನವರ ಸ್ಟುಡಿಯೋಗೆ ಭೇಟಿ ನೀಡುವ ಕಾರ್ಯಕ್ರಮವು ಅವರ ಪಟ್ಟಿಯಲ್ಲಿ ಇದ್ದುದ್ದರಿಂದ ವೆಂಕಟಪ್ಪನವರಿಗೆ ಈ ವಿಷಯವು ತಿಳಿಯಿತು. ಇದರಿಂದಾಗಿ ವೆಂಕಟಪ್ಪನವರು ತಮ್ಮ ಎಲ್ಲಾ ಕಲಾಕೃತಿಗಳನ್ನು ಅಚ್ಚುಕಟ್ಟಾಗಿ ಜೋಡಿಸಿಕೊಂಡು ಕಾದರು. ಆದರೆ ಕಾರಣಾಂತರಗಳಿಂದಾಗಿ ನೆಹರೂರವರು ಇಲ್ಲಿಗೆ ಬರಲಾಗಲಿಲ್ಲ. ಇದರಿಂದಾಗಿ ವೆಂಕಟಪ್ಪನವರು ಬೇಸರಗೊಂಡರು.

ಕೆಲ ದಿನಗಳ ನಂತರ ಸಿದ್ಧಾರ್ಥನ ರಾಜ್ಯ ಪರಿತ್ಯಾಗದ ದ್ವಿಆಯಾಮದ ಪ್ಲಾಸ್ಟರ್ ಆಫ್ ಪ್ಯಾರಿಸ್ ಫಲಕವನ್ನು ತಯಾರಿಸಲು ಸಜ್ಜಾದರು. ಹಲವಾರು ವಾರಗಳ ಕಾಲ ಕೆಲಸ ಮಾಡಿ ಸೂಕ್ಷ್ಮ ಹಾಗೂ ನಾಜೂಕು ಕೆತ್ತನೆಯಲ್ಲಿ ತೊಡಗಿದರು. ಸಿದ್ಧಾರ್ಥನ ಮುಖದಲ್ಲಿಯ ವೈರಾಗ್ಯ ಭಾವ, ಆ ದಿಟ್ಟ ಗಾಂಭೀರ್ಯ, ಭಾವನೆಗಳ ಅಭಿವ್ಯಕ್ತಿತ್ವ ಎಂತಹವರಲ್ಲೂ ಆಧ್ಯಾತ್ಮದ ಭಾವನೆಯನ್ನು ಒಡಮೂಡಿಸುತ್ತದೆ. ಈ ಶಿಲ್ಪ ಮುಗಿದ ಕೆಲವು ತಿಂಗಳಲ್ಲಿ ತನ್ನ ಗುರುಗಳಾದ ಅವನೀಂದ್ರರು ತಮ್ಮ ಸ್ವಗೃಹದಲ್ಲಿ ದೈವಾಧೀನರಾಧ ವಿಷಯವೂ ವೆಂಕಟಪ್ಪನವರ ಕಿವಿ ಮುಟ್ಟಿತು. ಇದರಿಂದ ಮನಸ್ಸಿನ ಕಟ್ಟೆಯೊಡೆದು ವ್ಯಥೆ ಪಡಲಾರಂಭಿಸಿದರು. ಒಂದು ಶುಭ ಸಂಗತಿ ಎಂದರೆ ಆ ಹೊತ್ತಿಗಾಗಲೇ ವೆಂಕಟಪ್ಪನವರಿಗೆ ಜೀವನದ ಅರ್ಥ ಹಾಗೂ ಪರಿಕಲ್ಪನೆ ಸಾಂಗತ್ಯ ಅವರಿಗಾಗಿತ್ತು.

೧೯೫೨ ರಲ್ಲಿ ಪ್ರಾರಂಭದಲ್ಲಿ ಅಮೇರಿಕದ ರಾಕ್‌ಫಿಲರ್ ಪ್ರತಿಷ್ಠಾನದ ಡಾ. ಗಿಲ್‌ಪ್ಯಾಟ್ರಿಕ್ ಅವರು ವೆಂಕಟಪ್ಪನವರ ಸ್ಟುಡಿಯೋಗೆ ಬಂದು ಅವರ ಕಲಾಕೃತಿಗಳನ್ನೆಲ್ಲವನ್ನು ನೋಡಿ ಆನಂದಿಸಿದರು. ಕೆಲ ತಿಂಗಳ ನಂತರ ಸುಪ್ರಸಿದ್ಧ ಪಾಶ್ಚಾತ್ಯ ಚಲನಚಿತ್ರ ನಿರ್ದೇಶಕನಾದ ಅಲೆಕ್ಸಾಂಡರ್ ಮಾರ್ಕೆ ಬೆಂಗಳೂರಿಗೆ ಬಂದಿದ್ದರು. ಇವರೂ ಸಹ ವೆಂಕಟಪ್ಪನವರ ಸ್ಟುಡಿಯೋಗೆ ಭೇಟಿ ನೀಡಿದರು. ಆ ಸಂದರ್ಭದಲ್ಲಿ ಅಲ್ಲಿದ್ದ ಊಟಿಯ ನಿಸರ್ಗ ಚಿತ್ರಗಳನ್ನು ನೋಡಿ ಬಹು ಮೆಚ್ಚುಗೆ ವ್ಯಕ್ತಪಡಿಸಿ "ತಮ್ಮ ಬಳಿ ಈ ರೀತಿಯ ಒಂದು ಕಲಾಕೃತಿ ಇದ್ದರೆ ಅದು ನನ್ನ ಕಲಾತ್ಮಕತೆಯನ್ನು ಪ್ರಚೋದಿಸುತ್ತದೆ, ದಯಮಾಡಿ ತಾವು ಇವುಗಳಲ್ಲಿ ಒಂದು ಕಲಾಕೃತಿಯನ್ನು ನೀಡಬೇಕು" ಎಂದು ಕೇಳಿಕೊಂಡಾಗ




ವೆಂಕಟಪ್ಪನವರು "ಇವ್ಯಾವುದು ಮಾರಾಟಕ್ಕಿಲ್ಲ, ದಯಮಾಡಿ ಯಾವುದನ್ನೂ ಕೇಳಬೇಡಿ" ಎಂದು ಹೇಳಿ ಅಲೆಕ್ಸಾಂಡರ್ ಮಾರ್ಕೆಯವರನ್ನು ಸಮಾಧಾನಪಡಿಸಿದರು.[೧೧]

ಇದಾದ ಕೆಲ ದಿನಗಳ ನಂತರ ವೆಂಕಟಪ್ಪನವರ ದೇಹದ ಆರೋಗ್ಯ ತೀರಾ ಕ್ಷೀಣಿಸಿತು. ಇದರಿಂದಾಗಿ ತಾವು ತಮ್ಮ ಕೆಲಸಗಳನ್ನು ಮಾಡಿಕೊಳ್ಳಲು ಕಷ್ಟವಾಗತೊಡಗಿತು. ಇದರಿಂದ ಅವರು ತಮ್ಮ ಸ್ಟುಡಿಯೋವನ್ನೂ ಸಹ ಸಾರ್ವಜನಿಕರಿಗೆ ತೆರೆಯಲು ಇಚ್ಛಿಸಲಿಲ್ಲ. ಆದ್ದರಿಂದ ತಮ್ಮ ಸ್ಟುಡಿಯೋದ ಗೋಡೆಗೆ "ಸ್ಟುಡಿಯೋ ಮುಚ್ಚಿದೆ" ಎಂಬ ಫಲಕವನ್ನು ಸಹ ಹಾಕಿದರು. ಅವರಿಗೆ ಎಡಗಾಲಿನ ಮಂಡಿಯ ಬೇನೆಯನ್ನು ತಾಳಲಾರದೆ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲಾರಂಭಿಸಿದರು.

ಇದರಿಂದಲೂ ಚಿಕಿತ್ಸೆ ಗುಣಮುಖವಾಗಲಿಲ್ಲ. ಆದ ಕಾರಣ ನಾಟಿ ವೈದ್ಯರ ಸಲಹೆಗಾಗಿ ಮಲ್ಲೇಶ್ವರಂನ ಹನ್ನೊಂದನೇ ಅಡ್ಡರಸ್ತೆಯಲ್ಲಿದ್ದ ವೆಂಕಟಪ್ಪ ಎಂಬ ನಾಟಿ ವೈದ್ಯರ ಭೇಟಿ ಮಾಡಿ ಆಯುರ್ವೇದ ಪದ್ಧತಿಯ ಪಿಂಡ ತೈಲ, ಕನಕಲೇಪ, ಸುಗಂಧರಾಜ ತೈಲ, ವಾತರಕ್ಷಾವಾಟಿ ಮೊದಲಾದ ಔಷಧೀ ಕ್ರಮಗಳನ್ನು ಬಳಸಿದರು. ಇದೂ ಸಹ ಬಹುಕಾಲ ನಿಲ್ಲಲಿಲ್ಲ. ೧೯೫೩ ರ ಜೂನ್ ತಿಂಗಳ ಹೊತ್ತಿಗೆ ಸಂಧಿವಾತ ಮಾತ್ರವಲ್ಲದೆ ಮಧುಮೇಹವು ವೆಂಕಟಪ್ಪನವರನ್ನು ಕಾಡತೊಡಗಿತು. ಇದರಿಂದಾಗಿ ಆಯುರ್ವೇದ ವೈದ್ಯರಾದ ಡಾ॥ಪತ್ರ್ಯೈಯಂಗಾರರನ್ನು ಕಂಡು ಚಿಕಿತ್ಸೆ ಪಡೆಯಲಾರಂಭಿಸಿದರು. ಇದಾದ ಬಳಿಕ ಹಲ್ಲಿನ ವಸಡು ಬೇನೆ ಪ್ರಾರಂಭವಾಯಿತು. ಇದರಿಂದ ತುಂಬಾ ಬೇಸತ್ತು ಅಲೋಪತಿ ವೈದ್ಯ ಕ್ರಮಕ್ಕೆ ಮರಳಿದರು. ಡಾ॥ ಪೆರ್ನಾಂಡಿಸ್ ಎಂಬ ದಂತ ವೈದ್ಯರಲ್ಲಿ ಚಿಕಿತ್ಸೆ ಪಡೆಯಲಾರಂಭಿಸಿದರು. ಬರ ಬರುತ್ತಾ ಈ ವೈದ್ಯರು ವೆಂಕಟಪ್ಪನವರ ನಿಕಟವರ್ತಿಯಾಗಿ ಹೋದರು.

ವೆಂಕಟಪ್ಪನವರು ಕಲೆಯನ್ನೂ ಕಲೆಗಾಗಿ ಮಾಡುತ್ತಿದ್ದರೇ ಹೊರತು ಬೇರಾವ ವಾಣಿಜ್ಯ ದೃಷ್ಟಿಯಿಂದಲ್ಲ. ಇವರ ಪ್ರಕಾರ "ಕಲೆ ಎಂದರೆ ತಪಸ್ಸು, ಇದೊಂದು ನಿರಂತರಸಾಧನೆ, ಎಂದಿಗೂ ಮುಗಿಯದ ಯಾರಿಗೂ ಪರಿಪೂರ್ಣವಾಗಿ ನಿಲುಕದ, ಆಗಸದಷ್ಟು ವಿಶಾಲವಾದ ಅಂಶವೇ ಕಲೆ" ಎಂದು ಅಂದುಕೊಂಡಿದ್ದರು. ಆದುದರಿಂದ ಇವರು ತಮ್ಮ ಸ್ಟುಡಿಯೋದಲ್ಲಿ ಬಿಟ್ಟರೆ ಬೇರೆಲ್ಲೂ ತಮ್ಮ ಕೃತಿಗಳ ಪ್ರದರ್ಶನವನ್ನು ಮಾಡುತ್ತಿರಲಿಲ್ಲ. ಆದರೆ ೧೯೫೦ ರಲ್ಲಿ ತಮ್ಮ ತೀರಾ ಹತ್ತಿರದ ಸ್ನೇಹಿತರಾದ ಫ್ರೆಡ್ ಹಾರ್ವೆಯವರು ಬೆಂಗಳೂರಿನ ಥಿಯೋಸಾಫಿಕಲ್ ಸೊಸೈಟಿಯ ಭವನದಲ್ಲಿ ಚಿತ್ರಕಲಾ ಪ್ರದರ್ಶನವನ್ನು ಮಾಡುವುದಾಗಿ ವೆಂಕಟಪ್ಪನವರಿಗೆ ತಿಳಿಸಿ ಅವರನ್ನು ಒಪ್ಪಿಸಿ ಅವರ ವರ್ಣಚಿತ್ರಗಳನ್ನು

೧೧. ಸಾ.ಕೃ.ರಾಮಚಂದ್ರರಾವ್ : ಕಲಾತಪಸ್ವಿ ಕೆ. ವೆಂಕಟಪ್ಪ, ಪ್ರಾ.ಸಂ.ನಿ. ಹೊಸಪೇಟೆ, ೨೦೦೪. ಪುಟ -೯೮




ಮಾತ್ರ ತಂದು ಪ್ರದರ್ಶಿಸಲಾಯಿತು. ಇದರ ನಾಲ್ಕು ವರ್ಷದ ನಂತರ ಜಿ. ವೆಂಕಟಾಚಲಂರವರು ಸಹ ವೆಂಕಟಪ್ಪನವರ ಮನ ಒಲಿಸಿ ಬೆಂಗಳೂರಿನ ಎಂ.ಜಿ. ರಸ್ತೆಯಲ್ಲಿ ಕಲಾಭವನದಲ್ಲಿ ಪ್ರದರ್ಶನವನ್ನು ಮಾಡಿ ಮುಗಿಸಿದರು.

೧೯೫೪ ರ ಹೊತ್ತಿಗೆ ವೆಂಕಟಪ್ಪನವರ ಆರೋಗ್ಯ ಸ್ಥಿತಿ ತೀರ ಹದಗೆಟ್ಟಿತು. ತಾವು ತೆಗೆದುಕೊಳ್ಳುತ್ತಿದ್ದ ಆಯುರ್ವೇದ ವೈದ್ಯರನ್ನು, ಅಲೋಪತಿ ಇವೆಲ್ಲವನ್ನೂ ಸಂಪೂರ್ಣವಾಗಿ ತ್ಯಜಿಸಿಬಿಟ್ಟರು. ಇದರ ನಡುವೆ ವೆಂಕಟಪ್ಪನವರಿಗೆ ಚಿಕಿತ್ಸೆ ನೀಡಲು ವೈದ್ಯರೊಬ್ಬರು ಮುಂದೆ ಬಂದರು. ಅದಕ್ಕೆ ವೆಂಕಟಪ್ಪನವರು "ನನ್ನ ದೇಹವು ಮದ್ದುಗಳಿಗೆ ಪ್ರತಿಕ್ರಿಯೆ ನೀಡುವುದನ್ನು ನಿಲ್ಲಿಸಿದೆ" ಎಂದು ಹೊರಟರು. ಅದೇ ವರ್ಷ ನವೆಂಬರ್ ಹತ್ತರಂದು ತಮ್ಮ ಎಲ್ಲಾ ನೋವುಗಳನ್ನೂ ಮರೆತು ತಾವು ಹಿಂದೆ ಜೇಡಿಮಣ್ಣಿನಲ್ಲಿ ಮಾಡಿದ ಪೆರ್ಸಿ ಬ್ರೌನರ ಶಿಲ್ಪವನ್ನು ಸಂಸ್ಕರಣೆಗಾಗಿ ಮತ್ತೆ ಎತ್ತಿಕೊಂಡರು. ಇದನ್ನು ಡಿಸೆಂಬರ್ ಇಪ್ಪತ್ತನಾಲ್ಕರಂದು ಮುಗಿಸಿದರು. ಇದರ ನಡುವೆ ಚಲನಚಿತ್ರವನ್ನು ನೋಡುವ ಅಭ್ಯಾಸವನ್ನು ಬೆಳೆಸಿಕೊಂಡಿದ್ದರು.

೧೯೪೫ ರ ಮಾರ್ಚ್ ತಿಂಗಳಲ್ಲಿ ವಾಲ್ಟ್ ಡಿಸ್ನಿಯ 'ಫಿಂಟಾಸಿಯಾ' ಚಿತ್ರವನ್ನು ಏಳೆಂಟು ಬಾರಿ ನೋಡಿದ್ದರು. ಹಿಂದಿಯ 'ಬೈಜುಬಾವರಾ' ಚಿತ್ರವನ್ನು ನಾಲ್ಕೈದು ಬಾರಿ ನೋಡಿದರು. ರೆಕ್ಸ್ ಚಿತ್ರಮಂದಿರದಲ್ಲಿ ನಡೆಯುತ್ತಿದ್ದ ವಾಲ್ಟ್‌ಡಿಸ್ನಿಯ 'ಸ್ಟೋರಿ ಆಫ್ ರಾಬಿನ್‌ಹುಡ್' ಮತ್ತು 'ವಾಟರ್ ಬೇಬೀಸ್' ಎಂಬ ಚಿತ್ರಗಳನ್ನು ೧೯೫೨ರ ನವೆಂಬರ್ ತಿಂಗಳಲ್ಲಿ ಒಂದೇ ವಾರದಲ್ಲಿ ಮೂರು ಬಾರಿ ನೋಡಿದ್ದರು. ಹೀಗೆ ಹಿಂದಿ, ಇಂಗ್ಲೀಷ್, ತಮಿಳು, ತೆಲುಗು ಎಲ್ಲಾ ಭಾಷೆಯ ಉತ್ತಮ ಚಿತ್ರಗಳನ್ನು ಯಾವ ಭಾಷೆಯ ಭೇದವಿಲ್ಲದೆ ನೋಡುತ್ತಿದ್ದರು. ಮುಂದೆ ಅನಾರೋಗ್ಯದ ಕಾರಣ ಚಲನಚಿತ್ರ ವೀಕ್ಷಣೆ ಕಡಿಮೆಯಾಯಿತು.

ಇವರ ಅನಾರೋಗ್ಯ ಹೆಚ್ಚಾದ ಕಾರಣದಿಂದ ಅಡುಗೆ ಮಾಡಿ ತಿನ್ನುವುದು ವೆಂಕಟಪ್ಪನವರಿಗೆ ಆಗದಂತಾಯಿತು. ಮನೆಯ ಹತ್ತಿರದ ಚಾಮುಂಡೇಶ್ವರಿ ಭವನದಲ್ಲೇ ಊಟ ಮಾಡುತ್ತಿದ್ದರು. ಆ ಹೋಟೆಲ್ ಮಾಲೀಕರಾದ ಶ್ಯಾಮಲಾಲ್‌ರಿಗೆ ವೆಂಕಟಪ್ಪನವರೆಂದರೆ ಅತೀವ ಗೌರವ, ವಿಶ್ವಾಸ. ವೆಂಕಟಪ್ಪನವರ ಆರೋಗ್ಯ ಸ್ಥಿತಿಯನ್ನು ತಿಳಿದಿದ್ದ ಶ್ಯಾಮಲಾಲರು ವೆಂಕಟಪ್ಪನವರಿಗೆಂದೆ ಉಪ್ಪು, ಖಾರ ಕಡಿಮೆ ಇರುವ ಪ್ರತ್ಯೇಕ ಆಹಾರವನ್ನು ತಯಾರಿಸಿ ಅವರಿಗೆ ಪ್ರತ್ಯೇಕ ಕೋಣೆಯೊಂದನ್ನು ವ್ಯವಸ್ಥೆ ಮಾಡಿದ್ದರು.



೧೯೫೫ ರಿಂದ ತಮ್ಮ ಹುಟ್ಟು ಹಬ್ಬವನ್ನು ಸ್ನೇಹಿತರೊಂದಿಗೆ ಆಚರಿಸಿಕೊಳ್ಳಲು ಇಚ್ಛಿಸಿ ಜೂನ್ ಒಂದರಂದು ಅವರ ಅರವತ್ತೊಂಬತ್ತನೆಯ ಹುಟ್ಟು ಹಬ್ಬವ ನ್ನು ಚಾಮುಂಡೇಶ್ವರಿ ಹೋಟೆಲ್‌ನಲ್ಲಿ ತಮ್ಮ ಮಿತ್ರರಿಗೆ ಔತಣಕೂಟವನ್ನು ಏರ್ಪಡಿಸಿದರು. ಅಂದಿನ ಮಧ್ಯಾಹ್ನ ಊಟಕ್ಕೆ ಇವರ ಗೆಳೆಯರಾದ ವಕೀಲರು, ವೈದ್ಯರು, ದರ್ಜಿಯವರು, ವ್ಯಾಪಾರಸ್ಥರು ಹೀಗೆ ಹಲವು ಬಗೆಯ ಮಿತ್ರರನ್ನು ಕರೆಸಿಕೊಂಡಿದ್ದರು. ತನ್ನ ತಂಗಿಯ ಮನೆಗೆ ಊಟವನ್ನು ಕೊಟ್ಟು ಕಳಿಸಿದರು. ಇವರ ಊಟವೆಲ್ಲ ಮುಗಿದ ಮೇಲೆ ತಮ್ಮ ದಿನನಿತ್ಯದ ಪದ್ಧತಿಯಲ್ಲಿ ಆಹಾರವನ್ನು ಸೇವಿಸಿ ಮನೆಗೆ ಹಿಂದಿರುಗಿದರು.

೧೯೫೪ರ ಸೆಪ್ಟಂಬರ್ ಇಪ್ಪತ್ತೈದರಂದು ವೆಂಕಟಪ್ಪನವರ ಸ್ಟುಡಿಯೋಗೆ ರಾಜ್ಯದ ಮುಖ್ಯಮಂತ್ರಿಗಳಾದ ಕೆ. ಹನುಮಂತಯ್ಯನವರು ಭೇಟಿ ನೀಡಿ, ಎಲ್ಲಾ ಕಲಾಕೃತಿಗಳನ್ನು ನೋಡಿ ಸವಿದರು. ಆಗ ವೆಂಕಟಪ್ಪನವರೊಡನೆ ಆಪ್ತ ಸಮಾಲೋಚನೆ ನಡೆಸಿ ಹಲವಾರು ವಿಷಯಗಳನ್ನು ಕುರಿತು ಚರ್ಚಿಸಿದರು. ಬೆಂಗಳೂರಿನಲ್ಲಿ ಆರ್ಟ್ ಗ್ಯಾಲರಿಯೊಂದನ್ನು ಕಟ್ಟಬೇಕೆಂಬ ಆಸೆಯನ್ನು ಸಹ ವ್ಯಕ್ತಪಡಿಸಿದರು. ಅದಕ್ಕೆ ವೆಂಕಟಪ್ಪನವರ ಸಲಹೆ, ಸಹಕಾರ ಅವಶ್ಯಕವಾಗಿ ನೀಡಬೇಕೆಂದು ಹೇಳಿದರಷ್ಟೇ. ಇದ್ಯಾವುದೂ ಸಾಕಾರವಾಗಲಿಲ್ಲವಷ್ಟೇ. ೧೯೫೬ರ ಆಗಸ್ಟ್ ತಿಂಗಳಲ್ಲಿ ಮೈಸೂರಿನಲ್ಲಿ ಲಲಿತಕಲಾ ಕಾಲೇಜನ್ನು ಕಟ್ಟಬೇಕೆಂದು ಸೆಂಟ್ರಲ್ ಕಾಲೇಜಿನಲ್ಲೊಂದು ತಜ್ಞರ ಸಭೆ ನೆರೆದಾಗಿ ವೆಂಕಟಪ್ಪನವರಿಗೂ ಆಹ್ವಾನ ಬಂದಿತ್ತು. ಆದ ಕಾರಣ ವೆಂಕಟಪ್ಪನವರೂ ಸಹ ಆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.


೧೯೫೮ ರ ಫೆಬ್ರವರಿ ತಿಂಗಳಲ್ಲಿ ಅಖಿಲಭಾರತ ಆಕಾಶವಾಣಿ ಕೇಂದ್ರದವರು ವೀಣೆಶೇಷಣ್ಣನವರ ಹುಟ್ಟುಹುಬ್ಬದ ಪ್ರಯುಕ್ತವಾಗಿ ಶೇಷಣ್ಣನವರ ಶಿಷ್ಯರಾದ ವೆಂಕಟಪ್ಪನವರಿಗೆ ಆಕಾಶವಾಣಿಯಲ್ಲಿ ಭಾಷಣ ಮಾಡುವಂತೆ ಕೇಳಿಕೊಂಡರು. ಇದಕ್ಕೆ ವೆಂಕಟಪ್ಪನವರು ಸಂತೋಷದಿಂದ ಒಪ್ಪಿದರು. ವೆಂಕಟಪ್ಪನವರ ಸ್ಟುಡಿಯೋದಲ್ಲಿಯೇ ಧ್ವನಿಮುದ್ರಣ ನಡೆಯಿತು. ಭಾಗಶಃ ಇದೇ ವೆಂಕಟಪ್ಪನವರ ಕೊನೆಯ ಸಾರ್ವಜನಿಕ ಕಾರ್ಯಕ್ರಮವಾಯಿತು. ಬರಬರುತ್ತಾ ಇವರ ದಿನಗಳು ತೀರಾ ದುಃಸ್ತರವಾದವು. ಅವರಿಗೆ ಯಾವ ಕೆಲಸವನ್ನೂ ಮಾಡಲಾಗುತ್ತಿರಲಿಲ್ಲ. ಗಳಿಗೆಗೊಮ್ಮೆ ತಲೆ ಸುತ್ತುವುದು, ಕಣ್ಣು ಮಂಜಾಗುವುದು, ಮಂಡಿ ನೋವು, ಸ್ನಾಯು ಒಡೆತ ತಲೆದೋರಿದವು. ಈ ಎಲ್ಲಾ ಸಂಗತಿಗಳಿಂದ ವೆಂಕಟಪ್ಪನವರಿಗೆ ತನ್ನ ಬಳಿ ಯಾರಾದರೂ ಇರಬೇಕಾಗುವುದು ಎಂಬ ಆತಂಕ ಸೃಷ್ಟಿಯಾಯಿತು. ಇದರಿಂದ ಬಹುದಿನಗಳ ಕಾಲ ಯೋಚಿಸಿ ತಮ್ಮ ಜೀವನದಲ್ಲಿ ಎಂದೂ ಯಾರ ಸಹಾಯವನ್ನೂ ಕೇಳಬಾರದೆಂದಿದ್ದ ವೆಂಕಟಪ್ಪನವರು ತನ್ನ ತಂಗಿಯ ಮಗನಾದ ರಾಮರಾಜುವಿನ ಫೋಟೋ ಸ್ಟುಡಿಯೋಗೆ ಹೋಗಿ "ರಾತ್ರಿಯ ವೇಳೆ ನಮ್ಮ ಮನೆಯಲ್ಲಿ ಬಂದು ಮಲಗಲು ಸಾಧ್ಯವಾಗುವುದೇ ?

ನಿನಗೆ ತೊಂದರೆ ಇಲ್ಲದಿದ್ದರೆ ಮಾತ್ರ !" ಎಂದು ಕೇಳಿದಾಗ ರಾಮರಾಜು ಬಹು ಪ್ರೀತಿಯಿಂದ ಬರುವುದಾಗಿ ತಿಳಿಸಿದನು. ತನ್ನ ಸ್ಟುಡಿಯೋದಲ್ಲಿ ಕೆಲಸ ಮಾಡುವ ಬಾಲಕನನ್ನು ಕರೆದು ವೆಂಕಟಪ್ಪನವರನ್ನು ಮನೆಯವರೆಗೆ ಬಿಟ್ಟು ಬರಲು ಹೇಳಿದನು.

ಇದಾದ ಕೆಲವು ತಿಂಗಳಲ್ಲಿ ವೆಂಕಟಪ್ಪನವರ ಆರೋಗ್ಯ ತೀರಾ ಹದಗೆಟ್ಟಿತು. ಇದರಿಂದಾಗಿ ಇವರ ಸಹೋದರಿಯಾದ ಯಲ್ಲಮ್ಮ ಆಕೆಯ ಹಿರಿಯ ಮಗನನ್ನು ಕರೆದುಕೊಂಡು ವೆಂಕಟಪ್ಪನವರನ್ನು ನೋಡಲೆಂದು ಬಂದರು. ಅವರಿಗೆ ತನ್ನ ಅಣ್ಣನನ್ನು ಆ ಸ್ಥಿತಿಯಲ್ಲಿ ನೋಡಿ ಬಹಳ ಹೊತ್ತು ಅಲ್ಲಿ ಉಳಿಯಲು ಸಾಧ್ಯವಾಗಲಿಲ್ಲ. ಮರುದಿನ ಮಲ್ಲೇಶ್ವರಂನ ನಿವಾಸಿಯಾಗಿದ್ದ, ವೆಂಕಟಪ್ಪನವರ ಕಲಾಭಿಮಾನಿಯಾಗಿದ್ದ ಡಾ॥ ರಂಗಾಚಾರ್ಯರು ವೆಂಕಟಪ್ಪನವರನ್ನು ಪರೀಕ್ಷಿಸಿ "ಇವರ ಹೃದಯದ ಪರಿಸ್ಥಿತಿ ಚೆನ್ನಾಗಿದೆ, ಆದರೆ ಮೂತ್ರದ ತೊಂದರೆಯಿಂದಾಗಿ ಕಾಲೂತವಿದೆ" ಎಂದರು.

ವೆಂಕಟಪ್ಪನವರಿಗೆ ಕೆಲವು ದಿನ ಊರಿನಿಂದ ದೂರದ ನಂದಿ ಬೆಟ್ಟಕ್ಕೆ ಹೋಗಿ ಅಲ್ಲಿದ್ದು ಬರಲೆಂದು ವೈದ್ಯರು ಸೂಚಿಸಿದರು. ಅದಕ್ಕೆ ವೆಂಕಟಪ್ಪನವರು "ನೋಡೋಣ" ಎಂದರಷ್ಟೇ. ಸೋದರಳಿಯ ರಾಮರಾಜು ಹಾಗೂ ಅವರ ನಿಕಟ ಸ್ನೇಹಿತರಾದ ಎಸ್.ಬಿ. ಶಂಕರ್ ಇವರಿಬ್ಬರೂ ಸೇರಿ ವೆಂಕಟಪ್ಪನವರನ್ನು ನಂದಿ ಬೆಟ್ಟಕ್ಕೆ ಕರೆದೊಯ್ಯಲು ನಿಶ್ಚಯಿಸಿದರು. ಆದರೆ ಅದರ ಹಿಂದಿನ ದಿನವೇ ವೆಂಕಟಪ್ಪನವರಿಗೆ ವಿಪರೀತವಾದ ಜ್ವರ ಆವರಿಸಿತ್ತು. ಇದರಿಂದಾಗಿ ಐದರ ಬೆಳಗ್ಗೆ ನಂದಿ ಬೆಟ್ಟಕ್ಕೆ ಹೋಗಲೆಂದು ತಂದಿದ್ದ ಕಾರಿನಲ್ಲಿಯೇ ವೈದ್ಯರ ಮನೆಗೆ ಕರೆದೊಯ್ದರು. ಪರೀಕ್ಷಿಸಿದ ವೈದ್ಯರು ಬೋರಿಂಗ್ ಆಸ್ಪತ್ರೆಗೆ ಸೇರಿಸಲು ಸೂಚಿಸಿದರು. ಕೂಡಲೇ ವೆಂಕಟಪ್ಪನವರು "ನಾನು ಸಾಯುವುದಾದರೆ ನನ್ನ ಸ್ಟುಡಿಯೋದಲ್ಲಿಯೇ ಸಾಯಬೇಕು" ಎಂದರು. ಆದ್ದರಿಂದ ಮರಳಿ ಮನೆಗೆ ಅವರನ್ನು ಕೊಂಡೊಯ್ದರು.

೧೯೬೧ರ ಜೂನ್ ಹದಿನೇಳರಂದು ಕೇಂದ್ರೀಯ ಲಲಿತಕಲಾ ಅಕಾಡಮಿಯು ವೆಂಕಟಪ್ಪನವರನ್ನು 'ಫೆಲೋ' ಆಗಿ ಆರಿಸಿಕೊಂಡು ಅವರಿಗೆ ಪುರಸ್ಕಾರ ರೂಪವಾಗಿ ತಾಮ್ರ ಪತ್ರವನ್ನು ನೀಡಿ ಗೌರವಿಸಲು ನಿರ್ಧರಿಸಿತು. ವ್ಯವಸ್ಥಾಪಕರು ೧೯೬೨ರ ಮಾರ್ಚ್ ತಿಂಗಳಿನಲ್ಲಿ ದಿಲ್ಲಿಯಲ್ಲಿ ಅವರಿಗಾಗಿ ಒಂದು ಸನ್ಮಾನ ಸಮಾರಂಭವನ್ನು ಏರ್ಪಡಿಸಿದ್ದು, ಬರಬೇಕೆಂದು ವೆಂಕಟಪ್ಪನವರಿಗೆ ಪತ್ರ ಬರೆದರು. ಆದರೆ ತೀರಾ ನಿತ್ರಾಣದಿಂದ ಹಾಸಿಗೆ ಹಿಡಿದಿದ್ದ ವೆಂಕಟಪ್ಪನವರು ಪ್ರಯಾಣ ಮಾಡುವ ಸ್ಥಿತಿಯಲ್ಲಿರಲಿಲ್ಲ. ವ್ಯವಸ್ಥಾಪಕರು ಬೆಂಗಳೂರಿನಲ್ಲೇ ಸಮಾರಂಭವನ್ನು ಏರ್ಪಡಿಸುವೆವು ಎಂದಾಗಲೂ ವೆಂಕಟಪ್ಪನವರು ಒಪ್ಪಲಿಲ್ಲ. "ಮೈಯೂ ಮನಸೂ ತುಂಬಾ ಧಣಿದಿದೆ, ಎಳ್ಳಷ್ಟೂ ತ್ರಾಣವಿಲ್ಲ, ಸಮಾರಂಭವೆಂದರೆ



ಕೆಲವು ನಿಮಿಷಗಳಾದರೂ ಕೂತಿರಬೇಕು, ಪ್ರಶಸ್ತಿಯನ್ನು ಸ್ವೀಕರಿಸಬೇಕು, ಅದಕ್ಕೂ ನನಗೆ ಅನುಕೂಲವಿಲ್ಲ" ಎಂದು ಹೇಳಿ ಸಮಾರಂಭವನ್ನು ರದ್ದುಪಡಿಸಿರೆಂದು ಸೂಚಿಸಿದರು. ಆದರೆ ಕೇಂದ್ರೀಯ ಲಲಿತಕಲಾ ಅಕಾಡಮಿಯ ವ್ಯವಸ್ಥಾಪಕರು ದಿಲ್ಲಿಯಿಂದ ಬೆಂಗಳೂರಿಗೆ ಬಂದು ಅದೇ ವರ್ಷ ಆಗಸ್ಟ್ ಏಳರಂದು ಅವರ ಮನೆಯಲ್ಲೇ ಸಣ್ಣದೊಂದು ಸಮಾರಂಭವನ್ನು ನಡೆಸಿ ಅವರಿಗೆ ತಾಮ್ರಪತ್ರ, ಅಂಗವಸ್ತ್ರಗಳನ್ನು ನೀಡಿ ಗೌರವಿಸಿದರು. ಕೇಂದ್ರ ಲಲಿತಕಲಾ ಅಕಾಡಮಿಯ ಅಧ್ಯಕ್ಷರೂ, ಗುಜರಾತಿನ ರಾಜ್ಯಪಾಲರಾಗಿದ್ದ ಮೇರೆ ನವಾಬ್‌ಜಂಗ್ ಬಹದೂರ್ ಆಗಿನ ರಾಜ್ಯದ ಮುಖ್ಯಮಂತ್ರಿಯಾಗಿದ್ದ ನಿಜಲಿಂಗಪ್ಪನವರೂ ಮತ್ತು ವೆಂಕಟಪ್ಪನವರ ಕೆಲ ಅಭಿಮಾನಿಗಳು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಇದಾದ ಕೆಲವು ತಿಂಗಳಲ್ಲಿ ಅಂದರೆ ೧೯೬೨ ಡಿಸೆಂಬರ್ ಎರಡನೇ ತಾರೀಖಿನಂದು ಕರ್ನಾಟಕ ಚಿತ್ರಕಲಾ ಪರಿಷತ್ತಿನ ವ್ಯವಸ್ಥಾಪಕರು ವೆಂಕಟಪ್ಪನವರ ಮನೆಯಲ್ಲೇ ಮತ್ತೊಂದು ಸಣ್ಣ ಸಮಾರಂಭವನ್ನೇರ್ಪಡಿಸಿ ಅವರಿಗೆ ಸನ್ಮಾನ ಮಾಡಿದರು. ಆಗ ವೆಂಕಟಪ್ಪನವರು ಹೇಳಿದ ಮಾತು "ಈ ಸನ್ಮಾನಕ್ಕೆ ನಾನು ಅರ್ಹನಲ್ಲ, ನಾನೊಬ್ಬ ಕಲಾ ವಿದ್ಯಾರ್ಥಿ ಅಷ್ಟೇ. ನಾನು ಇನ್ನೂ ಕಲಿಯಬೇಕಾದದ್ದು ಬಹಳ ಇದೆ. ಅದಕ್ಕೆ ಒಂದು ಜೀವಮಾನ ಸಾಕಾಗದು" ಎಂದರು. ಈ ಸಭೆಯಲ್ಲಿ ವೆಂಕಟಪ್ಪನವರ ಕಲಾಕೃತಿಗಳನ್ನು ರಾಜ್ಯ ಸರಕಾರವು ಕೊಳ್ಳಬೇಕೆಂಬ ಸಲಹೆ ಕೆಲವು ಗಣ್ಯರಿಂದ ವ್ಯಕ್ತವಾಗಿ ಆ ದಿನದ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಮುಖ್ಯಮಂತ್ರಿ ನಿಜಲಿಂಗಪ್ಪನವರು ಇದಕ್ಕೆ ತಮ್ಮ ಸಮ್ಮತಿಯನ್ನು ಸೂಚಿಸಿದರು. ಇದಾದ ಮರು ವರ್ಷವೇ ಜುಲೈ ವೇಳೆಗೆ ರಾಜ್ಯ ಸರ್ಕಾರವು ೨೫ ಸಾವಿರ ರೂಪಾಯಿಗಳನ್ನು ನೀಡಿ ಕೊಂಡು ಕೊಂಡು ಆರ್ಟ್ ಗ್ಯಾಲರಿಯನ್ನು ಪ್ರಾರಂಭಿಸಲು ಪ್ರಯತ್ನಿಸಿತು.


ಮುಂದೆ ಮೂರು ವರ್ಷ ವೆಂಕಟಪ್ಪನವರ ಆರೋಗ್ಯ ತೀರಾ ಸಂಕಷ್ಟದ ಸ್ಥಿತಿಯನ್ನು ತಲುಪಿತು. ೧೯೬೫ ರ ಮೇ ತಿಂಗಳಲ್ಲಿ ಇಪ್ಪತ್ತೈದನೇ ತಾರೀಖಿನಂದು ಮಂಗಳವಾರ ಮಧ್ಯಾಹ್ನ ಒಂದು ಗಂಟೆ ಸಮಯಕ್ಕೆ ತಮ್ಮ ಸ್ವಗೃಹದಲ್ಲಿ ವೆಂಕಟಪ್ಪನವರು ದೈವಾಧೀನರಾದರು.[೧೨] ಅಲ್ಲಿಗೆ ಕಲಾ ದಿಗ್ಗಜನ ಪರ್ವ ಅಂತ್ಯವಾಯಿತು. ಇದರಿಂದ ಕರ್ನಾಟಕ ಕಲೆಯ ಮಾಣಿಕ್ಯವೊಂದನ್ನು ಸಂಪೂರ್ಣವಾಗಿ ಕಳೆದುಕೊಂಡಿತು. ತಾನೊಬ್ಬ ಕಲಾವಿದ್ಯಾರ್ಥಿ ಎನ್ನುತ್ತಲೇ ತಮ್ಮ ಜೀವನದುದ್ದಕ್ಕೂ ಪ್ರೌಢಿಮೆಯನ್ನು ಮೆರೆದ ಕಲಾದೇವಿಯ ಸಂಜಾತ ಕೆ. ವೆಂಕಟಪ್ಪನವರು.

❖❖❖

೧೨. ಸಾ.ಕೃ.ರಾಮಚಂದ್ರರಾವ್ : ಕಲಾತಪಸ್ವಿ ಕೆ. ವೆಂಕಟಪ್ಪ, ಪ್ರಾ.ಸಂ.ನಿ. ಹೊಸಪೇಟೆ, ೨೦೦೪. ಪುಟ – ೧೦೬

ಅಧ್ಯಾಯ - ಮೂರು

ಕೆ. ವೆಂಕಟಪ್ಪನವರ ರೇಖಾ ಚಿತ್ರಗಳು




ಅಧ್ಯಾಯ : ಮೂರು

ಕೆ. ವೆಂಕಟಪ್ಪನವರ ರೇಖಾ ಚಿತ್ರಗಳು

ಯಾವುದೇ ವಸ್ತುವಿಷಯ ದೃಶ್ಯಮಾಧ್ಯಮದ ಚಿತ್ರಾಕೃತಿಯನ್ನು ಹೊಂದಲು ಪ್ರಾರಂಭದ ಹಂತವೇ ಬಿಂದು ಹಾಗೂ ರೇಖೆ. ಬಹುಸಂಖ್ಯೆ ಬಿಂದು ಜೋಡಣೆಯಿಂದಾಗಿ ರೇಖೆಯು ಪ್ರಾರಂಭವಾಗುವುದು. ರೇಖೆಗಳಲ್ಲಿ ಎರಡು ವಿಧದ ರೇಖೆಯನ್ನು ನಾವು ಕಾಣಬಹುದು. ಒಂದು ಸರಳ ರೇಖೆ. ಮತ್ತೊಂದು ವಕ್ರ ರೇಖೆ. ಈ ಎರಡೂ ರೇಖೆಗಳು ತನ್ನದೇ ಆದ ಮಹತ್ವವನ್ನು ಹೊಂದಿವೆ.

ಚಿತ್ರಕಲೆಯ ಉಲ್ಲೇಖವನ್ನು ವೇದಗಳ ಕಾಲದಿಂದಲೇ ನಾವು ಗಮನಿಸಬಹುದು. ಇದಲ್ಲದೆ ಇತಿಹಾಸ ಪೂರ್ವಕಾಲದಿಂದ ರೇಖೆಯು ತನ್ನ ಮಹತ್ವವನ್ನು ಸಾಬಿತುಪಡಿಸಿದೆ. ಆದಿಮಾನವನು ತನ್ನ ಭಾವನೆಯ ಅಭಿವ್ಯಕ್ತಿ ಮಾಧ್ಯಮವಾಗಿ ಭಾಷೆಯ ಪೂರ್ವದಲ್ಲಿ ಸನ್ನೆಗಳನ್ನು ಬಳಸಲಾರಂಭಿಸಿದನು. ಇದು ಅವನ ಜೀವನ ಕ್ರಮ. ಬೇಟೆಯಾಡಲು ರೂಪಿಸ ಬೇಕಾಗುವ ತಂತ್ರವೆಣೆಯಲು ಸಹಕಾರಿಯಾಗಿತ್ತು. ಸನ್ನೆಗಳಲ್ಲಿ ದೇಹವೈಖರಿ, ಸನ್ನೆ, ಮುಖಭಾವ ಸನ್ನೆ, ಹಸ್ತ ಮುದ್ರಿಕೆಗಳು ಇವುಗಳು ಬಹು ಮುಖ್ಯವಾದವು.



ಈ ಸನ್ನೆಗಳಿಂದ ಆದಿಮಾನವರು ಅವರವರ ಭಾವಭಿವ್ಯಕ್ತ ಪಡಿಸಲು ಸಹಾಯವಾಗುತ್ತಿತ್ತು. ಅವುಗಳಲ್ಲಿ ಅವರ ಜೀವನಕ್ರಮ, ಬೇಟೆಯ ತಂತ್ರಗಾರಿಕೆ, ವ್ಯಾವಹಾರಿಕೆ ಅಭಿವ್ಯಕ್ತಿ ಸಾಧನವಾಗಿತ್ತು. ಇವುಗಳಲ್ಲಿ ಹಸ್ತ ಸನ್ನೆಗಳು ಬಹುಮುಖ್ಯವಾಗಿದ್ದವು. ದಿನಕಳೆದಂತೆ ರೇಖೆಗಳ ವರ್ಣಗಳ ಭಿನ್ನತೆಯನ್ನು ತಿಳಿದರು. ರೇಖೆಗಳಿಂದಾಗುವ ಪ್ರಭಾವ ಹಾಗೂ ರೇಖೆಯು ನೀಡುವ ವ್ಯಾಖ್ಯಾನದ ಅರ್ಥವನ್ನು ತಿಳಿಯಲಾರಂಭಿಸಿದರು. ಮೊದಲಿಗೆ ಆಹಾರದ ಅವಶ್ಯಕತೆಗಾಗಿ ಬೇಟೆಯಾಡುವ ತಂತ್ರವನ್ನು ಇತರರಿಗೆ ಸೂಚಿಸಲು ರೇಖೆಯ ಮೂಲಕ ಅಲ್ಲಿ ನಡೆಯಬಹುದಾದ ಪ್ರಸಂಗವನ್ನು ದೃಶ್ಯಮಾಧ್ಯಮದಲ್ಲಿ ತಿಳಿಸಲು ರೇಖೆಯ ಮಹತ್ವವನ್ನು ಪ್ರಾಗಿತಿಹಾಸದ ಜನರು ಅರಿತರು. ಇದೇ ಕಲೆ ದಿನಕಳೆದಂತೆ ಮನೋರಂಜನೆಯಾಗಿ, ಜನಾಂಗದ ಸಂಸ್ಕೃತಿಯಾಗಿ ಬೆಳೆದು ಬಂದಿತು.

ಅ.ಲ. ನರಸಿಂಹನ್ ರೇಖೆಯ ಬಗ್ಗೆ ಪ್ರಸ್ತಾಪಿಸುವಾಗ ಚಿತ್ರಕಲೆಯ ಇತಿಹಾಸ ಆರಂಭವಾಗುವುದೇ ರೇಖಾಚಿತ್ರಗಳಿಂದ. ದಕ್ಷಿಣ ಫ್ರಾನ್ಸ್ ಹಾಗೂ ಸ್ಪೇನ್‌ಗಳಲ್ಲಿ ಹಬ್ಬಿರುವ ಕಾಂಟ್‌ಬ್ರಿಯನ್ ಪರ್ವತ ಶ್ರೇಣಿಗಳಲ್ಲಿ ಪೂರ್ವ ಪ್ಯಾಲಿಯೋಲಿಥಿಕ್ ಕಾಲದ ಆದಿಮಾನವ ಬೇಟೆಗಾರರು ಗುಹೆಗಳ ಭಿತ್ತಿಯಲ್ಲಿ ರಚಿಸಿದ ಚಿತ್ರಕಲೆಗಳಲ್ಲಿ ರೇಖಾಚಿತ್ರದ ಅಂಶಗಳಿದ್ದು, ಇವುಗಳೇ ಪ್ರಪಂಚದ ಆದಿಯ ರೇಖಾಚಿತ್ರಗಳೆಂದು ಗುರುತಿಸಿದ್ದಾರೆ. ಈ ರೀತಿಯಾಗಿ ಲೇಖನ ಒಂದರಲ್ಲಿ ಅಭಿಪ್ರಾಯಿಸಿದ್ದಾರೆ.[೧]


ರೇಖೆ ಮಾನವ ಇತಿಹಾಸದಷ್ಟೇ ಪ್ರಾಚೀನವಾದುದು. 'ಗೆರೆ ರೇಖೆಯಕು' ಎಂದಿದ್ದಾನೆ ಮಂಗರಾಜ ತನ್ನ ನಿಘಂಟಿನಲ್ಲಿ. ಸಂಸ್ಕೃತದ ರೇಖೆ ಕನ್ನಡದಲ್ಲಿ ಗೆರೆ ಅಥವಾ ಗಿಟು. ಇಂಗ್ಲೀಷಿನಲ್ಲಿ Line ಅಥವಾ Drawiwing ಈ ಪದವನ್ನು ಚಿತ್ರವೇ ಅಲ್ಲದೆ ಬೇರೆ ಬೇರೆ ಸಂದರ್ಭದಲ್ಲಿ ವಿವಿಧ ಅರ್ಥದಲ್ಲಿ ಉಪಯೋಗಿಸಲಾಗಿದೆ. "ಅಪ್ಪ ಹಾಕಿದ ಗೆರೆ ದಾಟುವುದಿಲ್ಲ" ಎಂಬ ಗಾದೆ ಇಲ್ಲವೇ ? ಹಾಗೆಯೇ ಲಕ್ಷ್ಮಣ ರೇಖೆ, ಅದೃಷ್ಟ ರೇಖೆ ಎಂಬ ಪದಗಳನ್ನು ಕೇಳಿದ್ದೇವೆ. ಹೀಗೆ ರೇಖೆ ನಮ್ಮ ಜೀವನದ ಅನೇಕ ಸಂದರ್ಭಗಳಲ್ಲಿ ಹಾಸು ಹೊಕ್ಕಾಗಿದೆ.[೨]

ಭಾರತದಲ್ಲಿಯೂ ಚಿತ್ರಕಲೆಯಲ್ಲಿ ರೇಖೆಗೆ ಪ್ರಥಮ ಸ್ಥಾನವಿದೆ. ಶಿಲ್ಪ ಶಾಸ್ತ್ರದಲ್ಲಿ "ರೇಖಾಂ ಪ್ರಶಂಸತಾಚಾರ್ಯ" ಎಂದು ಹೇಳಲಾಗಿದೆ. ವಿಷ್ಣು ಧರ್ಮೋತ್ತರ ಪುರಾಣದಲ್ಲಿ ಪೂರ್ವಾಚಾರ್ಯರು ಸಮೀಚೀನತೆಯನ್ನು ಶ್ಲಾಘಿಸುತ್ತಾರೆ ಎಂದು ಹೇಳಲಾಗಿದೆ. ಅಭಿಲಷಿತಾರ್ಥ ಚಿಂತಾಮಣಿಯಲ್ಲಿ ಭಿತ್ತಿಯ ಸಿದ್ಧತೆಯ ನಂತರ ಮೊದಲಿಗೆ ಹಾಕುವ ಕರಡು ನಕ್ಷೆಯನ್ನು 'ಆಕಾರ ಮಾತೃಕಾ ಲೇಖ' ಎಂದೂ, ಬಣ್ಣಗಳನ್ನು ತುಂಬಿದ ಮೇಲೆ ಅಂತಿಮವಾಗಿ ಹಾಕುವ ರೇಖೆಗಳನ್ನು 'ಆಕಾರ ಜಾನಿಕಾ

---

೦೧. ಬಿ.ವಿ.ಕೆ.ಶಾಸ್ತ್ರೀ : ರೇಖಾ ಚಿತ್ರಗಳು.(ಸಂ). ಪುಟ – ೩೪

೦೨. ಅದೇ., ಪುಟ – ೩೬




ಲೇಖಾ' ಎಂದು ಕರೆದಿದೆ. ಅಂತಿಮ ರೇಖೆಯನ್ನು ಅರಗಿನ ಬಣ್ಣದಿಂದ ಹಾಕುತ್ತಿದ್ದರು.

ಕಾವ್ಯಗಳಲ್ಲಿ 'ಲಾಕ್ಷಾ ರಸ ರೇಖಾ ಶುದ್ಧಿ' ಎಂದು ಇದನ್ನು ಕರೆಯಲಾಗಿದೆ. ಇದೇ ರೀತಿ ಹಲವಾರು ಭಾರತೀಯ ಮಹಾಗ್ರಂಥಗಳಲ್ಲಿ ಚಿತ್ರಕಲೆಯ ಉಲ್ಲೇಖವನ್ನು ಮಾಡಲಾಗಿದ್ದು ಹಲವು ಭಾಷೆಯಲ್ಲಿ ಇವು ರಚಿತವಾಗಿವೆ. ಹೆಚ್ಚಾಗಿ ಸಂಸ್ಕೃತದಲ್ಲಿ ಕಾಣಬಹುದು. ಇತ್ತೀಚಿನ ಪ್ರಪಂಚ ಕಲಾವಲಯದಲ್ಲಿ ರೇಖಾ ಚಿತ್ರಕಲೆಯನ್ನು ಒಂದು ಸ್ವಯಂಪೂರ್ಣ ಕಲೆ ಎಂದು ಭಾವಿಸುವ ಪರಿಕಲ್ಪನೆ ಇತ್ತೀಚಿನದು. ಆಧುನಿಕ ನವ್ಯ ಎನ್ನಬಹುದಾದದ್ದು. ಏಕೆಂದರೆ ಪ್ರಾಚೀನ ಕಾಲದಲ್ಲಿ ವರ್ಣ ಚಿತ್ರಕಲೆಗಿಂತ ಅದು ಭಿನ್ನ ಎಂದು ಭಾವಿಸಿರಲಿಲ್ಲ. ಭಾರತದಲ್ಲಿ ಶಿಲ್ಪ, ವರ್ಣಚಿತ್ರ ಬೇರೆ ಬೇರೆಯಾಗಿರಲಿಲ್ಲ. ಚಿತ್ರ ಎಂದಾಗ ಅದೊಂದು ಸಮಗ್ರ ರಚನೆ ಎಂಬಂತಿತ್ತು. ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳಲ್ಲೂ ಒಂದೇ ಶಬ್ದ ರೇಖಾಚಿತ್ರ, ವರ್ಣಚಿತ್ರ ಸೂಚಿಸುತ್ತಿತ್ತು. ಅಲ್ಲದೆ ಕ್ರಿ.ಪೂ. ಐದನೇ ಶತಮಾನದವರಿಗೆ ವರ್ಣಚಿತ್ರ ರಚನೆಯ ಪ್ರಧಾನ ಲಕ್ಷಣಗಳಾದ ನೆರಳು-ಬೆಳಕು, ಆಳದ ಭ್ರಮೆ ಮೂಡಿಸುವ ಮೂರು ಆಯಾಮಗಳ ಕಲ್ಪನೆಯೂ ಇರಲಿಲ್ಲ. ಏಕವರ್ಣ ಅಥವಾ ಬಹುವರ್ಣ ರೇಖಾಚಿತ್ರಗಳೇ ಇದ್ದುದು.[೩]

ಪಾಶ್ಚಾತ್ಯರಲ್ಲೂ ಸಹ ರೇಖೆಯ ಬಗ್ಗೆ ಹಲವು ಸಿದ್ಧಾಂತಗಳು ಮಂಡಿತವಾಗಿವೆ. ಆದಿಪೂರ್ವಕಾಲದಿಂದ ಕಲೆಯಲ್ಲಂತೂ ರೇಖೆಗಳದ್ದೇ ಪಾರುಪತ್ಯ. ಅದನ್ನು ಹೊರತುಪಡಿಸಿ ಕ್ರಿಸ್ತನ ನಂತರ ಕಾಲದಲ್ಲಿ ಅವನ ಜೀವನ ವೃತ್ತಾಂತದ ಮೇಲೆ ಬಂದ ಕಲಾಕೃತಿಗಳು ಎಲ್ಲವೂ ವರ್ಣಮಯ ಕಲಾಕೃತಿಗಳು. ಅಲೆಕ್ಸಾಂಡರರ ವಿಶ್ವ ಪರ್ಯಟನೆಯ ಕಾಲಕ್ಕೆ ಪಾಶ್ಚಾತ್ಯರು ಶಿಲ್ಪಾಕೃತಿಯ ರಚನೆಗಾಗಲೇರೇಖಾ ನಕ್ಷೆಗಳನ್ನು ಬಳಸುತ್ತಿದ್ದರು. ಆಗಿನ ವಾಸ್ತುವಿನ್ಯಾಸಕ್ಕೂ ಸಹ ಹಲವು ಬಗೆಯ ಕಾರಣಗಳಿಂದಲೂ ರೇಖೆಯ ಪರಿಕಲ್ಪನೆ ಇವರಿಗಿತ್ತು. ವಾಸ್ತವವಾಗಿ ಇವರ ವರ್ಣಚಿತ್ರಗಳಲ್ಲಿ ರೇಖೆಯ ಬಳಕೆ ಕ್ರಿ.ಶ. ೧೩೫೨ ರಲ್ಲಿ ಟೊಮಾಸೋ-ಡ-ಮೊದನಾ ಎಂಬಾತನು ರಚಿಸಿದ ಪಾರ್ಚ್‌ಮೆಂಟ್ ಕಾಗದದ ಮೇಲಿನ ಚಿತ್ರವೇ ಮೊದಲ ರೇಖಾಚಿತ್ರವಾಗಿದೆ ಎಂಬುದು ಪಾಶ್ಚಾತ್ಯ ಕಲಾವಿದ್ವಾಂಸರ ಅಭಿಪ್ರಾಯ.

ಜೋನಾಥನ್ ರಿಚರ್ಡ್ಸನ್ ಎಂಬಾತ ಕ್ರಿ.ಶ. ೧೭೧೫ ರಲ್ಲಿ ರೇಖೆಯ ಕುರಿತಾಗಿ ತನ್ನ ಸಿದ್ಧಾಂತವನ್ನು ಮಂಡಿಸುತ್ತಾನೆ. "ಕಲಾವಿದ ತನ್ನ ಆಲೋಚನೆಗಳನ್ನು ಮನಸ್ಸಿನಲ್ಲಿ ಮೂಡಿದ ಬಿಂಬಗಳನ್ನು ಪೂರ್ಣಪ್ರಮಾಣದಲ್ಲಿ, ಮೂಲಕಲ್ಪನೆಗಳನ್ನು ಕೈಗಳ ಮೂಲಕ ಮೊಟ್ಟ ಮೊದಲಿಗೆ ರೂಪಿಸುವುದು, ರೇಖಾ ಚಿತ್ರದ ಮೂಲಕವೇ ಆಗಿದ್ದು ಅದೇ ಚಿತ್ರಕಲೆಯ ಬಂಡವಾಳವೂ ಆಗಿರುತ್ತದೆ" ಎಂಬುದು

೦೩. ಬಿ.ವಿ.ಕೆ.ಶಾಸ್ತ್ರೀ : ರೇಖಾ ಚಿತ್ರಗಳು.(ಸಂ). ಪುಟ – ೩೮



ಇಂಗ್ಲೆಂಡಿನ ಜೋನಾಥನ್ ರಿಚರ್ಡ್ಸನ್ ಅಭಿಪ್ರಾಯವಾಗಿದೆ. ಇನ್ನು ಕ್ರಿ.ಶ. ೧೭೪೫ ರಲ್ಲಿ ಕ್ಯಾಂಟೋನಿಯೋ ಜೋಸೆಫ್ ಎಂಬಾತ "ಕಲಾವಿದನ ಪ್ರಥಮ ಕಲ್ಪನೆಗಳು, ಸೃಜನಾತ್ಮಕ ಆವಿಷ್ಕಾರಗಳ ಮೂಲಗಳು, ಶೈಲಿಯ ಬುನಾದಿಗಳು ಹಾಗೂ ಆತನ ಸತ್ಯವಾದ ಆಲೋಚನೆಯ ಸತ್ವಗಳು ಚಿತ್ರಗಳಲ್ಲಿ ಕಂಡುಬರುತ್ತವೆ" ಎಂಬುದು ಈತನ ವಾದವಾಗಿದೆ. ಇದೇ ರೀತಿಯಲ್ಲಿ ಹಲವಾರು ಕಲಾವಿದ ವಿದ್ವಾಂಸರರು ರೇಖೆಯ ಕುರಿತಾಗಿ ತಮ್ಮ ವಿಚಾರವನ್ನು ಆಧಾರಪೂರ್ಣವಾಗಿ ಮಂಡಿಸುತ್ತಾರೆ.

ಭಾರತೀಯರೂ ಯಾವ ಜ್ಞಾನದಿಂದ ಹಿಂದೆ ಸರಿದವರಲ್ಲ. ಎಲ್ಲಾ ಜ್ಞಾನಗಳ ಅರ್ಥಪೂರ್ಣ, ಔಚಿತ್ಯಪೂರ್ಣ ಅರಿವು ಅತಿ ಪುರಾತನ ಕಾಲದಿಂದ ಭಾರತೀಯರಿಗಿದೆ. ಇದಕ್ಕೆ ಸಾಕ್ಷಿ ಎಂಬಂತೆ ಕ್ರಿ.ಪೂ. ೫೦೦೦ ವರ್ಷಗಳ ಹಿಂದೆಯೇ ದಿನಬಳಕೆಯ ವಸ್ತುಗಳ ಮೇಲೆ ವರ್ಣಭರಿತ ರೇಖೆಗಳಿಂದ ಚಿತ್ರಿಸಿರುವುದು ತೋರುತ್ತದೆ. ಅಲ್ಲದೆ ನಾಣ್ಯಗಳ ಮೇಲೂ ಸಹ ಲಿಪಿ ಮುದ್ರೆಯನ್ನು ನಾವು ಕಾಣಬಹುದು. ಇದಾದ ನಂತರ ಅಜಂತಾ, ಎಲ್ಲೋರಗಳಲ್ಲಿಯ ವರ್ಣಚಿತ್ರಗಳ ಮೇಲೆ ಗಾಢ ಬಣ್ಣದ ರೇಖೆಗಳನ್ನು ಸಹ ನಾವು ಕಾಣಬಹುದು. ಇವುಗಳನ್ನು ಗಮನಿಸಿದಾಗ ಪಾಶ್ಚಾತ್ಯರಿಗಿಂತ ಭಾರತೀಯ, ಶ್ರೀಲಂಕ, ಚೀನಾ, ಜಪಾನೀಯರ ಸಾಂಪ್ರದಾಯಿಕ ಕಲೆಗಳಲ್ಲೇ ಹೆಚ್ಚಾಗಿ ರೇಖೆಯ ಪಾರುಪತ್ಯವನ್ನು ಗಮನಿಸಬಹುದಾಗಿದೆ. ಅಲ್ಲದೆ ದೇಶಿ ಪರಂಪರೆ ಮೆರುಗಿಗೆ ಬಂದರೆ ರೇಖೆ ಘಾಮ್ಯತೆ, ಆಳ, ಹರಿವಿನ ಗಹನತೆ ನಮಗಾಗುತ್ತದೆ. ಜಾನಪದರ ರಂಗೋಲಿ, ಹಚ್ಚೆ, ಮದರಂಗಿ, ಸಹೆ ಇತ್ಯಾದಿ ಕಲೆಗಳು ಹಿಂದೂ ಸಂಸ್ಕೃತಿಯ ಸಂಸ್ಕಾರವನ್ನು ತಿಳಿಸಿದರೆ, ಇಲ್ಲಿ ನಡೆಯುವ ಉತ್ಸವಗಳು ಕಲೆ ವೈಭವವನ್ನು ತೋರುತ್ತವೆ. ಉದಾಹರಣೆಗೆ ಕಾರ ಹುಣ್ಣಿಮೆ, ಶಿಗಿ ಹುಣ್ಣಿಮೆ, ದಸರೆ ನವರಾತ್ರಿ ಉತ್ಸವ, ಮದುವೆಯಲ್ಲಿನ ಹಾಗೂ ಮಲೆನಾಡಿನ ಹಸೆ ಕಲೆಯ ಪರಂಪರೆ, ಕರಾವಳಿ ಪ್ರದೇಶದ ಭೂತಾರಾಧನೆಯಲ್ಲಿ ಬಳಸುವಂತಹ ರಂಗೋಲಿ ಕಲೆ ಹೀಗೆ ಇನ್ನೂ ಹತ್ತಾರು ಉದಾಹರಣೆಯನ್ನು ನಮ್ಮ ಕಲೆಯಲ್ಲಿ ರೇಖೆಯ ಪ್ರಾಧಾನ್ಯತೆಯನ್ನು ಕುರಿತು ಹೇಳಬಹುದಾಗಿದೆ.

ರೇಖೆ


ಸಾಮಾನ್ಯವಾಗಿ ರೇಖೆಗಳಲ್ಲಿ ಎರಡು ಮುಖ್ಯ ವಿಧಗಳಿವೆ. ಒಂದು ಸರಳ ರೇಖೆ ಮತ್ತೊಂದು ವಕ್ರ ರೇಖೆ. ಈ ಸರಳ ಮತ್ತು ವಕ್ರ ರೇಖೆಗಳಲ್ಲಿ ಮತ್ತೆ ಹಲವು ವಿಧಗಳಿವೆ. ಲಂಬ ರೇಖೆ, ಕ್ಷಿತಿಜ ರೇಖೆ, ಬಾಗು ರೇಖೆ, ದಾಟು ರೇಖೆ, ಕಂಸ ರೇಖೆ, ಗೊಂದಲಮಯ ರೇಖೆ, ವಲಯ ರೇಖೆ, ದಪ್ಪ ರೇಖೆ, ನಾಜೂಕು ರೇಖೆ, ಅಂಕುಡೊಂಕು ರೇಖೆ, ತುಂಡು ರೇಖೆ, ಗೀಚು ರೇಖೆ ಮುಂತಾದುವುಗಳೆಂದು ವರ್ಗೀಕರಿಸಬಹುದು. ರೇಖೆಗಳಲ್ಲಿನ ಅಭಿವ್ಯಕ್ತಿ ಸಾಮರ್ಥ್ಯ ಅಪರಿಮಿತವಾದುದು ಎಂದು ಉಲ್ಲೇಖಿಸುತ್ತ ಇದರಲ್ಲಿ ಮುಖ್ಯವಾಗಿ ಐದು ಅಂಶಗಳನ್ನು ಗುರುತಿಸುತ್ತಾರೆ. ಅವು,

೦೧. ರೇಖೆಯ ಭಾರ
೦೨. ರೇಖೆಯ ದಿಕ್ಕು
೦೩. ರೇಖೆಯ ಗುಣಧರ್ಮ
೦೪. ರೇಖೆಯನ್ನು ಚಿತ್ರಿಸಿದ ಮಾಧ್ಯಮ
೦೫. ರೇಖೆಯ ಮೇಲ್ಮೈ

ವಿವಿಧ ಮಾಧ್ಯಮಗಳಲ್ಲಿ ಚಿತ್ರಿಸಿದ ರೇಖೆಗಳು ವಿಭಿನ್ನ ಗುಣಧರ್ಮಗಳನ್ನು ಹೊಂದಿರುತ್ತವೆ. ಅಷ್ಟೇ ಅಲ್ಲ ವಿಭಿನ್ನ ಪರಿಣಾಮಗಳನ್ನು ಮೂಡಿಸುತ್ತವೆ. ಒಂದು ನೇರ ರೇಖೆ ಹಾಗೂ ಬಾಗಿದ ರೇಖೆ ಅಥವಾ ತೀವ್ರತೆಯಿಂದ ಬರೆದ ರೇಖೆ ಮತ್ತು ಮಂದಗತಿಯಿಂದ ಬರೆದ ರೇಖೆ ಅವುಗಳ ಸಂಯೋಜನೆ ಹಾಗೂ ಉತ್ಪತ್ತಿ ಮಾಡುವ ಭಾವನೆಗಳು, ಅರ್ಥಗಳು ಬೇರೆ ಬೇರೆಯಾಗಿಯೇ ಆಗಿರುತ್ತವೆ. ರೇಖೆಗಳಲ್ಲಿ ಜೀವಶಕ್ತಿ, ಚಲನಶೀಲತೆ, ಭಾವಪ್ರಕಾಶಗಳ ಸಂಗಮವನ್ನು ಕಾಣಬಹುದು.[೪]

ರೇಖೆ ಎನ್ನುವುದು ಒಂದು ಬಿಂದುವಿನಿಂದ ಪ್ರಾರಂಭವಾಗಿ ಬಹಳಷ್ಟು ಬಿಂದುಗಳನ್ನು ಭೇದಿಸಿಕೊಂಡು ಅಂತ್ಯದ ಬಿಂದುವನ್ನು ಸಂಯೋಗ ಹೊಂದಿ ರೇಖೆಯಾಗಿ ಪರಿಪೂರ್ಣ ಹೊಂದುವುದು. ಯಾವುದೇ ವ್ಯಕ್ತಿಗೆ ದೃಗೋಚಿತವಾಗಿ ಕಾಣುವ ವಿಷಯವನ್ನು ತನ್ನ ಸ್ಮೃತಿಯಿಂದ ವಿವೇಚಿಸಿ ತನ್ನ ಸೃಜನಶೀಲ ಭಾವನೆಯಿಂದ ಹೊರಬರುವ ಅಭಿವ್ಯಕ್ತಿ ಮಾಧ್ಯಮಾವಗಿ ರೇಖೆ ಕಾರ್ಯನಿರ್ವಹಿಸುತ್ತವೆ. ಯಾವುದೇ ಕೃತಿಯ ಹಿಂದೆ ಅಧಾರಸ್ತಂಭದಂತೆ ನಿಲ್ಲುವುದೇ ರೇಖೆಯ ವೈಶಿಷ್ಟ್ಯ. ಇದರ ಪೂರ್ಣ ಅರಿವು ನಮಗಿದ್ದರೂ ಪಾಶ್ಚಾತ್ಯರಿಂದ ಇದರ ಮಹತ್ವವನ್ನು ದಾಖಲೀಕರಣದಿಂದ ನಾವು ಒಪ್ಪಿಕೊಳ್ಳಬೇಕಾಯಿತು. ಪಾಶ್ಚಾತ್ಯರಲ್ಲಿ ಅಧುನಿಕ ಕಲೆಯ ಕ್ರಾಂತಿಯ ಸಂದರ್ಭದಲ್ಲಿ ರೇಖೆಯ ಕುರಿತಾಗಿ ಕಲಾ ಚಳುವಳಿಗಳೇ ನಡೆದವು. ಇದರ ಫಲವಾಗಿ ರೇಖೆಯೂ ಪ್ರಬಲ ಮಾಧ್ಯಮವೆಂದು ಕಲಾ ವಲಯದಲ್ಲಿ ಸಂಚಲನ ಸೃಷ್ಟಿಸಿತು. ಪಾಶ್ಚಾತ್ಯ ಕಲಾವಿದನಾದ ವ್ಯಾನ್‌ಗೊ ತನ್ನ ಪತ್ರವೊಂದರಲ್ಲಿ ರೇಖೆಯ ಕುರಿತು ಹೇಳುತ್ತಾನೆ, “ರೇಖಾಚಿತ್ರ ಎಂದರೆ ಒಬ್ಬನು ಭಾವಿಸಿಕೊಳ್ಳುವುದು ಹಾಗೂ ಒಬ್ಬನು ಮಾಡಬಹುದಾದುದರ ನಡುವೆ ಇರುವಂತಹ ಕಂಡುಬರುವ ಅದೃಶ್ಯ ಕಬ್ಬಿಣದ ಗೋಡೆಯ ಒಳಗೆ ಪ್ರವೇಶ ಪಡೆಯುವವರೆಗೂ ಕಷ್ಟಪಟ್ಟು ಕೆಲಸ ಮಾಡುವುದು” ಈ ವ್ಯಾಖ್ಯಾನದಿಂದ ರೇಖೆ ಎನ್ನುವುದಕ್ಕೆ ಎಷ್ಟು ಪ್ರಬಲವಾದ ವ್ಯಾಖ್ಯೆ ದೊರೆಯುತ್ತದೆ. ಇದು ವ್ಯಾನ್‌ಗೊವಿಗೂ ಹಾಗೂ ಅವರ ಮನಸ್ಸಿಗೂ ಸಂಬಂಧಿಸಿದ ಕಠಿಣ ಹೇಳಿಕೆಯಾಗಿದೆ. ಚಿ.ಸು.ಕೃ. ಹೇಳುವ ಹಾಗೆ “ಕಲಾವಿದನೊಬ್ಬನನ್ನು ನಿಜಕ್ಕೂ ಬಯಲು ಮಾಡುವುದು ರೇಖಾಚಿತ್ರಗಳೇ. ಅದು ಅವನ ಸಹಿ ಇದ್ದಂತೆ” ಎನ್ನುವ ಮಾತುಂಟು. ವ್ಯಕ್ತಿಯೊಬ್ಬನ ಕೈ ಬರವಣಿಗೆಯಂತೆಯೇ ರೇಖಾಚಿತ್ರ ಒಂದು ಕಲಾವಿದನ ಆ ಸಂದರ್ಭದ ಚಿಂತನೆ ಮತ್ತು ಮನಃಸ್ಥಿತಿಗಳನ್ನು ಪ್ರತಿಬಿಂತಿಸುತ್ತದೆ.[೫]

---
೦೪. ಡಾ.ಎಸ್.ಸಿ.ಪಾಟೀಲ್: ವರ್ಣ ಸಂಚಯ, ಪುಟ ೧೯.
೦೫. ಚಿ.ಸು.ಕೃಷ್ಣ ಸೆಟ್ಟಿ: ಚಿತ್ರ ಚಿತ್ತ, ಪುಟ ೯೯.




ವೆಂಕಟಪ್ಪನ ರೇಖೆಗಳು

ಕಲಾವಿದ ಕೆ. ವೆಂಕಟಪ್ಪನವರು ಜನಸಿದ್ದೇ ಕಲಾವಿದರ ಮನೆತನದಲ್ಲಿ. ಇವರ ಪೂರ್ವಜರು ವಿಜಯನಗರ ಕಾಲದಿಂದಲೂ ಆಸ್ಥಾನ ಕಲಾವಿದರಾಗಿದ್ದರು. ಆ ಮಹಾ ಸಾಮ್ರಾಜ್ಯದ ಅವನತಿಯ ನಂತರ ದೇಶದ ಬೇರೆ ಬೇರೆಡೆಗೆ ಚದುರಿ ಹೋದರು. ಅ ಸಂದರ್ಭದಲ್ಲಿ ಚಿತ್ರದುರ್ಗವನ್ನು ಪ್ರವೇಶಿಸಿ ಅಲ್ಲಿಯೇ ಹಲವಾರು ವರ್ಷಗಳ ಕಾಲ ಉಳಿದರು. ಇಲ್ಲಿಯೂ ಸಹ ಹೈದರಾಲಿಯ ಆಕ್ರಮಣವಾದ ಮೇಲೆ ವಿಧಿ ಇಲ್ಲದೆ ಮೈಸೂರಿಗೆ ಹೋಗಿ ಮೊದಲಿಗೆ ಶ್ರೀರಂಗಪಟ್ಟಣದಲ್ಲಿ ನೆಲೆಸಿದರು. ಮೈಸೂರಿನ ಅರಮನೆ ಸುಟ್ಟ ಬಳಿಕ ಅದರ ನಿರ್ಮಾಣ ಕಾರ್ಯ ಎಲ್ಲಾ ರೀತಿಯ ಕುಶಲಕಲೆಯ ಕಲಾವಿದರಿಗೆ, ವಾಸ್ತುತಜ್ಞರಿಗೆ, ಕಟ್ಟಡ ಕಟ್ಟುವ ಕೆಲಸಗಾರರಿಗೆ ಎಲ್ಲರಿಗೂ ಮೈಸೂರಲ್ಲಿ ಹೊಸ ಅರಮನೆಯ ನಿರ್ಮಾಣ ಕಾರ್ಯದ ಹೊಣೆ ಇದ್ದುದರಿಂದ ಶ್ರೀರಂಗಪಟ್ಟಣದಿಂದ ಮೈಸೂರಿಗೆ ಸ್ಥಳಾಂತರಗೊಂಡರು. ಅರಮನೆಯ ಸುತ್ತಮುತ್ತಲಲ್ಲಿ ವಾಸಮಾಡತೊಡಗಿದರು.

ಆ ಕಾಲಕ್ಕೆ ರವಿವರ್ಮರವರು ಶ್ರೇಷ್ಠ ಕಲಾವಿದರಾಗಿದ್ದರು. ಆದ ಕಾರಣ ಮೈಸೂರಿನ ರಾಜವರ್ಗದವರು ರವಿವರ್ಮರನ್ನು ಕಂಡು ಮೈಸೂರು ಅರಮನೆಯ ಸೌಂಧರ್ಯ ಪ್ರತೀಕವಾದ ವರ್ಣಚಿತ್ರಕಲೆಯ ಸಂಪೂರ್ಣ ಜವಾಬ್ದಾರಿಯನ್ನು ಅವರ ಕೈಗಿಟ್ಟರು. ಆಗ ರವಿವರ್ಮರವರು ಹಲವಾರು ಕಲಾವಿದರನ್ನು ತನ್ನ ಕೈಕೆಳಗಿರಿಸಿಕೊಂಡು ಚಿತ್ರ ರಚನೆಯ ಕಾರ್ಯದಲ್ಲಿ ಸಕ್ರಿಯರಾದರು. ಇದೇ ಸಂದರ್ಭದಲ್ಲಿ ವೆಂಕಟಪ್ಪನವರ ತಂದೆಯವರೂ ಸಹ ಆಸ್ಥಾನದಲ್ಲಿ ಕಲಾವಿದರಾಗಿ ಕಾರ್ಯನಿರ್ವಹಿಸುತ್ತಿದ್ದರು. ಆದ ಕಾರಣ ವೆಂಕಟಪ್ಪನವರೂ ಸಹ ಆಗಾಗ ತಮ್ಮ ತಂದೆಯ ಜೊತೆಯಲ್ಲಿ ಆಸ್ಥಾನಕ್ಕೆ ಭೇಟಿ ನೀಡುತ್ತಿದ್ದರು. ಅಂದಿನಿಂದಲೇ ಚಿತ್ರಕಲೆಯ ವರ್ಣ ಛಾಯೆಗಳು ಬಾಲಕ ವೆಂಕಟಪ್ಪನವರ ಎದೆಸೀಳಿ ಮನಹೊಕ್ಕಿದವು.

ಈ ಸಂದರ್ಭದಲ್ಲಿ ರವಿವರ್ಮರ ತಂದೆಯಾದ, ಕೃಷ್ಣಪ್ಪರ ಹಾಗೂ ತನ್ನ ತಂದೆಯ ಸಹೋದ್ಯೋಗಿಗಳ ಈ ಎಲ್ಲಾ ಕಲಾವಿದರ ಪ್ರಭಾವ ವೆಂಕಟಪ್ಪನವರ ಮೇಲಾಯಿತು. ಇದಾದ ಬಳಿಕ ಮದರಾಸಿನಲ್ಲಿ ಕಲಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಅರಮನೆಯಲ್ಲಿ ಕೆಲಕಾಲ ಕಾರ್ಯನಿರ್ವಹಿಸಿದರು. ಆ ಕಾಲಕ್ಕೆ ಅವರಿಗೆ ಹಿರಿಯ ಕಲಾವಿದರಿಗೆ ನೀಡಲಾಗುತ್ತಿದ್ದ ಸಂಭಾವನೆಯನ್ನು ನೀಡುತ್ತಿದ್ದು. ಇದಾದ ಬಳಿಕ ಕೆಲ ಅಧಿಕಾರಿವರ್ಗದ, ಮಹಾರಾಜರ ಗಮನ ಸೆಳೆದು ವಿದ್ಯಾರ್ಥಿ ವೇತನ ಪಡೆದು, ಕಲ್ಕತ್ತೆಯ ಸರಕಾರಿ ಕಲಾಶಾಲೆಯನ್ನು ಸೇರಿದರು. ಅಲ್ಲಿ ಅವನೀಂದ್ರನಾಥರ ಶಿಷ್ಯರಾದ ಇವರು ಅವನೀಂದ್ರರಿಂದ ಪ್ರಭಾವಿತರಾಗಿ ಭಾರತೀಯ ಸಾಂಪ್ರದಾಯಿಕ ಕಲೆಯ ಕಡೆ ವಾಲಿದರು.



ಇವರ ಹಿರಿಯರಾದ ನಂದಲಾಲರೂ ಸಹ ವೆಂಕಟಪ್ಪನವರ ಆಪ್ತ ಮಿತ್ರರಾದರು. ಇವರಿಬ್ಬರನ್ನು ಕಂಡರೆ ಅವನೀಂದ್ರನಾಥರಿಗೆ ಎಲ್ಲಿಲ್ಲದ ವಾತ್ಸಲ್ಯ. ೧೯೧೧ರಲ್ಲಿ ಇಂಗ್ಲೇಂಡಿನಿಂದ ಬಂದ 'ಲೇಡಿ ಹರಿಂಗ್ ಹ್ಯಾಮ್' ರವರು ಅವನೀಂದ್ರರನ್ನು ಭೇಟಿಯಾಗಿ "ಅಜಂತಾದ ಭಿತ್ತಿ ಚಿತ್ರಗಳನ್ನು ಪ್ರತಿಮಾಡಿಕೊಡಲು ಸಾಂಪ್ರದಾಯಿಕ ಕ್ಷೇತ್ರದಲ್ಲಿ ಶ್ರೇಷ್ಠರರು ಹಾಗೂ ರೇಖಾಚಿತ್ರದಲ್ಲಿ ಹಿಡಿತ ಸಾಧಿಸಿದವರನ್ನು ಗುರುತಿಸಿ ನನ್ನ ಜೊತೆಗೆ ಕಳಿಸಿಕೊಡಿ" ಎಂದು ಕೇಳಿದಾಗ ಅವನೀಂದ್ರರು ಅಷ್ಟು ಜನ ವಿದ್ಯಾರ್ಥಿಗಳಲ್ಲಿ ನಂದಲಾಲರನ್ನು ಹಾಗೂ ವೆಂಕಟಪ್ಪನವರವನ್ನು ಗುರುತಿಸಿ ಕೆಲವು ತಿಂಗಳುಗಳ ಕಾಲ ಅಜಂತಾಕ್ಕೆ ಕಳುಹಿಸಿಕೊಟ್ಟರು.

ಈ ರೀತಿಯಾಗಿ ವೆಂಕಟಪ್ಪನವರ ಕಲೆಯಲ್ಲಿ ರೇಖೆಗೆ ತನ್ನದೇ ಆದ ಪ್ರಾತಿನಿಧ್ಯ ದೊರೆಯಿತು. ಇವರು ಚಿತ್ರರಚನೆಗೆ ಮುನ್ನ ಸಂಪೂರ್ಣವಾಗಿ ರೇಖಾಚಿತ್ರವನ್ನು ರಚಿಸಿಕೊಂಡ ನಂತರವೆ ವರ್ಣ ಲೇಪನ ಹಾಗೂ ನೆರಳು ಬೆಳಕಿನ ವರ್ತುಲಗಳನ್ನು ವಿಭಾಗಿಸುತ್ತಿದ್ದರು. ಇವರ ಜೀವನ ಎಷ್ಟರ ಮಟ್ಟಿನ ಚೌಕಟ್ಟಿನಿಂದ ಕೂಡಿತ್ತೋ ಅದೇ ರೀತಿಯಲ್ಲಿ ಇವರ ಕಲಾಕೃತಿಯಲ್ಲಿಯೂ ಸಹ ಅಷ್ಟೇ ನಿಯಮ, ನಿಷ್ಠೆಗಳಿದ್ದವು. ಎಂದಿಗೂ ಆ ಕಟ್ಟಳೆಗಳನ್ನು ಅವರು ಮೀರುತ್ತಿರಲಿಲ್ಲ. ಇವರ ರೇಖಾಚಿತ್ರಗಳಲ್ಲಿ ಹಲವು ಬಗೆಯ ಹಾಗೂ ವೈಶಿಷ್ಟ್ಯಮಯ ರೇಖಾ ವಿನ್ಯಾಸವನ್ನು ಕಾಣಬಹುದು. ಇವರ ರೇಖೆಗಳನ್ನು ಅಧ್ಯಯನಕ್ಕೆ ಅಳವಡಿಸಿದಾಗ ಐದು ವಿಭಾಗಗಳಾಗಿ ವಿಂಗಡಿಸಿ ಅಧ್ಯಯನಕ್ಕೆ ಒಳಪಡಿಸಬಹುದು.

೧. ಅಜಂತ ಗುಹಾಲಯದ ರೇಖಾಚಿತ್ರಗಳು.

೨. ದೇವತೆಗಳ ರೇಖಾಚಿತ್ರಗಳು.

೩. ಹೋಲಿಕೆಯ ರೇಖಾಚಿತ್ರಗಳು.

೪. ತಳಮಾನದ ರೇಖಾಚಿತ್ರಗಳು.

೫. ಸಂಕೀರ್ಣ ರೇಖಾಚಿತ್ರಗಳು.

ಹೀಗೆ ಐದು ವಿಭಾಗಗಳಾಗಿ ಚಿತ್ರಗಳ ಗುಣಗ್ರಹಗಣಗಳ ವೈಶಿಷ್ಟ್ಯ, ವಿಶೇಷತೆಗಳ ಸಂಶೋಧನಾತ್ಮಕ ವಿಸ್ತೃತ ವಿವರಣೆಯನ್ನು ನೀಡುವ ವಿವೇಚನೆಯನ್ನು ಕಾಣಬಹುದು.

೧. ಅಜಂತ ಗುಹಾಲಯದ ರೇಖಾಚಿತ್ರಗಳು

ಭಾರತ ದೇಶದ ಕಲಾ ಶ್ರೀಮಂತಿಕೆಗೆ ಸಾಕ್ಷಿಯಾಗಿರುವ ಅಜಂತ ಗುಹಾಲಯದ ಚಿತ್ರಗಳು ನಮ್ಮ ಭಾರತೀಯರ ಹೆಮ್ಮೆಯ ಪ್ರತೀಕ. ೨೧ ನೇ ಶತಮಾನ ಕಳೆದರೂ ಇಂದಿಗೂ ನೋಡ ಸಿಗುವ ಜಲವರ್ಣ ಭಿತ್ತಿ ಚಿತ್ರಗಳು ಭಾರತೀಯರ ರಸಶಾಸ್ತ್ರ ಸಿದ್ಧಾಂತಗಳಿಗೆ ಕಳಸಪ್ರಾಯವಾದದ್ದು. ಭಾರತವನ್ನು


ಹಲವು ದೇಶದವವರು ಹಲವು ಬಗೆಗಳಲ್ಲಿ ಕೊಳ್ಳೆ ಹೊಡೆದರೂ ನಮ್ಮ ದೇಶದ ಜ್ಞಾನ, ಸಂಸ್ಕೃತಿ, ಸಂಸ್ಕಾರ, ಕಲೆ, ವಿಜ್ಞಾನಗಳನ್ನು ಹೊರದೇಶದವರಿಗೆ ಹೊತ್ತೊಯ್ಯಲು ಸಾಧ್ಯವಾಗಲಿಲ್ಲ. ಅದ್ದರಿಂದ ಇಂದಿಗೂ ಭಾರತವು ಸಾಂಸ್ಕೃತಿಕ ಬೀಡಾದರೂ ಜಾಗತಿಯ ಯುಗದಲ್ಲಿ ಬೇರೆ ದೇಶಗಳಿಗೆ ಭುಜಕ್ಕೆ ಭುಜ ಕೊಟ್ಟು ಪ್ರಗತಿಪರ ದೇಶಗಳ ಸರಿಸಮಾನವಾಗಿ ಸಾಗುತ್ತಿದೆ.

ಕ್ರಿ.ಶ. ೧೯೧೧ರಲ್ಲಿ ಇಂಗ್ಲೆಂಡಿನ 'ಲೇಡಿ ಹರಿಂಗ್ ಹ್ಯಾಮ್' ಎಂಬ ಮಹಿಳೆ ಭಾರತಕ್ಕೆ ಬಂದರು. ಇವರ ಉದ್ದೇಶ ಈಗಿನ ಮಹಾರಾಷ್ಟ್ರದಲ್ಲಿರುವ ಅಜಂತಾ ಗುಹಾಲಯದಲ್ಲಿನ ಭಿತ್ತಿ ಚಿತ್ರಗಳನ್ನು ನಕಲು ಮಾಡಿಸಿ ಅವುಗಳನ್ನು ಇಂಗ್ಲೇಂಡಿನಲ್ಲಿ ಪ್ರದರ್ಶನ ಮಾಡುವುದಾಗಿತ್ತು. ಠ್ಯಾಗೂರ್ ಮನೆತನದವರಾದ ನಿವೇದಿತರವರು ಲೇಡಿ ಹರಿಂಗ್ ಹ್ಯಾಮ್‌ರವರ ಸ್ನೇಹಿತರಾದ ಕಾರಣ ಹರಿಂಗ್ ಹ್ಯಾಮ್‌ರವರು ನಿವೇದಿತರವರ ಬಳಿ ತಮ್ಮ ಉದ್ದೇಶವನ್ನು ಹಂಚಿಕೊಂಡರು. ನಿವೇದಿತರವರು ಇವರ ಸಹೋದರರಾದ ಕಲ್ಕತ್ತಾ ಕಲಾಶಾಲೆಯ ಅಧ್ಯಾಪಕರಾಗಿದ್ದ ಅವನೀಂದ್ರರ ಪರಿಚಯವನ್ನು ಮಾಡಿಸಿದರು. ಅವರ ಬಳಿಯಲ್ಲಿ ಅಜಂತಾದಲ್ಲಿ ಚಿತ್ರಗಳನ್ನು ನಕಲು ಮಾಡುವ ಬಯಕೆಯನ್ನು ವ್ಯಕ್ತಪಡಿಸಿದಾಗ ಅದಕ್ಕೆ ಅವನೀಂದ್ರರು ಒಪ್ಪಿ ರೇಖಾಚಿತ್ರವನ್ನು ರಚಿಸಿಕೊಡುವ ಅಭಯವನ್ನು ನೀಡಿದರು. ಈ ಕಾರ್ಯಕ್ಕೆ ಶ್ರೇಷ್ಠ ಕಲಾ ವಿದ್ಯಾರ್ಥಿಯ ಆಯ್ಕೆ ಮಾಡಿದರು. ಅವರೆಂದರೆ ನಂದಲಾಲ್ ಬೋಸ್ ಹಾಗೂ ಕೆ. ವೆಂಕಟಪ್ಪನವರು. ಇವರಿಬ್ಬರು ಆ ಕಾಲಕ್ಕೆ ಶ್ರೇಷ್ಠ ರೇಖಾಚಿತ್ರ ವಿನ್ಯಾಸಕರಾಗಿದ್ದರು. ಆ ಸಂದರ್ಭದಲ್ಲಿ ವೆಂಕಟಪ್ಪನವರು ರಚಿಸಿದ ಹಲವು ರೇಖಾಚಿತ್ರಗಳನ್ನು ಕೆಳಕಂಡಂತೆ ವಿವೇಚಿಸಬಹುದು.

ಮರದ ಮೇಲೆ ಬಾಗಿದ ಸ್ತ್ರೀ

ಈ ಅಜಂತಾ ಚಿತ್ರಗಳು ವೆಂಕಟಪ್ಪನವರು ೧೯೧೧ರಲ್ಲಿ ಅಜಂತಾ ಗುಹಾಲಯಕ್ಕೆ ತೆರಳಿದ ಸಂದರ್ಭದಲ್ಲಿ ರಚಿಸಿದ ಚಿತ್ರಗಳಾಗಿವೆ. ಮರದ ಮೇಲೆ ಬಳ್ಳಿಯಂತೆ ಬಾಗಿರುವ ಸ್ತ್ರೀಯು ಕೇಶಾಲಂಕಾರ ಮಾಡಿಕೊಂಡಿದ್ದು ನಯನ ಮನೋಹರವಾಗಿ ಕಾಣುತ್ತಿದ್ದಾಳೆ. ಕೇಶವನ್ನು ತುರುಬಿನಂತೆ ಬಾಚಿ ಕಟ್ಟಿದ್ದು, ಬಲಗೈಯಿಂದ ಕೇಶದ ಮುಂಗುರಳನ್ನು ಹಿಡಿದು ಬೆರಳುಗಳಿಂದ ತಿರುವುತ್ತಿದ್ದಾಳೆ. ಕಿವಿಗೆ ಸುರಳಿ ಸುರಳಿ ಇರುವ ಬೆಂಡೋಲೆ ಮಾದರಿಯನ್ನು ಧರಿಸಿದ್ದಾಳೆ. ಕಣ್ಣು ಹಾಗೂ ಉಬ್ಬುಗಳ ಭಾವ ತನ್ನ ಪ್ರಿಯಕರನ ಕುರಿತು ಯೋಚಿಸುತ್ತಿರುವುದನ್ನು ತೋರುವುದು. ಇದಕ್ಕೆ ಪುಷ್ಟಿ ಕೊಡುವಂತೆ ತುಟಿಯ ಮೇಲೆ ನಲಿದಾಡುತ್ತಿರುವ ಮಂದಸ್ಮಿತ ನಗು ಸಾಕ್ಷಿಯಾಗಿದೆ.

ನೀಳವಾದ ಕತ್ತು ಅದಕ್ಕೆ ದಪ್ಪನೆಯ ನಾಲ್ಕೆಳೆಯ ಸರ ಅದರ ಮೇಲೆ ಮೂರು ದಳದ ಹೂವಿನ ವಿನ್ಯಾಸದ ಪದಕವಿದೆ. ಎಡ ಭುಜವು ಎದ್ದಿದ್ದು, ಬಲಭುಜವು ಕೆಳಗೆ ಬಾಗಿದೆ. ದುಂಡಾದ ಸ್ತನಗಳನ್ನು




ಹೊಂದಿರುವ ಸ್ತ್ರೀ ನಗ್ನವಾಗಿ ನಿಂತಿರುವಂತೆ ಕಲಾವಿದರು ಚಿತ್ರಿಸಿದ್ದಾರೆ. ಸೊಂಟವು ಎಡದಿಂದ ಬಲಕ್ಕೆ ಬಾಗಿ ಇಳಿದಿದೆ. ಸೊಂಟವು ಭುಜಕ್ಕಿಂತಲೂ ಸಣ್ಣದಾಗಿದೆ. ಸೊಂಟದಿಂದ ಮೊಣಕಾಲಿನವರೆವಿಗೂ ಕಚ್ಚೆಯ ಮಾದರಿಯ ಧೋತ್ರವನ್ನು ಉಟ್ಟಿದ್ದಾಳೆ. ಆ ನಡುವಿಗೆ ಆಭರಣದಿಂದ ವಿನ್ಯಾಸಗೊಳಿಸಿದ್ದಾರೆ. ಬಲಗಾಲು ನೇರವಾಗಿದ್ದು, ಎಡಗಾಲು ಬಾಗಿ ಹಿಮ್ಮಡಿಯನ್ನು ಎತ್ತಿದ್ದಾಳೆ. ಕಾಲ್ಬಂದಿಯನ್ನು ಸಹ ಈ ಸ್ತ್ರೀ ಧರಿಸಿರುವಂತೆ ತೋರಿಸಲಾಗಿದೆ. ಎಡಗೈಯಲ್ಲಿ ಯಾವುದೋ ಒಂದು ಹಣ್ಣನ್ನು ಹಿಡಿದಿರುವುದು ಕಾಣಿಸಿದರೆ, ಅದರ ಹಿಂದೆಯೇ ಚಾಮರದ ವಿನ್ಯಾಸವು ಕಾಣುತ್ತದೆ. ಈ ಸ್ತ್ರೀಯ ಹಿಂಭಾಗದಲ್ಲಿ ಸಣ್ಣದಾದ ಮರದ ಕೊಂಬೆಗಳು ಕಾಣುತ್ತವೆ. ಆ ಕೊಂಬೆಗೆ ಈ ಸುಂದರ ಸ್ತ್ರೀ ಬಳ್ಳಿಯಂತೆ ಹಬ್ಬಿರುವುದನ್ನು ಕಲಾವಿದರು ಮನೋಹರವಾಗಿ ತೋರಿಸಿದ್ದಾರೆ. ಒಟ್ಟಾರೆಯಾಗಿ ಈ ಚಿತ್ರವು ಅಜಂತಾ ಭಿತ್ತಿಚಿತ್ರದ ಕುರುಹಾಗಿದ್ದು ಇದನ್ನು ವೆಂಕಟಪ್ಪನವರು ವರ್ಣ ಚಿತ್ರ ರಚಿಸುವ ಮುನ್ನ ತಯಾರಿಗಾಗಿ ಇವುಗಳನ್ನು ಮಾಡುತ್ತಿದ್ದರು ಎಂದು ಹೇಳಲಾಗುವುದು. ಈ ಚಿತ್ರವು ಸಂಪೂರ್ಣವಾಗಿ ರೇಖೆಯಿಂದ ಕೂಡಿದ್ದು, ಅಜಂತಾ ಶೈಲಿಯನ್ನು ಹೊಂದಿದೆ. ಇದೊಂದು ಕರಡು ಚಿತ್ರವೆಂದು ಹೇಳಬಹುದು.

ಸಂಗೀತ ಗಾತ್ರಿಯರು

ಈ ಚಿತ್ರವನ್ನು ೧೯೧೧ರಲ್ಲಿ ರಚಿಸಲಾಗಿದ್ದು, ಇದೂ ಸಹ ಅಜಂತಾದ ಭಿತ್ತಿಚಿತ್ರದ ಕರಡು ಪ್ರತಿ. ಇದರು ರೇಖಾ ಚಿತ್ರವಾಗಿದ್ದು ರೇಖೆಗಳಿಂದ ಕೂಡಿದೆ. ಒಂದು ಅಲಂಕೃತ ವಿನ್ಯಾಸ ಉಳ್ಳ ಗೋಡೆಯ ಪಕ್ಕದಲ್ಲಿ ಕುಳಿತು ಆರು ಮಂದಿ ಸ್ತ್ರೀಯರು ಸಂಗೀತವಾದ್ಯಗಳನ್ನು ಬಾರಿಸುತ್ತಿರುವುದು ಕಾಣಬಹುದು. ಹಿಂಬದಿಯಲ್ಲಿ ಇರುವ ಸ್ತ್ರೀಯು ನಿಂತಿದ್ದು, ತನ್ನ ಸ್ತನಗಳನ್ನು ನಗ್ನವಾಗಿರಿಸಿಕೊಂಡಿದ್ದಾಳೆ. ತನ್ನ ತಲೆಯ ಮೇಲೆ ಕೇಶ ಬಿಲ್ಲೆಯನ್ನು ಸಹ ಸಿಂಗರಿಸಿಕೊಂಡು ಬಲಗೈಯಿಂದ ತಲೆಗೂದಲನ್ನು ಹಿಡಿದಿದ್ದಾಳೆ. ಕೊರಳಿಗೆ ಅಂಟಿಕೊಂಡಂತೆ ಮಣಿ ಸರವನ್ನು ಕಟ್ಟಿಕೊಂಡಿದ್ದು, ಸಣ್ಣನೆಯ ಮಣಿಗುಚ್ಚನ್ನು, ಸರಗುಚ್ಚನ್ನು ನೀಳವಾಗಿ ಸ್ತನಕ್ಕೆ ತಾಕುವಂತೆ ಬಿಟ್ಟುಕೊಂಡಿದ್ದಾಳೆ.

ಇವಳ ಮುಂಭಾಗದಲ್ಲಿ ಪಕ್ಕ ಪಕ್ಕದಲ್ಲಿ ಕುಳಿತಿರುವ ಮೂವರು ಸ್ತ್ರೀಯರಿದ್ದಾರೆ. ಬಲಭಾಗದ ಸ್ತ್ರೀ ತಲೆಗೆ ತುರುಬನ್ನು ಕಟ್ಟಿದ್ದು, ಕಿವಿ ಖಾಲಿ ಇವೆ. ಕೈಯಲ್ಲಿ ತಾಳವಾದ್ಯವನ್ನು ಹಿಡಿದಿದ್ದು, ಚೌಕ ಮನೆಗಳುಳ್ಳ ವಸ್ತ್ರವನ್ನು ಧರಿಸಿದ್ದಾಳೆ. ಇವಳ ಪಕ್ಕದ ಸ್ತ್ರೀಯೂ ಸಹ ತಾಳವನ್ನು ಹಿಡಿದಿದ್ದಾಳೆ. ಇವಳ ಪಕ್ಕದಲ್ಲಿರುವ ಮತ್ತೊಬಳಿಗೆ ಅವರೆಲ್ಲರಿಗಿಂತ ದೊಡ್ಡ ದೇಹವನ್ನು ತೋರಿಸಲಾಗಿದ್ದು, ಕೇಶವನ್ನು ತುರುಬಿನ ವಿನ್ಯಾಸದಲ್ಲಿ ಕಟ್ಟಿದ್ದು, ಅದಕ್ಕೆ ಹೂಗಳನ್ನು ಮುಡಿದಿದ್ದಾಳೆ. ಕೊರಳಿಗೆ ನೀಳವಾದ ಹಾಗೂ ಕತ್ತಿಗೆ ಅಂಟಿಕೊಂಡಂತಿರುವ ಸರಗಳನ್ನು ಕಾಣಬಹುದು.




ಇವಳ ಎದೆಭಾಗ ಹಾಗೂ ಸೊಂಟದ ಕೆಳಭಾಗವನ್ನು ಬಟ್ಟೆಯಿಂದ ಮುಚ್ಚಲಾಗಿದೆ. ಇವರ ಮುಂಭಾಗದಲ್ಲಿ ಮೃದಂಗ ಮಾದರಿಯ ಎರಡು ದೊಡ್ಡ ವಾದ್ಯಗಳನ್ನು ಕಾಣಬಹುದು. ಇವಳ ಮುಂಭಾಗದಲ್ಲಿ ಇಬ್ಬರು ಸ್ತ್ರೀಯರಿದ್ದು, ಒಬ್ಬಳು ಬಲಭಾಗಕ್ಕೆ ತಿರುಗಿದ್ದು, ಮತ್ತೊಬ್ಬಳು ಬೆನ್ನು ತೋರಿಸಿಕೊಂಡು ಕುಳಿತಿದ್ದಾಳೆ. ಬಲಕ್ಕೆ ತಿರುಗಿರುವ ಮುಂಭಾಗದ ಸ್ತ್ರೀಯು ಬುಡಕಟ್ಟು ಜನರು ನುಡಿಸುವ ಢಕ್ಕೆ ಮಾದರಿಯ ವಾದ್ಯವನ್ನು ಹಿಡಿದಿದ್ದರೆ, ಮತ್ತೋರ್ವಳು ದುಂಡಾದ ವೃತ್ತಾಕಾರದ ವಾದ್ಯವನ್ನು ಹಿಡಿದಿದ್ದಾಳೆ. ಅದು ಯಾವ ವಾದ್ಯವೆಂದು ತಿಳಿಯುವುದಿಲ್ಲ ಹಾಗೂ ಇವಳ ಬಲಭಾಗಕ್ಕೆ ಬಟ್ಟಲು ಮಾದರಿಯನ್ನು ಕಾಣಬಹುದು.

ಒಟ್ಟಾರೆಯಾಗಿ ಈ ರೇಖಾಚಿತ್ರವೂ ಉತ್ತಮ ಸಂಯೋಜನೆ ಎನಿಸಿದರೂ ಸಹ ಯಥಾದರ್ಶವನ್ನು ಕೇಂದ್ರವಾಗಿರಿಸಿಕೊಂಡು ವಿವೇಚಿಸುವುದಾದರೆ ಚಿತ್ರದಲ್ಲಿ ತಾಳಮಾನದ ವೈಪರಿತ್ಯಗಳು ಕಾಣುತ್ತವೆ. ವಿನ್ಯಾಸದ ವಿಷಯಕ್ಕೆ ಬಂದರೆ ನಾಜೂಕಾದ ಹಾಗೂ ಸೂಕ್ಷ್ಮವಾದ ರೇಖೆಗಳನ್ನು ನಾವಿಲ್ಲಿ ಕಾಣಬಹುದು. ಇದೊಂದು ಕರಡು ಚಿತ್ರವಾದ್ದರಿಂದ ಈ ವೈಪರೀತ್ಯಗಳು ವೆಂಕಟಪ್ಪನವರಿಗೆ ಸೇರುವುದಿಲ್ಲ. ಗುಹೆಯಲ್ಲಿ ಯಾವ ರೀತಿಯ ಚಿತ್ರಗಳಿವೆ ಅವನ್ನು ಯಥಾವತ್ತಾಗಿ ಚಿತ್ರಿಸುವ ಕೆಲಸ ವೆಂಕಟಪ್ಪನವರದಾಗಿತ್ತು.

ಪ್ರಣಯದ ದೃಶ್ಯ

ಪ್ರಣದಯ ದೃಶ್ಯ, ಇಲ್ಲಿ ಸ್ತ್ರೀ ಪುರಷರಿಬ್ಬರು ಪ್ರಣಯ ಮಹೋತ್ಸವದಲ್ಲಿ ನಿರತರಾಗಿರುವ ದೃಶ್ಯ ಇದಾಗಿದ್ದು, ಪುರುಷನು ಅವನ ಮುಂದಿರುವ ಸ್ತ್ರೀಯನ್ನು ಅಲಂಗಿಸುತ್ತಿರುವುದು ಈ ಚಿತ್ರದ ಜೀವಾಳ. ಕಿರೀಟಧಾರಿಯಾಗಿರುವ ಪುರುಷನೊಬ್ಬನು ಮದ್ಯವನ್ನು ಸೇವಿಸುವ ಹೊಳ್ಳೆಯನ್ನು ಬಲಗೈಯಲ್ಲಿ ಹಿಡಿದಿದ್ದು, ಎಡಗೈಯಿಂದ ಮುಂದಿರುವ ಸ್ತ್ರೀಯ ಆಲಂಗಿಸುತ್ತಿರುವುದು ತೋರುತ್ತದೆ. ಈ ವ್ಯಕ್ತಿಯು ರಾಜನಂತೆ ತೋರುವುದರಿಂದ ಕಿರೀಟ ಧರಿಸಿದ್ದಾನೆ. ಕೊರಳಲ್ಲಿ ಮಣಿ ಸರವನ್ನು ಧರಿಸಿದ್ದು, ಕಿವಿಗಳಿಗೆ ವೃತ್ತಾಕಾರದ ಆಭರಣವನ್ನು ಧರಿಸಿದ್ದಾನೆ. ಬಲಗೈಯಲ್ಲಿ ತೋಳಿಗೆ ಮಣಿಸರವನ್ನು ಮೂರು ಸುತ್ತು ಸುತ್ತಿದ್ದು ದೇಹವನ್ನು ಜನಿವಾರ ರೀತಿಯ ದಪ್ಪದಾದ ಸಣ್ಣ ಮಣಿಗಳುಳ್ಳ ಹಾರವು ಎಡಭುಜದಿಂದ ದೇಹವನ್ನು ಸುತ್ತುವರೆದಿದೆ.

ಮುಂದಿರುವ ಸ್ತ್ರೀಯೂ ತನ್ನ ಮೇಲಿನ ದೇಹವನ್ನು ನಗ್ನವಾಗಿ ತೋರಿದ್ದಾಳೆ. ಕೊರಳಿಗೆ ಎರಡು ಮಣಿಯ ಸರಗಳು, ಕೈಗೆ ಒಂದೊಂದು ವಿನ್ಯಾಸಕೃತ ಬಳೆಗಳು, ತೋಳಿಗೆ ತೋಳ್ ಬಂದಿ, ತಲೆಗೆ ಸಣ್ಣದಾದ ಅರ್ಧ ಕಿರೀಟ, ಕಿವಿಗೆ ವೃತ್ತಾಕಾರದ ಆಭರಣಗಳನ್ನು ಧರಿಸಿದ್ದಾಳೆ. ಸೊಂಟದಿಂದ ಕೆಳಭಾಗದಲ್ಲಿ ತೆಳುವಾದ ವಸ್ತ್ರವನ್ನು ಹುಟ್ಟಿದ್ದು, ಪಾರದರ್ಶಕದಂತೆ ತೋರುವುದು. ಕಾಲಿಗೆ ಮಣಿಗಳ




ಸರವನ್ನು ಕಟ್ಟಿಕೊಂಡಿರುವುದು ತೋರುತ್ತದೆ. ಇವರಿಬ್ಬರ ಹಿಂಭಾಗದಲ್ಲಿ ದುಂಡನೆಯ ಗದೆಯು ಕಾಣುತ್ತದೆ.

ಒಟ್ಟಾರೆಯಾಗಿ ಈ ಚಿತ್ರವನ್ನು ಗಮನಿಸುವುದಾದರೆ ಇದೊಂದು ವಿಲಾಸಿ ಜೀವನದ ಪ್ರತಿರೂಪವಾದ ಚಿತ್ರವಾಗಿದೆ. ಪ್ರಣಯದ ಭಾವದ ಆಲಿಂಗನವನ್ನು ಅಭಿವ್ಯಕ್ತಿಸುತ್ತದೆ. ಈ ರೇಖಾಚಿತ್ರದಲ್ಲಿ ಸೂಕ್ಷ್ಮಾತಿಸೂಕ್ಷ್ಮ ರೇಖಾವಿನ್ಯಾಸವನ್ನು ನಾವಿಲ್ಲಿ ಕಾಣಬಹುದು. ಉತ್ತಮ ಸಂಯೋಜನೆ ಇದಾಗಿದೆ. ಇದರಲ್ಲಿ ಪ್ರೇಮಿಗಳಿಬ್ಬರ ಭಾವವನ್ನು ಎಳೆ ಎಳೆಯಾಗಿ ಗುರುತಿಸಿದ್ದಾರೆ.

ರಾಜ್ಯಾಡಳಿತದ ದೃಶ್ಯ

ಈ ದೃಶ್ಯ ಅತ್ಯುತ್ತಮ ಸಂಯೋಜನೆಯಾಗಿದೆ. ಬಹುಸಂಖ್ಯಾತರು ಈ ರೇಖಾಚಿತ್ರದಲ್ಲಿ ಕಾಣಸಿಗುತ್ತಾರೆ. ಇದೊಂದು ನಯನಮನೋಹರ ದೃಶ್ಯಾವಳಿ. ರಾಜನನ್ನು ಸೇರಿಕೊಂಡು ಏಳು ಮಂದಿ ಈ ದೃಶ್ಯದಲ್ಲಿ ಕಾಣಸಿಗುತ್ತಾರೆ. ಹಿಂಬದಿಯಲ್ಲಿ ಮೂವರ ಅರ್ಧ ದೇಹಮಾತ್ರ ಕಾಣಸಿಗುತ್ತದೆ. ಈ ದೃಶ್ಯದಲ್ಲಿ ರಾಜನೊಬ್ಬನು ಕುಳಿತುಕೊಂಡು ಕೈ ಜೋಡಿಸಿ ಮುಗಿಯುತ್ತಿರುವ ದೃಶ್ಯವಾಗಿದೆ. ರಾಜನ ಕೆಳಭಾಗದಲ್ಲಿ ಸೇವಕನು ಶಿರಬಾಗಿ ರಾಜನ ಕಾಲನ್ನು ತನ್ನ ಬೆನ್ನ ಮೇಲಿರಿಸಿಕೊಳ್ಳುತ್ತಿರುವ ದೃಶ್ಯ ಇದಾಗಿದೆ. ರಾಜನ ಹಿಂಭಾಗದಲ್ಲಿ ಮುವರು ಸೇವಕರು ಹಾಗೂ ಕೆಳಭಾಗದಲ್ಲಿ ಇಬ್ಬರು ಯೋಧರು ಕಾಣಸಿಗುತ್ತಾರೆ. ಒಟ್ಟಾರೆಯಾಗಿ ಈ ದೃಶ್ಯವನ್ನು ಗಮನಿಸಿದಾಗ ಕಟ್ಟಡ ನಿರ್ಮಾಣದ ವೇಳೆ ಅಗ್ನಿಕುಂಡದ ಮುಂದೆ ಅಗ್ನಿ ದೇವನಿಗೆ ಕರಜೋಡಿ ಮುಗಿಯುತ್ತಿರುವುದು, ಸೇವಕರು, ಯೋಧರು ರಾಜನನ್ನು ಸುತ್ತುವರೆದಿರುವುದು ಅದ್ಭುತ ಸಂಯೋಜನೆಯಾಗಿದೆ.

ವಿನಮ್ರ ಭಾವ ಉಳ್ಳ ಮಹಾರಾಜರು ಕಿರೀಟಧಾರಿಯಾಗಿರುವನು. ಉದ್ದನೆಯ ಕೇಶ, ಕೊರಳಿಗೆ ಮಣಿಯುಳ್ಳ ಎರಡು ಸರಗಳು ಹಾಗೂ ಉದ್ದನೆಯ ತ್ರಿಭಂಗಿ ಹಾರವು ಕೊರಳಿನಿಂದ ನಾಭಿಯವರೆವಿಗೂ ತೂಗಾಡುತ್ತಿರುವುದು ಗೋಚರಿಸುತ್ತಿದೆ. ಬೆರಳ್‌ಗೆ ಉಂಗುರ, ಕೈಗೆ ಕಡಗ, ತೋಳ್‌ಗೆ ತೋಳ್‌ಬಂದಿ, ಕಿವಿಗೆ ದುಂಡನೆ ಆಭರಣ ಧರಿಸಿದ್ದು ಮೇಲಿನ ದೇಹವು ನಗ್ನವಾಗಿದೆ. ಕೆಳಭಾಗದಲ್ಲಿ ಸೊಂಟದಿಂದ ಮೊಣಕಾಲಿನವರೆವಿಗೂ ವಸ್ತ್ರವನ್ನು ಧರಿಸಲಾಗಿದೆ. ಸೇವಕನು ಕೈ ಚಿನ್ಮುದ್ರೆಯನ್ನು ಹಾಕಿ ಮಂಡಿಯೂರಿ, ಕೈಯೂರಿ ತಲೆಬಾಗಿ ರಾಜನಿಗೆ ನಮಿಸುತ್ತಿರುವುದು ಕಾಣುವುದು ಹಾಗೂ ಇವರ ಮುಂಭಾಗದಲ್ಲಿರುವ ಇಬ್ಬರು ಭಟರು ಈಟಿ, ಕತ್ತಿಗಳನ್ನು ಹಿಡಿದು ಕೈಯಲ್ಲಿ ಚಿನ್ಮುದ್ರೆ ಹಾಕಿ ಕುಳಿತಿರುವುದು ಕಾಣುತ್ತದೆ. ಹಿಂಬದಿಯಲ್ಲಿ ಸೇವಕರು ಸಹ ಚಿನ್ಮುದ್ರೆಯನ್ನು ಹಿಡಿದು ಕುಳಿತಿರುವುದು ಕಾಣುವುದು.




ಒಟ್ಟಾರೆಯಾಗಿ ಇದೊಂದು ಅತ್ಯುತ್ತಮ ಸಂಯೋಜನೆ ಎಂಬುದರಲ್ಲಿ ಎರಡನೆ ಮಾತಿಲ್ಲ. ಇದರಲ್ಲಿ ವಿಷಯವಾದ ರಾಜನನ್ನು ದೊಡ್ಡದಾಗಿ ತೋರಿಸಲಾಗಿದೆ. ಇನ್ನು ಉಳಿದ ಸೇವಕರು, ಭಟರನ್ನು ಕಿರಿಯದಾಗಿ ಬಿಂಬಿಸಲಾಗಿದೆ. ಭಾರತೀಯ ಸೌಂಧರ್ಯಶಾಸ್ತ್ರ ಹಾಗೂ ತಾಳಮಾನದ ಪ್ರಕಾರವಾಗಿ ಇದೊಂದು ಉತ್ತಮ ಸಂಯೋಜನೆ. ಪಾಶ್ಚಾತ್ಯರ ಪ್ರಾಕಾರದ ಯಥಾರ್ಥವನ್ನು ಇಲ್ಲಿ ಮಂಕಾಗುವುದು. ರೇಖೆಯ ವೈಭವೀಕರಣ ಅದ್ಭುತವಾಗಿ ಬಿಂಬಿತವಾಗಿವೆ. ಸೂಕ್ಷ್ಮ ರೇಖಾವೈಖರಿಯು ಚಿತ್ರದ ಗಾಢತೆಯನ್ನು ಸೂಚಿಸುವುದು. ಇದೂ ಸಹ ಅಜಂತಾದ ಕರಡು ಚಿತ್ರವಾಗಿದೆ. ಭಾರತೀಯ ಸಂಸ್ಕೃತಿ, ಸಂಸ್ಕಾರದ ಪ್ರತೀಕವಾಗಿದೆ.

ಕೊಳಲು ನುಡಿಸುವ ಸ್ತ್ರೀಯರು

ಈ ಚಿತ್ರವೂ ಸಹ ಅಜಂತಾದಲ್ಲಿ ರಚಿಸಿರುವ ಕರಡು ಚಿತ್ರವಾಗಿದೆ. ಇಲ್ಲಿ ಇಬ್ಬರು ಸ್ತ್ರೀಯರು ಕೊಳಲನ್ನು ನುಡಿಸುತ್ತಿದ್ದು ಒಂದೇ ಭಂಗಿಯಲಿದ್ದಾರೆ. ವಿಭಿನ್ನ ಕೇಶವಿನ್ಯಾಸದಲ್ಲಿರುವ ಸ್ತ್ರೀಯರು ನೋಡಲು ಮನಮೋಹಕವಾಗಿದೆ. ಮುಂಭಾಗದಲ್ಲಿರುವವರು ರಾಣಿಯಂತೆ ತೋರುತ್ತಿದ್ದು, ಹಿಂದಿನವರು ಸೇವಕಿಯರಂತೆ ಕಾಣುತ್ತದೆ. ಮುಂದಿರುವ ಸ್ತ್ರೀ ತಲೆಗೆ ಕೇಶ ಬಿಲ್ಲೆಯನ್ನು ಧರಿಸಿದ್ದು, ತುರುಬುಕಟ್ಟಿ ಹೂ ಮುಡಿದಿದ್ದಾಳೆ. ಕಿವಿಗೂ ಆಭರಣವನ್ನು ಧರಿಸಿದ್ದಾಳೆ. ಕೊರಳ ತುಂಬ ಐದಾರು ಮಣಿಸರಗಳಿದ್ದು, ಸ್ತನಗಳನ್ನು ನಗ್ನವಾಗಿ ತೋರಿಸಲಾಗಿದೆ. ಕೈಬಳೆ, ತೋಳ್‌ಬಂದಿ ಧರಿಸಿದ್ದು ಕಚ್ಚೆ ಮಾದರಿಯ ಉಡುಪನ್ನು ಉಟ್ಟಿದ್ದಾಳೆ. ಹಿಂಭಾಗದಲ್ಲಿರುವವರು ಕಾಡಿನ ಸ್ತ್ರೀಯೆಂದು ಅವಳ ಉಡುಪಿನ ಮೇಲೆ ಗುರುತಿಸಬಹುದು. ಕೇಶವನ್ನು ಕಟ್ಟದೆ ಬಿಟ್ಟಿದ್ದು, ಕೊರಳಲ್ಲಿ ಒಂದು ಸರವನ್ನು ಧರಿಸಿದ್ದಾಳೆ. ಮೇಲಿನ ದೇಹವು ನಗ್ನವಾಗಿದ್ದು, ಕೆಳಭಾಗದಲ್ಲಿ ಮಣಿಗಳಿಂದ ಪೋಣಿಸಿರುವ ವಸ್ತ್ರವನ್ನು ಉಟ್ಟಿದ್ದಾಳೆ. ಇವರಿಬ್ಬರು ಕೊಳಲನ್ನು ನುಡಿಸುತ್ತಿರುವುದು ವಿಷಯದ ಕೇಂದ್ರಬಿಂದು.

ಒಟ್ಟಾರೆಯಾಗಿ ಉದ್ದನೆಯ ರೇಖಾಚಿತ್ರ ಇದಾಗಿದ್ದು, ಉತ್ತಮ ಸಂಯೋಜನೆ ಇಲ್ಲಿಯ ಭಾವವು ನೊಂದ ಜೀವದಂತೆ ತೋರುತ್ತಿದೆ. ರೇಖಾ ವಿನ್ಯಾಸವಂತೂ ಮನಮೋಹಕವಾಗಿ ರಚಿಸಲಾಗಿದೆ. ಹಿನ್ನೆಲೆಯಲ್ಲಿ ಯಾವ ಸ್ಥಳವೆಂದು ತೋರಿಸಿಲ್ಲ. ಅತಿ ಸೂಕ್ಷ್ಮ ರೇಖಾವಿನ್ಯಾಸ ಇದರಲ್ಲಿ ಕಾಣಬಹುದು. ಇದರಲ್ಲಿ ಸಾಮಾನ್ಯರಿಗೂ ಹಾಗೂ ರಾಜವರ್ಗದವರಿಗಿರುವ ಎರಡೂ ವ್ಯತ್ಯಾಸವನ್ನು ಕಲಾವಿದ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಇದೊಂದು ಕರಡು ಚಿತ್ರವಾದ್ದರಿಂದ ವೆಂಕಟಪ್ಪನವರು ತಮ್ಮ ವರ್ಣಚಿತ್ರಗಳಿಗೆ ಪೂರಕವಾಗುವಂತೆ ರೇಖಾಚಿತ್ರಗಳನ್ನು ಚಿತ್ರಿಸಿಕೊಳ್ಳುತ್ತಿದ್ದರು.



ಇಂದ್ರನ ರೇಖಾಚಿತ್ರ


ಆಸ್ಥಾನದಿಂದ ಇಂದ್ರನು ಐರಾವತದ ಮೇಲೆ ವಿಹಾರಕ್ಕೆ ಹೋಗುತ್ತಿರುವುದು. ಇದೊಂದು ಅದ್ಭುತ ಸಂಯೋಜನೆ. ಕಿರೀಟಧಾರಿಯಾದ ಮಹೇಂದ್ರನು ಚಿನ್ಮುದ್ರೆ, ಅಭಯ ಹಸ್ತವನ್ನು ತೋರುತ್ತಿರುವ ಮಹೇಂದ್ರ ಐರಾವತದ ಮೇಲೆ ಕುಳಿತಿರುವನು. ಆನೆಯನ್ನು ಬಹು ಸುಂದರವಾಗಿ ಶೃಂಗರಿಸಲಾಗಿದೆ. ಗಂಟೆಯನ್ನು ಕಟ್ಟಲಾಗಿದೆ. ತಲೆಗೆ ಕುಚ್ಚು, ತಲೆಯ ಮೇಲೆ ಸೊಂಡಿಲ ಮುಂಭಾಗದಲ್ಲಿ ಆಭರಣದಿಂದ ಅಲಂಕರಿಸಲಾಗಿದೆ. ಇವರ ಹಿಂಭಾಗದಲ್ಲಿ ಮರದ ಎಲೆ, ಹೂ, ಹಣ್ಣುಗಳನ್ನು ತೋರಿಸಲಾಗಿದೆ. ಒಟ್ಟಾರೆಯಾಗಿ ಬಹು ಉತ್ತಮ ಸಂಯೋಜನೆ ಇದಾಗಿದ್ದು, ಸೂಕ್ಷ್ಮ ರೇಖಾವಿನ್ಯಾಸವನ್ನು ಮಾಡಲಾಗಿದೆ. ಅದ್ಭುತ ಅಲಂಕಾರಯುತ ಕಲ್ಪನೆಯನ್ನು ಬಹು ಸುಂದರವಾಗಿ ವೆಂಕಟಪ್ಪನವರು ಕರಡು ಮಾಡಿದ್ದಾರೆ. ಇದರಲ್ಲಿ ಕಟ್ಟಡ ಯಥಾದರ್ಶನ ತಪ್ಪಿದ್ದರೂ, ಭಾರತೀಯ ಸಾಂಪ್ರದಾಯಿಕ ಕಲೆಯ ಪ್ರಕಾರವಾಗಿ ಇದು ಸರಿಯಾಗಿ ತೋರುತ್ತದೆ.

ಪುರುಷನ ರೇಖಾಚಿತ್ರ

ಪುರುಷನೊಬ್ಬನು ಎಡಗೈಯಲ್ಲಿ ಕಮಲದ ಹೂವಿಡಿದು ನಿಂತಿರುವ ದಶ್ಯ ಮನಮೋಹಕವಾಗಿದೆ. ಸದೃಢಕಾಯದ ಈ ವ್ಯಕ್ತಿಯು ತಲೆಯ ತುಂಬ ಕೇಶವನ್ನು ಬಿಟ್ಟಿದ್ದಾನೆ. ಕಿವಿಯಲ್ಲಿ ಆಭರಣ ತೊಟ್ಟಿದ್ದು, ಜನಿವಾರ ಮಾದರಿಯ ಸಪ್ತದಾರದ ಹಾರವನ್ನು ಬಲಗಡೆಯಿಂದ ತೊಟ್ಟಿದ್ದಾನೆ. ಮೇಲಿನ ದೇಹವು ಬರಿದಾಗಿದ್ದು, ಕೆಳಭಾಗದಲ್ಲಿ ಸೊಂಟದಿಂದ ಮೊಣಕಾಲಿನವರೆವಿಗೂ ವಸ್ತ್ರವನ್ನು ಉಟ್ಟು ಅದಕ್ಕೆ ಸೊಂಟಪಟ್ಟಿಯನ್ನೂ ಸಹ ಕಟ್ಟಿಕೊಂಡಿದ್ದಾನೆ. ಹಿಂಭಾಗದಲ್ಲಿ ಬಟ್ಟೆಯೊಂದು ಇಳೆ ಬಿಟ್ಟುಕೊಂಡಿದ್ದಾನೆ. ಕೈಗೆ ಕಟಾಗಳನ್ನು ತೊಟ್ಟಿದ್ದು, ತೋಳಿಗೆ ತೋಳ್‌ಬಂದಿಯನ್ನು ತೊಟ್ಟಿದ್ದಾನೆ. ಒಟ್ಟಾರೆಯಾಗಿ ಇದೊಂದು ಉತ್ತಮ ತಾಳಮಾನವಿರುವ ವ್ಯಕ್ತಿಯ ರೇಖಾಚಿತ್ರವಾಗಿದ್ದು, ಸೂಕ್ಷ್ಮ ಕೆಲಸಗಳು ಇದರಲ್ಲಿ ನಡೆದಿಲ್ಲ. ಆ ವಿಷಯಕ್ಕೆ ಎಷ್ಟು ಬೇಕೋ ಅಷ್ಟನ್ನು ಇಲ್ಲಿ ಬಿಂಬಿಸಲಾಗಿದೆ. ಹಿನ್ನೆಲೆಯನ್ನು ಖಾಲಿಯಾಗಿ ತೋರಿಸಲಾಗಿದೆ.

ಯುದ್ಧ ಕಹಳೆಯ ದೃಶ್ಯ

ಈ ದೃಶ್ಯದಲ್ಲಿ ಐವರು ವ್ಯಕ್ತಿಗಳಿದ್ದು, ಯುದ್ಧಕ್ಕೆ ಸನ್ನದ್ಧರಾಗಿ ಕಹಳೆಯನ್ನು ಹಿಂಬದಿಯಲ್ಲಿ ಯೋಧರು ಎರಡು ಉದ್ದನೆಯ ಈಟಿಯ ಮಾದರಿಯ ಗಳಗಳನ್ನು ಹಿಡಿದಿದ್ದಾರೆ. ಮತ್ತೋರ್ವ ಬಾಗಿರುವ ಕತ್ತಿಯನ್ನು ಹಾಗೂ ಗುರಾಣಿಯನ್ನು ಹಿಡಿದು ಕುಳಿತಿರುವರು. ಕೆಳಭಾಗದಲ್ಲಿ ಮತ್ತೋರ್ವನು



ಶಂಖುವನ್ನು ಹಿಡಿದು ಕಹಳೆಯನ್ನು ಮೊಳಗಿಸುತ್ತಿರುವ ದೃಶ್ಯ ಇದಾಗಿದೆ. ಒಟ್ಟಾರೆಯಾಗಿ ಈ ಸನ್ನಿವೇಶವು ಯುದ್ಧದ ಸಂಯೋಜನೆಯಾಗಿದ್ದು, ಸ್ಥಳವನ್ನು ಕಲಾವಿದ ಕಲಾವಂತಿಕೆಯಿಂದ ಬಳಸಿಕೊಂಡಿದ್ದಾನೆ. ದೃಶ್ಯ ಅಂದಿನ ಸೇನಾಬಲವನ್ನು ಮೂಲವಾಗಿ ಗುರುತಿಸಬಹುದಾಗಿದೆ.


ಯುದ್ಧ ಮಹೋತ್ಸವದ ದೃಶ್ಯ

ಈ ದೃಶ್ಯವು ಅಭೂತಪೂರ್ವ ಸಂಯೋಜನೆ. ಸ್ತ್ರೀಯರು ಯುದ್ಧದಲ್ಲಿ ಮೇಳೈಸುವುದು ಸುಂದರ ಹಾಗೂ ಮನಮೋಹಕ. ೨೦ ಶತಮಾನಗಳ ಹಿಂದೆಯೇ ಸ್ತ್ರೀಯರು ಯುದ್ಧದಲ್ಲಿ ಭಾಗವಹಿಸುತ್ತಿದ್ದರೆಂಬುದು ಈ ಕಾಲಕ್ಕೆ ಅಚ್ಚರಿಯ ವಿಷಯ. ಇಬ್ಬರು ಸ್ತ್ರೀಯರು ಕುದುರೆಯನ್ನು ಏರಿದ್ದು, ಕುದುರೆಗಳು ತನ್ನ ಎರಡೂ ಕಾಲುಗಳನ್ನು ಮೇಲೆತ್ತಿ ಜಿಗಿಯುತ್ತಿವೆ. ಕೆಳಗಿನಿಂದ ಸ್ತ್ರೀಯೊಬ್ಬಳು ರಾಣಿಗೆ ಚಾಮರವನ್ನು ಹಿಡಿದಿದ್ದಾಳೆ. ರಾಣಿಯು ಎದೆ ಕವಚವನ್ನು ಧರಿಸಿ ಕುದುರೆಯನ್ನು ಹಿಡಿದಿದ್ದಾಳೆ. ಕೆಳಭಾಗದಲ್ಲಿರುವ ಸ್ತ್ರೀಯೊಬ್ಬಳು ಕೈಯನ್ನು ಬಾಯಿಯ ಹತ್ತಿರವಿರಿಸಿ ಛೀಳಿಡುತ್ತಿದ್ದಾಳೆ. ಇವರಿಬ್ಬರ ಹಿಂಭಾಗದಲ್ಲಿ ಕತ್ತಿಯನ್ನು ಬಲಗೈಯಲ್ಲಿ ಹಿಡಿದು ಕತ್ತಿಯನ್ನು ನೋಡುತ್ತಿದ್ದಾಳೆ. ಇವರ ಹಿನ್ನೆಲೆಯಲ್ಲಿ ಪತಾಕೆ ಹಾರುತ್ತಿದೆ. ಇದೊಂದು ಬಹು ಸುಂದರ ಸಂಯೋಜನೆಯಾಗಿದೆ. ಅಲಂಕಾರಕ್ಕೆ ಪ್ರಾಧಾನ್ಯತೆ. ವಸ್ತು ವಿಷಯವನ್ನು ಹೇಳುವಲ್ಲಿ ಸಫಲವಾಗಿದೆ. ನೋಡುಗನ ಮನವನ್ನು ಸೆಳೆಯುವಂತಹ ರೇಖಾವಿನ್ಯಾಸ ಈ ದೃಶ್ಯದಲ್ಲಿದೆ. ವೆಂಕಟಪ್ಪನವರು ಬಹು ತಾಳ್ಮೆಯಿಂದ ಈ ದೃಶ್ಯವನ್ನು ಚಿತ್ರಿಸಿದ್ದಾರೆ.

ನರ್ತನ ಸ್ತ್ರೀ

ಸುಂದರ ಅಧೀಅಲಂಕೃತ ಮನಮೋಹಕ ಭಂಗಿಯ ಸ್ತ್ರೀಯು ನಾಟ್ಯವಾಡುತ್ತಿದ್ದಾಳೆ. ಕಿರೀಟಧಾರಿಣಿ ಯಾಗಿರುವ ಈಕೆ ತಲೆಗೆ ತುರುಬನ್ನು ಕಟ್ಟಿದ್ದು, ಹೂಗಳನ್ನು ಮುಡಿದಿರುವುದು ಗೋಚರಿಸುವುದು. ಸೊಂಟವನ್ನು ಬಾಗಿಸಿ ಬಲಗಾಲನ್ನು ಮುಂದಿರಿಸಿ ಎಡಗಾಲನ್ನು ಹಿಂದಿರಿಸಿದ್ದಾಳೆ. ಎರಡೂ ಪಾದಗಳನ್ನು ಎತ್ತಿ ಮುಂಗಾಲ ಮೇಲೆ ನಿಂತಿರುವ ಭಂಗಿ ಇದಾಗಿದೆ. ಎರಡೂ ಕೈಗಳನ್ನು ನೃತ್ಯ ಭಂಗಿಯಲ್ಲಿ ಹಿಡಿದಿದ್ದಾಳೆ. ಮೈಯ ತುಂಬ ವಸ್ತ್ರಾಲಂಕಾರ ಮಾಡಿಕೊಂಡಿದ್ದಾಳೆ. ಹಿನ್ನೆಲೆಯಲ್ಲಿ ಏನನ್ನೂ ತೋರಿಸಲಾಗಿಲ್ಲ.

ಒಟ್ಟಾರೆಯಾಗಿ ರೇಖಾಚಿತ್ರಗಳನ್ನು ವೆಂಕಟಪ್ಪನವರು ಬ್ರಿಟೀಷ್ ಮಹಿಳೆಗಾಗಿ ತಮ್ಮ ಕಲಾ ವಿದ್ಯಾರ್ಥಿ ಜೀವನದಲ್ಲಿಯೇ ಮಾಡಿ ಮುಗಿಸಿದರು. ೧೯೧೧ರಲ್ಲಿ ನಂದಲಾಲ್ ಬೋಸ್ ಹಾಗೂ ವೆಂಕಟಪ್ಪನವರಿಬ್ಬರು. ಇಂಗ್ಲೇಂಡಿನ ಸ್ತ್ರೀಯೊಂದಿಗೆ ಅಜಂತಾಗೆ ತೆರಳಿ ತಿಂಗಳ ಕಾಲ ಅಲ್ಲಿಯೇ ಉಳಿದು ಮಾಡಿದ



ಚಿತ್ರಗಳು ಇವಾಗಿವೆ. ವೆಂಕಟಪ್ಪನವರು ವರ್ಣಚಿತ್ರಗಳನ್ನು ಮಾಡುವ ಸಂದರ್ಭದಲ್ಲಿ ವರ್ಣಚಿತ್ರಗಳಿಗಿಂತ ಮುನ್ನ ಕರಡು ಚಿತ್ರಗಳನ್ನು ರೂಪಿಸಿಕೊಳ್ಳುತ್ತಿದ್ದರು. ಆ ಚಿತ್ರಗಳು ಇವಾಗಿವೆ. ಇವುಗಳಲ್ಲಿ ವೆಂಕಟಪ್ಪನವ ಸೃಜನಶೀಲತೆಗೆ ಅವಕಾಶ ದೊರೆಯದೇ ಇದ್ದರೂ ಸಹ ಅವರ ಕಲಾ ನೈಪುಣ್ಯತೆಗೆ ಈ ಚಿತ್ರಗಳು ಸಾಕ್ಷಿಯಾಗಿವೆ.

ಹೋಲಿಕೆಗಳ ರೇಖಾ ಚಿತ್ರಗಳು


ವೆಂಕಟಪ್ಪನವರು ಸದಾ ಕ್ರಿಯಾಶೀಲರಾಗಿದ್ದವರು ಇವರು ಮಾಡಿರುವ ಹೋಲಿಕೆ ಚಿತ್ರಗಳೇ ಸಾಕ್ಷಿಯಗಿ ನಿಲ್ಲುತ್ತವೆ. ಇವರು ಎಲ್ಲಾ ದೃಗ್ಗೋಚರ ವಸ್ತುಗಳನ್ನು ನೋಡಿದರೆ, ಅವುಗಳನ್ನು ಪರಾಮರ್ಶಿಸಿ ಅವಲೋಕಿಸಿತಿದ್ದರು. ತಾನು ನೋಡುವ ಹಾಗೂ ಕಾಣುವ ಸಕಲ ಚರಾಚರಗಳಲ್ಲಿಯೂ ಚಿತ್ರ ವಿಶೇಷತೆಗಳನ್ನು ಹುಡುಕುತಿದ್ದರು. ಇವರ ಕಲಾ ಮನಸ್ಸು ಪ್ರತಿಯೊಂದನ್ನು ರೇಖೆಗಳ ಮುಲಕ ಹಿಡಿದಿಡುವ ಪ್ರಯತ್ನವನ್ನು ಮಾಡಿದ್ದಾರೆ. ಅಂತಹುಗಳು ವಿದ್ಯಾರ್ಥಿ ದೇಸೆಯಿಂದಿಡಿದು ತಮ್ಮ ಕೊನೇಯ ಜೀವನದವರೆಗೂ ಸಬಲಾಗಿರುತ್ತಾರೆ. ಇವರ ಕ್ರಿಯಾಶೀಲತೆಗೆ ಸಾಕ್ಷಿಯೆಂಬಂತೆ ತಾನು ನೋಡಿ ಅನುಭವಿಸಿದ, ಪರಿಗ್ರಹಿಸಿದ ಎಲ್ಲವನ್ನೂ ರೇಖೆಯ ಮೂಲಕ ಸಾಕ್ಷಾತ್ಕರಿಸಿದ್ದಾರೆ. ಇವೆಲ್ಲವೂ ಇಂದಿನ ಕಲಾವಿದ್ಯಾರ್ಥಿಗಳಿಗೆ, ಸಾಮಾನ್ಯರ ಹಾಗೂ ಕಲಾವಿದರ ದೃಷ್ಟಿಕೋನದ ಅರಿವನ್ನು ಮೂಡಿಸುವ ಪ್ರಯತ್ನವನ್ನು ಮಾಡಿದೆ. ಈ ದಿಸೆಯಲ್ಲಿಯೇ ಇವರು ರಚಿಸಿರುವ ಈ ಎಲ್ಲಾ ರೇಖಾಚಿತ್ರಗಳ ಸವಿಸ್ಥಾರದ ಅರವನ್ನು ಮಾಡಲಾಗಿದೆ.

ಕಿವಿಯ ಹೋಲಿಕೆಯಲ್ಲಿ ರಣಹದ್ದು

ಈ ರೇಖಾಚಿತ್ರದಲ್ಲಿ ಮೊದಲಿಗೆ ಮೇಲ್ಭಾಗದಲ್ಲಿ ಮನುಷ್ಯನ ಕಿವಿಯಾಕಾರವನ್ನು ಮಾಡಲಾಗಿದ್ದು, ಇದರ ಕೆಳಭಾಗದಲ್ಲಿ ಅದೇ ಆಕಾರದ ಪ್ರೇರಣೆಯಿಂದ ಹೋಲಿಕೆಯನ್ನು ಕಲ್ಪಿಸಲಾಗಿದೆ. ಕಿವಿಯ ಬಾಹ್ಯ ರೇಖೆ ಒಳ ಕಿರುಳು, ಕಪಾಳ ರಂಧ್ರವನ್ನು ಸೂಕ್ಷ್ಮವಾಗಿ ರಚಿಸಿ ಹಾಗೂ ಗಮನಿಸಿದಾಗ ರಣಹದ್ದಿನ ಕಲ್ಪನೆಯೇ ಮೂಡಿಸುವಂತೆ ರೇಖಾ ವಿನ್ಯಾಸ ಮಾಡಲಾಗಿದೆ. ಇದನ್ನು ಕಾಗದದ ಮೇಲೆ ಸೀಸದಿಂದ ಬರೆಯಲಾಗಿದ್ದು, ದಪ್ಪನೆಯ ಹಾಗೂ ತೆಳುವಾದ ರೇಖೆಯನ್ನು ಇಲ್ಲಿ ಗಮನಿಸಬಹುದಾಗಿದೆ.

ಕಾಲು ಹಾಗೂ ಮೀನು

ಈ ಒಂದು ರೇಖಾ ವಿನ್ಯಾಸದಲ್ಲಿ ತೊಡೆಯಿಂದ ಮುಂಗಾಲಿನ ರೇಖಾವಿನ್ಯಾಸವಿದ್ದು, ಇದರ ಹೋಲಿಕೆಯ ಅಂಶವಾಗಿ ಮೀನನ್ನು ಬಳಸಲಾಗಿದ್ದು. ನಮ್ಮ ಕಾಲಿನಲ್ಲಿಯ ಮೀನ್ಖಂಡವನ್ನು ಇಲ್ಲಿ




ಅಭಿವ್ಯಕ್ತಿಸಲಾಗಿದೆ. ನೋಡುಗರಿಗೆ ಇದು ಸಾಮಾನ್ಯವೆಸಿದರೂ ಸಹ ಇಲ್ಲಿ ಕ್ರಿಯಾಶೀಲ ಆಲೋಚನೆಗೆ ಮಹತ್ವವನ್ನು ನೀಡಲಾಗುವುದು. ಮೀನಿನ ಎದೆ ಹಾಗೂ ಹೊಟ್ಟೆಯ ಭಾಗವು ದಪ್ಪವಾಗಿದ್ದು, ಬಾಲವನ್ನು ನೀಲವಾಗಿ ಕಾಲಿನ ಕೀಲಿನಂತೆ ಬಿಂಬಿಸಲಾಗಿದೆ. ಇದು ಸಹ ಕಾಗದದ ಮೇಲೆ ರಚಿಸಲಾಗಿದ್ದು, ಸೀಸದಿಂದ ರೇಖಾವಿನ್ಯಾಸವನ್ನು ಪೂರ್ಣಗೊಳಿಸಲಾಗಿದೆ.

ತೋಳು ಮತ್ತು ಬಾಳೇ ಗಿಡ

ಈ ದೃಶ್ಯದಲ್ಲಿ ಬಾಳೇ ಗಿಡದ ಬಂಬಿನ ಹಾಗೂ ಅದರ ಎಲೆಗಳ ವಿನ್ಯಾಸದಿಂದ ಮನುಷ್ಯನ ತೋಳಿನ ಹೋಲಿಕೆ ಮಾಡಲಾಗಿದೆ. ಇಲ್ಲಿ ಕಲಾವಿದನು ತನ್ನ ಸೃಜನಶೀಲತೆಯನ್ನು ಮೆರೆದಿದ್ದಾನೆ. ಬಾಳೆ ಕಂದಿನ ವಿನ್ಯಾಸದಿಂದ ಮನುಷ್ಯನ ಕೈತೋಳಿನ ಕಲ್ಪನೆ ವಿಸ್ಮಯವೆನಿಸುವಂತಹದ್ದು, ಇಲ್ಲಿ ಎರಡು ಅಂಶಗಳು ಸಾಮ್ಯತೆಯ ಹೋಲಿಕೆಯನ್ನು ತೋರಿಸಲಾಗಿದೆ. ಈ ರೇಖಾವಿನ್ಯಾಸವನ್ನು ಸಹ ಕಾಗದದ ಮೇಲೆ ರಚಿಸಲಾಗಿದ್ದು, ಸೀಸದ ಕಡ್ಡಿಯ ಸಹಾಯದಿಂದ ಪೂರ್ಣಗೊಳಿಸಲಾಗಿದೆ. ಇದೇ ರೀತಿಯಾಗಿ ಇನ್ನೂ ಹಲವಾರು ವಸ್ತುವಿಷಯವನ್ನು ನಾವಿಲ್ಲಿ ಕಾಣಬಹುದು. ಅವುಗಳೆಂದರೆ ನಂದಿಯ ಮುಖ ಹಾಗೂ ಕುಳಿತಿರುವ ದೇವಧೂತ, ಡಮರು ಹಾಗೂ ದೇವಕನ್ಯೆಯ ನಡುವು, ತುಟಿಗಳು ಹಾಗೂ ಹೂವಿನ್ಯಾಸ, ತುಟಿ ಹಾಗೂ ದಾಸವಾಳ, ಸ್ತ್ರೀ ತೊಡೆಗಳು ಹಾಗೂ ನೀಲ ಮರದ ತಳಿಕೆಳಗಾದ ಚಿತ್ರಣ, ಶಿಲ್ಪಸ್ತ್ರೀ ಹಾಗೂ ಆನೆಯ ಸೊಂಡಿಲು, ಮೊಟ್ಟೆಯ ಆಕಾರ ಹಾಗೂ ಬುದ್ಧ, ಬೋಧಿ ಎಲೆ ಹಾಗೂ ಬುದ್ಧ, ಗಿಳಿಯ ಕೊಕ್ಕು ಹಾಗೂ ದೇವತೆಯ ಮೂಗು, ಬಟಾಣಿಯ ಕಾಯಿ ಹಾಗೂ ಕೈ ಬೆರಳುಗಳು, ಸಂಪಿಗೆ ಹೂ ಹಾಗೂ ಕೈಬೆರಳುಗಳು, ಎಲೆಗಳು, ಕೈ, ಕಮಲದ ಹೂ ಹಾಗೂ ಪಾದಿಕೆ ಹೀಗೆ ಹತ್ತು ಹಲವು ಹೋಲಿಕೆಯು ವಿನ್ಯಾಸವನ್ನು ಇಲ್ಲಿ ತೋರಿಸಲಾಗಿದೆ ಈ ಎಲ್ಲಾ ರೇಖಾವಿನ್ಯಾಸಗಳಲ್ಲಿಯೂ ಸಹ ಶೈಲಿ, ತಂತ್ರ, ವಸ್ತುವಿಷಯಗಳ ಸಾಮ್ಯತೆಯನ್ನು ಕಾಣಬಹುದಾಗಿದೆ.

ತಾಳಮಾನದ ರೇಖಾಚಿತ್ರಗಳು

ತಾಳಮಾನದ ರೇಖಾಚಿತ್ರಗಳಲ್ಲಿ ವೆಂಕಟಪ್ಪನವರು ಭಾರತೀಯ ತಾಳಮಾನವನ್ನು ಬಳಸಿಕೊಂಡಿದ್ದಾರೆ. ಸ್ಫುರದ್ರೂಪಿ ವ್ಯಕ್ತಿಯ ಅಂಗಚಿತ್ರವನ್ನು ರಚಿಸಿ ಭಾರತೀಯ ತಾಳಮಾನದ ಎಳೆ ಎಳೆಯನ್ನು ಸಹ ನಾಜೂಕಾಗಿ ಚಿತ್ರಿಸಿದ್ದಾರೆ. ವೆಂಕಟಪ್ಪನವರು ಭಾರತೀಯ ಚಿತ್ರಕಲೆಯ ಪುನರುಜ್ಜೀವನದ ಕಾಲದಲ್ಲಿ ಬಂಗಾಲದಲ್ಲಿಯೇ ಇದ್ದವರು. ಇವರು ಶಾಲೆಯಲ್ಲಿ ಪಾಶ್ಚಾತ್ಯ ಶಿಕ್ಷಣವನ್ನು ಪಡೆದರೂ ಸಹ ಭಾರತೀಯ ನೆಲೆಗಟ್ಟಿನ ಸಾಂಪ್ರದಾಯಿಕ ಶೈಲಿಯನ್ನು ಅನುಸರಿಸುತ್ತಿದ್ದರೆಂಬುದಕ್ಕೆ ಈ ಚಿತ್ರಗಳು ಉತ್ತಮ ಸಾಕ್ಷಿಯಾಗಿದೆ.



ದೇವತೆಗಳ ಚಿತ್ರಗಳು

ದೇವತೆಗಳ ಚಿತ್ರಗಳಲ್ಲಿ ಭಾರತೀಯ ಪುರಾಣಗಳಲ್ಲಿ ಬರುವಂತಹ ಸನ್ನಿವೇಶಗಳಿಗನುಗುಣವಾಗಿ ದೇವತೆಗಳು ತಾಳುತ್ತಿದ್ದ ರೂಪ ವೈಶಿಷ್ಟ್ಯತೆಗಳನ್ನು ಇಲ್ಲಿ ತೋರಿಸಲಾಗಿದೆ. ಅವು ಸಹ ಭಾರತೀಯ ಸಾಂಪ್ರದಾಯಿಕ ಶೈಲಿಯಲ್ಲಿಯೇ ಹೇಳಲಾಗಿರುವುದು ವಿಶೇಷವಾಗಿದೆ. ವೆಂಕಟಪ್ಪನವರು ಭಾರತೀಯ ಸಾಂಪ್ರದಾಯಿಕ ಶೈಲಿಯಲ್ಲಿ ಹಲವು ದೇವತೆಗಳ ಶಿಲ್ಪಗಳ ರೇಖಾ ಚಿತ್ರಗಳನ್ನು ಇಲ್ಲಿ ರಚಿಸಿದ್ದಾರೆ. ಅವುಗಳಲ್ಲಿ ಅರ್ಧನಾರೀಶ್ವರ, ರುದ್ರಶಿವ, ಯಕ್ಷಿಣಿ, ಶಿವ ಹೀಗೆ ಹಲವು ಚಿತ್ರಗಳನ್ನು ನಾವಿಲ್ಲಿ ಕಾಣಬಹುದಾಗಿದೆ. ಇವೆಲ್ಲಾ ಚಿತ್ರಗಳು ಸಹ ಭಾರತೀಯ ತಾಳಮನಗಳನ್ನೊಳಗೊಂಡಿದ್ದು ಸಾಂಪ್ರದಾಯಿಕ ಚಿತ್ರಗಳಂತೆ ಬಿಂಬಿಸುತ್ತವೆ.

ಮೂಲವಾಗಿ ರೇಖಾಚಿತ್ರಗಳಲ್ಲಿ ಕಂಡುಕೊಳ್ಳುವ ಅಂಶವೆಂದರೇ ವೆಂಕಟಪ್ಪನವರಿಗಿದ್ದ ತಾಳ್ಮೆ ಹಾಗೂ ಅವರ ರೇಖಾ ನೈಪುಣ್ಯತೆ. ಮೂಲತಃ ಇವರು ಕಲಾವಿದ ಮನೆತನಕ್ಕೆ ಸೇರಿದವರಾದ ಕಾರಣ ಕಲೆಯೆಂಬುದು ಅವರ ರಕ್ತಗತವಾಗಿ ಬಂದಿತು. ಆ ನಂತರ ಬೆಂಗಾಲಿ ಕಲಾಶಾಲೆಗೆ ಸೇರಿದ ನಂತರ ಇವರ ಕಲಾಬದುಕಿನಲ್ಲಿ ಹೊಸ ಪರ್ವವೇ ಪ್ರಾರಂಭವಾಯಿತು. ಇದಾದ ಮೇಲೆ ಅವರಿಗೆ ಅಜಂತಾ ಭಿತ್ತಿಚಿತ್ರಗಳನ್ನು ರಚಿಸುವ ಅವಕಾಶ ದೊರೆಯಿತು. ಇದರಿಂದ ವೆಂಕಟಪ್ಪನವರಿಗೆ ರೇಖಾಚಿತ್ರಗಳಲ್ಲಿನ ಮಹತ್ವವು ಹಾಗೂ ಗುಣಗ್ರಹಣದ ಅರಿವಾಗಿ ಆ ಶೈಲಿಯ ಮೇಲೆ ಹಿಡಿತವನ್ನು ಸಾಧಿಸಿದರು.

ಭಾರತೀಯ ಕಲಾಪ್ರಕಾರದ ರೇಖಾ ಚಿತ್ರಗಳನ್ನು ಇವರು ಹೆಚ್ಚಾಗಿ ರಚಿಸುತ್ತಿದ್ದು, ಹಲವು ವೈಶಿಷ್ಟ್ಯಗಳನ್ನು ನಾವಿಲ್ಲಿ ಕಾಣಬಹುದು. ಇವರ ರೇಖಾವಿನ್ಯಾಸ, ಶೈಲಿ, ತಂತ್ರ, ಚಾಕಚಕ್ಯತೆ ಹಾಗೂ ಶಿಸ್ತು ಈ ಎಲ್ಲಾ ಹಂತಗಳಲ್ಲಿಯೂ ಇವರು ಪ್ರಾಬಲ್ಯವನ್ನು ಸಾಧಿಸಿದ್ದರೆ. ಇವರು ರಚಿಸಿರುವ ಅಜಂತಾ ಭಿತ್ತಿಚಿತ್ರಗಳಲ್ಲಿನ ಶೈಲಿ ವಸ್ತುವಿಷಯಗಳು ನೋಡುಗರ ಮನಸೆಳೆಯುತ್ತವೆ. ಎಲ್ಲಾ ರೇಖಾ ಚಿತ್ರಗಳನ್ನು ಸೀಸದ ಕಡ್ಡಿ ಹಾಗೂ ಕಾಗದಗಳನ್ನು ಬಳಸಿಕೊಂಡು ರಚನೆ ಮಾಡಲಾಗಿದೆ.

❖❖❖





ಅಜಂತಾದ ರೇಖಾ ವಿನ್ಯಾಸಗಳು









ಅಜಂತಾದ ರೇಖಾ ವಿನ್ಯಾಸಗಳು









ಅಜಂತಾದ ರೇಖಾ ವಿನ್ಯಾಸಗಳು









ಹೋಲಿಕೆಯ ಚಿತ್ರಗಳು












ಹೋಲಿಕೆಯ ಚಿತ್ರಗಳು








ತಾಳಮಾನ ರೇಖಾ ವಿನ್ಯಾಸಗಳು










ದೇವತೆಗಳ ರೇಖಾ ವಿನ್ಯಾಸಗಳು





ಅಧ್ಯಾಯ - ನಾಲ್ಕು
ಕೆ. ವೆಂಕಟಪ್ಪನವರ ವರ್ಣ ಚಿತ್ರಗಳು




ಅಧ್ಯಾಯ : ನಾಲ್ಕು

ಕೆ. ವೆಂಕಟಪ್ಪನವರ ವರ್ಣ ಚಿತ್ರಗಳು

ಚಿತ್ರಕಲೆ ಎಂಬುದು ವಿಶ್ವಭಾಷೆಯಾಗಿದ್ದು ಸಹೃದಯಿಗೆ ನೋಡಿದ ತತ್‌ಕ್ಷಣದಲ್ಲಿಯೇ ಅರ್ಥವಾಗುವಷ್ಟು ಸುಲಭದ ವಿಷಯ. ಆದರೆ ರಚಿಸುವ ಕಲಾವಿದನ ಸೃಜನಶೀಲತೆಯ ಅದಮ್ಯ ಜ್ಞಾನ ಅತೀವವಾದದ್ದು. ಚಿತ್ರಕಲೆ ಎಂಬುದುರ ಇತಿಹಾಸವನ್ನು ಬಹುಶಃ ಮಾನವನು ಹುಟ್ಟಿನ ಸಮೀಪದ ದಶಕಗಳಲ್ಲಿಯೇ ನಡೆದಿದೆ ಎಂಬುದನ್ನು ನಿರ್ಧರಿಸಬಹುದು. ಆದಿಮಾನವನ ಕಾಲದಿಂದಲೇ ಚಿತ್ರಕಲೆಯ ಕುರುಹುಗಳು ದೊರೆಯುತ್ತವೆ. ಮೊದ ಮೊದಲಿಗೆ ಆದಿಮಾನವರು ತನ್ನ ದೈನಂದಿನ ಕೆಲಸ ಕಾರ್ಯಗಳಿಗೆ ಅನುಕೂಲವಾಗುವಂತೆ ಸನ್ನೆಗಳನ್ನು ಬಳಸಿಕೊಂಡು ಒಬ್ಬರು ಮತ್ತೊಬ್ಬರೊಡನೆ ವ್ಯವಹರಿಸುತ್ತಿದ್ದರು. ಇದಾದ ಕೆಲ ವರ್ಷಗಳ ನಂತರ ಇದಕ್ಕೆ ಪರಿಹಾರವಾಗಿ ಪ್ರಪಂಚದ ಪ್ರಪ್ರಥಮ ವ್ಯವಹಾರಿಕ ಮಾಧ್ಯಮವಾಗಿ ಚಿತ್ರಭಾಷೆಯನ್ನು ಆದಿಮಾನವರು ಕಂಡುಕೊಂಡರು.

ಆದಿಮಾನವರು ಮತ್ತೊಬ್ಬರೊಡನೆ ವ್ಯವಹರಿಸಲು ಮಾಧ್ಯಮವಾಗಿ ಚಿತ್ರಭಾಷೆಯನ್ನು ದೃಶ್ಯರೂಪದಲ್ಲಿ ರಚಿಸಲಾರಂಭಿಸಿದರು. ತಮ್ಮ ಆಹಾರ ಸಂಪಾದನೆಗೆ ಬೇಕಾಗುವ ಬೇಟೆಯ ರಣತಂತ್ರವನ್ನು ರೂಪಿಸುವ ಸಲುವಾಗಿ ಈ ಕಲೆಯನ್ನು ಕರಗತಮಾಡಿಕೊಂಡರು. ಮೊದ ಮೊದಲಿಗೆ ಪೂರ್ತಿಯಾಗಿ ಇದಕ್ಕೆ ಬಳಸುತ್ತಿದ್ದ ಆದಿಮಾನವರು ದಿನಕಳೆದಂತೆ ಸಂಸ್ಕೃತಿ, ಆಚರಣೆಗಳನ್ನು ಆಚರಿಸಲಾರಂಭಿಸಿದರು.




ಅಲ್ಲಿ ಮನೋರಂಜನೆಯ ಅವಶ್ಯಕತೆಗಾಗಿಯೂ ಸಹ ಚಿತ್ರಕಲೆ ಬಳಕೆಯನ್ನು ಮಾಡಲಾರಂಭಿಸಿದರು. ದಿನಕಳೆದಂತೆ ಆಚರಣೆ, ಉತ್ಸವ, ಸಂಭ್ರಮಗಳನ್ನು ಚಿತ್ರರೂಪದಲ್ಲಿ ಶಿಲಾಶ್ರಯದಲ್ಲಿ ಬರೆದಿಡಲಾರಂಭಿಸಿದರು. ಶತಶತಮಾನಗಳು ಕಳೆದಂತೆ ಜೀವನ ಪರ್ಯಟನೆಯ ಆದಿಯಲ್ಲಿ ಮನುಷ್ಯನು ಉಳಿದ ಎಲ್ಲಾ ಜೀವಿಗಳಿಗಿಂತ ಶ್ರೇಷ್ಠ ಎಂಬುದನ್ನು ಸಾಕ್ಷಾತ್ಕರಿಸಿದನು. ತಾನು, ತನ್ನ ಪರಿವಾರ, ಸಮಾಜ, ಸಂಪ್ರದಾಯಗಳೆಂಬ ಸಂಸ್ಕಾರಗಳನ್ನು ಬೆಳೆಸಿಕೊಂಡನು. ವಾಸಿಸಲು ವಾಸ್ತುಬದ್ಧ ಮನೆಗಳನ್ನು ಕಟ್ಟಿಕೊಂಡನು. ನಗರಗಳ ಸೃಷ್ಠಿಯಾದವು. ಮನುಷ್ಯರೆಲ್ಲರು ಕಾಡನ್ನು ತೊರೆದು ನಾಡುಗಳನ್ನು ಕಟ್ಟಲಾರಂಭಿಸಿದರು. ಸ್ವಾವಲಂಬಿಗಳಾಗಿ ಕೃಷಿಗೆ ಮೊದಲಾದರು. ಇದೇ ಸಂದರ್ಭದಲ್ಲಿ ಧರ್ಮಗಳ ಉದಯವಾದವು. ಧರ್ಮಕ್ಕೆ ಅನುಸಾರವಾಗಿ ಪುರಾಣಗಳು ರಚನೆಯಾದವು. ದೈವ ಪೂಜೆ, ಪ್ರಕೃತಿ ಆರಾಧನೆಯ ಸಂಸ್ಕಾರ ಬೆಳೆಯಲಾರಂಭಿಸಿತು.

ಹೀಗೆ ಹಲವು ಧರ್ಮಗಳ ಉದಯವೂ ಆಯಿತು. ಆಯಾ ಧರ್ಮಕ್ಕೆ ಸಂಬಂಧಿಸಿದ ಧರ್ಮಗ್ರಂಥಗಳೂ ರಚನೆಯಾದವು. ವಾಕ್ಯರೂಪದ ಗ್ರಂಥಗಳ ದೃಶ್ಯ ಸಾಕ್ಷಾತ್ಕಾರವಾಗಿ ಗುಹೆಗಳಲ್ಲಿ, ದೇವಾಲಯ, ಮಠ–ಮಂದಿರಗಳಲ್ಲಿ ಭಿತ್ತಿಚಿತ್ರಗಳ ರಚನೆ ಪ್ರಾರಂಭವಾಯಿತು. ಆಗ ಹಲವಾರು ಸಂಪ್ರದಾಯಕ್ಕೆ ಅನುಸಾರವಾಗಿ ಹಲವು ಬಗೆಯ ಚಿತ್ರ ಪ್ರಕಾರಗಳು ಹುಟ್ಟಿಕೊಂಡವು. ಮುಂದುವರೆದಂತೆ ಇವು ಶಿಲ್ಪಗಳಾಗಿಯೂ ಕಲೆ ಬೆಳೆಯುತ್ತಾ ಬಂದಿತು.

ಕಾಲ ಕಳೆದಂತೆ ರಾಜರ ಆಡಳಿತ ಪ್ರಾರಂಭವಾಯಿತು. ರಾಜರು ನಾಡಿನ ಸಮಸ್ತ ಪ್ರಜೆಗಳ ಹಿತಕಾಯುವ ವ್ಯಕ್ತಿಯಾದ್ದರಿಂದ ಹಾಗೂ ಆ ನಾಡಿನಲ್ಲಿದ್ದ ಧರ್ಮದ ಪ್ರಚಾರ ಮತ್ತು ಮಹತ್ವವನ್ನು ಜನಸಾಮಾನ್ಯರಿಗೆ ತಿಳಿಗೊಳಿಸುವ ಸಲುವಾಗಿ ದೇವಾಲಯಗಳ ನಿರ್ಮಾಣ ಮಾಡಿದರು. ಅದೇ ದೇವಾಲಯಗಳಲ್ಲಿ ಅವರ ಧರ್ಮ, ಸಂಸ್ಕೃತಿಯ ಕುರಿತಾಗಿ ಹಲವಾರು ಧಾರ್ಮಿಕ, ಸಾಮಾಜಿಕ ಹಾಗೂ ರಾಜ ವೈಭವದ ದೃಶ್ಯಗಳು ಚಿತ್ರಕೃತಿಗಳ ಮೂಲಕ ಸರ್ವರಿಗೂ ತಿಳಿಯುವಂತೆ ದೃಶ್ಯ ಮಾಧ್ಯಮದಲ್ಲಿ ಹೇಳತೊಡಗಿದರು.

ಕಾಲ ಕಳೆದಂತೆ ರಾಜ್ಯಗಳ ವಿಸ್ತರಣೆಯಾದವು. ರಾಜರುಗಳು ತಮ್ಮ ತಮ್ಮ ಸಂಸ್ಥಾನಗಳಲ್ಲಿ ಸಂಸ್ಥಾನ ಕಲಾವಿದರುಗಳನ್ನಾಗಿ ನೇಮಿಸಿಕೊಳ್ಳಲಾರಂಭಿಸಿದರು. ಆಗ ಕಲೆ ಮನೋರಂಜನೆಯ ಸಾಧನವಾಗಿ, ಒಂದು ನಾಡಿನ ಆಚಾರ–ವಿಚಾರಗಳ ಸಂಸ್ಕೃತಿ, ಸಂಸ್ಕಾರಗಳ, ಧರ್ಮ ವಿಚಾರಗಳ ಕಾಲನೀತಿಯ ಇತಿಹಾಸದ ದಾಖಲೀಕರಣವಾದವು. ಉದಾಹರಣೆಗೆ ಅಜಂತಾ, ಎಲ್ಲೋರ, ಬಾದಾಮಿ, ಬನವಾಸಿ ಇತ್ಯಾದಿಗಳು. ಇವುಗಳ ಸಹಾಯದಿಂದ ಇತಿಹಾಸಕಾರರಿಗೆ ಅಂದಿನ ಜನಜೀವನ, ಆಚಾರ–



ವಿಚಾರ, ಉಡುಗೆ-ತೊಡುಗೆ, ಅಲಂಕಾರ, ಆಭರಣಗಳ ವಿನ್ಯಾಸ ಹೀಗೆ ಹಲವು ವಿಷಯಗಳಿಗೆ ಮೂಲ ಆಕರ ಸಮಾಗ್ರಿಯಾಗಿದೆ. ಕಲೆಯ ಕುರಿತಾಗಿ ಹಲವಾರು ಕಲಾ ತತ್ವಜ್ಞರು, ಕಲಾ ದಾರ್ಶನೀಕರು ತಮ್ಮ ತಮ್ಮ ಅಭಿಪ್ರಾಯಗಳು ಅವರ ಗ್ರಂಥಗಳಲ್ಲಿ ಉಲ್ಲೇಖಿಸಿದ್ದಾರೆ. ಅದೇ ರೀತಿ ವಾತ್ಸಾಯನನ ಕಾಮಸೂತ್ರಕ್ಕೆ ಟೀಕೆಯನ್ನು ಬರೆದ ಯಶೋಧರ ಪಂಡಿತರು ಒಂದು ಶ್ಲೋಕದಲ್ಲಿ ಚಿತ್ರಕಲೆಯಲ್ಲಿರಬೇಕಾದ ಷಡಾಂಗಗಳ ಕುರಿತು ಹೀಗೆ ಹೇಳಿದ್ದಾರೆ.

ಶ್ಲೋಕ

"ರೂಪ ಭೇದಾಃ ಪ್ರಮಾಣಾಗಿ ಭಾವ ಲಾವಣ್ಯ ಯೋಜನಮ್ ಸಾದೃಶ್ಯಂ ವರ್ಣಿಕಾಭಂಗಂ ಇತಿ ಚಿತ್ರ ಷಡಂಗಕಮ್ ॥"

ಇದರ ಭಾವಾರ್ಥ ಇಂತಿದೆ.

ರೂಪಭೇದ : ಜೀವ, ನಿರ್ಜೀವ ವಸ್ತುಗಳಲ್ಲಿನ ವ್ಯತ್ಯಾಸ.

ಪ್ರಮಾಣ : ಅಂಗಾಂಗಗಳ ಪ್ರಮಾಣ, ತಾಳಮಾನ.

ಭಾವ : ಅಭಿವ್ಯಕ್ತಿಗೊಳಿಸುವ ರಸಭಾವ.


ಲಾವಣ್ಯಯೋಜನ : ಸೌಂದರ್ಯ ಯೋಜನೆ.

ಸಾದೃಶ್ಯ : ಆಂತರಿಕ ಮತ್ತು ಪ್ರಾತಿನಿಧಿಕ ಆಂಶಗಳ ಹೋಲಿಕೆ.

ವರ್ಣಿಕಾಭಂಗ : ವರ್ಣ ಸಂಯೋಜನೆ, ವರ್ಣ ವಿನ್ಯಾಸ.

ಈ ರೀತಿಯ ಆರು ಅಂಶಗಳಿಂದ ಕಲೆಯು ಕೂಡಿರಬೇಕೆಂದು ಯಶೋಧರ ಪಂಡಿತರು ಹೇಳುತ್ತಾರೆ.

ಕ್ರಿ.ಪೂ. ೩೮೪ ರಲ್ಲಿ ಪ್ಲೇಟೋ ಹಾಗೂ ಆರಿಸ್ಟಾಟಲ್ ಕಲೆ, ಕಲಾವಿದ ಹಾಗೂ ಸಾಹಿತಿಗಳ ಕುರಿತಾಗಿ ಹಲವಾರು ವಿಚಾರಗಳನ್ನೆತ್ತಿದ್ದಾರೆ. "ಸೃಷ್ಟಿ ಸೌಂಧರ್ಯಕ್ಕೆ ಪೂರಕವಾಗುವ ಅಥವಾ ಅದರ ಸೌಂಧರ್ಯಾನುಭೂತಿಗೆ ಹತ್ತಿರವಾಗುವ ಮಾನವ ನಿರ್ಮಿತ ಕಲಾಸೃಷ್ಟಿಯನ್ನು ಗ್ರಾಹ್ಯ ಮಾಡಬಹುದು" ಎಂದು ಪ್ಲೇಟೋ ಹೇಳುತ್ತಾನೆ. ಇದಕ್ಕೆ ಅಪಚಾರವಾಗದಂತೆ, ಗುರುವಿಗೂ ನೋವು ಮಾಡದಂತೆ ಅರಿಸ್ಟಾಟಲ್ "ಕೆಳದರ್ಜೆಯ ವಸ್ತುಗಳೂ ಉತ್ತಮವಾದುದದನ್ನು ಅನುಕರಣೆ ಮಾಡಿದರೆ ಅಥವಾ ಆ ಉತ್ತಮವಾದುದರ ಗುಣ ವಿಶೇಷಣವನ್ನು ತನ್ನಲಿಯೇ ಪ್ರತಿಬಿಂಬಿಸಿದರೆ ಅದು ಕಲಾಕೃತಿಯಾಗುತ್ತದೆ" ಇವರ ತಾತ್ಪರ್ಯವಿಷ್ಟೆ.




ಪ್ಲೇಟೋನ ಪ್ರಕಾರ ಕಲೆ ದೈವ ಸೃಷ್ಟಿ, ಅದನ್ನು ಕಲಾವಿದರು, ಸಾಹಿತಿಗಳು ಅನುಕರಣೆ ಮಾಡಲಷ್ಟೇ ಸಾಧ್ಯ ಎಂಬುದಾಗಿತ್ತು. ಇದಕ್ಕೆ ಉತ್ತರವಾಗಿ ಅರಿಸ್ಟಾಟೆಲ್ "ಕಲೆ ದೈವ ಸೃಷ್ಟಿ ಹೌದು ಆದರೆ ಕಲಾವಿದನಾಗಲೀ, ಸಾಹಿತಿಯಾಗಲೀ ಸೃಷ್ಟಿಯನ್ನು ಸವಿದು ಅವರ ಸ್ಮೃತಿಯಲ್ಲಿ ಮನದಟ್ಟು ಮಾಡಿಕೊಂಡು ಸೃಜನಾತ್ಮಕವಾಗಿ ಅಭಿವ್ಯಕ್ತಿಸುವುದರಿಂದ ಅದು ಅನುಕರಣೆಂಯಾಗುವುದಿಲ್ಲ, ಅದು ಅನುಕರಣೀಯವಾದುದು" ಎಂದು ವಾದಿಸುತ್ತಾನೆ.

ಇನ್ನೂ ಭಾರತೀಯ ದಾರ್ಶನಿಕರು ಕಲೆಯ ಕುರಿತಾದ ಹಲವಾರು ಹೇಳಿಕೆಗಳನ್ನು ಹೇಳಿದ್ದಾರೆ. ಋಗ್ವೇದದಲ್ಲಿ ಬರುವ 'ಕಲೆ' ಎಂಬ ಪದಕ್ಕೆ ಅಂಶ ಅಥವಾ ಕತೃತ್ವ ಎಂಬುದಾಗಿ ಅರ್ಥೈಸುತ್ತಾರೆ. ಕಲೆ ಎಂದರೆ ದಿವ್ಯಶಕ್ತಿಯ ಅಥವಾ ಪರಮಾತ್ಮನ ಶಕ್ತಿಯ ಒಂದು ಕಿರಣ ಅಥವಾ ಪರಮಾತ್ಮನ ಸೃಷ್ಟ್ಯಾತ್ಮಕ ಶಕ್ತಿಯ ಒಂದು ಅಂಶ ಎಂಬುದೊಂದು ಅಭಿಪ್ರಾಯವಾದರೆ 'ಕ' ಕಾರವು ಬ್ರಹ್ಮವಾಚಕ. ಆದುದರಿಂದ ಸೃಷ್ಟಿ ಧರ್ಮವನ್ನು 'ಲ' ಕಾರವು ಲಯವನ್ನು ಸೂಚಿಸುವುದರಿಂದ ಕಲೆಯು ಸೃಷ್ಟಿ-ಸ್ಥಿತಿ-ಸಂಹಾರ ರೂಪವಾದುದು ಎಂಬುದು ಇನ್ನೊಂದು ಅಭಿಪ್ರಾಯವಾಗಿದೆ. 'ಕ' ಮತ್ತು 'ಲ' ಎಂಬಕ್ಷರಗಳಲ್ಲಿ ಲಲಿತಾ ತ್ರಿಪುರ ಸುಂದರಿಯ ಸ್ವರೂಪವು ನಿರ್ಧಿಷ್ಟವಾಗಿದೆ.

ಶ್ರೀ ವಿದ್ಯೋಪಾಸನೆಯ ಬಹಿರ್ಯಾಗ ಕ್ರಮದಲ್ಲಿ ಚಂದ್ರ ಮಂಡಲದ ಹದಿನಾರು ಕಲೆಗಳನ್ನು ಉಪಾಸನೆ ಮಾಡುವಾಗ ಮುಖ್ಯಾದದ್ದು ಸಾದಾಖ್ಯ ಕಲೆಯೇ ತ್ರಿಪುರ ಸುಂದರಿ ಸ್ವರೂಪ. ಈ ಹದಿನಾರು ಕಲೆಗಳಿಂದ ನಾಲ್ಕು ನಾಲ್ಕು ಭಾಗಗಳಾಗಿ ಅರವತ್ನಾಲ್ಕು ಕಲೆಗಳೂ, ಅಕ್ಷರಗಳೂ ಹುಟ್ಟಿದವು ಎಂಬುದಾಗಿ ಪ್ರಪಂಚಸಾರ ಮಾರ್ತಕಾರ್ಣವ ಗ್ರಂಥಗಳು ವಿವರಿಸುತ್ತವೆ. ಕಲೆಯ ಕುರಿತಾಗಿ ಇನ್ನೂ ಫ್ರೆಂಚ್, ಸ್ಪಾನಿಷ್, ಲ್ಯಾಟಿನ್ ಭಾಷೆಯಲ್ಲಿ ಬಗೆ ಬಗೆಯ ಅರ್ಥಗಳಿದ್ದರೂ ಭಾರತೀಯ ದೃಷ್ಟಿಯಲ್ಲಿ ವಿದ್ಯೆ ಹಾಗೂ ಕಲೆಗಳ ಗುರಿ ಪರಮಾತ್ಮನನ್ನು ಅರಿಯುವುದು, ಆ ಬಗೆಗೆ ಜ್ಞಾನ ಮಾಡಿಕೊಡುವುದು ಆಗಿದೆ. 'ಕಲಾ' ಎಂಬ ಪದಕ್ಕೆ ಪಂಡಿತರು ನಾನಾ ಅರ್ಥವನ್ನು ಕೊಟ್ಟರೂ ಕಲಾ ಹಬ್ಬಕ್ಕೆ ಸಾಮಾನ್ಯವಾದ ಅರ್ಥ, ಉಪಾಯ ಅಥವಾ ಕೌಶಲ ಎಂಬುದು ಯಾವ ಉಪಾಯದಿಂದ ಅಥವಾ ಕೌಶಲ್ಯದಿಂದ ನಮ್ಮ ಭಾವನೆಗಳನ್ನು ಆಲೋಚನೆಗಳನ್ನು ಮನ ಮುಟ್ಟುವ ರೀತಿಯಲ್ಲಿ ತಿಳಿಸಹಬುದೋ ಅಂತಹ ವಿಧಾನವೇ ಕಲೆ ಎನ್ನಬಹುದು.

ಇನ್ನು ಕಲಾವಿದ ಹೇಗಿರಬೇಕು ಎಂಬುದಕ್ಕೆ 'ಅಭಿಲಾಷಿತಾರ್ಥ ಚಿಂತಾಮಣಿ' ಯಲ್ಲಿ ಹೇಳಲಾಗಿದೆ. ಕಲಾವಿದ ಪ್ರಗಬ್ಬ (ನಿಪುಣ), ಭಾವಕ (ಪ್ರತಿಭಾವಂತ), ತಜ್ಞ (ಪರಿಶ್ರಮದಿಂದ) ಸೂಕ್ಷ್ಮರೇಖೆ ಬರೆಯುವಲ್ಲಿ ಪರಿಣತ (ವಿದ್ಯುತ್ ನಿರ್ಮಾಣ ಕುಶಲೈಃ) ಪತ್ರ ಲೇಖನ ಕೋವಿದ, ವರ್ಣ ಪೂರ್ಣದಕ್ಷ, ವೀರಣ(ವನ್ನು




ಬಳಸಿ ಚಿತ್ರ ರಚನೆಯಲ್ಲಿ) ದಲ್ಲಿ ಶ್ರಮ ಪಡಬೇಕು ಎಂದು ಹೇಳುತ್ತದೆ. ಈ ಉಲ್ಲೇಖವು ಇಂದಿನ ನವ್ಯದ ಸಂದರ್ಭದಲ್ಲಿ ಕಲಾವಿದರಲ್ಲಿ ಎಷ್ಟು ಜನರಿಗೆ ಅನ್ವಯಿಸುತ್ತದೆ ? ಎಂಬುದೊಂದು ಪ್ರಶ್ನೆಯಾಗಿಯೇ ಉಳಿಯುತ್ತದೆ. ಆದರೆ ಹಡಪದದರವರಲ್ಲಿ ಈ ಉಲ್ಲೇಖದ ಗುಣಗಳೆಲ್ಲವೂ ಅಡಕವಾಗಿವೆ ಎಂದರೆ ಅತಿಶಯೋಕ್ತಿಯೇನಲ್ಲ. ಒಟ್ಟಾರೆಯಾಗಿ ವೆಂಕಟಪ್ಪನವರ ವರ್ಣಚಿತ್ರಗಳನ್ನು ಗಮನಿಸುವುದಾದರೆ, ಜಲವರ್ಣದ ಕಲಾಕೃತಿಗಳನ್ನೇ ಹೆಚ್ಚಾಗಿ ಕಾಣಬಹುದು. ವೆಂಕಟಪ್ಪನವರು ಜಲವರ್ಣ ರಚಿಸುವ ಹಾಗೂ ಹಚ್ಚುವ ಕಾರ್ಯದಲ್ಲಿ ನಿಪುಣ ಹಸ್ತರು. ಅವರ ಸೂಕ್ಷ್ಮ ಗ್ರಹಿಕೆ ಹಾಗೂ ರಚನೆ, ರಚನಾ ವಿನ್ಯಾಸಗಳು ನೋಡುಗರ ತನ್ಮನ ಸೆಳೆಯುತ್ತವೆ.

ಇವರು ಜಲವರ್ಣದಲ್ಲಿ ನಿಸರ್ಗ ಚಿತ್ರಣ, ವ್ಯಕ್ತಿಯ ಭಾವಚಿತ್ರ, ಸಂಯೋಜನೆ ಹಾಗೂ ಹೂ ಬಳ್ಳಿಯ ವಿನ್ಯಾಸಗಳನ್ನು ರಚಿಸಿದ್ದಾರೆ. ಅಲ್ಲದೆ ತೈಲ ವರ್ಣದಲ್ಲಿ ಒಂದು ನಿಸರ್ಗ ಹಾಗೂ ಭಾವಚಿತ್ರಗಳನ್ನು ಸಹ ರಚಿಸಿದ್ದಾರೆ. ಯಾವುದೇ ಮಾಧ್ಯಮವಾಗಲೀ ತಮ್ಮ ಕ್ರಿಯಾಶೀಲತೆ, ನಿಷ್ಠೆ, ಆ ಕೃತಿಗೆ ಸಲ್ಲಬೇಕಾದ ಗೌರವಗಳನ್ನು ಸಂಪೂರ್ಣವಾಗಿ ಅರ್ಪಿಸುತ್ತಾ ಬಂದವರು.

ಜಲವರ್ಣದ ನಿಸರ್ಗ ಚಿತ್ರಣ

ವೆಂಕಟಪ್ಪನವರು ಅದಮ್ಯ ಜಲವರ್ಣ ನಿಪುಣ ಎಂಬುದರಲ್ಲಿ ಎರಡನೇಯ ಮಾತಿಲ್ಲ. ಇವರ ಕಲಾಕೃತಿಗಳ ಮೇಲೆ ಅವನೀಂದ್ರರ ಹಾಗೂ ನಂದಲಾಲರ ಪ್ರಭಾವಗಳು ಬಹುಪಾಲು ಕಾಣುತ್ತವೆ. ಅವನೀಂದ್ರರ ಶಿಷ್ಯರಾಗಿ ಪಡೆದ ಜ್ಞಾನ ಹಗೂ ನಂದಲಾಲರೊಡನೆ ಸಹಪಾಠಿಯಾಗಿ, ಹಿರಿಯ ಸಹೋದರನಾಗಿ ಕಲಿತದ್ದು ತುಂಬಾನೆ ಇದೆ. ಹೇಳಿ ಕೇಳಿ ವೆಂಕಟಪ್ಪನನವರು ಅವನೀಂದ್ರರ ಪ್ರೀತಿಯ ಶಿಷ್ಯ. ತಮ್ಮ ಭಾವಾಂಕುರವನ್ನು ಅವರು ವೆಂಕಟಪ್ಪನವರಿಂದ ಈಡೇರಿಸಿಕೊಳ್ಳಲು ಮುಂದಾದವರು. ನಂದಲಾಲರು ವೆಂಕಟಪ್ಪನವರ ಹಿರಿಯ ಮಿತ್ರನಾಗಿ ಅಜಂತಾದಲ್ಲಿ ಕಳೆದ ದಿನಗಳಲ್ಲಿಯೂ ವೆಂಕಟಪ್ಪನವರಿಗೆ ತುಂಬಾನೇ ಪ್ರಭಾವ ಬೀರಿದವರು.

ವೆಂಕಟಪ್ಪನವರ ವರ್ಣಸಂಯೋಜನೆಯಲ್ಲಿ ವಿಶೇಷವಾದ ಒಂದು ಅಂಶವೆಂದರೆ ವರ್ಣಗಳ ಬಳಕೆ (ಮಿಕ್ಸಿಂಗ್) ಇವರು ನಾನಾ ವರ್ಣಗಳನ್ನು ಬಳಸಿಕೊಂಡು ಲೇಪನ ಮಾಡುವ ಕ್ರಿಯೆಯನ್ನು ಇಂದಿಗೂ ಸಹ ಬೇಧಿಸಲಾಗಿಲ್ಲ. ಏಕೆಂದರೆ ಅವರ ನಾಜೂಕಾದ, ಜಾಗರೂಕ ಲೇಪನ. ಇವರ ಕಲಾಕೃತಿಗಳನ್ನು ಗಮನಿಸಿದಾಗ ವರ್ಣಲೇಪನದಲ್ಲಿ ಯಾವುದು ಮೊದಲು ? ಯಾವುದು ಕೊನೆ ? ಎಂದು ನಿಶ್ಚಯಿಸಲು ಸಾಧ್ಯವಾಗದು.



ಮೈಸೂರಿನಲ್ಲಿ ನಿಸರ್ಗ ಚಿತ್ರಣ

ಕ್ರಿ.ಶ. ೧೯೧೬ ಜೂನ್ ಒಂದರಂದು ಕಲ್ಕತ್ತಾದಲ್ಲಿ ಶಿಕ್ಷಣವನ್ನು ಮುಗಿಸಿಕೊಂಡು ಮೈಸೂರಿಗೆ ಹಿಂದಿರುಗಿದರು. ಈ ಸಂದರ್ಭದಲ್ಲಿ ಬರುವ ಮುನ್ನ ತಮಿಳುನಾಡು ಹಾಗೂ ಉದಕಮಂಡಲಕ್ಕೂ ಭೇಟಿ ನೀಡಿ ಬಂದಿದ್ದರು. ಅರಮನೆಯಿಂದ ವಿದ್ಯಾರ್ಥಿ ವೇತನ ಪಡೆದು ತಮ್ಮ ಕಲಾಭ್ಯಾಸವನ್ನು ಸತತವಾಗಿ ಏಳು ವರ್ಷಗಳ ಕಾಲ ಕಲ್ಕತ್ತಾದ ಸರಕಾರಿ ಕಲಾಶಾಲೆಯಲ್ಲಿಯೇ ಅವನೀಂದ್ರ ಬಳಿ ಮುಗಿಸಿದ್ದರು. ಆವತ್ತಿಗಾಗಲೇ ಚಿತ್ರಕಲೆ ಹಗೂ ಶಿಲ್ಪಕಲೆಯಲ್ಲಿ ಅಪರಿಮಿತ ಸಾಧನೆಯನ್ನು ಸಾಧಿಸಿದ್ದರು. ಕಲ್ಕತ್ತಾ ಕಲಾ ವಲಯದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದ್ದರು.

ಹಳೆಯ ಅಗ್ರಹಾರದ ಚಿತ್ರಣ

ಮೈಸೂರಿನ ಹಳೆಯ ಅಗ್ರಹರಾದ ಚಿತ್ರವನ್ನು ಕ್ರಿ.ಶ. ೧೯೧೭ ರಲ್ಲಿ ರಚಿಸಿದರು. ಇದು ಸಂಪೂರ್ಣವಾಗಿ ಜಲವರ್ಣದಲ್ಲಿ ರಚಿತವಾಗಿದ್ದು, ಕಾಗದದ ಮೇಲೆ ರಚಿಸಲಾಗಿದೆ. ಮೈಸೂರಿನ ಹಳೆಯ ಅಗ್ರಹಾರದ ಹಿಂಬದಿಯಲ್ಲಿರುವ ನೀಲಗಿರಿ ಮರವನ್ನು ವಿಷಯವನ್ನಾಗಿರಿಸಿಕೊಂಡು ಚಿತ್ರರಚನೆ ಮಾಡಲಾಗಿದೆ. ಮುಂಭಾಗದಲ್ಲಿ ಅಗ್ರಹಾರದ ಹಳೆಯ ಕಟ್ಟಡದ ಛಾವಣಿಯ ಮೇಲಿರುವ ಅಂಚುಗಳು ಅಲ್ಲಲ್ಲಿ ಕಿತ್ತು ಬಂದಿವೆ. ಕಬ್ಬಿಣದ ತಗಡೊಂದು ಬಾಗಿರುವುದು ವಾಸ್ತವಕ್ಕೆ ತೀರಾ ಹತ್ತಿರ ಎಂಬುವಂತೆ ವರ್ಣಿಸಲಾಗಿದೆ. ನೀಲಗಿರಿಯ ಪಕ್ಕದಲ್ಲಿರುವ ಮರಗಳನ್ನು ಸಹ ಅದ್ಭುತವಾಗಿ ಚಿತ್ರಿಸಿದ್ದಾರೆ. ಇವೆಲ್ಲದರ ಹಿನ್ನೆಲೆಯಲ್ಲಿರುವ ಆಗಸ ಅದರ ಮುಂಭಾಗದ ಮೋಡದ ಮೇಲೆ ಮೂಡಿರುವ ಸೂರ್ಯನ ಛಾಯೆ ವಾಸ್ತವ ದೃಶ್ಯಕ್ಕೆ ಕನ್ನಡಿ ಹಿಡಿದಂತಾಗಿದೆ. ಒಟ್ಟಾರೆಯಾಗಿ ಇದೊಂದು ನಯನ ಮನೊಹರ ದೃಶ್ಯವಾಗಿದ್ದು ನಿಸರ್ಗ ಪ್ರಧಾನ ಚಿತ್ರವಾಗಿದೆ. ಇಲ್ಲಿ ಪಾಶ್ಚಾತ್ಯ ಕಲಾಪಂಥದ ನೇರ ಪ್ರಭಾವವು ಸಹ ಗುರುತಿಸಬಹುದು. ೧೨" x ೧೬" ಇಂಚು ಅಳತೆಯಲ್ಲಿರುವ ಈ ದೃಶ್ಯವು ಇಂದು ಬೆಂಗಳೂರಿನ ವೆಂಕಟಪ್ಪ ಅರ್ಟ್ ಗ್ಯಾಲರಿಯಲ್ಲಿ ಕಾಣಸಿಗುವುದು.

ಮುನಿಸಿಪಲ್ ಹೈಸ್ಕೂಲ್

ಅದೇ ವರ್ಷ ಅಂದರೆ ೧೯೧೭ ರಲ್ಲಿ ಮೈಸೂರಿನ ಹಳೆಯ ಅಗ್ರಹಾರದ ಹಿಂಭಾಗದಲ್ಲಿರುವ ಮುನಿಸಿಪಲ್ ಹೈಸ್ಕೂಲ್‌ನ್ನು ಜಲವರ್ಣದಲ್ಲಿ ರಚಿಸಿದ್ದಾರೆ. ಅಗ್ರಹಾರದ ಹಾಗೂ ಮುನಿಸಿಪಲ್ ಹೈಸ್ಕೂಲ್‌ನ ಚಿತ್ರರಚನೆಯಲ್ಲಿ ಕೆಲ ತಿಂಗಳುಗಳ ಅಂತರವನ್ನು ನಾವು ಗಮನಿಸಬಹುದು. ಅಗ್ರಹಾರದ ದೃಶ್ಯದಲ್ಲಿ ನೀಲಗಿರಿಯ ಎಲೆಗಳು ಕಡಿಮೆ ಇದ್ದು ಸೂರ್ಯನ ಕಿರಣಗಳು ತೀಕ್ಷ್ಣವಾಗಿರುವುದನ್ನು ಗಮನಿಸಿದರೆ

ಮುನಿಸಿಪಲ್ ಹೈಸ್ಕೂಲ್ ದೃಶ್ಯದಲ್ಲಿ ನೀಲಗಿರಿ ಮರವು ಸಮೃದ್ಧವಾಗಿದ್ದು, ಬಿಸಿಲಿನ ಛಾಯೆ ಓರೆಯಾಗಿವೆ. ಈ ದೃಶ್ಯದಲ್ಲಿ ಅಗ್ರಹಾರದ ಕಟ್ಟಡವನ್ನು ಮುಂಭಾಗದಲ್ಲಿರಿಸಿಕೊಂಡು ಹಿಂಭಾಗದಲ್ಲಿ ಮುನಿಸಿಪಲ್ ಹೈಸ್ಕೂಲ್ ದೃಶ್ಯವನ್ನು ತೋರಿಸಲಾಗಿದೆ. ಇದರ ಮಧ್ಯದಲ್ಲಿ ಮಣ್ಣಿನ ದಿಬ್ಬವಿದ್ದು, ಇದಕ್ಕೆ ಮೆಟ್ಟಿಲಿನ ಸಹಾಯವನ್ನು ಮಾಡಲಾಗಿದೆ. ಅಗ್ರಹಾರದ ಹಿಂಬದಿಯಲ್ಲಿ ನೀಲಗಿರಿ ಮರವು ಅರ್ಧದಷ್ಟು ಕಂಡಿದ್ದು ಸಂತುಷ್ಟವಾಗಿ ತೋರುತ್ತದೆ. ಈ ಕೃತಿಯನ್ನು ಸಂಪೂರ್ಣವಾಗಿ ಜಲವರ್ಣದಿಂದ ಮಾಡಲಾಗಿದ್ದು, ನೆರಳು ಬೆಳಕಿನ ಒಡನಾಟವನ್ನು ಪ್ರತಿಬಿಂಬಿಸಲಾಗಿದೆ.


ಚಾಮುಂಡಿ ಬೆಟ್ಟದ ಮೋಡದ ಸಾಲು

ಕ್ರಿ.ಶ. ೧೯೧೯ ರಲ್ಲಿ ಮೈಸೂರಿನ ಚಾಮುಂಡಿ ಬೆಟ್ಟದಲ್ಲಿನ ಚಿತ್ರಗಳನ್ನು ಮೂರು ಬಾರಿ ಬೇರೆ ಬೇರೆ ಸ್ಥಳಗಳಲ್ಲಿ ಕುಳಿತು ಚಿತ್ರಿಸಿದ್ದಾರೆ. ಈ ಚಿತ್ರದಲ್ಲಿ ಬೆಟ್ಟದ ಮೇಲೆ ಕಟ್ಟಡ ಒಂದಿದ್ದು ಅದರ ಹಿಂಭಾಗದಲ್ಲಿಯ ಮೋಡಗಳನ್ನು ಕೇಂದ್ರೀಕರಿಸಿ ಈ ಚಿತ್ರಗಳನ್ನು ರಚನೆ ಮಾಡಲಾಗಿದೆ. ಈ ದೃಶ್ಯದಲ್ಲಿ ಕಲಿನ ಬೆಟ್ಟವಿದ್ದು ಅಲ್ಲಲ್ಲಿ ಹುಲ್ಲಿನ ಹೊದಿಕೆ ಕಾಣುವುದು. ಬೆಟ್ಟದ ಮೇಲೆ ಹಳದಿ ಬಣ್ಣದ ಕಟ್ಟಡವಿದ್ದು, ಇದರ ಸುತ್ತಲು ಸಮತಟ್ಟ ಮಾಡಲೆಂದು ಕಟ್ಟೆ ಕಟ್ಟಲಾಗಿದೆ. ಇದರ ಹಿಂಭಾಗದಲ್ಲಿ ಅಗಸವಿದ್ದು, ದೊಡ್ಡ ದೊಡ್ಡ ಮೋಡಗಳನ್ನು ನಾವು ಕಾಣಬಹುದು.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಮೋಡಗಳ ವರ್ಣನೆಯ ಸಂದರ್ಭದಲ್ಲಿ ಅಲ್ಲಿ ಬಳಸಿರುವ ವರ್ಣಗಳು ಹಾಗೂ ವರ್ಣ ಲೇಪನದ ವೈಖರಿ ಅದ್ಭುತವೆನಿಸುತ್ತದೆ. ಇಲ್ಲಿ ಬಣ್ಣವನ್ನು ಕಾಗದದ ಮೇಲೆ ಲೇಪಿಸಿದಾಗ ಬರುವ ಆಯಾಮವನ್ನು ಬಿಟ್ಟು ತಮ್ಮ ಮನಸ್ಸಿನ ಅಥವಾ ಅಲ್ಲಿರುವ ವಾಸ್ತವ ಸ್ಥಿತಿಯನ್ನು ಯಥಾವತ್ತಾಗಿ ತೋರಿಸಲಾಗಿದೆ.

ಬಂಡೆಗಳು ಚಾಮುಂಡಿ ಬೆಟ್ಟ

ಮೈಸೂರಿನ ಚಾಮುಂಡಿ ಬೆಟ್ಟದಲ್ಲಿಯ ಎರಡು ಬಂಡೆಗಳನ್ನು ೧೯೧೯ರಲ್ಲಿ ಜಲವರ್ಣದಲ್ಲಿ ಚಿತ್ರಿಸಲಾಗಿದೆ. ಇಲ್ಲಿ ಎರಡು ಬಂಡೆಗಳಿದ್ದು, ಮಧ್ಯದಲ್ಲಿರುವ ಬಂಡೆಯು ದ್ವಿಭಾಗವಾಗಿದೆ ಹಾಗೂ ಹಿನ್ನೆಲೆಯಲ್ಲಿ ಬೃಹದಾಕಾರದ ಮೋಡಗಳು ಸ್ವಲ್ಪ ಮೇಲ್ಭಾಗದಲ್ಲಿ ಹಳದಿ ವರ್ಣಮಿಶ್ರಿತ ಮೋಡಗಳ ಹಿಂಭಾಗದಲ್ಲಿ ನೀಲಿ ಆಗಸ ನೋಡಲು ರೋಮಾಂಚನವೆನಿಸುವುದು. ಇಲ್ಲಿ ಸೂಕ್ಷ್ಮ ಗ್ರಹಿಕೆಯಲ್ಲಿ ಗಮನಿಸಿದಾಗ ದ್ವಿಭಾಗವಾಗಿರುವ ಬಂಡೆಯ ಸಂಧಿಯಲ್ಲಿ ಅಡಿಕೆ ಗಿಡವು ಹೂಗಳನ್ನು ಬಿಟ್ಟಿರುವುದು ಕಾಣಬಹುದು. ಇದರಿಂದ ಅವರ ಸೂಕ್ಷ್ಮ ಹಾಗೂ ಜಾಗೃತ ಬುದ್ಧಿಯನ್ನು ಅರಿಯಬಹುದು ಹಾಗೂ ಯಾವುದನ್ನೂ ಸಾಮಾನ್ಯವಾಗಿ ಕಾಣದ ಮನಸ್ಕರರು ಎಂಬುದು ತೋರುವುದು.



ಚಾಮುಂಡಿ ಬೆಟ್ಟದ ನಂದಿ

ಕ್ರಿ.ಶ. ೧೯೧೯ರಲ್ಲಿಯೇ ಈ ಚಿತ್ರವನ್ನು ಸಹ ರಚಿಸಿದ್ದಾರೆ. ಚಾಮುಂಡಿ ಬೆಟ್ಟಕ್ಕೆ ಹೋಗುವ ಮಾರ್ಗಮಧ್ಯದಲ್ಲಿ ಈ ಶಿಲ್ಪವಿದೆ. ಈ ಕೃತಿಯನ್ನು ತೈಲವರ್ಣದಲ್ಲಿ ವೆಂಕಟಪ್ಪನವರು ರಚಿಸಿದ್ದು ಮುಂಜಾನೆಯ ಸನ್ನಿವೇಶವನ್ನು ಸೂಚಿಸುತ್ತದೆ. ನಂದಿಯ ಬಲಭಾಗದಿಂದ ಈ ದೃಶ್ಯವನ್ನು ರಚಿಸಲಾಗಿದೆ. ಭಕ್ತನೊಬ್ಬನು ನಂದಿಯ ಹಿಂಬದಿಯಿಂದ ಕೈ ಮುಗಿಯುತ್ತಿದ್ದಾನೆ. ಇನ್ನೊಬ್ಬ ನಂದಿಯ ಮುಂಭಾಗದಲ್ಲಿರುವ ಕಟ್ಟಡದ ಮೇಲೆ ಕಳಿತಿದ್ದು ಯಾತ್ರಿಕನಂತೆ ಕಾಣುತ್ತಾನೆ. ಇನ್ನಿಬ್ಬರು ಜೈನ ಸಾಧುಗಳು ಕೈಯಲ್ಲಿ ಕೋಲಿಡಿದು ನಡೆದು ಬರುತ್ತಿರುವುದು ಕಾಣುವುದು.


ಇದೊಂದು ತೈಲ ವರ್ಣದ ಚಿತ್ರವಾಗಿರುವುದರಿಂದ ವರ್ಣವು ದಪ್ಪವಾಗಿ ಕಾಣುತ್ತವೆ. ನಂದಿಯನ್ನು ನೇರಳೆ ಬಣ್ಣದಲ್ಲಿ ಚಿತ್ರಿಸಿದ್ದು, ಹಿನ್ನೆಲೆಯಲ್ಲಿ ಹಳದಿ ವರ್ಣದ ಆಗಸವನ್ನು ತೋರಿಸಲಾಗಿದೆ. ಮಧ್ಯದಲ್ಲಿ ಕಲ್ಲುಗಳು ಗುಡ್ಡ ಗಿಡ-ಮರಗಳನ್ನು ಬಳಸಿಕೊಂಡು ಚಿತ್ರವನ್ನು ಪೂರ್ಣಗೊಳಿಸಲಾಗಿದೆ.

ಊಟಿಯಲ್ಲಿನ ನಿಸರ್ಗ ಚಿತ್ರಣ

ಕ್ರಿ.ಶ. ೧೯೨೬ ಹಾಗೂ ೧೯೨೮ ಈ ಎರಡೂ ವರ್ಷಗಳಲ್ಲಿ ಅನೇಕ ಊಟಿಯ ನಿಸರ್ಗ ಚಿತ್ರಣಗಳನ್ನು ಮಾಡಲಾಗಿದೆ. ಬೇಸಿಗೆ ಬಿಸಿಲಿನ ಸಲುವಾಗಿ ಮೈಸೂರಿನಿಂದ ಊಟಿಗೆ ಧಣಿವಾರಿಸಿಕೊಳ್ಳಲು, ಕೆಲ ಕಾಲ ಕಳೆಯಲು ಮೈಸೂರಿನ ಗಣ್ಯರು, ವ್ಯಾಪಾರಿಗಳು, ಅಧಿಕಾರಿಗಳು, ಶ್ರೀಮಂತರು, ನಿಸರ್ಗ ಪ್ರಿಯರು ಊಟಿಗೆ ತೆರಳುತ್ತಿದ್ದರು. ಇಂತಹ ಸಂದರ್ಭದಲ್ಲಿ ವೆಂಕಟಪ್ಪನವರೂ ಸಹ ಊಟಿಗೆ ತೆರಳುತ್ತಿದ್ದರು. ಆ ಸಂದರ್ಭದಲ್ಲಿ ಜೊತೆಗೆ ಚಿತ್ರರಚನೆಗೆ ಅವಶ್ಯಕ ಸಾಮಗ್ರಿಗಳ ಜೊತೆಗೆ ಒಂದು ವೀಣೆ ಎರಡನ್ನೂ ಕೊಂಡೊಯ್ದು ಅಭ್ಯಾಸ ನಡೆಸುತ್ತಿದ್ದರು. ಬೆಳಗಿನ ಹೊತ್ತು ಚಿತ್ರಾಭ್ಯಾಸವಾದರೆ ರಾತ್ರಿಯ ವೇಳೆ ವೀಣಾಭ್ಯಾಸ. ಹೀಗೆ ಎರಡೂ ಕಲೆಯ ನಿರಂತರ ಅಭ್ಯಾಸದಲ್ಲಿ ತೊಡಗುತ್ತಿದ್ದರು.

ಊಟಿಯ ಸರೋವರ

ಉದಕಮಂಡಲದಲ್ಲಿಯ ಸರೋವರದ ದೃಶ್ಯವು ಮನಮೋಹಕವಾಗಿದೆ. ಇಲ್ಲಿ ದಿಬ್ಬಗಳ ಮೇಲೆ ಮರಗಿಡಗಳಿದ್ದು ಹಾಗೂ ಅದರ ಹಿನ್ನೆಲೆಯಲ್ಲಿ ಆಗಸ, ಮೋಡಗಳಿದ್ದು ಅದು ನೀರಿನಲ್ಲಿ ಪ್ರತಿಬಿಂಬಿಸುತ್ತಿರುವುದು ಗೋಚರವಾಗುತ್ತದೆ. ಈ ಕೃತಿಯಲ್ಲಿ ಗಾಢ ಹಸಿರು, ನೀಲಿ, ತಿಳಿ ಹಳದಿ, ಹಸಿರು, ಬಿಳಿ ವರ್ಣಗಳನ್ನು ಬಳಸಲಾಗಿದ್ದು ಸುಂದರವಾಗಿ ಕಂಗೊಳಿಸುತ್ತಿದೆ. ಇಲ್ಲಿ ಕಲಾವಿದನು ನಿಸರ್ಗ ರಮಣೀಯತೆಗೆ ಮನಸೋತು ಭಾವುಕನಾಗಿ ಈ ಕೃತಿಯನ್ನು ರಚಿಸಿರುವಂತೆ ಕಾಣುತ್ತದೆ.



ಈ ಕೃತಿಯಲ್ಲಿ ಪಾಶ್ಚಾತ್ಯ ಕಲಾ ಪದ್ಧತಿಯ ಪ್ರಭಾವ ನೇರವಾಗಿ ಕಾಣುತ್ತದೆ. ಈ ಕೃತಿಯ ಜೀವಾಳವೇ ಪ್ರತಿಬಿಂಬವಾಗಿದ್ದು, ಅದು ಅದ್ಭುತವಾಗಿ ಮೂಡಿ ಬಂದಿದೆ. ಕೃತಿಯ ಎಡಭಾಗದಿಂದ ಸೂರ್ಯನ ರಶ್ಮಿಗಳು ಬರುತ್ತಿದ್ದು ಮರ, ಚಿಗುರುಗಳನ್ನು ಭೇದಿಸುವಂತಿದೆ. ಒಟ್ಟಾರೆಯಾಗಿ ಇದೊಂದು ಮನಮೋಹಕ ವರ್ಣಚಿತ್ರ ಎಂದೇಳಬಹುದು.


ಹುಣ್ಣಿಮೆ ಚಂದ್ರ

ಉದಕಮಂಡಲದ ಸರೋವರದ ಅಡಿಯಿಂದ ನೋಡಿದಾಗ ಕಾಣಸಿಗುವ ದೃಶ್ಯವಾಗಿದ್ದು ಇಲ್ಲಿ ರಾತ್ರಿಯ ವೇಳೆ ಸಂಪೂರ್ಣ ಹುಣ್ಣಿಮೆ ಚಂದ್ರನನ್ನು ತೋರಿಸಲಾಗಿದೆ. ಮುಂಭಾಗದಲ್ಲಿ ಮರದ ಟೊಂಗೆಗಳು ಬಾಗಿ ಗುಂಪು ಗುಂಪು ಎಲೆಗಳಿದ್ದರೆ, ಹಿನ್ನೆಲೆಯಲ್ಲಿ ನೀಲಗಿರಿಯ ಪರ್ವತ ಶ್ರೇಣಿ ಕಾಣುತ್ತದೆ. ಇದರ ಮೇಲ್ಭಾಗದಲ್ಲಿ ತುಂಬಿದ ಚಂದಿರನು ಆಗಸಕ್ಕೆ ಮೆರಗು ಕೊಡುವಂತೆ ಕಂಗೊಳಿಸುತ್ತಿದ್ದಾನೆ. ತಿಳಿಯಾದ ಕಾರ್ಮೋಡಗಳು ಹರಿಯುವಂತೆ ಕಲಾವಿದನು ಸೃಷ್ಟಿಸಿದ್ದಾನೆ. ಇಲ್ಲಿ ನೇರಳೆ, ನೀಲಿ, ತಿಳಿ ನೀಲಿ, ಬಿಳಿ, ಗಾಢ ಹಸಿರು, ಗಾಢ ನೇರಳೆ ವರ್ಣಗಳನ್ನು ಕಾಣಬಹುದಾಗಿದೆ. ಇದೊಂದು ವಾತ್ಸವ ಸಂಯೋಜನೆ. ಇಂದಿನ ದಿನಮಾನದಲ್ಲಿ ನಿಸರ್ಗ ಚಿತ್ರಣವೇ ಕ್ಷೀಣಿಸುತ್ತಿರುವಾಗ ರಾತ್ರಿಯ ವೇಳೆಯನ್ನು ಸೂಚಿಸುವ ನಿಸರ್ಗ ಚಿತ್ರಣವನ್ನು ಅಭ್ಯಾಸ ಮಾಡುವುದು ದೂರದ ಮಾತು.

ಎಲ್ಕ್ ಹಿಲ್ ಹಾದಿ

ಉದಕಮಂಡಲದ ದೃಶ್ಯಗಳಲ್ಲಿ ಇದೊಂದು ರಮಣೀಯ ದೃಶ್ಯವಾಗಿದೆ. ಇದು ವೆಂಕಟಪ್ಪನವರ ಪಾಲಿಗೆ ಸ್ಫೂರ್ತಿದಾಯಕವಾದಂತಹ ಕಲಾಕೃತಿ. ಈ ದೃಶ್ಯದಲ್ಲಿ ಮರಗಿಡಗಳನ್ನೇ ಸಂಯೋಜಿಸಿಕೊಂಡು ಚಿತ್ರಿಸಲಾಗಿದೆ. ಇಲ್ಲಿ ದೊಡ್ಡ ದೊಡ್ಡ ಮರದ ಟೊಂಗೆಗಳು, ಮರದ ಬಡ್ಡೆ, ಎಲೆಗಳ ಗುಚ್ಚು ಗುಚ್ಚು ತೋರಣ, ಕಾಡಿಗೆ ಸಾಗುವ ದಾರಿ ಎಲ್ಲವೂ ಸುಂದರ. ಇವೆಲ್ಲವನ್ನು ಸಂಯೋಜಿಸಿಕೊಂಡು ಚಿತ್ರ ರಚಿಸಿರುವುದು ಮನಮೋಹಕವಾಗಿದೆ.

ಇದೊಂದು ಜಲವರ್ಣದ ಕೃತಿಯಾಗಿದ್ದು ನೆರಳು ಬೆಳಕಿನ ಒಡನಾಟವನ್ನು ಕಲಾವಿದರು ಸೂಕ್ಷ್ಮವಾಗಿ ಗಮನಿಸಿ ಚಿತ್ರಿಸಿದ್ದಾರೆ. ಈ ಪರ್ವ ಶ್ರೇಣಿಯಲ್ಲಿ ಬೆಳೆಯುವ ನೀಲಗಿರಿಯ ಮರಗಳನ್ನು ಬಹು ಸುಂದರವಾಗಿ ಸಂಯೋಜಿಸಿಕೊಂಡು ವರ್ಣದಿಂದ ಪೂರ್ಣಗೊಳಿಸಿದ್ದಾರೆ. ಇಲ್ಲಿ ಕೃತಿಯ ವಿಷಯದ ಬಲಭಾಗದಿಂದ ಸೂರ್ಯ ರಶ್ಮಿಗಳು ಓರೆಯಾಗಿ ಬೀಳುತ್ತಿರುವವು. ಈ ಚಿತ್ರದಲ್ಲಿ ಹಳದಿ, ಹಸಿರು, ಗಾಢ ಹಸಿರು, ತಿಳಿ ನೀಲಿ, ನೇರಳೆ, ಕಂದು ಬಣ್ಣಗಳನ್ನು ಕಾಣಬಹುದು. ನಿಸರ್ಗ ದೃಶ್ಯವಾದ್ದರಿಂದ ಹಸಿರನ್ನು ಹೆಚ್ಚಾಗಿ ಕಾಣಬಹುದಾಗಿದೆ.



ಮುಂಗಾರು ನಂತರದ ನೀಲಗಿರಿಯ ತಾಣ

ಉದಕಮಂಡಲದಲ್ಲಿ ಬೇಸಿಗೆ ಮುಗಿದು ಮುಂಗಾರಿನ ವರುಣನ ಋತು ಕಳೆದ ಮೇಲೆ ಕಾಣಸಿಗುವ ನಿಸರ್ಗ ದೃಶ್ಯ ಮುಂಗಾರಿನಲ್ಲಿ ಮಳೆ ಹೆಚ್ಚಾಗಿ ಬಂದು ಗಿಡಮರಗಳು ಹಸಿರಾಗಿರುತ್ತವೆ. ಇದಾದ ಮೇಲೆ ಆಷಾಡದ ಗಾಳಿಯಲ್ಲಿ ಮಂಜು ಮುಸುಕಿರುತ್ತದೆ. ಆದ್ದರಿಂದ ಈ ದೃಶ್ಯವನ್ನು ಕಲಾವಿದನು ಸೂರ್ಯನು ನೆತ್ತಿಯ ಮೇಲೆ ಬಂದ ಸಂದರ್ಭದಲ್ಲಿ ಮಾಡಿರುವುದು ಗೋಚರವಾಗುತ್ತದೆ. ಈ ದೃಶ್ಯದಲ್ಲಿ ಎರಡು ದಾರಿಗಳಿದ್ದು, ಒಂದು ತಿರುವಿದೆ. ಎಡದಿಂದ ಬಲಕ್ಕೆ ಗುಡ್ಡ ಇಳಿದಿದೆ. ಮಧ್ಯದಲ್ಲಿ ದಾರಿ, ಮುಂಭಾಗದಲ್ಲಿ ನೀಳ ಮರಗಳೂ ಇದರ ಹಿನ್ನೆಲೆಯಲ್ಲಿ ಬಹು ದೂರದಲ್ಲಿ ನೀಲಾದ್ರಿ ಪರ್ವತ. ಅದರ ಹಿನ್ನಲೆಯಲ್ಲಿ ಆಗಸ ತಿಳಿಯಾದ ಮೋಡದ ಸಾಲು ನೋಡಲು ನಯನ ಮನೋಹರವಾಗಿದೆ. ಈ ದೃಶ್ಯದಲ್ಲಿ ನೀಲಿ, ತಿಳಿ ನೀಲಿ, ಹಸಿರು, ಹಳದಿ, ನೇರಳೆ ಹಾಗೂ ಬಿಳಿ ಬಣ್ಣಗಳಿದ್ದು, ಮುಂಭಾಗದ ಮರಗಳಲ್ಲಿ ಗಾಢ ಹಸಿರು, ನೀಲಿ, ಕಂದುಬಣ್ಣವನ್ನು ಕಾಣಬಹುದು.

ಹಿನ್ನೆಲೆಯ ಕಿರಣಗಳು

ಉದಕಮಂಡಲದಲ್ಲಿ ಮುಂಜಾನೆಯ ಸೂರ್ಯೋದಯದ ಸೂರ್ಯ ರಶ್ಮಿಗಳನ್ನು ನೋಡುವುದೇ ಒಂದು ಸುಂದರ ಅನುಭವ. ಅದರಲ್ಲೂ ಆ ವೇಳೆ ಆ ಪ್ರಕೃತಿಯನ್ನು ಆಸ್ವಾದನೆ ಮಾಡಿಕೊಂಡು ಚಿತ್ರ ರಚಿಸುವುದೆಂದರೆ ರಸಿಕತನದ ದಿಗಂತದ ತುತ್ತತುದಿಗೇರುವುದೆಂದು. ಇಲ್ಲಿ ಮುಂಜಾನೆ ಮಂಜು ತೇಲುವ ಹೊತ್ತಿನಲ್ಲಿ ಆಗಸದಿಂದ ಸೂರ್ಯ ರಶ್ಮಿಗಳು ಪ್ರಕೃತಿಯ ಗಿಡ–ಮರಗಳನ್ನು ಭೇದಿಸಿಕೊಂಡು ಒಳ ನುಗ್ಗುತ್ತಿರುವುದನ್ನು ಕಲಾವಿದನು ಮನಮೋಹಕವಾಗಿ ಚಿತ್ರಿಸಿದ್ದಾನೆ. ಹಿನ್ನೆಲೆಯಲ್ಲಿ ಆಗಸವಿದ್ದು, ಇದರ ಮುಂಭಾಗದಲ್ಲಿ ಗಿರಿಯ ಸಾಲಿದ್ದು, ಅದರ ಮುಂಭಾಗದಲ್ಲಿರುವ ಮರ–ಗಿಡ, ಕೋಟೆ–ಕೊತ್ತಲನ್ನು ಸೀಳಿಕೊಂಡು ಸೂರ್ಯನ ಕಿರಣಗಳು ಒಳನುಗ್ಗುತ್ತಲಿವೆ. ಇಲ್ಲಿ ಗಾಢ ಹಸಿರು, ನೀಲಿ, ಕಂದು, ಬಂಗಾರದ ಹಳದಿ, ತಿಳಿ ನೀಲಿ, ಹಸಿರು, ಹಳದಿ, ಬಿಳಿ ವರ್ಣಗಳನ್ನು ಕಾಣಬಹದು. ಸಂಯೋಜನೆಯ ನಿಖರತೆ, ಬಣ್ಣಗಳ ಯಥಾದರ್ಶನವಂತೂ ಮನಮೋಹಕವಾಗಿ ವಾಸ್ತವಕ್ಕೆ ನಾಚಿಸುವಂತಿದೆ.

ಮುಂಗಾರ ಮಳೆ

ಉದಕಮಂಡಲದಲ್ಲಿ ಬೇಸಿಗೆಯಲ್ಲಿಯೂ ಮಳೆ ಬೀಳುತ್ತಿರುತ್ತದೆ. ಆದರೆ ಮುಂಗಾರಿನ ಸಂದರ್ಭದಲ್ಲಿ ಅದನ್ನು ನೋಡಿದವನಿಗೆ ಮಾತ್ರ ತಿಳಿಯುವುದು. ಆಗಸದಲ್ಲಿ ಮೋಡಗಳು ಕೈಗೆಟುಕುವಂತಿದ್ದು,

ನಾವೇ ಅದರ ಮೇಲೆ ಸವಾರಿ ಮಾಡಿದಂತಿರುತ್ತದೆ. ಈ ದೃಶ್ಯದಲ್ಲಿ ಸಂಪೂರ್ಣವಾಗಿ ಗಿಡ-ಮರಗಳಿಂದ ಕೂಡಿದ ವನವಿದ್ದು, ಹಿನ್ನೆಲೆಯಲ್ಲಿ ಪರ್ವತ ಶ್ರೇಣಿಗಳಿವೆ. ಕಾರ್ಮೋಡಗಳು ಬೆಟ್ಟ, ಗುಡ್ಡ, ಮರ, ಗಿಡಗಳಿಗೆ ತಾಗಿಕೊಂಡು ಧರೆಗಿಳಿಯುತ್ತಿರುವ ದೃಶ್ಯ ಮನಮೋಹಕ. ಇಲ್ಲಿ ಗಾಢ ಹಸಿರು, ಕಂದು, ನೇರಳೆ ವರ್ಣಗಳಿದ್ದು, ಅಲ್ಲಲ್ಲಿ ತಿಳಿ ನೀಲಿ, ಬಿಳಿ, ಹಳದಿ ಹಾಗೂ ಹಸಿರು ವರ್ಣಗಳನ್ನು ಕಾಣಬಹುದು.

ಚರ್ಚ್ ಹಿಲ್ ಹಾಗೂ ಕುಂದ ಬೆಟ್ಟ ಸಾಲು

ಉದಕಮಂಡಲದ ಚರ್ಚ್‌ಹಿಲ್ ಬೆಟ್ಟದಿಂದ ನೋಡಿದಾಗ ಕುಂದಾ ಬೆಟ್ಟ ಶ್ರೇಣಿಯನ್ನು ಕಲಾವಿದ ಬಹು ಸೊಗಾಗಿ ಚಿತ್ರಿಸಿದ್ದಾರೆ. ಈ ಕುಂದ ಶ್ರೇಣಿಯನ್ನು ವೀಕ್ಷಿಸುವು ಮನಮೋಹಕ ಸಂಗತಿ. ಎಲ್ಲವೂ ನೀಲಿ, ನೇರಳೆ ವರ್ಣದ ಬೆಟ್ಟ ಸಾಲು. ಅದು ಇಲ್ಲಿ ಕಲಾವಿದರು ಸೃಷ್ಟಿಸಿರುವುದನ್ನು ಗಮನಿಸಿದಾಗ ಒಮ್ಮೆ ನಿಜಾತೀತ ಪಂಥದ ಕಲಾಕೃತಿಯೇನೋ ಎನಿಸುತ್ತಿದೆ. ಈ ದೃಶ್ಯದಲ್ಲಿ ಚರ್ಚ್‌ಹಿಲ್‌ನ ಬೆಟ್ಟದಲ್ಲಿಯ ಮರಗಳು ಹಿಮಾಲಯದ ತಪ್ಪಲಿನ ಮರಗಳಂತೆ ಕೆಳಮುಖವಾಗಿ ಇಳಿದಿರುವ ಎಲೆಗಳ ರಾಶಿಯನ್ನು ಕಾಣಬಹುದು. ಅದರ ಮುಂಭಾಗದಲ್ಲಿ ಹುಲ್ಲುಗಾವಲಿನಂತೆ ಬಯಲಿದ್ದು, ಮಧ್ಯದ ಕೊಲ್ಲೆಗಳಲ್ಲಿ ಚೂಪಾದ ಮರಗಳ ಗುಂಪು ಕಾಣುತ್ತದೆ.

ಮಧ್ಯದಲ್ಲಿ ಮರೆಮಾಚಿದಂತೆ ಒಂದು ಕಟ್ಟಡವೂ ಕಾಣುತ್ತದ. ಇದರ ಹಿಂಭಾಗದಲ್ಲಿ ಕುಂದಾ ಬೆಟ್ಟದ ಸಾಲು ಕಾಣುವುದು. ಅದರ ಹಿಂಭಾಗದಲ್ಲಿ ಸುರಳಿ ಸುತ್ತಿಕೊಂಡು ಸಾಗುತ್ತಿರುವ ಮೋಡಗಳ ಸಾಲು ಆಗಸಕ್ಕೆ ಏಣಿ ಹಾಕಿದಂತಿದೆ. ಇಲ್ಲಿ ತಿಳಿ ನೀಲಿ, ಬಿಳಿ, ನೇರಳೆ, ಹಳದಿ, ಹಸಿರು ವರ್ಣಗಳಿದ್ದು, ಗಾಢವಾಗಿ ಹಸಿರು, ನೇರಳೆ ಹಾಗೂ ಕಂದು ವರ್ಣವನ್ನು ಲೇಪಿಸಲಾಗಿದೆ.

ಚರ್ಚ್‌ಹಿಲ್ ಹಾದಿ

ಚರ್ಚ್‌ಹಿಲ್ ಮೇಲೆ ಸಾಗಲೆಂದು ನಿರ್ಮಿಸಲಾಗಿರುವ ಹಾದಿಯನ್ನು ವಿಷಯವಾಗಿರಿಸಿಕೊಂಡು ಇಲ್ಲಿ ಚಿತ್ರ ರಚನೆ ಮಾಡಲಾಗಿದೆ. ಕೃತಿಯ ಬಲದಿಂದ ಎಡಭಾಗಕ್ಕೆ ಬೆಟ್ಟ ಇಳಿಜಾರಿನಂತಿದ್ದು, ಮಧ್ಯದಲ್ಲಿ ಹಾದಿ ಸಾಗಿದೆ. ಹಾದಿಯ ತಿರುವಿನಲ್ಲಿ ನೀಳ ಮರಗಳ ಗುಂಪಿದ್ದು, ಇದು ಕೃತಿಯ ಜೀವಾಳವಾಗಿದೆ. ಹಿನ್ನಲೆಯಲ್ಲಿ ನೀಲಗಿರಿ ಮರಗಳ ಸಾಲಿದೆ. ಅದರ ಹಿಂಭಾಗದಲ್ಲಿ ತಿಳಿ ಆಗಸವನ್ನು ಕಾಣಬಹುದು. ಈ ಕೃತಿಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಹಿಂಬದಿಯಿಂದ ಬೆಳಕು ಬರುತ್ತಿದ್ದು, ನೀಳವಾದ ಮರಗಳ ಎಡಭಾಗದಿಂದ ಸೂರ್ಯ ರಶ್ಮಿಗಳೂ ಬರುತ್ತಿರುವುದನ್ನು ಕಾಣಬಹುದಾಗಿದೆ.

ಇಲ್ಲಿಯೂ ಸಹ ತಿಳಿ ಹಸಿರು, ನೀಲಿ, ಹಳದಿ, ನೇರಳೆ ವರ್ಣಗಳಿದ್ದು, ಗಾಢ ವರ್ಣಗಳಿಗಾಗಿ ಕಂದು, ಗಾಢ ಹಸಿರು, ನೇರಳೆ ವರ್ಣಗಳನ್ನು ತೋರಿಸಲಾಗಿದೆ.

ಕಾಕರ್ ಶ್ರೇಣಿ ಹಾಗೂ ಸ್ಟ್ರೋಬಿಲ್ಯಾಂತಸ್ ಪುಷ್ಪಗಳು (ಕೊಡೈಕೆನಾಲ್)

ಈ ದೃಶ್ಯವೂ ವರ್ಣ ಯಥಾದರ್ಶನದ ಗುಣಮಟ್ಟದಲ್ಲಿ ಉನ್ನತ ಸ್ಥಾನದಲ್ಲಿ ನಿಲ್ಲುತ್ತದೆ. ಈ ದೃಶ್ಯದಲ್ಲಿ ಹಿನ್ನೆಲೆಯನ್ನು ನೂರಾರು ಮೈಲುಗಳಷ್ಟು ದೂರಕ್ಕೆ ಕಲಾವಿದ ಕರೆದೊಯ್ಯುತ್ತಾನೆ. ಕೃತಿಯ ಎಡಭಾಗದಲ್ಲಿ ಒಂದು ಪರ್ವತವಿದ್ದು, ಇಲ್ಲಿ ಸ್ಟ್ರೋಬಿಲ್ಯಾಂತಸ್ ಪುಷ್ಪಗಳು ಕಂಡುಬರುತ್ತವೆ. ಎಡಭಾಗದ ಕೊನೆಯ ಅಂಚಿನಲ್ಲಿ ನೀಲಗಿರಿಯ ಮರದ ಟೊಂಗೆಯೊಂದು ಕಾಣುತ್ತದೆ. ಮುಂದಿರುವ ಪರ್ವತವು ಎಡತುದಿಯಿಂದ ಬಲಗಡೆಗೆ ಇಳಿಜಾರಾಗಿದೆ. ಈ ಕೆಳಭಾಗದಲ್ಲಿ ನೀಲಗಿರಿ ಮರಗಳ ಸಾಲಿದೆ. ಅದರ ಹಿಂಭಾಗದಲ್ಲಿ ಸಾಲು ಸಾಲು ಪರ್ವತಶ್ರೇಣಿ, ಮಧ್ಯಭಾಗದಲ್ಲಿ ವಿಸ್ತೀರ್ಣವಾದ ಬಯಲು ಗೋಚರಿಸುತ್ತದೆ. ತಿಳಿ ಆಗಸದಲ್ಲಿ ತಿಳಿ ಮೋಡಗಳ ಸಾಲನ್ನು ಕಾಣಬಹುದು.


ಈ ದೃಶ್ಯವು ವರ್ಣ ಯಥಾದರ್ಶನವ ವಿಷಯವಾಗಿದ್ದು, ಇಲ್ಲಿ ಬಹು ಮುಖ್ಯವಾಗಿ ಈ ಸಂಗತಿಯನ್ನು ಗಮನಿಸಬೇಕಾಗುತ್ತದೆ. ಸಂಯೋಜನೆ, ವಸ್ತು ನಿಷ್ಠ ವರ್ಣಶೈಲಿ ಮನಮೋಹಕವಾಗಿದೆ. ಇಲ್ಲಿ ಬಹುವಾಗಿ ನೇರಳೆ, ನೀಲಿ, ಬಿಳಿ, ಹಸಿರು, ಹಳದಿ ವರ್ಣಗಳನ್ನು ಕಾಣಬಹುದು. ಈ ದೃಶ್ಯವನ್ನು ನೋಡುತ್ತಾ ಹೋದರೆ ನೂರಾರು ಮೈಲುಗಳು ಈ ಕೃತಿಯಿಂದಲೇ ಸಾಗಬೇಕೆಂಬ ಭ್ರಮೆ ಹುಟ್ಟಿಸುತ್ತದೆ.

ಮುಂಗಾರು ಮಳೆಯ ಕಾಕರ್ ಹಾದಿ

ಈ ದೃಶ್ಯವು ವಸ್ತುಸ್ಥಿತಿಯನ್ನು ಅರಿಯಲು ಉತ್ತಮ ಉದಾಹರಣೆಯಾಗಿದೆ. ಮುಂಗಾರು ಜೋರು ಮಳೆಯ ನಂತರ ಮಸುಕು ಮಸುಕಾದ ಕಾಕರ್ ಹಾದಿಯನ್ನು ನಾವಿಲ್ಲಿ ಕಾಣಬಹುದಾಗಿದೆ. ಈ ಕೃತಿಯಲ್ಲಿ ತಿಳಿ ನೇರಳೆ ವರ್ಣವನ್ನು ಸಂಪೂರ್ಣವಾಗಿ ಬಳಸಿಕೊಳ್ಳಲಾಗಿದೆ. ಇದು ಮಳೆಯ ಪ್ರಭಾವವನ್ನು ಸೂಚಿಸುತ್ತದೆ. ಇದನ್ನು ಹೊರತುಪಡಿಸಿ ಮುಂಭಾಗದಲ್ಲಿ ತಿಳಿಹಸಿರಿಗೆ ನೇರಳೆಯ ಮಿಶ್ರಣವಿದೆ. ಕೃತಿಯ ಎಡಭಾಗದ ಅರ್ಧದಲ್ಲಿ ಮಸುಕು ಮಸುಕಾಗಿ ಸೂರ್ಯನು ಉದಯಿಸುತ್ತಿರುವುದು ಗೋಚರವಾಗುತ್ತದೆ.

ಚರ್ಚ್ ಹಿಲ್ ಮೇಲಿಂದ ಊಟಿ ಡೌನ್ಸ್

ಚರ್ಚ್ ಹಿಲ್ ಮೇಲಿಂದ ನೋಡಿದಾಗ ಕಾಣಸಿಗುವ ಊಟಿ ಡೌನ್ಸ್‌ನ ವಿಹಂಗಮ ದೃಶ್ಯ. ಇದರಲ್ಲಿ ವೆಂಕಟಪ್ಪನವರ ತಾಳ್ಮೆ, ಪರಿವೀಕ್ಷಣೆ, ಕುಸರೀತನದ ಪರಿಚಯವಾಗುತ್ತದೆ. ಈ ಕೃತಿ




ವೆಂಕಟಪ್ಪನವರ ಕಲೆಗೆ ಕನ್ನಡಿ ಹಿಡಿದಂತಿದೆ. ಪಾಶ್ಚಾತ್ಯರು ತೈಲವರ್ಣದಲ್ಲಿ ಮಾಡಲು ತಿಣುಕುವ ಈ ವಿಷಯವನ್ನು ವೆಂಕಟಪ್ಪನವರು ಜಲವರ್ಣದಲ್ಲಿ ತೈಲವರ್ಣಕ್ಕೆ ಸೋಜಿಗಪಡಿಸುವಂತಹ ಚೆಲುವನ್ನು ತುಂಬಿಸಿದ್ದಾರೆ. ಕೃತಿಯ ಎಡ, ಬಲ ಬದಿಯಲ್ಲಿ ಮರ-ಗಿಡಗಳು, ಮಧ್ಯದಲ್ಲಿ ರಸ್ತೆ, ಅದರ ಬದಿಯಲ್ಲಿ ಮರಗಳು ತಿರುವಿನಲ್ಲಿ ಒಂದರೆಡು ಮನೆಗಳು, ಅದರ ಹಿನ್ನೆಲೆಯಲ್ಲಿ ಹುಲ್ಲುಗಾವಲಿನಂತಹ ಗುಡ್ಡಗಳ ಸಾಲು ಸಾಗು ಸಾಗುತ್ತಾ ಹಿಂದೆ ಹೋದರೆ ನೇರಳೆ ವರ್ಣದ ಪರ್ವತ ಶ್ರೇಣಿ. ಇದರ ಹಿಂದೆ ಮೋಡದ ಬುಗ್ಗೆಗಳು. ಮೇಲ್ಭಾಗದಲ್ಲಿ ತಿಳಿ ಆಗಸ. ಹೀಗೆ ವಿವರಿಸಲಸಾಧ್ಯವಾದಂತಹ ಕೃತಿಗಳನ್ನು ವೆಂಕಟಪ್ಪನವರು ಕೊಡುಗೆಯಾಗಿ ನೀಡಿದ್ದಾರೆ.

ಬಿಯರ್ ಶೋಲಾ ಬೆಟ್ಟ ಸಾಲು (ಕೊಡೈಕೆನಾಲ್)

ಕೊಡೈಕೆನಾಲ್‌ನ ಬಿಯರ್ ಶೋಲಾ ಬೆಟ್ಟಗಳ ಸಾಲಿನ ಬ್ರಿಯಾಂಟ್ ಉದ್ಯಾನವನ ಮನಮೋಹಕ ದೃಶ್ಯಾವಳಿಯಾಗಿದೆ. ಈ ಕೃತಿಯ ಎರಡೂ ಬದಿಗಳಲ್ಲಿ ಮರಗಳಿದ್ದು, ಒಂದಕ್ಕೆ ಇಳಿಜಾರಿದೆ. ಕೆಳಗೆ ಸಾಗಿದರೆ ಸರೋವರವಿದ್ದು, ಅದರಲ್ಲಿ ದೋಣಿಯೊಂದನ್ನು ಕಾಣಬಹುದು. ಹಿಂದೆ ಸಾಗಿದಂತೆಲ್ಲ ನೀಲಿವರ್ಣದಿಂದ ವರ್ಣ ರಂಜಿತವಾಗಿ ಕಾಣುವ ಗಿರಿಸಾಲು, ಇದರ ಮೇಲೆ ಆಗಸವನ್ನೇ ಆಕ್ರಮಿಸುವಂತಹ ಮೋಡದ ಗುಂಪು, ಅದರ ಹಿನ್ನೆಲೆಯಲ್ಲಿ ತಿಳಿ ನೀಲಿ ವರ್ಣವಿದೆ. ಈ ಕೃತಿಯಲ್ಲೂ ಸಹ ಗಾಢ ವರ್ಣಗಳನ್ನು ಕಾಣಬಹುದು. ಇಲ್ಲಿಯ ವಸ್ತು ವಿಷಯ ಮೋಡ ಹಾಗೂ ಗಿರಿ ಸಾಲು.

ಸೂರ್ಯೋದಯ ಊಟಿ

ಬಹುಶಃ ಈ ರೀತಿಯ ಸೂರ್ಯೋದಯದ ದೃಶ್ಯಾವಳಿಯನ್ನು ಎಂದಿಗೂ, ಯಾವ ಕಲಾವಿದನೂ ಸೃಷ್ಟಿಸಲುಬ ಸಾಧ್ಯವಿಲ್ಲ. ಎಲ್ಲಾ ಸೂರ್ಯೋದಯದ ಕೃತಿಗಳಲ್ಲಿಯೂ ಸೂರ್ಯನನ್ನು ಕೇಂದ್ರ ಬಿಂದುವಾಗಿರಿಸಿಕೊಂಡು ಚಿತ್ರರಚಿಸುತ್ತಾರೆ. ಆದರೆ ಈ ಕೃತಿಯಲ್ಲಿ ವೆಂಕಟಪ್ಪನವರು ಸೂರ್ಯ ರಶ್ಮಿಯ ಛಾಯೆಗಳು ಮೋಡದ ಮೇಲೆ ಬೀಳುತ್ತಿರುವ ಸನ್ನಿವೇಶವನ್ನಾಧರಿಸಿ ಚಿತ್ರರಚಿಸಿದ್ದಾರೆ. ತಿಳಿ ಆಗಸದಲ್ಲಿ ಸುರುಳಿ ಸುರುಳಿಯಾಗಿರುವ ಮೋಡಸಾಲು, ಇದರ ಮೇಲೆ ಬೀಳುತ್ತಿರುವ ಸೂರ್ಯ ರಶ್ಮಿಗಳು, ಇದರ ಕೆಳಭಾಗದಲ್ಲಿ ಪರ್ವತ, ಅದರ ಮುಂಭಾಗದಲ್ಲಿ ಚಾಚಿಕೊಂಡಿರುವ ಮರ. ಇಲ್ಲಿ ನೋಡುಗನ ಕುತೂಹಲ ಕೆರಳಿಸುವ ವಿಷಯವೆಂದರೆ ಜಲವರ್ಣದಲ್ಲಿ ಈ ರೀತಿಯ ಹೊಳಪು ಭರಿತ ಮೋಡರಚನೆ ಸಾಧ್ಯವೇ? ಎಂಬ ಪ್ರಶ್ನೆ. ಇಲ್ಲಿ ಬಂಗಾರದ ಹಳದಿ, ಕೇಸರಿ, ತಿಳಿ ನೀಲಿ, ಹಸಿರು ಹಾಗೂ ಗಾಢ ಹಸಿರು, ನೀಲಿ, ಕಂದು ವರ್ಣಗಳಿವೆ.



ಚಂದ್ರೋದಯ ಊಟಿ

ಈ ರೀತಿಯ ಸಾಹಸವನ್ನು ತೈಲವರ್ಣದಲ್ಲಿ ಮಾಡುವುದೇ ಕಷ್ಟ ಎಂದರೆ, ಜಲವರ್ಣದಲ್ಲಿ ಸಾಧ್ಯವೇ ಇಲ್ಲ. ಊಟಿಯ ಪರ್ವತ ಶ್ರೇಣಿಯಲ್ಲಿ ಸೂರ್ಯೋದಯದ ರಸನಿಮಿಷವನ್ನು ಸವಿಯಲು ಬಯಸುವ ಕಲಾ ರಸಿಕರಿಗೆ ಇನ್ನೊಂದು ಅವಕಾಶದಂತೆ ಈ ಕೃತಿ. ಇಲ್ಲಿ ಗಾಢ ಹಸುರಿನ ಪರ್ವತವಿದ್ದು, ಎಡಭಾಗದಲ್ಲಿ ದೂರ ತುದಿಯಲ್ಲಿ ವಾಸ ನಿಬಿಡ ಜಾಗವಾಗಿದ್ದು, ಅಲ್ಲಿ ದೀಪಗಳು ಉರಿಯುತ್ತಿರುವುದು ಗೋಚರಿಸುತ್ತದೆ. ಪರ್ವತದ ಹಿಂದೆ ಮೋಡ ತಿಳಿಯಾಗಿದ್ದು, ಮೇಲೆ ಬಂದಂತೆ ಗಾಢ ಹಸಿರು ಮಿಶ್ರಿತ ನೀಲಿಯಿಂದ ಕಾಣುತ್ತದೆ. ಇದರ ಮಧ್ಯ ಮಧ್ಯದಲ್ಲಿ ಬಿಳಿಯ ಚುಕ್ಕೆಗಳು ಕಂಡುಬರುತ್ತವೆ.


ಸೂರ್ಯಾಸ್ತ, ಉದಕಮಂಡಲ (೧೮-೧೧-೧೯೫೭)

ಈ ಕಲಾಕೃತಿಯು ಕಲಾವಿದನ ಪರ್ವಾಂತ್ಯವನ್ನು ಸೂಚಿಸುತ್ತದೆ. ಹಲವರ ಹೇಳಿಕೆ ಪ್ರಕಾರ ಈ ಕಲಾಕೃತಿ ವೆಂಕಟಪ್ಪನವರ ಕೊನೆಯ ಕಲಾಕೃತಿ ಎಂದು ತಿಳಿಸುತ್ತಾರೆ. ತಮ್ಮ ಸಂಧ್ಯಾಕಾಲದ ಕೊನೆ ಕ್ಷಣವನ್ನು ಸೂರ್ಯಾಸ್ತಮಾನ ಎಂಬ ಸೂಚಕ ಕೃತಿ ಇದಾಗಿದೆ. ಈ ಕೃತಿಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಇದು ಅವರು ಬೆಂಗಳೂರಿನಲ್ಲಿಯೇ ಕುಳಿತು ಮಾಡಿರುವ ಎಲ್ಲಾ ಕುರುಹುಗಳು ದೊರೆಯುತ್ತವೆ. ಏಕೆಂದರೆ ಇವರು ಕೊನೆಗಾಲದಲ್ಲಿ ನಂದಿ ಬೆಟ್ಟಕ್ಕೆ ಹೋಗಿಬರುವುದು ದುಃಸ್ತರವಾಗಿತ್ತು. ಅಂತಹದ್ದರಲ್ಲಿ ಉದಕಮಂಡಲದ್ದು ದೂರದ ಮಾತಾಯಿತು.

ಇದಲ್ಲದೆ ವೆಂಕಟಪ್ಪನವರ ಕಲಾಕೃತಿಯಲ್ಲಿ ವಾಸ್ತವಾಂಶದ ಪರಾಕಾಷ್ಠೆಯನ್ನು ಕಾಣುತ್ತೇವೆ. ಆದರೆ ಈ ಕೃತಿಯಲ್ಲಿ ಭಾವನೆಯ ಮೌಲ್ಯವನ್ನು ಕಾಣಬಹುದಾಗಿದೆ. ಸೂರ್ಯನ ಅಸ್ತಂಗತವೆಂದರೆ ಬಾಳಿನ ಮರು ಪುಟ ತೆರೆದಂತೆ. ಇಲ್ಲಿ ಮುಖ್ಯವಾಗಿ ಎರಡೇ ವರ್ಣಗಳು ಒಂದು ಹಸಿರು, ಮತ್ತೊಂದು ಕೇಸರಿ. ಇವೆರಡು ಶಿಸ್ತಿನ ಹಾಗೂ ಸಮೃದ್ಧಿಯ ಸಂಕೇತ. ಇವೆರಡು ಇವರ ಬಾಳಿನುದ್ದಕ್ಕೂ ನಡೆದು ಬಂದ ಭಾವಗಳು.

ಸಂಯೋಜನೆಯ ಚಿತ್ರಗಳು

ಕೆ. ವೆಂಕಟಪ್ಪನವರು ತಮ್ಮ ಸೃಜನಶೀಲ ಸಂಯೋಜನೆ ಚಿತ್ರಗಳನ್ನೂ ಸಹ ಜಲವರ್ಣದಲ್ಲಿ ರಚಿಸಿದ್ದಾರೆ. ತಮ್ಮ ಸೃಜನಶೀಲ ಭಾವನೆಗಳನ್ನು ಕಾಗದದಲ್ಲಿಯೇ ರಚಿಸುತ್ತಿದ್ದರು. ಹೆಚ್ಚಾಗಿ ವಿದ್ಯಾರ್ಥಿ ದೆಸೆಯಲ್ಲಿ ಇವರು ಸೃಜನಶೀಲ ಸಂಯೋಜನೆಯ ಚಿತ್ರಗಳನ್ನು ರಚಿಸುತ್ತಿದ್ದರು. ಮೈಸೂರಿಗೆ ಬಂದ ಮೇಲೆ ನಿಸರ್ಗ ಚಿತ್ರಣ ಹಾಗೂ ಭಾವಚಿತ್ರಣಗಳನ್ನು ರಚಿಸುವಲ್ಲಿ ನಿರತರಾದರು. ತಮ್ಮ ವಿದ್ಯಾರ್ಥಿ



ದೆಸೆಯಲ್ಲಿ ಅವನೀಂದ್ರರ, ನಂದಲಾಲ್ ಬೋಸರ, ಕ್ಷಿತೀಂದ್ರನಾಥ್ ಮಜುಮ್‌ಲಾಲ್‌ರ ಪ್ರಭಾವವು ವೆಂಕಟಪ್ಪನವರ ಮೇಲೆ ತೀಕ್ಷ್ಣವಾಗಿ ಬೀರಿತು. ಇವರು ಬೆಂಗಾಲ್‌ಗೆ ಹೋದ ಸಂದರ್ಭದಲ್ಲಿ ದೇಶೀಯತೆಯ ಕ್ರಾಂತಿ ಮೊಳಗಿತ್ತು. ಇಲ್ಲಿ ಪಾಶ್ಚಾತ್ಯ ಪದ್ಧತಿಯನ್ನು ಬಿಟ್ಟು ದೇಶಿ ಪದ್ಧತಿಯ ಒಲವು ಎಲ್ಲಾ ಭಾರತೀಯ ಕಲಾವಿದರಲಿ ಮೂಡಿತು. ಆ ಸಂದರ್ಭದಲ್ಲಿ ಅಲ್ಲಿ ಅಧ್ಯಾಪಕರಾಗಿದ್ದ ಅವನೀಂದ್ರರೂ ಸಹ ಭಾರತೀಯ ಕಲೆಯ ಒಳ ಅರಿವನ್ನು ಬಲ್ಲವರಾಗಿದ್ದರು. ಅದನ್ನೇ ವಿದ್ಯಾರ್ಥಿಗಳಿಗೂ ಭೋಧಿಸುತ್ತಿದ್ದರು. ಇವರ ಪ್ರಭಾವದಿಂದ ವೆಂಕಟಪ್ಪನವರೂ ಸಹ ಭಾರತೀಯ ದೇಶೀಕಲೆ ಒಲವನ್ನು ಬೆಳಸಿಕೊಂಡು ಅದನ್ನೇ ಅಭ್ಯಸಿಸಿ, ಅದನ್ನೇ ರೂಢಿಸಿಕೊಂಡರು ಕೂಡ.

ಬೆಂಗಾಲ್ ಫ್ಲಾರಿಕನ್


ವೆಂಕಟಪ್ಪನವರು ಬಂಗಾಳಿ ಸರಕಾರಿ ಕಲಾಶಾಲೆಗೆ ಸೇರಿದ ಮರುವರ್ಷವೇ ಅಂದರೆ ೧೯೧೦ ರಲ್ಲಿ ಈ ಕಲಾಕೃತಿಯನ್ನು ರಚಿಸಿದ್ದಾರೆ. ಫ್ಲಾರಿಕನ್ ಪಕ್ಷಿಯ ಚಿತ್ರವನ್ನು ಸೇರಿದ ಎರಡನೇ ವರ್ಷದ ಪ್ರಾರಂಭದಲ್ಲಿಯೇ ಜಲವರ್ಣದಲ್ಲಿ ರಚಿಸಿದ್ದಾರೆ. ಇದರಿಂದ ಅವರಿಗಿದ್ದ ಕಲಾಸಕ್ತಿ ತಿಳಿಯುತ್ತದೆ. ಈ ಪಕ್ಷಿಯು ಕೊಕ್ಕರೆಯ ಮಾದರಿಯಲ್ಲಿದ್ದು, ಕೃತಿಯು ಎಡಗಡೆಗೆ ತಲೆ ಮಾಡಿಕೊಂಡು ನಿಂತಿದೆ. ಇದರ ಹಿನ್ನೆಲೆಯಾಗಿ ನೀಲಿ, ಹಸಿರು, ಮಿಶ್ರಿತ ವರ್ಣವಿದ್ದು, ಕೆಳಭಾಗದ ಹುಲ್ಲು ಹಾಗೂ ಬಿಳಿಯ ಹೂಗಳನ್ನು ಕಾಣಬಹುದು.

ನೀರಿಗಾಗಿ ಬಂದ ಸ್ತ್ರೀ

ಈ ದೃಶ್ಯದಲ್ಲಿ ಸ್ತ್ರೀಯೊಬ್ಬಳು ನೀರಿನ ಬಿಂದಿಗೆಯೊಂದನ್ನು ಹಿಡಿದು ನದಿಯ ತೀರದಲ್ಲಿ ಕುಳಿತಿರುವುದು ಕಂಡುಬರುತ್ತದೆ. ಬಲಗೈಯಲ್ಲಿ ಮಣ್ಣಿನ ಬಿಂದಿಗೆ ಹಿಡಿದಿದ್ದು, ಎಡಗೈಯಲ್ಲಿ ಕಮಲದ ಹೂ ಒಂದನ್ನು ಹಿಡಿದಿದ್ದಾಳೆ. ಇವಳ ಸ್ವಲ್ಪ ಹಿಂಭಾಗದಲ್ಲಿ ಮರವಿದ್ದು, ಗುಚ್ಚು ಗುಚ್ಚು ಎಲೆಗಳ ರಾಶಿ ಇದೆ. ಇದರ ಹಿಂಭಾಗದಲ್ಲಿ ದೂರದಲ್ಲಿ ಪರ್ವತ ಒಂದು ಕಾಣ ಸಿಗುತ್ತದೆ. ಸ್ತ್ರೀಯೂ ತುರುಬು ಕಟ್ಟಿ ತಲೆಗೆ ಹೂ ಮುಡಿದಿದ್ದಾಳೆ. ಹಸಿರು ಕುಪ್ಪಸ ಹಾಗೂ ಕೆಂಪು ವರ್ಣದ ಲಂಗವನ್ನು ಧರಿಸಿದ್ದಾಳೆ. ಈ ಚಿತ್ರವು ಕಲಿಕೆಯ ಪ್ರಾರಂಭದ ಹಂತವಾದ್ದರಿಂದ ಇಲ್ಲಿ ಸೂಕ್ಷ್ಮ ವಿನ್ಯಾಸಗಳು ಕಾಣಸಿಗುವುದಿಲ್ಲ.

ಮೋದಕ ನೈವೇದ್ಯ

ಈ ಚಿತ್ರವೂ ಸಹ ಜಲವರ್ಣದ ಕೃತಿಯಾಗಿದ್ದು, ಮೋದಕ ಪ್ರಿಯ ಗಣೇಶ ಮೋದಕವನ್ನು ಭಕ್ತನಿಂದ ಸ್ವೀಕರಿಸುತ್ತಿರುವುದು. ಇದೊಂದು ದೇವಾಲಯದ ಸನ್ನಿವೇಶವಾಗಿದ್ದು ಇಲ್ಲಿ



ಪುರೋಹಿತನೊಬ್ಬನು ಗಣೇಶನಿಗೆ ಮೋದಕ ಅರ್ಪಣೆ ಮಾಡುತ್ತಿದ್ದಾನೆ. ಹಿಂಬದಿಯಲ್ಲಿ ಗೋಡೆ ಇದ್ದು ದೀಪಕ್ಕೆ ಗೂಡುಗಳನ್ನ ಸಹ ಬಿಡಲಾಗಿದೆ. ಅಲ್ಲಿ ದೀಪಗಳು ಉರಿಯುತ್ತಿರುವಂತೆ ತೋರಿಸಲಾಗಿದೆ. ಗಣೇಶನು ಬಲಗೈಯಿಂದ ಮೋದಕ ಸ್ವೀಕರಿಸುತ್ತಿದ್ದು ಎಡಗೈಯನ್ನು ಕೆಳಗೆ ಊರಿದ್ದಾನೆ. ಕೆಳಭಾಗದಲ್ಲಿ ದೀಪ, ಮಂಗಳಾರತಿ, ಧೂಪ, ನೈವೇದ್ಯವಿದ್ದು ಅಲ್ಲಲ್ಲಿ ಹೂಗಳು ಬಿದ್ದಿವೆ. ಇಲ್ಲಿಯೂ ಸಹ ವಾಸ್ತವತೆಗೆ ಗಮನ ಕೊಡುವ ವೆಂಕಟಪ್ಪನವರು ಗೋಡೆಯ ಮೇಲೆ ದೀಪದ ಎಣ್ಣೆಯು ಸೋರಿರುವುದನ್ನು ಸಹ ಗಮನಿಸಿ ಚಿತ್ರಿಸಿದ್ದಾರೆ. ಇವರ ಸೂಕ್ಷ್ಮ ಗ್ರಹಣೆಗೆ ಇದು ಸಾಕ್ಷಿಯಾಗಿದೆ.

ಸೀತಾ ಸ್ವಯಂವರ

ವೆಂಕಟಪ್ಪನವರು ರಾಮಾಯಣದ ವಿಷಯಕ್ಕೆ ಸಂಬಂಧಿಸಿದ ಚಿತ್ರಗಳನ್ನು ತಮ್ಮ ವಿದ್ಯಾರ್ಥಿದೆಸೆಯಲ್ಲಿ ಮಾಡಿದ ಕಲಾಕೃತಿಗಳಾಗಿವೆ. ಅವನೀಂದ್ರನಾಥರು ತಮ್ಮ ವಿದ್ಯಾರ್ಥಿಗಳಿಂದ ವಾರ್ಷಿಕವಾಗಿ ಶಾಲೆಗೆ ಕೊಡಬೇಕಾದ ಕಲಾಕೃತಿಗಳನ್ನ ರಾಮಾಯಣ ಕಲಾಕೃತಿಗಳನ್ನು ಮಾಡಿಸಿ ಪಡೆಯುತ್ತಿದ್ದರು. ೧೯೧೩ರಲ್ಲಿ ವೆಂಕಟಪ್ಪನವರು ಹಿಮಾಲಯಕ್ಕೆ ತೆರಳುವ ಮುನ್ನ ಅವನೀಂದ್ರನಾಥರ ಮನೆಗೆ ತೆರಳಿ ಅವರನ್ನು ಕಂಡು ಅವರಿಗೆ ವಾರ್ಷಿಕವಾಗಿ ನೀಡಬೇಕಾದ ಕಲಾಕೃತಿಗಳನ್ನು ನೀಡಿ ಹೋದರು ಎಂದು ತಮ್ಮ ದಿನಚರಿಯಲ್ಲಿ ನಮೂದಿಸಿಕೊಂಡಿದ್ದಾರೆ. ಆ ಕೃತಿಗಳು ರಾಮಾಯಣ ವಿಷಯಕ್ಕೆ ಸಂಬಂಧಿಸಿದವು ಎಂದೂ ಸಹ ಹೇಳಿಕೊಂಡಿರುತ್ತಾರೆ.

ಈ ಸನ್ನಿವೇಶದಲ್ಲಿ ರಾಮನು ಧನಸ್ಸನ್ನು ಮುರಿದು ವಿಶ್ವಾಮಿತ್ರರ ಅಪ್ಪಣೆಯ ಮೇರೆಗೆ ಸೀತೆಯನ್ನು ಕೈ ಹಿಡಿಯುವ ದೃಶ್ಯವಿದೆ. ಈ ದೃಶ್ಯದಲ್ಲಿ ರಾಮನು ಶಿವ ಧನಸ್ಸನ್ನು ಮುರಿದು ನಿಂತಿದ್ದು, ಶಿವ ಧನಸ್ಸು ಕೆಳಗೆ ಮುರಿದು ಬಿದ್ದಿರುವುದು ಕಾಣುತ್ತದೆ. ರಾಮನು ಆಕಾಶ ನೀಲಿ ವರ್ಣದವನಾಗಿದ್ದು, ರಾಮನ ತೋಳ ಮೇಲೆ ವಿಶ್ವಾಮಿತ್ರರು ಕೈಯಾಕಿ ಸೀತೆಯ ಕೈ ಹಿಡಿಯಲು ರಾಮನಿಗೆ ಸಮ್ಮತಿಸುತ್ತಿದ್ದಾರೆ. ಲಕ್ಷ್ಮಣನು ರಾಮನ ಪಕ್ಕದಲ್ಲಿ ನಿಂತಿದ್ದಾನೆ. ಸೀತೆಯು ಕೈಯಲ್ಲಿ ಪುಷ್ಪ ಮಾಲೆಯನ್ನು ಹಿಡಿದು ತಲೆಬಾಗಿ ನಿಂತಿದ್ದಾಳೆ. ಇಲ್ಲಿ ಕೆಂಪು, ನೀಲಿ, ಹಳದಿ, ನೇರಳೆ ವರ್ಣಗಳನ್ನು ಬಳಸಲಾಗಿದೆ.

ಸುವರ್ಣ ಮಾಯಾಮೃಗದ ವೇಷದಲ್ಲಿದ್ದ ಮರೀಚಕನ ಸಂಹಾರ

ಈ ದೃಶ್ಯದಲ್ಲಿ ರಾವಣನು ಸೀತೆಯನ್ನು ಕಂಡು ಮೋಹಗೊಂಡು ಅವಳನ್ನು ಹೊತ್ತೊಯ್ಯುವ ನಿರ್ಧಾರ ಮಾಡಿ ರಾಮನನ್ನು ಬೇರೆಡೆ ಸೆಳೆಯುವ ಉಪಾಯ ಮಾಡಿ ಮಾರೀಚಕನನ್ನು ಸುವರ್ಣ ಜಿಂಕೆಯಾಗಿ ಸೀತೆಯ ಬಳಿ ಸುತ್ತಾಡಲು ಕಳುಹಿಸುತ್ತಾನೆ. ಅದನ್ನು ಕಂಡ ಸೀತೆ ಆ ಜಿಂಕೆಗಾಗಿ ಹಂಬಲಿಸಿ ರಾಮನನ್ನು ಹಿಡಿದು ತರಲು ಕಳುಹಿಸುತ್ತಾಳೆ. ಜಿಂಕೆಯ ವೇಷದಲ್ಲಿದ್ದ ಮಾರೀಚಕ

ಕಾಡಿನ ಮಧ್ಯಕ್ಕೆ ಕರೆದೊಯ್ಯುತ್ತಾನೆ. ಆಗ ರಾಮ ಅದನ್ನು ಹಿಡಿಯಲೇಬೇಕೆಂದು ಪಣತೊಟ್ಟು ಬಾಣ ಪ್ರಯೋಗ ಮಾಡುತ್ತಾನೆ. ಆಗ ಜಿಂಕೆಯ ವೇಷಧಾರಿಯಾಗಿದ್ದ ಮಾರೀಚಕ ಲಕ್ಷ್ಮಣ ಎಂದು ಕೂಗುತ್ತ ಓಡುವ ದೃಶ್ಯವಿದು.


ಇಲ್ಲಿ ಕಾಡಿನ ಬಯಲುಪ್ರದೇಶವನ್ನು ತೋರಿಸಲಾಗಿದ್ದು, ರಾಮನು ಬಲಗಾಲನ್ನು ಮುಂದಿರಿಸಿ ಬಲಗೈಯಿಂದ ಬಾಣವನ್ನು ಪ್ರಯೋಗಿಸುತ್ತಿದ್ದಾನೆ. ಜಿಂಕೆಯು ಜಿಗಿಯುತ್ತಿದ್ದು, ಮರೀಚಕನು ರಾಕ್ಷಸ ಸ್ವರೂಪಿಯಾಗಿ ತಪ್ಪಿಸಿಕೊಂಡು ಓಡುತ್ತಿರುವ ದೃಶ್ಯವಾಗಿದೆ. ಇಲ್ಲಿ ಹಿನ್ನೆಲೆಯಲ್ಲಿ ಆಗಸ ನೇರಳೆ ವರ್ಣವಿದ್ದು, ಅದರ ಮುಂಭಾಗದಲ್ಲಿ ಮರ-ಗಿಡಗಳಿಂದ ಅರಣ್ಯದ ಕಲ್ಪನೆ ಬರುತ್ತದೆ. ಇಲ್ಲಿ ಹಸಿರು, ನೀಲಿ, ಹಳದಿ, ಗಾಢ ಹಸಿರು, ನೇರಳೆ ವರ್ಣಗಳಿದ್ದು ಇದು ಭಾರತೀಯ ಸಾಂಪ್ರದಾಯಿಕ ಶೈಲಿಯಲ್ಲಿದೆ.

ಜಟಾಯು – ರಾವನ ಕಾಳಗ

ದಶಭುಜ ರಾವಣನು ಸೀತೆಯನ್ನು ಅಪಹರಿಸುವಾಗ ಅದನ್ನು ಕಂಡ ಜಟಾಯು ಪಕ್ಷಿಯು ರಾವಣನ ವಿರುದ್ಧ ಕಾಳಗಕ್ಕೆ ಇಳಿಯುತ್ತದೆ. ಇದು ದೃಶ್ಯದ ಕಲಾವಸ್ತು. ಇಲ್ಲಿ ರಾವಣನ ಐದು ತಲೆಗಳು ಕಾಣುತ್ತಿದ್ದು, ಒಂಭತ್ತು ಕೈಗಳು ಕಾಣುತ್ತವೆ. ರಾವಣನು ಕಿರೀಟಧಾರಿಯಾಗಿದ್ದು ಕಡು ನೇರಳೆ ವರ್ಣದವನಾಗಿದ್ದಾನೆ. ಎಲ್ಲಾ ಕೈಯಲ್ಲೂ ಅಸ್ತ್ರಗಳನ್ನಿಡಿದು ಜಟಾಯು ಪಕ್ಷಿಯ ಮೇಲೆ ಕಾಳಗ ನಡೆಸುತ್ತಿದ್ದಾನೆ. ಜಟಾಯು ಪಕ್ಷಿಯು ರಾವಣನಿಗಿಂತಲೂ ಬೃಹದಾಕಾರವಾಗಿದ್ದು ರಾವಣನನ್ನು ಪ್ರತಿರೋಧಿಸುತ್ತಿದೆ. ರಾವಣನ ಪುಷ್ಪಕ ವಿಮಾನವನ್ನು ಮುರಿದು ಹಾಕಿದೆ. ಸೀತೆಯು ಕೆಳಗೆ ಬಾಗಿ ತನ್ನ ಆಭರಣವನ್ನು ಕೆಳಗೆ ಕೈ ಚೆಲ್ಲುತ್ತಿದ್ದಾಳೆ. ಕೆಳಭಾಗದಲ್ಲಿ ಮೋಡಗಳ ಸಾಲು ಗುಂಪು ಗುಂಪಾಗಿ ಹರಿಯುತಿದೆ. ಹಿಂಬದಿಯಲ್ಲಿ ಕಪ್ಪು ವರ್ಣವನ್ನು ರೂಪಿಸಿದ್ದು, ಬಿಳಿಯ ಮೋಡಗಳಿವೆ.

ಹನುಮನಿಗೆ ರಾಮ ಉಂಗುರ ನೀಡುತ್ತಿರುವುದು

ಸೀತೆಯನ್ನು ಕಳೆದುಕೊಂಡ ರಾಮನು ಅರಣ್ಯದಲ್ಲಿ ಅಲೆದು ಅಲೆದು ಸೀತೆ, ಸೀತೆ ಎಂದು ಕಿರುಚಿ ಬಳಲಿ ಕುಳಿತಾಗ ಹನುಮನು ಸಹಾಯಕ್ಕೆ ಬಂದ. ಆಗ ರಾಮನಿಂದ ಉಂಗುರವನ್ನು ಪಡೆದು ಸೀತೆಗೆ ತಲುಪಿಸುವುದಾಗಿ ತಿಳಿಸುವ ಸನ್ನಿವೇಶ ಇದಾಗಿದೆ. ಈ ದೃಶ್ಯದಲ್ಲಿ ನೀಲಿವರ್ಣದ ರಾಮನು ಕಾಡಿನಲ್ಲಿ ಕುಳಿತಿದ್ದು ಹಿಂಬದಿಯಲ್ಲಿ ದೊಡ್ಡ ದೊಡ್ಡ ಕಲ್ಲುಗಳನ್ನು ತೋರಿಸಲಾಗಿದೆ. ಮರದ ಟೊಂಗೆಗಳೆರಡು ಮುಂದಕ್ಕೆ ಚಾಚಿದ್ದು, ಅದರ ಮುಂಭಾಗದಲ್ಲಿ ಗುಚ್ಚು ಗುಚ್ಚು ಎಲೆಗಳನ್ನು ಕಾಣಬಹುದಾಗಿದೆ. ಈ ಕೃತಿಯಲ್ಲೂ ಸಹ ನೀಲಿ, ಕಂದು, ಕೆಂಪು, ಹಸಿರು, ಹಳದಿ ವರ್ಣಗಳನ್ನು ಬಳಸಲಾಗಿದೆ.



ಲಂಕಾ ದಹನ

ಸೀತೆಯನ್ನು ಕಂಡು ಮಾತನಾಡಿಸಿ ಉಂಗುರವನ್ನು ನೀಡಲು ಹೋದ ಹನುಮನನ್ನು ಹಿಡಿದು ಅವನಿಗೆ ಅವಮಾನ ಮಾಡಿದ್ದರಿಂದ ಹನುಮನು ಲಂಕೆಗೆ ಬೆಂಕಿ ಹಚ್ಚಿ ಜಿಗಿದು ಬರುತ್ತಿರುವ ದೃಶ್ಯ ಇದಾಗಿದೆ. ಇಲ್ಲಿಯೂ ಸಹ ಮನಮೋಹಕವಾಗಿ ವರ್ಣ ಯಥಾದರ್ಶನವನ್ನು ತೋರಿಸಲಾಗಿದೆ. ಸಾಗರ ತೀರವನ್ನು ತೋರಿಸಲಾಗಿದೆ. ಕಟ್ಟಡ ಒಂದಕ್ಕೆ ಬೆಂಕಿ ಇಟ್ಟ ಕಾರಣ ಆ ಕಟ್ಟಡದ ಸುತ್ತ ಹೊಗೆ ತುಂಬಿಕೊಂಡಿದೆ. ಇಲ್ಲಿ ಕೆಂಪು, ಗಾಢ ನೀಲಿ, ನೇರಳೆ, ಕಂದು ವರ್ಣಗಳನ್ನು ಪ್ರಮುಖವಾಗಿ ಬಳಸಲಾಗಿದೆ.

ರಾಮ ಸೇತುವೆ


ಲಂಕೆಗೆ ರಾಮ ಸೇನೆಯನ್ನು ಕೊಂಡೊಯ್ಯಲು ಸಮುದ್ರದ ನಡುವೆ ಸೇತುವೆಯನ್ನು ಕಟ್ಟುತ್ತಿರುವುದು ಈ ವಿಷಯದ ಜೀವಾಳ. ಹನುಮನು ಹಾಗೂ ಹನುಮನ ಭಂಟರು ದೊಡ್ಡ ದೊಡ್ಡ ಕಲ್ಲುಗಳನ್ನು ಹಿಡಿದು ಸಮುದ್ರದ ಮಧ್ಯಭಾಗದಲ್ಲಿ ಜೋಡಿಸುತ್ತಿದ್ದು ಹನುಮನು ಅವರಿಗೆ ನಿರ್ದೇಶನ ನೀಡುತ್ತಿರುವನು. ಇಲ್ಲಿ ಗಾಢ ನೇರಳೆ, ಕಂದು, ನೀಲಿ, ಕೆಂಪು, ಹಸಿರು ವರ್ಣಗಳನ್ನು ಪ್ರಮುಖವಾಗಿ ಬಳಸಲಾಗಿದೆ.

ಹೇಮ ಮೃಗ, ಶಾಕುಂತಲೆ

ಕಾಳಿದಾಸ ಬರೆದಂತಹ ದುಶ್ಯಂತ ಹಾಗೂ ಶಾಕುಂತಲೆಯ ಪ್ರೇಮ ಕತೆ ಕಲಾವಿದರಿಗೆ ಉತ್ತಮ ವಿಷಯ. ಭಾರತೀಯ ಹಲವು ಕಲಾವಿದರು ಈ ವಿಷಯದ ಕುರಿತಾಗಿ ಚಿತ್ರಗಳನ್ನು ರಚಿಸಿದ್ದಾರೆ. ಉದಾಹರಣೆಗೆ ರವಿವರ್ಮ, ಕೆ. ವೆಂಕಟಪ್ಪ, ಎಸ್.ಎಂ. ಪಂಡಿತ್ ಹೀಗೆ ಹಲವಾರು ಕಲಾವಿದರಿದ್ದಾರೆ. ವಿರಹ ವೇದನೆಯಲ್ಲಿರುವ ಶಾಕುಂತಲೆ ಕೊಳದಲ್ಲಿ ಮಿಂದು ತಾವರೆ ಹೂಗಳನ್ನು ಹಿಡಿದು ತರುತ್ತಿರುವುದು ಇವಳ ಹಿಂದೆ ಹೇಮಮೃಗ ಸಾಂತ್ವಾನ ಹೇಳಲು ಬರುತ್ತಿರುವ ದೃಶ್ಯ ಮನಮೋಹಕವಾಗಿದೆ. ಈ ಕೃತಿಯು ಮೊಘಲ್‌ಶೈಲಿಯನ್ನು ಹೋಲುತ್ತದೆ. ಮೊಘಲ್‌ರ ಕಿರುರೂಪ ಚಿತ್ರಗಳ ಮಾದರಿಯಲ್ಲಿದೆ. ಇಲ್ಲಿ ಎರಡನೆ ಮತ್ತು ಮೂರನೇ ವರ್ಣದ ಬಣ್ಣಗಳಿದ್ದು ಕಲೆಯಲ್ಲಿ ಕುಸರೀ ಕೆಲಸದ ಮೆರಗು ಕಾಣುತ್ತದೆ. ಇಲ್ಲಿ ನೀಲಿ, ಹಸಿರು, ಕೇಸರಿ, ಕಂದು, ಬೂದು ಬಣ್ಣಗಳಿದ್ದು, ಗಾಢವರ್ಣಗಳಾದ ಗಾಢ ಹಸಿರು, ನೀಲಿ ವರ್ಣಗಳನ್ನು ಕಾಣಬಹುದಾಗಿದೆ.

ಬುದ್ಧನ ಶಿಷ್ಯೋಪದೇಶ

ಈ ದೃಶ್ಯದಲ್ಲಿ ಬುದ್ಧನು ಶಿಷ್ಯರಿಗೆ ಉಪದೇಶ ನೀಡುತ್ತಿರುವುದು. ಇದು ನೇರವಾಗಿ ಬೆಂಗಾಲಿ ಕಲಾವಿದರ ಪ್ರಭಾವವನ್ನು ತೋರುತ್ತದೆ. ಅವನೀಂದ್ರರ, ಗಗನೇಂದ್ರರ, ನಂದಲಾಲರ ಕೃತಿಗಳ ಪ್ರಭಾವ,



ಪ್ರೇರಣೆಗಳು ಇಲ್ಲಿ ಕಾಣಸಿಗುತ್ತವೆ. ಶ್ರೀಮಾನ್ ಶ್ರೀ ಬುದ್ಧನು ಆಲದ ಮರದ ಕೆಳಗೆ ಕುಳಿತು ಚಿನ್ಮುದ್ರೆಯಲ್ಲಿ ಅಭಯ ನೀಡುತ್ತಿರುವುದು, ಬುದ್ಧನ ಭಕ್ತರು ಕುಳಿತು ಭೋದನೆಯನ್ನು ಕೇಳುತ್ತಿರುವುದು ಹಾಗೂ ಇಲ್ಲಿ ಆಲದ ಮರವನ್ನು ಸೊಗಸಾಗಿ ಚಿತ್ರಿಸಲಾಗಿದೆ. ಮರದ ಬಳ್ಳಿಗಳು ಇಳಿದಿರುವುದು, ಟೊಂಗೆಗಳು ಬಾಗಿರುವುದು, ಇದರ ಹಿನ್ನೆಲೆಯಲ್ಲಿ ಹಸಿರು, ನೀಲಿ ಮಿಶ್ರಿತ ವರ್ಣದಲ್ಲಿ ರಚಿಸಲಾಗಿದ್ದು ಗುಹೆಯೊಂದನ್ನು ತೋರಿಸಿರುವುದು ಮನಮೋಹಕವಾಗಿದೆ. ಸೂಕ್ಷ್ಮವಾಗಿ ಗಮನಿಸಿದಾಗ ಮಾತ್ರ ಕಾಣುವ ಬುದ್ಧ ಮತ್ತು ಆತನ ಹಿಂದೆ ತರುತ್ತಿರುವ ಪ್ರಭೆಯನ್ನೂ ಸಹ ಕಾಣಬಹುದು. ಇಲ್ಲಿ ಕೇಸರಿ, ಹಳದಿ, ನೀಲಿ, ಹಸಿರು, ಕಂದು ವರ್ಣವನ್ನು ಹೆಚ್ಚಾಗಿ ಕಾಣಬಹುದಾಗಿದೆ.


ವೀಣೆಯ ಹುಚ್ಚು

ಕ್ರಿ.ಶ. ೧೯೨೨ ರಲ್ಲಿ ವೆಂಕಟಪ್ಪನವರು ಸಂಪೂರ್ಣವಾಗಿ ಚಿತ್ರಕಲೆಯನ್ನು ಮರೆತು ವೀಣಾಭ್ಯಾಸದಲ್ಲಿ ತೊಡಗಿದ್ದಾರೆ ಎಂಬ ವಿಷಯವು ಬೇರೆಯವರಿಂದ ಅವನೀಂದ್ರರಿಗೆ ತಿಳೀಯಿತು. ಆಗ ಅವನೀಂದ್ರರು ವೆಂಕಟಪ್ಪನವರಿಗೆ ಈ ವಿಷಯದ ಕುರಿತು ಪತ್ರ ಬರೆದರು. ಅದಕ್ಕೆ ಉತ್ತರವಾಗಿ ವೆಂಕಟಪ್ಪನವರು ಪತ್ರದೊಂದಿಗೆ "ವೀಣೆಯ ಹುಚ್ಚು" ಎಂಬ ಶೀರ್ಷಿಕೆಯುಳ್ಳ ಕಲಾಕೃತಿಯೊಂದನ್ನು ರಚಿಸಿ ಅವನೀಂದ್ರರಿಗೆ ಕಳಿಸಿಕೊಟ್ಟರು.

ಈ ಕಲಾಕೃತಿಯು ಉತ್ತಮ ಸೃಜನ ಸಂಯೋಜನೆಯ ದೃಶ್ಯವಾಗಿದೆ. ಇಲ್ಲಿ ಕಲಾರಾಧಕರಾಗಿದ್ದ ವೆಂಕಟಪ್ಪನವರು ಕಲಾದೇವಿಯನ್ನು ಕಂಬಕ್ಕೆ ಕಟ್ಟಿ ವೀಣೆಯ ದೇವಿಯ ಮುಂದೆ ಕೈಚಾಚಿ, ಅಂಗಲಾಚಿ ಬೇಡುತ್ತಿರುವುದನ್ನು ತೋರಿಸಲಾಗಿದ್ದು ವೆಂಕಟಪ್ಪನವರು ಅವನೀಂದ್ರರಿಗೆ ಸಲ್ಲಿಸುತ್ತಿರುವ ಗೌರವದ ಸಂಕೇತ ಇದಾಗಿದೆ. ಇದನ್ನು ಹಳದಿ, ಕೇಸರಿ, ನೀಲಿ, ಬಿಳಿ ಹಾಗೂ ಕಂದು ವರ್ಣದಿಂದ ಕೃತಿಯನ್ನು ಪೂರ್ಣಗೊಳಿಸಲಾಗಿದೆ.

ಮಹಾಶಿವರಾತ್ರಿ

ಮಹಾಶಿವರಾತ್ರಿ ಕೃತಿಯನ್ನು ಕ್ರಿ.ಶ. ೧೯೨೩ ರಲ್ಲಿ ರಚಿಸಿದ್ದಾರೆ. ಈ ಕೃತಿಯೂ ಸಹ ಬಂಗಾಲಿ ಕಲಾವಿದರ ಪ್ರಭಾವವನ್ನು ಸಾರುತ್ತದೆ. ಈ ಕೃತಿಯಲ್ಲಿ ನೆರಳು ಬೆಳಕಿನ ಆಟ ಮುಖ್ಯವಾಗಿದೆ. ಸ್ತ್ರೀಯೊಬ್ಬಳು ಪೂಜಾ ಸಾಮಗ್ರಿಗಳನ್ನು ಹಿಡಿದು ದೇವಾಲಯದ ಮೆಟ್ಟಿಲನ್ನು ಹತ್ತಿ ಹೋಗುತ್ತಿರುವುದು ಮತ್ತು ಬಾಗಿಲ ಎರಡು ಬದಿಯೂ ದೀಪದ ಸಾಲುಗಳನ್ನು ಕಾಣಬಹುದು. ದೇವಾಲಯದ ಒಳಭಾಗದಲ್ಲಿ ಒಂದು ನಂದಾದೀಪ ಉರಿಯುತ್ತಿದ್ದು, ಬೆಳಕನ್ನು ಚೆಲ್ಲುತ್ತಿದೆ. ಸ್ತ್ರೀಯ ಹಿಂಭಾಗದಲ್ಲಿ ದೇವಾಲಯದ ಛಾವಣಿಗೆ ನಿಲ್ಲಿಸಲಾದ ಎರಡು ದೊಡ್ಡ ಕಂಬಗಳನ್ನು ಸಹ ಕಾಣಬಹುದು. ಇದರ ಹಿಂಭಾಗದಲ್ಲಿ




ವ್ಯಕ್ತಿಯೊಬ್ಬನು ಶಿರಸಾಷ್ಟಾಂಗ ನಮಸ್ಕಾರವನ್ನು ಮಾಡುತ್ತಿದ್ದಾನೆ. ದೇವಾಲಯದ ಬಲಬದಿಗೆ ನಾಗರಕಲ್ಲು ಹಾಗೂ ಆಲದ ಮರವಿದೆ. ಈ ನಾಗರಕಟ್ಟೆಯ ಮೇಲೂ ಒಂದು ದೀಪ ಉರಿಯುತ್ತಿದ್ದು, ಅದರ ಪ್ರಭೆ ಸುತ್ತಲೂ ಬೆಳಕನ್ನು ಚೆಲ್ಲಿದೆ. ಇದೊಂದು ಉತ್ತಮ ನೆರಳು ಬೆಳಕಿನ ಸಂಯೋಜನೆಯಾಗಿದ್ದು, ಇಲ್ಲಿ ನೆರಳೂ ಬೆಳಕಿನ ಒಡನಾಟ ಉತ್ತಮವಾಗಿದೆ. ಇದೊಂದು ಜಲವರ್ಣದ ಕೃತಿ ಎಂದರೆ ಎಂತಹವರನ್ನೂ ಸಹ ಅಚ್ಚರಿಗೊಳಿಸುವುದು. ಇಲ್ಲಿ ಹಳದಿ, ಕೇಸರಿ, ಬಿಳಿ, ಗಾಢ ಕಂದು ಹಾಗೂ ನೇರಳೆ ವರ್ಣಗಳನ್ನು ಬಳಸಲಾಗಿದೆ.

ಭಾವಚಿತ್ರಗಳು

"ಮುಖ ಮನಸಸ್ಸಿನ ಕನ್ನಡಿ" ಎಂದು ಹಲವು ಮನಃಶಾಸ್ತ್ರಜ್ಞರು ಹೇಳಿದ್ದಾರೆ. ನಿಜ ನಮ್ಮ ಮನಸ್ಸಿನ ಭಾವನೆಗಳು ಮುಖದಲ್ಲಿ ಅಭಿವ್ಯಕ್ತವಾಗುತ್ತವೆ. ಈ ರೀತಿಯಾಗಿ ಅಭಿವ್ಯಕ್ತಗೊಂಡ ಮೊಗವನ್ನು ವಿಷಯವಾಗಿರಿಸಿಕೊಂಡು ಆ ಮೊಗದಲ್ಲಿ ಮೂಡುವ ಭಾವನೆಗಳನ್ನು ಸೆರೆಹಿಡಿಯುವುದೇ ಭಾವಚಿತ್ರವೆಂದು. ಫೋಟೋಗ್ರಫಿಯ ಪೂರ್ವಕಲಾದಲ್ಲಿ ಕಲಾವಿದರಿಗೆ ಭಾವಚಿತ್ರ ಮಾಡುವುದು ದೊಡ್ಡ ಉದ್ಯಮವಾಗಿತ್ತು. ರೆನಾಯ್‌ಸಾನ್ಸ್ ಕಾಲದಲ್ಲೇ ತೈಲವರ್ಣ ಬಳಕೆಗೆ ಬಂದಿತು. ಅದರಿಂದ ಕ್ಯಾನ್ವಾಸ್ ಮೇಲೆ ರಾಜ–ರಾಣಿಯ, ರಾಜ ವರ್ಗದವರ, ಮಂತ್ರಿ ಮಹೋದಯರ, ಶ್ರೀಮಂತ ವ್ಯವಹಾರಸ್ಥರ, ಸಮಾಜದ ಗಣ್ಯರ ಹೀಗೆ ಹಲವು ಶ್ರೀಮಂತ ವರ್ಗದವರ ಭಾವಚಿತ್ರಗಳನ್ನು ಕಲಾವಿದರು ಮಾಡತೊಡಗಿದರು. ಆನಂತರ ಕಲಾವಿದರೇ ತಮ್ಮ ಭಾವಚಿತ್ರಗಳನ್ನು ಮಾಡಿಕೊಳ್ಳಲಾರಂಭಿಸಿದರು.

ಉದಾಹರಣೆ ರೆಂಬ್ರಾಂಟ್, ವ್ಯಾನ್‌ಗಾಗ್, ಗೊಗಾನ್, ವೆಲಾಸ್ಕ್, ಜೆಕ್‌ಮನ್, ಡ್ಯೂರರ್ ಹೀಗೆ ಹಲವಾರು ಕಲಾವಿದರು ತಮ್ಮ ತಮ್ಮ ಭಾವಚಿತ್ರಗಳನ್ನು ತಾವು ರಚಿಸಿಕೊಳ್ಳಲಾರಂಭಿಸಿದರು. ಇಂಪ್ರೆಷಿಯನಿಸಂ ಕಲಾ ಬರುವ ವೇಳೆಗೆ ಕಲಾವಿದರ ಸ್ನೇಹಿತರ, ಬಂಧು–ಬಳಗದವರ, ನೆರೆಹೊರೆಯವರ ಹಲವಾರು ಭಾವಚಿತ್ರಗಳು ಮೂಡಿ ಬಂದವು. ೧೯ನೇ ಶತಮಾನ ತಲುಪುವ ಹೊತ್ತಿಗೆ ಶೈಲಿ, ಪ್ರಭಾವಗಳು ವ್ಯಕ್ತಿ, ವ್ಯಕ್ತಿಗೆ ಬದಲಾದವು. ಒಬ್ಬರು ಒಂದೊಂದು ಪಂಥಗಳನ್ನು ಓಲೈಸಿದ್ದರು. ಭಾರತದ ವಿಷಯಕ್ಕೆ ಬಂದರೆ ಎರಡನೇ ಶತಮಾನದ ಹೊತ್ತಿಗೆ ಅಜಂತಾ, ಎಲ್ಲೋರಗಳಲ್ಲಿನ ಚಿತ್ರಗಳಲ್ಲಿ ಹಲವು ಭಾವ ಚಿತ್ರಗಳನ್ನು ನಾವು ಕಾಣಬಹುದು. ಭಾರತೀಯರಿಗೆ ರವಿವರ್ಮನ ಕಾಲದವರೆವಿಗೂ ಕಿರೂಪದ ಹಾಗೂ ಭಿತ್ತಿ ಚಿತ್ರಗಳಲ್ಲಿ ಜಲವರ್ಣದ ಭಾವಚಿತ್ರಗಳನ್ನು ಕಾಣಬೇಕಿತ್ತು. ಹದಿನೆಂಟನೇ ಶತಮಾನದ ಕೊನೆಯ ಭಾಗದಲ್ಲಿ ರವಿವರ್ಮರು ಹಲವಾರು ತೈಲವರ್ಣದ ಭಾವಚಿತ್ರಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಕೇರಳದ ಸ್ತ್ರೀಯರು, ರಾಜ–ರಾಣಿ, ರಾಜ ಪರಿವಾರದವರು, ಧನಿಕರು, ಗಣ್ಯರು ಹೀಗೆ ಹಲವು ಮಂದಿಯ ಚಿತ್ರಗಳಿವೆ.




ಇವರನ್ನು ಬಿಟ್ಟರೆ ಬೆಂಗಾಲಿಯ ಅವನೀಂದ್ರರು, ಗಗನೇಂದ್ರರು, ಸಮರೇಂದ್ರರು, ನಂದಲಾಲರು, ವೆಂಕಟಪ್ಪನವರು ಇವರುಗಳು ಸಾಂಪ್ರದಾಯಿಕ ವರ್ಣ ಹಾಗೂ ಶೈಲಿಯನ್ನು ಅಳವಡಿಸಿಕೊಂಡು ಮಾಡಿದವರಾಗಿದ್ದಾರೆ. ಇವರ ನಂತರದಲ್ಲಿ ಬಂದಂತಹ ಸಾಮಿಯವರು, ಎಸ್.ಎಂ. ಪಂಡಿತ್, ಕೆ.ಕೆ. ಹೆಬ್ಬಾರ್, ದಂಡಾಮತಿಮಲ್, ಹಡಪದ್ ಹೀಗೆ ಕಲಾವಿದರ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಆದರೆ ಭಾವಚಿತ್ರಕಲೆಯಲ್ಲಿ ಸಮಕಾಲೀನವಾಗಿ ತುಂಬಾ ಹೆಸರಾದವರೆಂದರೆ ಎಸ್.ಎಂ. ಪಂಡಿತರು. ಇವರ ಭಾವಚಿತ್ರದ ವರ್ಣಗಾರಿಕೆಗೆ ಇಂಗ್ಲೆಂಡ್, ಫ್ರಾನ್ಸ್‌ನಿಂದ ಬಿರುದು, ಸನ್ಮಾನಗಳು ಬಂದಿವೆ. ಅಂತೆಯೇ ವೆಂಕಟಪ್ಪನವರೂ ಸಹ ಹಲವು ಭಾವಚಿತ್ರಗಳನ್ನು ಮಾಡಿದ್ದಾರೆ. ಆದರೆ ಕೆಲವು ದೊರೆಯುತ್ತವೆ. ಇನ್ನು ಕೆಲವು ಮರೆಮಾಚುತ್ತವೆ. ಇವರ ಭಾವಚಿತ್ರಗಳಲ್ಲಿ ಹಲವು ವಿಶೇಷತೆಗಳಿವೆ. ಅವೆಂದರೆ, ಅವರು ನೋಡದ ವ್ಯಕ್ತಿಯ ಛಾಯಾಚಿತ್ರವನ್ನು ಹಿಡಿದು ಚಿತ್ರ ರಚಿಸುತ್ತಿರಲಿಲ್ಲ. ವ್ಯಕ್ತಿಯ ಹಾವಭಾವ, ನಡವಳಿಕೆಗಳನ್ನು ಗಮನಿಸಿದ ಮೇಲಷ್ಟೇ ಚಿತ್ರ ರಚಿಸುತ್ತಿದ್ದರು. ಇವರು ರಚಿಸಿರುವ ಭಾವಚಿತ್ರಗಳಲ್ಲಿ ಹಲವು ಚಿತ್ರಗಳು ದಂತದ ಫಲಕದ ಮೇಲೆ ಜಲವರ್ಣದಲ್ಲಿ ರಚಿಸಲ್ಪಟ್ಟಿವೆ. ಹಾಗೆ ಅಭ್ಯಾಸ ಪ್ರಾರಂಭದ ಹಂತದಲ್ಲಿ ಮಾತ್ರ ಕೆಲವು ತೈಲವರ್ಣಗಳನ್ನು ರಚಿಸಿದ್ದಾರೆ.

ಮಹಿಳೆಯ ಭಾವಚಿತ್ರ

ಕ್ರಿ.ಶ. ೧೯೦೯ರಲ್ಲಿ ಅಂದರೆ ತಾವು ಕಲ್ಕತ್ತಾಗೆ ಕಲಾಶಾಲೆಗೆ ಸೇರಿದ ಪ್ರಥಮ ವರ್ಷದಲ್ಲಿಯೇ ಇವರು ತೈಲವರ್ಣದ ಸ್ತ್ರೀಯೊಬ್ಬಳ ಭಾವಚಿತ್ರವನ್ನು ರಚಿಸಿದ್ದಾರೆ. ಈ ಚಿತ್ರವನ್ನು ಗಮನಿಸಿದಾಗ ಅವರಿಗಿದ್ದ ಕಲಾ ಅತುರತೆ, ಕಲಿಯಬೇಕೆಂಬ ಹಂಬಲಗಳು ತಿಳಿಯುತ್ತವೆ. ಸೇರಿದ ಮೊದಲ ವರ್ಷದಲ್ಲಿಯೇ ಹಿರಿಯ ಕಲಾವಿದನ ಮಟ್ಟಿಗೆ ಕಲಾಕೃತಿಯನ್ನು ರಚಿಸಿದ್ದಾರೆ. ಸ್ಫುರದ್ರೂಪಿ, ಸಂಸ್ಕಾರ ಮನೆತನದ ಮಹಿಳೆಯಾಗಿದ್ದು ಯಾರೆಂಬುದು ತಿಳಿಯುವುದಿಲ್ಲ. ತಲೆಕೂದಲನ್ನು ಸಂಪೂರ್ಣವಾಗಿ ಬಾಚಿ ಕಟ್ಟಿದ್ದಾಳೆ. ಹಣೆಯ ಮೇಲೆ ಕುಂಕುಮ, ಮೂಗಿನ ಮೇಲೆ ಮೂಗುತಿ, ಕಿವಿಯಲ್ಲಿ ಬೆಂಡೋಲೆ, ಕೊರಳಲ್ಲಿ ಕಡಗ ಮುತ್ತಿನ ಪುಂಜಗಳನ್ನು ಕಾಣಬಹುದು. ರೇಷಿಮೆಯ ಸೀರೆಯನ್ನು ಈಕೆ ಉಟ್ಟಿದ್ದಾಳೆ. ಇದರಿಂದ ಈಕೆ ಶ್ರೀಮಂತ ಮನೆಗೆ ಸೇರಿದವಳು ಎಂದು ಊಹಿಸಬಹುದು. ಇದನ್ನು ಪಾಶ್ಚಾತ್ಯ ಪದ್ಧತಿಯಲ್ಲಿ ಚಿತ್ರಿಸಲಾಗಿದೆ.

ಅವನೀಂದ್ರನಾಥರ ಭಾವಚಿತ್ರ

ಕ್ರಿ.ಶ. ೧೯೧೪ ರಲ್ಲಿ ಅಂದಿನ ಕಲ್ಕತ್ತಾ ಸರಕಾರಿ ಕಲಾಶಾಲೆಯ ಉಪನ್ಯಾಸಕರಾಗಿದ್ದ ಅವನೀಂದ್ರರು ವೆಂಕಟಪ್ಪನವರ ಅಚ್ಚುಮೆಚ್ಚಿನ ಗುರುಗಳಾಗಿದ್ದರು. ಆದ ಕಾರಣ ವೆಂಕಟಪ್ಪನವರು ಬಹು ಪ್ರೀತಿಯಿಂದ




ಅವನೀಂದ್ರರ ಚಿತ್ರವನ್ನು ರಚಿಸಿದರು. ಇದು ಆನೆಯ ದಂತದ ಫಲಕದ ಮೇಲೆ ಜಲವರ್ಣದಿಂದ ರಚಿಸಿದ ಚಿತ್ರವಾಗಿದೆ. ಅವನೀಂದ್ರರು ಬಿಳಿ ವಸ್ತ್ರವನ್ನು ಧರಿಸಿದ್ದು, ತನ್ನ ಕೈಯಲ್ಲಿ ಕನ್ನಡಕ ಹಾಗೂ ಅದರ ಪೆಟ್ಟಿಗೆಯನ್ನು ಹಿಡಿದುಕೊಂಡು ಕುಳಿತಿದ್ದಾರೆ. ಇದನ್ನು ವೃತ್ತಾಕಾರದ ದಂತದ ಫಲಕದ ಮೇಲೆ ರಚಿಸಲಾಗಿದೆ. ಅವನೀಂದ್ರರ ಹಿನ್ನೆಲೆಯಲ್ಲಿ ನೀಲಿ ವರ್ಣವನ್ನು ಬಳಸಿಕೊಳ್ಳಲಾಗಿದೆ. ಇಲ್ಲಿ ನೀಲಿ, ಬಿಳಿ, ಕಂದು, ನೇರಳೆ ಬಣ್ಣಗಳು ಎದ್ದು ಕಾಣುತ್ತವೆ. ಈ ಕೃತಿಯು ಪಾಶ್ಚಾತ್ಯ ಪದ್ಧತಿಯ ಚಿತ್ರವಾದರೂ ಸಾಂಪ್ರದಾಯಿಕ ಹಿನ್ನೆಲೆಯಲ್ಲಿದೆ.

ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಭಾವಚಿತ್ರ

ಕ್ರಿ.ಶ. ೧೯೧೮ ರಲ್ಲಿ ಅರಮನೆಯ ಆಡಳಿತಾಧಿಕಾರಿಯಾಗಿದ್ದ ಮಿರ್ಜಾ ಇಸ್ಮಾಯಿಲ್‌ರವರು ವೆಂಕಟಪ್ಪನವರ ಕಲೆಯನ್ನು ಮೆಚ್ಚಿ ಅದನ್ನು ಮಹಾರಾಜರಿಗೆ ತೋರಿಸುವ ಹಂಬಲದಿಂದ ಈ ಕೃತಿಯನ್ನು ಖುದ್ದು ಮಿರ್ಜಾರವರೆ ದಂತದ ಫಲಕವನ್ನು ವೆಂಕಟಪ್ಪನವರಿಗೆ ನೀಡಿ ಮಾಡಿಸಿಕೊಂಡರು. ಇದೊಂದು ಅಭೂತಪೂರ್ವ ಭಾವವರ್ಣಚಿತ್ರವಾಗಿದೆ. ತೈಲವರ್ಣದಲ್ಲಿಯೂ ಈ ರೀತಿಯ ನಿಖರತೆಯನ್ನು ನೀಡಲು ಅಸಾಧ್ಯವಾದುದು. ಈ ಕೃತಿಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ರಾಜ ಠೀವಿಯಿಂದ ದೃಷ್ಟಿಸಿ ನೋಡುತ್ತಿದ್ದು, ತಲೆಗೆ ನೀಲಿ ವರ್ಣದ ರುಮಾಲನ್ನು ಸುತ್ತಿದ್ದಾರೆ. ನೀಲಿಯ ಕಂಗಳಿಂದ ಕಂಗೊಳಿಸುತ್ತಿದ್ದಾರೆ ಹಾಗೂ ಗಾಢ ನೀಲಿವರ್ಣದ ಕೋಟನ್ನು ಧರಿಸಿದ್ದಾರೆ. ಹಿನ್ನೆಲೆಯಲ್ಲಿ ತಿಳಿ ನೀಲಿವರ್ಣವನ್ನು ಲೇಪಿಸಲಾಗಿದೆ. ಮುಖದಲ್ಲಿ ರಾಜಗಾಂಭೀರ್ಯ ಭಾವವನ್ನು ಕಲಾವಿದರು ತುಂಬಿದ್ದಾರೆ. ಆ ನುಣುಪಾದ ರಚನೆಯಲ್ಲಿ, ಅದರಲ್ಲೂ ಜಲವರ್ಣದಲ್ಲಿ, ನೀರೇ ನಿಲ್ಲದ ದಂತದ ಫಲಕದ ಮೇಲೆ ಯಾವೊಬ್ಬ ಕಲಾವಿದನಿಗೂ ಆಗದ ಸಾಧನೆಯನ್ನು ವೆಂಕಟಪ್ಪನವರು ಈ ಕೃತಿಯಲ್ಲಿ ಮಾಡಿ ತೋರಿಸಿದ್ದಾರೆ.

ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಭಾವಚಿತ್ರ

ಕ್ರಿ.ಶ. ೧೯೩೯ ರಲ್ಲಿ ಸರ್ದಾರ್ ಗೋಪಾಲರಾಜ ಅರಸರಿಗಾಗಿ ವೆಂಕಟಪ್ಪನವರು ದಂತದ ಪಲಕದ ಮೇಲೆ ಮತ್ತೊಂದು ಕಲಾಕೃತಿಯನ್ನು ರಚಿಸಿಕೊಟ್ಟರು. ಈ ಕೃತಿಯೂ ಸಹ ಜಲವರ್ಣದ್ದೇ. ಎರಡು ಕೃತಿಗಳನ್ನು ಪಕ್ಕಪಕ್ಕದಲ್ಲಿ ಇರಿಸಿ ನೋಡಿದರೆ ಎರಡೂ ಭಾವಚಿತ್ರಗಳಿಗೂ ಯಾವುದೇ ವ್ಯತ್ಯಾಸವಿಲ್ಲ. ಆದರೆ ವಯಸ್ಸಿನ ವ್ಯತ್ಯಾಸವನ್ನು ಬಹು ನಾಜೂಕಾಗಿ ಕಲಾವಿದ ಎತ್ತಿ ಹಿಡಿದಿದ್ದಾನೆ. ಹೌದು ಇದರಲ್ಲಿ ನಾಲ್ವಡಿಯವರಿಗೆ ಮುಪ್ಪು ಸಂಭವಿಸುತ್ತಿತ್ತು. ಇದರಲ್ಲಿ ಮೀಸೆಗಳು ಬೆಳ್ಳಗಾಗಿ ಕಣ್ಣಿನ ಗುಡ್ಡೆಗಳು ಒಳಗೆ ಹೋಗಿವೆ. ತಲೆಯ ಮೇಲೆ ರೇಷಿಮೆಯ ರುಮಾಲು ಕೆಳಭಾಗದಲ್ಲಿ ನೀಲಿವರ್ಣದ




ಕೋಟನ್ನು ಧರಿಸಿದ್ದಾರೆ. ಹಿನ್ನೆಲೆಯಲ್ಲಿ ತಿಳಿ ನೀಲಿವರ್ಣವನ್ನು ಬಳಸಲಾಗಿದೆ. ಇದೂ ಸಹ ಪಾಶ್ಚಾತ್ಯ ಪದ್ದತಿಯ ಕೃತಿಯಾದರೂ ಸಾಂಪ್ರದಾಯಿಕ ಮೆರಗು ಕೃತಿಯಲ್ಲಿ ಕಾಣಸಿಗುತ್ತವೆ.

ಹೂ ಬಳ್ಳಿಯ ವಿನ್ಯಾಸಗಳು

ಕೆ. ವೆಂಕಟಪ್ಪನವರು ಯಾವ ವಿಧದ ರಚನೆಯಲ್ಲೂ ಹಿಂದೆ ಸರಿದವರಲ್ಲ. ಏಕೆಂದರೆ ಇವರು ಮೂಲತಃ ಸಾಂಪ್ರದಾಯಿಕ ಕಲಾವಿದ ಮನೆತನದಿಂದ ಬಂದವರು. ಇವರ ಅಜ್ಜ, ಅಪ್ಪ, ಎಲ್ಲರೂ ಕಲಾವೃತ್ತಿಯನ್ನು ಮಾಡಿಕೊಂಡು ಬಂದವರೇ ಆಗಿದ್ದಾರೆ. ಅಂತೆಯೇ ಇವರೂ ಸಹ ಚಿಕ್ಕಂದಿನಿಂದಲೇ ಕಲೆಯ ಬಗ್ಗೆ ಆಸಕ್ತಿವುಳ್ಳವರಾಗಿದ್ದರು. ರವಿವರ್ಮರಂತಹ ದೊಡ್ಡ ದೊಡ್ಡ ಕಲಾವಿದರ ಕಲಾಕೃತಿಗಳನ್ನು ನೋಡುತ್ತಾ ಬೆಳೆದವರು ಇವರಾಗಿದ್ದರು. ಇವರು ಅಜಂತಾ ಹಾಗೂ ಅಂಭಾವಿಲಾಸದಲ್ಲಿ ಕೆಲಸ ಮಾಡುವಾಗ ವಿನ್ಯಾಸಗಳನ್ನು ರಚಿಸುವ ಅವಶ್ಯಕತೆ ಒದಗಿ ಬಂದಿತು. ಅದರ ಸಲುವಾಗಿ ನಾನಾ ಹೂ ಬಳ್ಳಿಗಳ ವರ್ಣಚಿತ್ರಗಳನ್ನು ಇವರು ರಚಿಸಿದ್ದಾರೆ. ಎಲ್ಲಾ ಹೂ ಬಳ್ಳಿ ವಿನ್ಯಾಸಗಳನ್ನು ಕಾಗದದ ಮೇಲೆ ಜಲವರ್ಣದಲ್ಲಿ ರಚಿಸಿದ್ದು, ಬಗೆ ಬಗೆಯ ಹೂ ಬಳ್ಳಿಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಉದಾಹರಣೆಗೆ ಬಸವನಪಾದದ ಹೂ, ಬಿಂದಿ ಹೂ, ಗಂಟೆ ಹೂ, ಅದರ ಬಗೆ ಬಗೆಯ ಎಲೆಯ ವಿನ್ಯಾಸವನ್ನು ಮಾಡಲಾಗಿದೆ. ಕೆಲೊವಂದು ಹೂಗಳ ಚಿತ್ರದಲ್ಲಿ ಗಾಢವಾದ ವರ್ಣಗಾರಿಕೆಯನ್ನು ಮಾಡಲಾಗಿದೆ. ಇಲ್ಲಿ ಹಸಿರು ವರ್ಣದಲ್ಲಿ ನಾನಾ ತರಹದ ವರ್ಣ ಭಂಗಿಗಳಿವೆ. ಗುಲಾಬಿ ಕೆಂಪು (ಪಿಂಕ್) ಕೇಸರಿ, ಕೆಂಪು, ಹಳದಿ, ನೀಲಿ ವರ್ಣಗಳ ಬಳಸಿಕೊಂಡು ಚಿತ್ರರಚನೆಯನ್ನು ಮಾಡಲಾಗಿದೆ.

ಒಟ್ಟಾರೆಯಾಗಿ ವೆಂಕಟಪ್ಪನವರ ಕಲಾಕೃತಿಗಳನ್ನು ಗಮನಿಸದಾಗ ಹಲವು ಆರೋಪಗಳು ವಿಭಿನ್ನ ಅಭಿಪ್ರಾಯಗಳು ನಮ್ಮಲ್ಲಿ ಒಡಮೂಡುತ್ತಿವೆ. ಹಲವು ವಿಷಯ ಹಾಗೂ ಮಾಧ್ಯಮಗಳಲ್ಲಿ ಪರಿಣಿತಿಯನ್ನು ಸಾಧಿಸಿದ ವೆಂಕಟಪ್ಪನವರು ಕಲಾವಲಯದಲ್ಲಿ ತಮ್ಮದೇಯಾದ ಚಾಪನ್ನು ಮೂಡಿಸಿದವರು. ಸಂಪೂರ್ಣವಾಗಿ ಕಲೆಗಾಗಿಯೇ ತಮ್ಮ ಇಡೀ ಜೀವನವನ್ನೇ ಒತ್ತೆಯಿಟ್ಟ ಇವರು ಎಂದಿಗೂ ನಾನೊಬ್ಬ ಕಲಾವಿದ ಎಂದು ಹೇಳಿಕೊಳ್ಳದೇ ನಾನೊಬ್ಬ ಕಲಾವಿದ್ಯಾರ್ಥಿ ಎಂದೇ ಹೇಳುತ್ತ ಬಂದವರು. ಬೇರೆಯವರ ಪಾಲಿಗೆ ಇವರು ಒರಟಾಗಿ ಕಂಡರೂ ಸಹ ಇವರುನ್ನು ಬಲ್ಲವರಿಗೆ ಮಾತ್ರ ಇವರ ಮೃದುತ್ವ ತಿಳಿದಿತ್ತು. ಇವರ ದೋರಣೆಗಳು ಬೇರೆಯವರಿಗೆ ಕೆಡುಕಾಗಿ ಕಂಡರೂ ಸಹ ನಿಲುವು ಮಾತ್ರ ಸತ್ಯವಾದವುಗಳು. ಇವರಂತೆಯೇ ಇವರ ಕಲಾಕೃತಿಗಳಲ್ಲಿಯೂ ಸಹ ಇವರ ಭಾವುಕತೆ ಸ್ಪಷ್ಟನೆ ನಿಲುವುಗಳು ಕಾಣುತ್ತವೆ. ಇವರು ಜಲವರ್ಣದ ನಿಸರ್ಗ ಚಿತ್ರಣ, ಭಾವಚಿತ್ರ, ವ್ಯಕ್ತಿಚಿತ್ರಣ, ಹೂಬಳ್ಳಿ ವಿನ್ಯಾಸಗಳು, ಕಾಣಬಹುದು. ಇವುಗಳಿಂದ ಒಟ್ಟಾರೆಯಾಗಿ ಹಲವು ಅಂಶಗಳನ್ನು ತಿಳಿಯಬಹುದು. ಇವರು ವಾಶ್‌ಮೆಥಡ್‌ನಲ್ಲಿ



ನಾರ್ವೆ ಕಾಗದದ ಮೇಲೆ ಕಲಾಕೃತಿಗಳನ್ನು ರಚಿಸುತ್ತಿದ್ದರು. ಜಲವರ್ಣಗಳನ್ನು ಹೆಚ್ಚಾಗಿ ರಚಿಸುತ್ತಿದ್ದರು. ತೈಲವರ್ಣದ ಕಲಾಕೃತಿಗಳನ್ನು ಬೆರಳೆಣಿಕೆಯಷ್ಟೇ ರಚಿಸಿದ್ದಾರೆ. ಇವರ ವರ್ಣಗಾರಿಕೆಯಲ್ಲಿ ಹೆಚ್ಚಾಗಿ ನೀಲಿ, ಹಸಿರು, ಹಳದಿ, ಕೆಂಪು, ಕೇಸರಿ ಹಾಗೂ ಕಂದುಗೆಂಪು, ಗಾಢಹಸಿರು, ಗಾಢನೀಲಿ, ನೇರಳೆ ವರ್ಣಗಳನ್ನು ಕಾಣಬಹುದು.

ಯಥಾದರ್ಶನ ಅಂಶದಿಂದ ನೋಡವುದಾದರೆ ಇವರಿಗೆ ಅದರ ಸಂಪೂರ್ಣ ಜ್ಞಾನವಿತ್ತು. ತಮ್ಮ ಕಲಾಕೃತಿಗಳಲ್ಲಿ ನೂರಾರು ಮೈಲಿಗಳಷ್ಟು ವಿಸ್ತೀರ್ಣಗಳನ್ನು ತೋರಿಸುವ ಚಮತ್ಕಾರದ ಯಥಾದರ್ಶನ ಕಲೆ ಇವರಲ್ಲಿತ್ತು. ಇದನ್ನು ನಾವು ನಿಸರ್ಗ ಚಿತ್ರಣದಲ್ಲಿ ಹೆಚ್ಚಾಗಿ ಕಾಣಬಹುದು. ಉಳಿದಂತೆ ವಿನ್ಯಾಸ, ಸಂಯೋಜನೆಯಲ್ಲಂತೂ ಇವರ ಸೂಕ್ಷ್ಮ ಚತುರತೆ ಬಿಂಬಿಸಿದಂತಾಗುವುದು. ಇವರು ಸಂಯೋಜನೆಯಲ್ಲಿ ಪಾಶ್ಚಾತ್ಯರಿಗಿಂತ ಭಾರತೀಯ ಸಂಪ್ರದಾಯಿಕ ಕಲೆಯ ಛಾಯೆಯೇ ಎದ್ದುಕಾಣುವುದು.

ಒಟ್ಟಾರೆಯಾಗಿ ವೆಂಕಟಪ್ಪನವರ ವರ್ಣ ಕಲಾಕೃತಿಗಳನ್ನು ಹಲವು ವಿಷಯಗಳ, ಮಾಧ್ಯಮಗಳ ಚಿತ್ರವನ್ನು ಕಾಣುತ್ತೇವೆ. ಅಲ್ಲದೇ ಎಲ್ಲಾ ವಿಷಯಗಳಲ್ಲಿಯೂ ಪ್ರೌಢಿಮೆ ಸಾಧಿಸಿದ್ದರೆಂಬುದು ಇವರ ಕಲಾಕೃತಿಯನ್ನು ಸಂಶೋಧನೆಗೆ ಒಳಪಡಿಸಿದಾಗ ತಿಳಿದುಬರುತ್ತದೆ. ಈ ರೀತಿಯ ಅಧ್ಯಯನಗಳು ಇನ್ನೂ ಹೆಚ್ಚು ನಡೆಯುವದರಿಂದ ಇವರಲ್ಲಿದ್ದ ಭಾವುಕತೆ, ತಂತ್ರಗಾರಿಕೆ, ಪ್ರಭಾವ, ಪ್ರೇರಣೆ, ಶೈಲಿ, ಸಂಪೂರ್ಣ ಮಾಹಿತಿಗಳನ್ನು ಬೆಳಕಿಗೆ ತಂದಂತಾಗುವುದು.

❖❖❖



ಚಾಮುಂಡಿಬೆಟ್ಟ ಮೈಸೂರು




ಚಾಮುಂಡಿ ಬೆಟ್ಟದಿಂದ ಕಾಣುವ ನೋಟ




ಮೈಸೂರು ಹಳೆಯ ಅಗ್ರಹಾರದ ನೀಲಗಿರಿ ಮರ



ನಂದಿ, ಚಾಮುಂಡಿಬೆಟ್ಟ




ಬಿಯರ ಕೋಲಾ ಬೆಟ್ಟಗಳು



ಮುನಿಸಿಪಲ್ ಹೈಸ್ಕೂಲು ಮೈಸೂರು



ಚರ್ಚಹಿಲ್ ಹಾದಿಯಲ್ಲಿ, ಉದಕಮಂಡಲ



ಎಲ್ಕಹಿಲ್ ಹಾದಿಯಲ್ಲಿ, ಉದಕಮಂಡಲ



ಪ್ರತಿಬಿಂಬ, ಉದಕಮಂಡಲ ಸರೋವರ



ಪ್ರಭಾತ ಕಿರಣಗಳು, ಉದಕಮಂಡಲ



ನೀಲವರ್ಣದ ಬೆಟ್ಟ, ಊಟಿ



ನಿಸರ್ಗ



ನೀಲಗಿರಿಯ ಪರ್ವತ, ಉಟಿ



ಸೂರ್ಯೋದಯ, ಊಟಿ



ಮುಂಗಾರುಮಳೆಯಲ್ಲಿ ಕಾಕರ್ ಹಾದಿಗಳು



ಮುಂಗಾರುಮಳೆ, ಉದಕಮಂಡಲ



ಉದಕಮಂಡಲದ ಹುಲ್ಲುಗಾವಲು



ಮುಂಗಾರುಮಳೆ ನಿಂತ ಮೇಲೆ ಶುಭ್ರ ವಾತಾವರಣ



ಚರ್ಚಹಿಲ್ ಹಾದಿಯಲ್ಲಿ, ಉದಕಮಂಡಲ



ಚಂದ್ರೋದಯ, ಊಟಿ



ಚಂದ್ರೋದಯ, ಕೊಡೈಕೆನಾಲ್




ನಿಶೀತ, ಊಟಿ



ಸೂರ್ಯಾಸ್ತ, ಉದಕಮಂಡಲ



ಸ್ಟ್ರೊಬಿಲ್ಯಾಂತಸ್ ಪುಷ್ಪಗಳು, ಕೊಡೈಕೆನಾಲ್



ಹುಣ್ಣಿಮೆಯ ಚಂದ್ರ



ಬೆಂಗಾಲ್ ಫ್ಲಾರಿಕನ್



ರಾಧೆ ಮತ್ತು ಜಿಂಕೆ



ವೀಣೆಯ ಮುಟ್ಟು



ಬುದ್ಧ ಮತ್ತು ಅವನ ಶಿಷ್ಯರು



ಸೀತೆಯ ಸ್ವಯಂವರ



ಹನುಮಂತನಿಗೆ ಉಂಗುರ ನೀಡುತ್ತಿರುವುದು



ಜಟಾಯು ಹಾಗೂ ರಾವಣನ ಕಾಳಗ



ಮೋದಕ ನೈವೇದ್ಯ



ಸ್ತ್ರೀ(ಅಪೂರ್ವ ಕೃತಿ)



ಲಂಕಾ ದಹನ



ಮಾರಿಚಕ ಮತ್ತು ರಾಮ





ಶ್ರೀ ಕೃಷ್ಣರಾಜ ಒಡೆಯರ



ಮಹಿಳೆಯ ವ್ಯಕ್ತಿಚಿತ್ರ(ಮೈಸೂರು)



ಅವನೀಂದ್ರ ಠಾಕುರ





ಹೂ-ಬಳ್ಳಿಯ ವಿನ್ಯಾಸಗಳು










ಹೂ-ಬಳ್ಳಿಯ ವಿನ್ಯಾಸಗಳು








ಹೂ-ಬಳ್ಳಿಯ ವಿನ್ಯಾಸಗಳು








ಅಧ್ಯಾಯ - ಐದು


ಕೆ. ವೆಂಕಟಪ್ಪನವರ ಪ್ಲಾಸ್ಟರ್ ಆಫ್ ಪ್ಯಾರಿಸ್ ಮಾಧ್ಯಮದ ಕಲಾಕೃತಿಗಳು



ಅಧ್ಯಾಯ : ಐದು

ಕೆ. ವೆಂಕಟಪ್ಪನವರ ಪ್ಲಾಸ್ಟರ್ ಆಫ್ ಪ್ಯಾರಿಸ್ ಮಾಧ್ಯಮದ ಕಲಾಕೃತಿಗಳು


ಮಾನವನ ಹುಟ್ಟಿನೊಂದಿಗೆ ಕಲೆ ಎಂಬುದು ಜೊತೆ ಜೊತೆಯಾಗಿ ಸಾಗುತ್ತಾ ಬಂದಿದೆ. ಆದಿಮಾನವನು ತನ್ನ ದಿನನಿತ್ಯದ ಜೀವನ ಜಂಜಾಟದ ನಡುವೆಯೂ ಮನೋರಂಜನೆಗಾಗಿ ಕಲೆಗೆ ಮೊರೆ ಹೋದ. ತಾನು ಕಂಡು ಅನುಭವಿಸಿದ ಎಲ್ಲಾ ಅನುಭವಗಳನ್ನಿಟ್ಟುಕೊಂಡು ಶಿಲ್ಪಗಳನ್ನು ಕೆತ್ತಲಾರಂಭಿಸಿದ. ಇತಿಹಾಸಕಾರರ ಪ್ರಕಾರ ಮಾನವನು ಮೊದಲಿಗೆ ಕಲ್ಲಿನ ಬಳಕೆದಯನ್ನು ಕಂಡುಕೊಂಡನೆಂಬುದು. ಆದರೆ ಶಿಲ್ಪಗಳ ಕೆತ್ತನೆಗೆ ಮೊದಲು ಆಯ್ದುಕೊಂಡ ಮಾಧ್ಯಮ ಮರದ ಕೊರಡುಗಳು. ಶಿಲಾಯುಗದ ನಂತರದಲ್ಲಿ ಮಾನವನು ನಿರ್ಮಿಸಿದ ಶಿಲ್ಪಗಳ ಕುರುಹುಗಳೂ ದೊರೆಯುತ್ತವೆ. ಅಲ್ಲಿಯವರೆವಿಗೂ ಕಲ್ಲು ಹಾಸು ಬಂಡೆಯ ಮೇಲೆ ದ್ವಿ ಆಯಾಮದ ಶಿಲ್ಪಗಳನ್ನು ಕೆತ್ತುತ್ತಿದ್ದ ಮಾನವನು ಅದನ್ನು ನಕ್ಷಾ ರೂಪದಲ್ಲಿ ಬೇಟೆಯ ಗುರಿ ತೋರಿಸಲು ಹಾಗೂ ತನ್ನ ಮನೋ ಅಭಿಲಾಷೆಯನ್ನು ಅಭಿವ್ಯಕ್ತಿಸಲು ಬಳಸುತ್ತಿದ್ದ. ಮರಗಳೂ ಕಲ್ಲಿಗಿಂತ ಬೇಗನೆ ನಯವಾಗುವುದರಿಂದ ಮರಗಳನ್ನೇ ಬಳಸುತ್ತಿದ್ದರು ಎಂಬುದು ಇತಿಹಾಸಕಾರರ ವಾದ. ಕಾಲಗರ್ಭದಲ್ಲಿ ಹುದುಗಿ ಹೋದ ಈ ಮರದ ಶಿಲ್ಪಗಳು ನಮಗೆ ಸಿಗುವುದಿಲ್ಲ. ೫೦೦೦ ವರ್ಷಗಳ ಇತಿಹಾಸವಿರುವ ಸಿಂಧೂ ಬಯಲಿನ ನಾಗರೀಕತೆಯಲ್ಲಿ ಹಲವಾರು ಶಿಲ್ಪ ಕಲೆಯ ಕುರುಹುಗಳು ದೊರೆಯುತ್ತವೆ. ಹರಪ್ಪ ಮತ್ತು ಮೊಹೆಂಜೋದಾರೋವಿನ ನಗರಗಳಲ್ಲಿ ವಾಸ್ತು ಕಲ್ಪನೆ, ನಗರ ವಿನ್ಯಾಸ, ಈಜು ಕೊಳಗಳು, ಎರಡಂತಸ್ತಿನ ಮನೆಗಳು, ಒಳಚರಂಡಿ ವ್ಯವಸ್ಥೆ ಎಲ್ಲವೂ ಗಮನಾರ್ಹ. ಇಲ್ಲಿ ನಾಣ್ಯಗಳು



ಸಹ ದೊರೆತಿವೆ. ಪಶುಪತಿ, ನರ್ತಕಿ, ಗೋವು ಎಲ್ಲವೂ ಶಿಲ್ಪಗಳೆ. ಮುಂದುವರೆದಂತೆ ಕ್ರಿಸ್ತ ಪೂರ್ವದಲ್ಲಿಯೇ ಇದ್ದ ಸಮಾಜಗಳಾದ ಗ್ರೀಸ್, ಮಾಯನ್ ಜನಾಂಗದವರು ಸಹ ಜೀವನವನ್ನೇ ಕಲೆ ಮತ್ತು ಸಾಹಸಕ್ಕಾಗಿ ಮುಡುಪಾಗಿಟ್ಟವರು. ಅಲೆಗ್ಸಾಂಡರ್ ಭಾರತದ ಮೇಲೆ ಆಕ್ರಮಣ ಮಾಡಿ ಪರೂರವನಿಂದ ಅಪಜಯಗೊಂಡನು. ಅವರಿಬ್ಬರ ಮಿತ್ರತ್ವದ ಸಂಕೇತವಾಗಿ ಗಾಂಧಾರ ಕಲೆಯು ಪ್ರಾರಂಭವಾಯಿತು. ಇದರಿಂದ ಪಾಶ್ಚಾತ್ಯ ಹಾಗೂ ಭಾರತೀಯ ಕಲೆಗಳು ಸಮ್ಮಿಲನಗೊಂಡವು. ಇಲ್ಲಿ ಹಲವಾರು ಬುದ್ಧನ ಶಿಲ್ಪಗಳು ಮಾಡಲ್ಪಟ್ಟವು. ಕ್ರಿಸ್ತಶಕದ ನಂತರದ ಅಜಂತಾ ಹಾಗೂ ಎಲ್ಲೋರಾದಲ್ಲಿ ಆದಂತಹ ಗುಹಾಂತರ ದೇವಾಲಯಗಳು ಭಾರತೀಯ ಕಲೆಗೆ ಕಳಸಪ್ರಾಯವಾಗಿದೆ. ಎಲ್ಲೋರಾದ ೧೬ನೇ ಗುಹೆಯಾದ ಕೈಲಾಸನಾಥ ದೇವಾಲಯವಂತೂ ಜಗದ್ವಿಖ್ಯಾತಿಯನ್ನು ಪಡೆದಿದೆ. ಇದೇ ಕಾಲಮಾನದ ಬಾದಾಮಿಯ ಗುಹಾಂತರ ದೇವಾಲಯಗಳು, ಐಹೊಳೆ, ಪಟ್ಟದಕಲ್ಲು ಇಲ್ಲಿ ಆದಂತಹ ದೇವಾಲಯ ಆವಿಷ್ಕಾರಗಳು ಬೇರೆಲ್ಲೂ ನಡೆದಿಲ್ಲ. ಎಂಟನೇ ಶತಮಾನದ ಹೊತ್ತಿಗೆ ಹೊಯ್ಸಳರ ಆಳ್ವಿಕೆಯಲ್ಲಿ ಆದಂತಹ ಬೇಲೂರು, ಹಳೇಬೀಡಿನಲ್ಲಿ ಆದಂತಹ ದೇವಾಲಯಗಳು ಜಗತ್ತಿನ ಶಿಲ್ಪ ಸೌಂಧರ್ಯಕ್ಕೆ ಮಾದರಿಯಾದಂತಹವುಗಳು.

೧೨ನೇ ಶತಮಾನದಲ್ಲಿ ಆದಂತಹ ಹಲವಾರು ಶಿಲ್ಪಗಳು, ಉತ್ತರದಲ್ಲಿ ಮೊಘಲರ ಹಾಗೂ ದಕ್ಷಿಣದಲ್ಲಿ ಚೋಳ ದೇವಾಲಯಗಳು ಶಿಲ್ಪಕಲೆಗೆ ಹೆಗ್ಗುರುತು ೧೫ನೇ ಶತಮಾನದಲ್ಲಿ ಪಾಶ್ಚಾತ್ಯ ಕಲಾವಿದನಾದ ಮೈಕಲ್ ಏಂಜೆಲೋ ಶಿಲ್ಪಕಲೆಯಲ್ಲಿ ಹೊಸದೊಂದು ಇತಿಹಾಸವನ್ನೇ ಬರೆದನು. ಈತ ನಿರ್ಮಿಸಿದ ಶಿಲ್ಪಗಳು ವಾಸ್ತವವಾದವನ್ನೇ ನಾಚಿಸುವಂತಿದ್ದವು. ೧೬ರ ಪ್ರಾರಂಭದ ಹೊತ್ತಿಗೆ ವಿಜಯನಗರ ಸಾಮ್ರಾಜ್ಯ ದಕ್ಷಿಣವನ್ನೇ ಆಕ್ರಮಿಸಿತ್ತು. ಈ ಹೊತ್ತಿಗೆ ವಿಜಯನಗರ ಕಲೆ, ಸಾಹಿತ್ಯಗಳಲ್ಲಿ ಶ್ರೀಮಂತ ನಾಡು ಎಂಬುದು ದೇಶ–ವಿದೇಶಗಳಿಗೆ ಪ್ರವಾಸಿಗರಿಂದ ತಿಳಿಯಿತು. ಆ ಕಾಲಕ್ಕೆ ಆದಂತಹ ದೇವಾಲಯಗಳು ಶಿಲ್ಪಕಲೆಗೆ ಕರುನಾಡು ಕೊಟ್ಟಂತಹ ಮತ್ತೊಂದು ಕೊಡುಗೆಯಾಯಿತು.

ಸಮಕಾಲೀನ ಸಂದರ್ಭದಲ್ಲಿ ವಿಷಯುಗಳು, ಬೇರೆ ಬೇರೆ ಮಾಧ್ಯಮಗಳು ಬೇರೆ ಬೇರೆಯಾಗತೊಡಗಿದವು. ಅರಸೊತ್ತಿಗೆಯಿಲ್ಲದ ಕಲಾವಿದರಿಗೆ ಮಣ್ಣು, ಲೋಹ, ಮರ ಹಾಗೂ ಕಲ್ಲಿ ಮಾಧ್ಯಮಗಳು ಮಾತ್ರ ತಿಳಿದಿದ್ದವು. ಸಾಂಪ್ರದಾಯಿಕ, ದೈವಿಕ ಪುರಾಣಗಳಿಗೆ ಸಂಬಂಧಿಸಿದ ಶಿಲ್ಪಗಳನ್ನು ಮಾತ್ರ ಮಾಡಬೇಕಿತ್ತು. ಆಧುನಿಕತೆಯ ಭರಾಟೆಯಲ್ಲಿ ಶಿಲ್ಪಕಲೆ ಪಟ್ಟಣಗಳಿಗೂ ಪ್ರವೇಶಿಸಿತು. ದೊಡ್ಡ ಮಹಲ್‌ಗಳ, ಚಿತ್ರಮಂದಿರಗಳ, ವ್ಯಾಪಾರೀ ಮಳಿಗೆಗೆಳ ಸೌಂಧರ್ಯವನ್ನು ಹೆಚ್ಚಿಸಲು ಭಿತ್ತಿ ಶಿಲ್ಪಗಳು ತಯಾರಾಗತೊಡಗಿದವು. ಕಲಾವಿದರ ಸೃಜನ ಕಲ್ಪನೆಯ ಫಲವಾಗಿ ವಿಭಿನ್ನ, ಅಮೂರ್ತ ಶಿಲ್ಪಗಳೂ




ಸಹ ನಿರ್ಮಾಣವಾದವು. ನಗರದ ಹಲವು ಮಹಾ ವೃತ್ತಗಳಲ್ಲಿಯೂ ಶಿಲ್ಪಗಳ ಪ್ರತಿಷ್ಠಾಪನೆಗಳೂ ನಡೆದವು. ಹೀಗೆ ಶಿಲ್ಪಕಲೆಯು ಅಮೂರ್ತದಿಂದ ಮೂರ್ತದೆಡೆಗೆ ಹಾಗೂ ಮೂರ್ತದಿಂದ ಅಮೂರ್ತದೆಡೆಗೆ ದಿನದಿನಕ್ಕೂ ತನ್ನ ಚಲನೆಯನ್ನು ಬದಲಿಸಿಕೊಂಡು ಸಾಗುತ್ತಲಿದೆ.

ಕೆ. ವೆಂಕಟಪ್ಪನವರು ಪಿ.ಓ.ಪಿ. ಮಾಧ್ಯಮದಲ್ಲಿ ಸಿದ್ಧಹಸ್ತರು. ಪ್ಲಾಸ್ಟರ್ ಆಫ್ ಪ್ಯಾರಿಸ್ ಎಂಬುದು ಇದರ ವಿಸ್ತೃತ ರೂಪವಾಗಿದೆ. ಶ್ವೇತವರ್ಣದ ಪುಡಿಯನ್ನು ನೀರಿನ ದ್ರವದಲ್ಲಿ ಸಮಪ್ರಮಾಣದಲ್ಲಿ ಕಲಕಿ ಖಾಲಿಯ ಫಲಕದಲ್ಲಿ ಹಾಕಿದಾಗ ಕೆಲ ನಿಮಿಷದಲ್ಲಿ ಅದು ಘನವಾಗಿ ಮಾರ್ಪಾಡು ಹೊಂದುವುದು. ಆನಂತರ ತಮಗೆ ಬೇಕಾದ ಆಕಾರವನ್ನು ಕೆತ್ತುವ ಮೂಲಕ ಶಿಲ್ಪವಾಗಿ ಪರಿವರ್ತಿಸಬಹುದು. ಈ ಮಾಧ್ಯಮದಲ್ಲಿ ವೆಂಕಟಪ್ಪನವರು ಸಿದ್ಧಹಸ್ತರು. ತಮ್ಮ ಎಲ್ಲಾ ಶಿಲ್ಪಗಳನ್ನು ಇದೇ ಮಾಧ್ಯಮದಲ್ಲಿ ಸೃಷ್ಟಿಸಿದ್ದಾರೆ. ಅವುಗಳೆಂದರೆ, ಶಿವತಾಂಡವ, ಸಿದ್ಧಾರ್ಥನ ರಾಜ್ಯ ಪರಿತ್ಯಾಗ, ದ್ರೋಣಾಚಾರ್ಯರ ಶಿಕ್ಷಣ, ಶಕುಂತಲೆಯ ನಿರ್ಗಮನ, ಏಕಲವ್ಯನ ಅಭ್ಯಾಸ ಹೀಗೆ ಹತ್ತು ಹಲವು ಶಿಲ್ಪಗಳನ್ನು ಪಿ.ಓ.ಪಿ. ಮಾಧ್ಯಮದಲ್ಲಿ ನಿರ್ಮಿಸಿದ್ದಾರೆ.

ಮಾಣಿಯ ಭಾವಶಿಲ್ಪ

ಕ್ರಿ.ಶ. ೧೯೧೮ ರಲ್ಲಿ ಮಾಣಿ ಶಿಲ್ಪವನ್ನು ಮಾಡಲಾಯಿತು. ವೆಂಕಟಪ್ಪನವರು ಬ್ರಹ್ಮಚಾರಿಯಾದ ಕಾರಣ ತಮ್ಮ ಆಹಾರವನ್ನು ತಾವೇ ತಯಾರಿಸಿಕೊಳ್ಳಬೇಕಾಗಿತ್ತು. ಕೆಲವು ಸಲ ಕೆಲಸದ ಒತ್ತಡದ ಸಂದರ್ಭದಲ್ಲಿ ತಿಂಗಳುಗಳ ಕಾಲ ಹೋಟೆಲ್‌ಗಳಿಗೆ ಹೋಗುತ್ತಿದ್ದರು. ಅವರು ದಿನವೂ ಹೋಗುತ್ತಿದ್ದ ಹೋಟೆಲ್‌ನಲ್ಲಿ ಮಾಣಿಯ ಕೆಲಸ ಮಾಡುತ್ತಿದ್ದ ಬಾಲಕನು ವೆಂಕಟಪ್ಪನವರ ಮನಸ್ಸನ್ನು ಗೆದ್ದಿದ್ದನು. ಆಗ ವೆಂಕಟಪ್ಪನವರು ಮಾಣಿಯ ಶಿಲ್ಪ ಮಾಡಬೇಕೆಂದು ನಿಶ್ಚಯಿಸಿ ತಮ್ಮ ಸ್ಟುಡಿಯೋದಲ್ಲಿ ಬಿಡುವಿನ ಸಂದರ್ಭದಲ್ಲಿ ಮಾಣಿಯನ್ನು ಬರಹೇಳಿ ಈ ಕೃತಿಯನ್ನು ಮಾಡಲಾಗಿದೆ. ಸುಮಾರು ಮೂರು ಅಡಿ ಎತ್ತರವಿರುವ ಈ ಶಿಲ್ಪವನ್ನು ತ್ರಿಆಯಾಮದಲ್ಲಿ ಮಾಡಲಾಗಿದೆ.

ಸರಿಸುಮಾರು ಆ ಬಾಲಕನಿಗೆ ಹದಿನೈದು ವರ್ಷ ವಯಸ್ಸಿರಬಹುದು. ಗುಂಡಾಗಿರುವ ಈ ಬಾಲಕನು ತಲೆಯ ಹಿಂಭಾಗದಲ್ಲಿ ಸಣ್ಣದಾದ ಜುಟ್ಟೊಂದನ್ನು ಬಿಟ್ಟುಕೊಂಡಿದ್ದನು. ಇದನ್ನು ಸಹ ಬಹು ಸೂಕ್ಷ್ಮವಾಗಿ ಕಲಾವಿದನು ಕೆತ್ತಿದ್ದಾನೆ. ಕೃತಿಯಲ್ಲಿ ಮಾಣಿಯ ಸಂಪೂರ್ಣ ಭಾವವನ್ನು ಕಲಾವಿದರು ಹಿಡಿದಿಡುವಲ್ಲಿ ಸಫಲರಾಗಿದ್ದಾರೆ. ಎದೆಯವರೆವಿಗೂ ಈ ಕೃತಿಯನ್ನು ಮಾಡಿದ್ದು, ಕೆಳಗೆ ಪೀಠವನ್ನು ಸಹ ನಿರ್ಮಿಸಲಾಗಿದೆ.



ವೀಣೆ ಶೇಷಣ್ಣನವರ ಭಾವಶಿಲ್ಪ


ಕ್ರಿ.ಶ. ೧೯೧೮ ರಲ್ಲಿ ಈ ಶಿಲ್ಪವನ್ನು ಸಹ ನಿರ್ಮಿಸಲಾಗಿದ್ದು, ಇದು ತ್ರಿಆಯಾಮದ ಶಿಲ್ಪವಾಗಿದೆ. ವೀಣೆಯ ಶೇಷಣ್ಣನವರು ವೆಂಕಟಪ್ಪನವರ ಅಚ್ಚುಮೆಚ್ಚಿನ ವೀಣಾ ಗುರುಗಳು. ವೆಂಕಟಪ್ಪನವರು ಮೈಸೂರಿಗೆ ಬಂದಾಗ ವೀಣಾ ಶೇಷಣ್ಣನವರ ಬಳಿ ವಿದ್ಯಾಭ್ಯಾಸ ಮಾಡಬೇಕೆಂದು ಹಂಬಲವಿತ್ತು. ಅದನ್ನು ಸ್ವತಃ ಶೇಷಣ್ಣನವರೇ ಈಡೇರಿಸಿದರು. ಅದೂ ಸಹ ಗೌರವಪೂರ್ವಕವಾಗಿ. ಶೇಷಣ್ಣನವರಿಗೂ ವೆಂಕಟಪ್ಪನವರಿಗೂ ಗುರು ಶಿಷ್ಯರ ಸಂಬಂಧವನ್ನು ಮೀರಿದ ಭಾವುಕತೆ ಇತ್ತು. ಶೇಷಣ್ಣನವರು ತೀರಿಕೊಂಡಾಗ ವೆಂಕಟಪ್ಪನವರು ಊಟಿಯಲ್ಲಿದ್ದರು. ಆ ನೊವು ವೆಂಕಟಪ್ಪನವರಿಗೆ ಬಹುವರ್ಷಗಳ ಕಾಲ ಕಾಡಿತು.

ಶೇಷಣ್ಣನವರು ಆಸ್ಥಾನದ ವೀಣಾ ಕಲಾವಿದರಾಗಿದ್ದರು. ಇವರು ವೆಂಕಟಪ್ಪನ ಮೇಲೆ ತೋರಿಸುತ್ತಿದ್ದ ಪ್ರೀತಿಯ ಸಲುವಾಗಿ ಗೌರವಪೂರ್ವಕವಾಗಿ ಶೇಷಣ್ಣನವರ ಅಪ್ಪಣೆಯ ಮೇರೆಗೆ ವೆಂಕಟಪ್ಪನವರು ಶೇಷಣ್ಣನವರ ಶಿಲ್ಪವನ್ನು ಮಾಡಲು ತಯಾರಿ ಮಾಡಿಕೊಂಡರು. ಈ ವಿಷಯ ನಿಮತ್ತ ಶೇಷಣ್ಣನವರನ್ನು ತಮ್ಮ ಸ್ಟುಡಿಯೋಗೆ ಕರೆಸಿಕೊಳ್ಳುತ್ತಿದ್ದರು. ಈ ಪ್ರಕ್ರಿಯೆ ಕೆಲವು ವಾರಗಳ ಕಾಲ ನಡೆಯಿತು. ಆಜಾನುಬಾಹುವಾಗಿದ್ದ ಶೇಷಣ್ಣನವರು ತಲೆಗೆ ಯಾವಾಗಲೂ ರುಮಾಲು ಸುತ್ತುತ್ತಿದ್ದರು ಕೋಲು ಮುಖ, ನೀಳ ಮೂಗು, ಒಳಗೆ ಅವಿತ ಕಣ್ಣುಗಳು, ದಪ್ಪನೆಯ ಮೀಸೆ, ಕೋಟ್ ಹಾಗೂ ಅದರ ಮೇಲೆ ಒಂದು ಝರಿ ಶಲ್ಯ ಇರುತ್ತಿತ್ತು.

ಈ ಶಿಲ್ಪವೂ ಸಹ ತ್ರಿ ಆಯಾಮದಲ್ಲಿದ್ದು ಮೊದಲು ಘನಾಕಾರದ ಫಲಕವನ್ನು ತಯಾರು ಮಾಡಿಕೊಂಡು ಆನಂತರ ತಿದ್ದಿ, ತೀಡಿ, ಉಳಿಗಳಿಂದ ಮೆದುವಾಗಿ ಕೆತ್ತಿ ಈ ಶಿಲ್ಪವನ್ನು ಪೂರ್ಣಗೊಳಿಸಲಾಗಿದೆ. ಈ ಶಿಲ್ಪವೂ ಸಹ ಎದೆಯವರೆಗೆ ಭಾವಚಿತ್ರ ಮಾಡಿದ್ದು, ಕೆಳಭಾಗದಲ್ಲಿ ಪೀಠವನ್ನು ಸಹ ಮಾಡಲಾಗಿದೆ. ಈ ಶಿಲ್ಪವು ಪಾಶ್ಚಾತ್ಯ ಶೈಲಿಯಲ್ಲಿದ್ದು, ವಾಸ್ತವಕ್ಕೆ ಹತ್ತಿರವಾಗಿದೆ. ೧೯೧೮ ಮಾರ್ಚ್ ಏಳರಂದು ಇದನ್ನು ಪೂರ್ಣಗೊಳಿಸಲಾಯಿತು.

ರವೀಂದ್ರನಾಥ ಠಾಕೂರರ ಭಾವಶಿಲ್ಪ

ಕ್ರಿ.ಶ. ೧೯೨೩ ರಲ್ಲಿ ಈ ಶಿಲ್ಪವನ್ನು ಮಾಡಲಾಗಿದೆ. ಒಮ್ಮೆ ರವೀಂದ್ರನಾಥರು ಮೈಸೂರಿಗೆ ಸಮಾವೇಶವೊಂದಕ್ಕೆ ಬಂದಿದ್ದರು. ಈ ವಿಷಯ ವೆಂಕಟಪ್ಪನವರಿಗೆ ತಿಳಿದು ಸಮಾವೇಶದ ಹಿಂದಿನ ದಿನವೇ ರವೀಂದ್ರರನ್ನು ಭೇಟಿಯಾಗಲು ತೆರಳಿದರು. ಜೊತೆಗೆ ಫೋಟೋಗ್ರಾಫರ್ ಒಬ್ಬರನ್ನು ಜೊತೆಗೆ ಕರೆದೊಯ್ದಿದ್ದರು. ಈ ಹಿಂದೆಯೇ ರವೀಂದ್ರರಿಗೆ ವೆಂಕಟಪ್ಪನವರ ಪರಿಚಯ ಬಂಗಾಳದಲ್ಲಿದ್ದ




ಕಾರಣ ವೆಂಕಟಪ್ಪನವರನ್ನು ಬಹುಪ್ರೀತಿಯಿಂದ ಮಾತನಾಡಿಸಿದರು. ರವೀಂದ್ರರು ತಮ್ಮ ಸಮಾವೇಶವನ್ನು ಮುಗಿಸಿಕೊಂಡು ಕಲ್ಕತ್ತಾಗೆ ಹಿಂದಿರುಗಿದರು. ರವೀಂದ್ರರು ಹೋದ ಬಳಿಕ ಅವರ ಫೋಟೋಗಳ ಸಹಾಯದಿಂದ ಇವರ ಕಲಾಕೃತಿಯನ್ನು ವೆಂಕಟಪ್ಪನವರು ಪ್ರಾರಂಭಿಸಿದರು. ಈ ಕೃತಿಯಲ್ಲಿ ರವೀಂದ್ರರು ನೀಳವಾದ ಕೂದಲು, ನೀಳವಾದ ರಾಡಿಯನ್ನು ಬಿಟ್ಟಿದ್ದು ಆಧ್ಯಾತ್ಮಿಕ ಭಾವ ಈ ಶಿಲ್ಪದಲ್ಲಿ ಎದ್ದು ಕಾಣವುದು. ಸುಮಾರು ಮೂರು ಅಡಿ ಎತ್ತರವಿರುವ ರವೀಂದ್ರರ ಶಿಲ್ಪವೂ ಸಹ ಎದೆಯವರೆಗೆ ರಚಿಸಲಾಗಿದೆ. ಇದರ ಕೆಳಭಾಗದಲ್ಲಿ ಪೀಠವನ್ನು ಸಹ ಮಾಡಲಾಗಿದೆ. ಈ ಶಿಲ್ಪದ ವಿಶೇಷವೆಂದರೆ ರವೀಂದ್ರರ ತಲೆಗೂದಲು, ಮೀಸೆ, ದಾಡಿ ಇವುಗಳನ್ನು ಅತಿ ಸೂಕ್ಷ್ಮವಾಗಿ ಕೆತ್ತಲಾಗಿದೆ. ಇದರಿಂದ ವೆಂಕಟಪ್ಪನವರಿಗಿದ್ದ ತಾಳ್ಮೆ ತಿಳಿಯುತ್ತದೆ. ೧೯೨೩ ಡಿಸೆಂಬರ್ ೨೭ ರಂದು ಇದನ್ನು ಪೂರ್ಣವಾಗಿ ಮುಗಿಸಲಾಯಿತು.

ಸಿದ್ಧಾರ್ಥನ ರಾಜ್ಯ ಪರಿತ್ಯಾಗ ಫಲಕ

ಕ್ರಿ.ಶ. ೧೯೨೪ ರಲ್ಲಿ ಈ ಫಲಕದ ಕಾರ್ಯವನ್ನು ಪ್ರಾರಂಭಿಸಲಾಯಿತು. ಆದರೆ ಮುಗಿದಿದ್ದು ಮಾತ್ರ ೧೯೫೧-೫೨ ರಲ್ಲಿ. ಈ ಶಿಲ್ಪವು ದ್ವಿಆಯಾಮದಲ್ಲಿದ್ದು, ವೃತ್ತಾಕಾರವಾಗಿ ನಿರ್ಮಿಸಲಾಗಿದೆ. ಮಹಾರಾಜನಾದ ಸಿದ್ಧಾರ್ಥನು ಸಮಾಜದಲ್ಲಿ ಕಷ್ಟ, ನಷ್ಟ, ದುಃಖ, ದುಮ್ಮಾನಗಳನ್ನು ಪರಿಹರಿಸುವ ಸಲುವಾಗಿ ತನ್ನ ರಾಜ ವೈಭೋಗವನ್ನು ಬಿಟ್ಟು ಸರ್ವ ಸಂಗ ಪರಿತ್ಯಾಗಿಯಾಗಿ ಹೊರಡುತ್ತಿರುವ ದೃಶ್ಯ ಇದಾಗಿದೆ.

ಇದೇ ಸನ್ನಿವೇಶವನ್ನು ವೆಂಕಟಪ್ಪನವರ ಗುರುಗಳಾದ ಅವನೀಂದ್ರರು ಜಲವರ್ಣದ ಕಲಾಕೃತಿಯನ್ನು ಮಾಡಿದ್ದಾರೆ. ಇದರ ಪ್ರಭಾವದಿಂದ ವೆಂಕಟಪ್ಪನವರು ಈ ಶಿಲ್ಪವನ್ನು ಮಾಡಿರಬಹುದೆಂದು ಊಹಿಸಬಹುದು. ಸಿದ್ಧಾರ್ಥನು ಕಚ್ಚೆ ಹಾಗೂ ದೇಹದ ಮೇಲೆ ದೊಡ್ಡದಾದ ಶಲ್ಯವನ್ನು ಧರಿಸಿದ್ದಾನೆ ಹಾಗೂ ಜನಿವಾರವೂ ಇದ್ದು, ಇದನ್ನು ಕಲಾವಿದರು ಸೂಕ್ಷ್ಮವಾಗಿ ಕೆತ್ತಿದ್ದಾರೆ. ತಲೆಯ ಮೇಲೆ ಕಿರೀಟ, ಇದರ ಹಿನ್ನೆಲೆಯಲ್ಲಿ ಪ್ರಭೆಯ ಚಕ್ರವಿದೆ. ಸಿದ್ಧಾರ್ಥನ ಎಡಬದಿಯಲ್ಲಿ ಕುದುರೆ ಇದ್ದು, ಅದೂ ಸಹ ತನ್ನ ಒಡೆಯನನ್ನು ದೂರವಾಗುತ್ತಿರುವ ಸಂಕಟದಿಂದ ನೊಂದ ಭಾವವನ್ನು ತೋರುತ್ತದೆ. ಈ ಕೃತಿಯು ಎಷ್ಟು ಸೂಕ್ಷ್ಮವಾಗಿದೆಯೆಂದರೆ ಆ ಕುದುರೆಯ ಕಣ್ಣಿನ ರೆಪ್ಪೆಯನ್ನೂ ಸಹ ಇಲ್ಲಿ ಕಾಣಬಹುದಾಗಿದೆ. ಕುದುರೆಯ ಕೃತಿಗೆ ತೊಂದರೆಯಾಗದಂತೆ ಸಣ್ಣದಾದ ದಾರದಿಂದ ಕುದುರೆಗೆ ಕುಚ್ಚು ಕಟ್ಟಲಾಗಿದೆ. ಕುದುರೆಯ ಹಿನ್ನೆಲೆಯಲ್ಲಿ ಮೆಟ್ಟಿಲು ಹಾಗೂ ಕಟ್ಟಡದ ವಿನ್ಯಾಸವನ್ನು ಮಾಡಲಾಗಿದೆ. ಈ ಶಿಲ್ಪವು ಬಹು ಸೂಕ್ಷ್ಮಾತಿಸೂಕ್ಷ್ಮ ಶಿಲ್ಪ ಫಲಕವಾಗಿದೆ.



ದ್ರೋಣಾಚಾರ್ಯರ ಶಿಕ್ಷಣ

ಕ್ರಿ.ಶ. ೧೯೨೫ರಲ್ಲಿ ಈ ಶಿಲ್ಪವನ್ನು ಮಾಡಲಾಗಿದ್ದು, ದ್ರೋಣಾಚಾರ್ಯರು ತಮ್ಮ ಶಿಷ್ಯರಾದ ಪಾಂಡವರಿಗೆ ಬಿಲ್ವಿದ್ಯೆಯನ್ನು ಹೇಳಿಕೊಡುತ್ತಿರುವುದು. ಇದೂ ಸಹ ದ್ವಿಆಯಾಮದಲ್ಲಿದ್ದು, ಶಿಲ್ಪ ಫಲಕವಾಗಿದ್ದು, ದ್ರೋಣಾಚಾರ್ಯರು ಬಲಗೈಯಲ್ಲಿ ಊರುಗೋಲು ಹಿಡಿದು ಎಡಗೈಯನ್ನು ಮೇಲೆತ್ತಿ ಗುರಿ ತೋರುವ ದೃಶ್ಯ ಇದಾಗಿದೆ. ಮುಂಭಾಗದಲ್ಲಿ ಅರ್ಜುನನು ಬಾಣ ಪ್ರಯೋಗ ಮಾಡುತ್ತಿದ್ದು, ಭೀಮಸೇನನು ಗದೆ ಹಿಡಿದು ಹಿಂದೆ ನಿಂತಿರುವನು. ಈ ಎಲ್ಲಾ ಫಲಕಗಳು ಐದು ಅಡಿ ಉದ್ದ, ಮೂರು ಅಡಿ ಅಗಲವಿದೆ. ಇವನ್ನೆಲ್ಲವುಗಳನ್ನು ಮೈಸೂರು ಅರಮನೆಯ ಅಂಭಾವಿಲಾಸದಲ್ಲಿ ಗೋಡೆಗೆ ಅಲಂಕರಿಸಲು ಮಾಡಲಾದ ಫಲಕಗಳಾಗಿವೆ.


ಏಕಲವ್ಯನ ಬಾಣಾಭ್ಯಾಸದ ಫಲಕ

ಕ್ರಿ.ಶ. ೧೯೨೫ ರಲ್ಲಿ ಮಾಡಲಾದ ಈ ಫಲಕವು ದ್ವಿ ಆಯಾಮದಲ್ಲಿದೆ. ಆಜಾನುಬಾಹುವಾದ ಏಕಲವ್ಯನು ಬಾಣಾಭ್ಯಾಸವನ್ನು ಮಾಡುತ್ತಿದ್ದಾನೆ. ಇವನ ಹಿನ್ನೆಲಯಲ್ಲಿ ಕಲ್ಲಿನ ಮಾದರಿ ಇದ್ದು, ಅದರಲ್ಲಿ ದ್ರೋಣಾಚಾರ್ಯರ ಮೂರ್ತಿಯನ್ನು ಇಟ್ಟುಕೊಂಡು ಅಭ್ಯಾಸ ನಡೆಸುತ್ತಿದ್ದಾನೆ. ಇವನ ಹಿನ್ನೆಲೆಯಲ್ಲಿ ಕಾಡಿನ ಕಲ್ಪನೆಯಾದ್ದರಿಂದ ಹಲವಾರು ಮರಗಳಿದ್ದು, ಮುಂಭಾಗದಲ್ಲಿ ಬಯಲಿದೆ. ಏಕಲವ್ಯನ ಎಡಬದಿ ಹಾಗೂ ಮುಂಭಾಗದಲ್ಲಿ ಹಿಮದಲ್ಲಿ ವಾಸಿಸುವ ಜಿಂಕೆ ಜಾತಿಗೆ ಸೇರಿದ ಹಿಮಕಡವೆಗಳಿದ್ದು ಒಂದು ನಿಂತಿದೆ, ಮತ್ತೊಂದು ಕುಳಿತಿದೆ.

ಆಜಾನುಬಾಹುವಾದ ಏಕಲವ್ಯನು ಸದೃಢವಾದ ದೇಹವನ್ನು ಹೊಂದಿರುವಂತೆ ತೋರಿಸಲಾಗಿದೆ. ತಲೆಗೆ ಚರ್ಮದ ಪಟ್ಟಿಯನ್ನು ಸುತ್ತಿಕೊಂಡಿದ್ದು, ಹಳ್ಳಿಗಳಲ್ಲಿ ಧರಿಸುವ ಶಲ್ಯ ಮಾದರಿಯ ವಸ್ತ್ರವನ್ನು ಧರಿಸಿದ್ದಾನೆ. ಒಟ್ಟಾರೆಯಾಗಿ ಈ ಶಿಲ್ಪಗಳು ದ್ವಿಆಯಾಮದಲ್ಲಿದ್ದು, ಸೂಕ್ಷ್ಮ ಕೆತ್ತನೆಗೆ ಅವಕಾಶ ಮಾಡಿಕೊಟ್ಟಿದೆ. ೫ x ೩ ಅಡಿಗಳ ಎತ್ತರವಿದ್ದು, ಇದನ್ನೂ ಸಹ ಅಂಭಾವಿಲಾಸದ ಗೋಡೆಗೆ ಅಲಂಕರಿಸಲು ಮಾಡಲಾಗಿತ್ತು.

ಶಕುಂತಲೆಯ ನಿರ್ಗಮನ ಫಲಕ

ಕ್ರಿ.ಶ. ೧೯೨೮ ರಲ್ಲಿ ಇದನ್ನು ಪ್ರಾರಂಭಿಸಿದರೂ ಸಹ ಸಂಪೂರ್ಣವಾಗಿ ಮುಗಿದಿದ್ದು ೧೯೪೪ ರಲ್ಲಿ. ಶಾಕುಂತಲೆಯು ತಾನು ವಾಸವಿದ್ದ ಕಣ್ವ ಮಹರ್ಷಿಗೆ, ಆಶ್ರಮದಿಂದ ತಾನು ಪ್ರೀತಿಸಿ ಬೇರೆಯಾದ ದುಶ್ಯಂತ ಮಹಾರಾಜನ ಆಸ್ಥಾನಕ್ಕೆ ತೆರಳುವುದಾಗಿ ಹೊರಟು ನಿಂತಾಗ ಕಣ್ವರು




ಆಕೆಯನ್ನು ಆಶೀರ್ವದಿಸುತ್ತಿರುವುದು. ಇದೊಂದು ಮನಮೋಹಕ ಶಿಲ್ಪ ಫಲಕ. ಇಲ್ಲಿ ಕಣ್ವ ಮಹರ್ಷಿಯವರು ಗಡ್ಡಧಾರಿಯಾಗಿದ್ದು, ತಲೆಯ ಮೇಲೆ ತುರುಬನ್ನು ಕಟ್ಟಿಕೊಂಡಿದ್ದಾರೆ. ತಮ್ಮ ಬಲಗೈಯನ್ನು ಎತ್ತಿ ಆಶೀರ್ವಾದ ಮಾಡುತ್ತಿದ್ದು, ಶಕುಂತಲೆಯು ತಲೆಬಾಗಿ ಕಣ್ಣೀರುಡುತ್ತಾ ನಮಸ್ಕರಿಸುತ್ತಿದ್ದಾಳೆ. ಈಕೆಯ ಸೀರೆಯ ಸೆರಗನ್ನು ಜಿಂಕೆಯು ಹಿಡಿದು ಎಳೆಯುತ್ತಿದೆ. ಶಕುಂತಲೆಯ ಹಿಂಭಾಗದಲ್ಲಿ ಇಬ್ಬರು ಸ್ತ್ರೀಯರು ಅಳುತ್ತಾ ತಮ್ಮ ಸೀರೆಯ ಸೆರಗಿನಿಂದ ಕಣ್ಣೊರೆಸಿಕೊಳ್ಳುತ್ತಿದ್ದಾರೆ. ಇವರ ಹಿನ್ನೆಲೆಯಲ್ಲಿ ನೀಳವಾದ ಮರಗಳನ್ನು ಸಹ ತೋರಿಸಲಾಗಿದೆ. ಈ ಶಿಲ್ಪವೂ ಸಹ ಐದು ಅಡಿ ಎತ್ತರ, ಮೂರು ಅಡಿ ಅಗಲದ ಶಿಲ್ಪ ಫಲಕವಾಗಿದೆ.

ರಾಮನಿಂದ ಹನುಮನಿಗೆ ಉಂಗುರ ಪ್ರಧಾನ

ಕ್ರಿ.ಶ. ೧೯೩೭ರಲ್ಲಿ ಈ ದ್ವಿ ಆಯಾಮದ ಫಲಕವನ್ನು ಮಾಡಲಾಗಿದ್ದು, ರಾಮನು ಸೀತೆಗೆ ಉಂಗುರವನ್ನು ಕೊಟ್ಟು ಸೀತೆಯ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಬರಲೆಂದು ಹನುಮಂತನನ್ನು ಕಳುಹಿಸುತ್ತಿರುವುದು. ಇಲ್ಲಿ ಶ್ರೀರಾಮನು ಧೋತ್ರವನ್ನು ಕಟ್ಟಿದ್ದು ಆಜಾನುಬಾಹುವಾಗಿದ್ದಾನೆ. ಎಡದಿಂದ ಬಲಕ್ಕೆ ಜನಿವಾರವನ್ನು ಧರಿಸಿದ್ದಾನೆ. ಎಡಗಾಲನ್ನು ಕಲ್ಲಿನ ಮೇಲಿಟ್ಟಿದ್ದು, ಎಡಗೈಯನ್ನು ಮಂಡಿಯ ಮೇಲೆ ಊರಿದ್ದಾನೆ. ಬಲಗೈಯಿಂದ ಉಂಗುರವನ್ನು ನೀಡುತ್ತಿದ್ದು, ವೀರ ಹನುಮನು ಬಲಗೈಯಿಂದ ಪ್ರಸಾದದಂತೆ ಸ್ವೀಕರಿಸುತ್ತಿರುವನು. ಹನುಮಂತನ ಹಿಂಬದಿಯಲ್ಲಿ ಜಾಂಬವಂತನನ್ನು ತೋರಿಸಲಾಗಿದೆ ಹಾಗೂ ರಾಮನ ಹಿಂಭಾಗದಲ್ಲಿ ಲಕ್ಷ್ಮಣನಿದ್ದು, ಕೈಯಲ್ಲಿ ಬಿಲ್ಲನ್ನು ಹಿಡಿದಿದ್ದಾನೆ. ಇವರ ಹಿನ್ನೆಲೆಯಲ್ಲಿ ಕಲ್ಲುಗಳನ್ನು ಜೋಡಿಸಲಾಗಿದೆ. ಇದೂ ಸಹ ಐದು ಅಡಿ ಉದ್ದ, ಹಾಗೂ ಮೂರು ಅಡಿ ಅಗಲದ ಶಿಲ್ಪ ಫಲಕವಾಗಿದೆ.

ಬುದ್ಧ ಪರಿವ್ರಾಜಕನಾಗಿ

ಈ ಫಲಕವನ್ನು ೧೯೩೪ ರಲ್ಲಿ ನಿರ್ಮಿಸಲಾಗಿದ್ದು, ಬುದ್ಧನು ಪರಿವ್ರಾಜಕನಾಗಿ ಬೇಡುತ್ತಿರುವ ಸನ್ನಿವೇಶವಾಗಿದೆ. ಶ್ರೀಮಾನ್ ಬುದ್ಧನು ಬಲಗೈಯಲ್ಲಿ ಕಪಾಲ ಹಾಗೂ ಎಡಗೈಯಲ್ಲಿ ಕಮಂಡಲವನ್ನು ಹಿಡಿದು ಭಿಕ್ಷಾ ಪರ್ಯಟನೆ ಮಾಡುತ್ತಿರುವುದು ದೃಶ್ಯದ ಸಾರ. ಸರ್ವಸಂಗ ಪರಿತ್ಯಾಗಿಯಾದ ಬುದ್ಧನು ತನ್ನ ನಿತ್ಯಕರ್ಮವಾದ ಭಿಕ್ಷಾಟನೆ ಮಾಡುತ್ತಿದ್ದಾನೆ. ದೇಹದ ತುಂಬ ವಸ್ತ್ರವನ್ನು ಧರಿಸಿರುವ ಬುದ್ಧನು ಭಿಕ್ಷೆ ಬೇಡುತ್ತಿದ್ದು, ಸ್ತ್ರೀಯೊಬ್ಬಳು ತನ್ನ ಮಗನೊಂದಿಗೆ ತಟ್ಟೆ, ನೀರು ಹಾಗೂ ಫಲಹಾರವನ್ನು ನೀಡುತ್ತಿದ್ದಾಳೆ. ಹಿನ್ನೆಲೆಯಲ್ಲಿ ಖಾಲಿಯಾಗಿದೆ. ಇದೂ ಸಹ ಐದು ಅಡಿ ಉದ್ದ, ಮೂರು ಅಡಿ ಅಗಲದ ಶಿಲ್ಪವಾಗಿದೆ.



ಶಿವತಾಂಡವ ಫಲಕ

ಈ ಫಲಕವನ್ನು ೧೯೪೦ರಲ್ಲಿ ಪ್ರಾರಂಭಿಸಿದರು. ಆದರೆ ಸಂಪೂರ್ಣವಾಗಿ ೧೯೫೬ರಲ್ಲಿ ಮುಗಿಸಲಾಯಿತು. ಈ ಶಿಲ್ಪವು ದ್ವಿ ಆಯಾಮದಲ್ಲಿದ್ದು, ಶಿವನು ಡಮರುಗ ಹಾಗೂ ತ್ರಿಶೂಲವನ್ನಿಡಿದು ರುದ್ರತಾಂಡವ ಮಾಡುತ್ತಿದ್ದಾನೆ. ಹಿನ್ನೆಲೆಯಲ್ಲಿ ಗೌರೀಶಂಕರವನ್ನು ತೋರಿಸಲಾಗಿದೆ. ಜಟಾಧಾರಿಯಾದ ಶಿವನು ರುದ್ರನಾಗಿ ತನ್ನ ಕೆಂಜಡೆಯನ್ನು ಕೆದರಿಕೊಂಡು ಬಲಗೈಯಲ್ಲಿ ಡಮರು ಹಾಗೂ ಎಡಗೈಯಲ್ಲಿ ತ್ರಿಶೂಲವನ್ನು ಹಿಡಿದಿದ್ದಾನೆ. ಕೊರಳಿಗೆ, ಸೊಂಟಕ್ಕೆ ಸರ್ಪಗಳನ್ನು ಸುತ್ತಿಕೊಂಡಿದ್ದು, ಬಲಗಾಲನ್ನು ನೆಲ್ಕಕ್ಕೂರಿ, ಎಡಗಾಲನ್ನು ಮೇಲೆತ್ತಿದ್ದಾನೆ. ಬಲಗಾಲಿಗೆ ಗಂಟೆಯನ್ನು ಕಟ್ಟಿಕೊಂಡು ಮತ್ತು ಸೊಂಟಕ್ಕೆ ಚರ್ಮವನ್ನು ಸುತ್ತಿಕೊಂಡಿರುವ ಶಿವನು ತದೇಕ ಚಿತ್ತದಿಂದ ನಾಟ್ಯವಾಡುತ್ತಿದ್ದಾನೆ. ಹಿನ್ನೆಲೆಯಲ್ಲಿ ಶಿವನ ವಾಸಸ್ಥಾನವಾದ ಗೌರೀಶಂಕರವನ್ನು ತೋರಿಸಲಾಗಿದೆ. ಇದೂ ಸಹ ಐದು ಅಡಿ ಉದ್ದ ಹಾಗೂ ಮೂರು ಅಡಿ ಅಗಲದ ಶಿಲ್ಪದ ಫಲಕವಾಗಿದೆ. ಈ ಶಿಲ್ಪವು ಸೂಕ್ಷ್ಮಾತಿಸೂಕ್ಷ್ಮ ಕೃತಿಯಾಗಿದೆ.


ಒಟ್ಟಾರೆಯಾಗಿ ಇವರ ಶಿಲ್ಪಕಲಾಕೃತಿಗಳನ್ನು ನೋಡಿದಾಗ ಹಲವಾರು ಅಂಶಗಳು ಸಂಶೋಧನೆಗೆ ಒಳಗಾಗಿರುತ್ತವೆ. ಅಲ್ಲದೇ ಈ ಕಲಾಕೃತಿಗಳ ಶೈಲಿ ತಂತ್ರ, ಪ್ರಭಾವಗಳನ್ನು ತಿಳಿದಂತಾಗುತ್ತದೆ. ಇವರು ಹೆಚ್ಚಾಗಿ ಪ್ಲಾಸ್ಟರ್ ಆಫ್ ಪ್ಯಾರಿಸ್ ಮಾಧ್ಯಮದ ಶಿಲ್ಪಗಳನ್ನು ಮಾಡಿದ್ದಾರೆ. ಈ ಮಾಧ್ಯಮವನ್ನು ಹಲವು ಕ್ರಮದಲ್ಲಿ ಮಾಡಬಹುದು. ಆದರೇ ವೆಂಕಟಪ್ಪನವರು ಮೊದಲಿಗೆ ಮಣ್ಣಿನ ಕೃತಿಗಳನ್ನು ರಚಿಸಿ ಅದರ ಮೇಲೆ ಪ್ಲಾಸ್ಟರ್ ಆಫ್ ಪ್ಯಾರಿಸ್ ಮಾಧ್ಯಮವನ್ನು ಸುರಿದು ಅದು ಗಟ್ಟಿಯಾದ ಮೇಲೆ ಅದನ್ನು ಮಣ್ಣಿನಿಂದ ಬೇರ್ಪಡಿಸಿ ಆ ಪಿ.ಓ.ಪಿ ಅಚ್ಚಿನ ಮೇಲೆ ಮತ್ತೊಮ್ಮೆ ಪಿ.ಓ.ಪಿಯನ್ನು ನೀರಿನಲ್ಲಿ ಕಲಸಿ ಸಿದ್ಧಗೊಳಿಸಿದ ದ್ರಾವಣವನ್ನು ಸುರಿದು ಅದರಿಂದ ಇವರು ಮೂಲ ಶಿಲ್ಪಕೃತಿಯನ್ನು ಪಡೆಯುತ್ತಿದ್ದರು.

ಮೈಸೂರಿನ ಅರಮನೆಯ ಅಂಬಾ ವಿಲಾಸದ ಗೋಡೆಗಳ ಮೇಲೆ ಸೌಂದರ್ಯಮಯವಾಗಿ ಕಾಣಲೆಂದು ನಾಲ್ವಡಿ ಕೃಷ್ಣರಾಜರು ಈ ಶಿಲ್ಪ ಫಲಕಗಳನ್ನು ಮಾಡಲು ಅಪ್ಪಣೆ ನೀಡಿದರು. ಅಲ್ಲದೇ ವೆಂಕಟಪ್ಪರಿಗೆ ಪ್ರೀತಿ ಪಾತ್ರರಾದ ಹಲವಾರು ವ್ಯಕ್ತಿಗಳ ತ್ರಿ ಆಯಾಮದ ಶಿಲ್ಪಗಳನ್ನು ಸಹ ಇಲ್ಲಿ ಮಾಡಲಾಗಿದ್ದು, ಇವು ಪಾಶ್ಚಾತ್ಯ ಪ್ರಭಾವವನ್ನು ತೋರಿಸುತ್ತವೆ. ಒಟ್ಟಾರೆಯಾಗಿ ವೆಂಕಟಪ್ಪನವರು ಶಿಲ್ಪ ಹಾಗೂ ಚಿತ್ರ ಎರಡೂ ಮಾಧ್ಯಮಗಳಲ್ಲಿಯೂ ಭಾರತದ ಕಲಾವಲಯಕ್ಕೆ ಕೀರ್ತಿ ತಂದವರಾಗಿದ್ದಾರೆ.

❖❖❖



ವೀಣೆ ಶೇಷಣ್ಣವರು



ಇ.ಬಿ.ಹ್ಯಾವೆಲ್



ಪರ್ಸಿ ಬ್ರೌನ್



ರವೀಂದ್ರನಾಥ ಠಾಕುರ



ಮಾಣಿ



ಕಣ್ವಾಶ್ರಮದಿಂದ ಶಕುಂತಲೆಯ ನಿರ್ಗಮನ



ರಾಮ ಹನುಮಂತನಿಗೆ ಉಂಗುರ ನೀಡುತ್ತಿರುವುದು



ಪರಿವ್ರಾಜಕ ಬುದ್ಧ



ಏಕಲವ್ಯ ಧನುರ್ವಿದ್ಯೆ ಕಲಿಯುತ್ತಿರುವುದು

ಕೆ. ವೆಂಕಟಪ್ಪನವರ ಕಲೆ ಮತ್ತು ಬದುಕು




ಶಿವತಾಂಡವ



ಮಹಾ ಪರಿತ್ಯಾಗ




ಕೆ. ವೆಂಕಟಪ್ಪನವರು



ನಿಜಲಿಂಗಪ್ಪನವರೊಂದಿಗೆ ಕೆ. ವೆಂಕಟಪ್ಪ

ಅಧ್ಯಾಯ - ಆರು

ಕೆ. ವೆಂಕಟಪ್ಪನವರ ಕಲಾಕೃತಿಯ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ ಮತ್ತು ಶೈಲಿ




ಅಧ್ಯಾಯ : ಆರು

ಕೆ. ವೆಂಕಟಪ್ಪನವರ ಕಲಾಕೃತಿಯ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ ಮತ್ತು ಶೈಲಿ

ಕೆ. ವೆಂಕಟಪ್ಪನವರು ಮೂಲತಃ ಚಿತ್ರಕಲಾ ಮನೆತನಕ್ಕೆ ಸೇರಿದವರು. ಇವರ ಹಿರಿಯ ವೃತ್ತಿ, ಪ್ರವೃತ್ತಿ ಎರಡೂ ಕೂಡ ಚಿತ್ರಕಲೆಯಾಗಿತ್ತು. ಇವರ ಮಾತೃಭಾಷೆ ತೆಲುಗು. ಕಾರಣ ಇವರು ಆಂಧ್ರಪ್ರದೇಶಕ್ಕೆ ಸೇರಿದವರು. ವಿಜಯನಗರ ಸಾಮ್ರಾಜ್ಯದಲ್ಲಿ ಕಲಾವಿದರಿಗೆ ಬರವಿರಲಿಲ್ಲ. ಆ ಕಾಲದಲ್ಲಿ ವಿಜಯನಗರದ ಆಸ್ಥಾನ ಕಲಾವಿದರಾಗಿ ಇವರ ಹಿರೀಕರು ಕಾರ್ಯನಿರ್ವಹಿಸುತ್ತಿದ್ದರು. ವಿಜಯನಗರದ ಪತನದ ನಂತರ ಇಲ್ಲಿಂದ ಇವರು ಬೇರೆ ಬೇರೆ ಕಡೆ ವಲಸೆ ಹೋದರು. ಅಂತೆಯೇ ವೆಂಕಟಪ್ಪನವರ ಹಿರೀಕರು ಕೂಡ ಬೇರೆಡೆಗೆ ಹೋಗಬೇಕಾದ ಸಂದರ್ಭದ ಬಂದಿತು. ಇಂತಹ ಸಂದರ್ಭದಲ್ಲಿ ಇವರು ಚಿತ್ರದುರ್ಗದ ಪಾಳೇಗಾರರ ಮಡಿಲಿಗೆ ಬಂದರು. ಇಲ್ಲಿಯೇ ನೆಲೆಸಿ ದುರ್ಗದ ಆಸ್ಥಾನ ಕಲಾವಿದರಾದರು. ಇಲ್ಲಿಯೂ ಬಹುಕಾಲ ನೆಲೆಸಲು ಸಾಧ್ಯವಾಗಲಿಲ್ಲ. ಏಕೆಂದರೆ ಮೈಸೂರಿನ ಸಂಸ್ಥಾನದ ದಂಡನಾಯಕನಾದ ಹೈದರಾಲಿಯ ಕಣ್ಣು ದುರ್ಗದ ಮೇಲೆ ನೆಟ್ಟಿತು. ಆಗ ಹೈದರಾಲಿಯು ದುರ್ಗದ ಮೇಲೆ ಆಕ್ರಮಣ ಮಾಡಿದನು. ದುರ್ಗವು ಅಧಃಪತನ ಹೊಂದಿತು. ವಿಧಿ ಇಲ್ಲದೆ ಕಲಾವಿದರು ಚಿತ್ರದುರ್ಗವನ್ನು ಸಹ ಬಿಡಬೇಕಾಯಿತು.

ನಂತರ ಅಲ್ಲಿಂದ ಜೀವನೋಪಾಯಕ್ಕಾಗಿ ಉದ್ಯೋಗವನ್ನರಸಿ ದುರ್ಗದಿಂದ ಮೈಸೂರಿಗೆ ತೆರಳಿದರು. ಅಂದಿನ ಸಂದರ್ಭದಲ್ಲಿ ಹೈದರಾಲಿಯು ಶ್ರೀರಂಗಪಟ್ಟಣವನ್ನು ನೋಡಿಕೊಳ್ಳುತಿದ್ದನು. ಇವರ ಅಧೀನದಲ್ಲಿ




ವೆಂಕಟಪ್ಪನವರ ಹಿರೀಕರು ಉದ್ಯೋಗ ಮಾಡಬೇಕಾಯಿತು. ಕೆಲವು ವರ್ಷಗಳು ಅಲ್ಲಿಯೇ ಉಳಿಯಬೇಕಾಯಿತು. ಆನಂತರ ೧೮೮೬ ಜೂನ್ ೨೬ರಂದು ಇವರು ಜನಿಸಿದರು. ಒಂದು ವರ್ಷದ ಹಿಂದೆಯಷ್ಟೇ ನಾಲ್ವಡಿ ಕೃಷ್ಣರಾಜರು ಜನಿಸಿದರು. ೧೮೯೭ರ ಫೆಬ್ರವರಿಯಲ್ಲಿ ಮಹಾರಾಣಿಯವರ ಮಗಳಾದ ಜಯಲಕ್ಷ್ಮಮ್ಮಣ್ಣಿಯವರ ಮದುವೆ ವಿಜೃಂಭಣೆಯಿಂದ ಜರುಗಿತು. ಮದುವೆ ಮುಗಿದ ಕೆಲದಿನಗಳಲ್ಲಿ ಅಂದರೆ ಫೆಬ್ರವರಿ ೨೮ರಂದು ಊಳಿಗದವಳೊಬ್ಬಳ ಅಚಾತುರ್ಯದಿಂದ ಅರಮನೆಗೆ ಬೆಂಕಿ ಬಿದ್ದು, ಎಲ್ಲವೂ ಸರ್ವನಾಶವಾಗಿ ಹೋಯಿತು. ಇದರ ಪೂರ್ವದಲ್ಲಿಯೇ ಅಂದರೆ ೧೮೦೦ರಲ್ಲಿಯೇ ತಜ್ಞರೆಲ್ಲಾ ಸೇರಿ ಹೊಸ ಅರಮನೆಯ ನಕ್ಷೆಯೊಂದನ್ನು ತಯಾರಿಸಿದ್ದರು. ಅದರ ಪ್ರಕಾರ ಅರಮನೆಯ ಕಟ್ಟಡ ಕಾರ್ಯವು ಜರುಗಿತು. ಇದರ ಕೆಲಸಕ್ಕಾಗಿ ರಾಜ್ಯದ ಬೇರೆ ಬೇರೆ ಕಡೆಯಿಂದ ಕಲಾವಿದರು, ಕಟ್ಟಡ ಕಟ್ಟುವವರು, ಮರಗೆಲಸದವರು ಹೀಗೆ ಎಲ್ಲರನ್ನೂ ಕರೆಸಿಕೊಂಡರು. ಆಗ ಶ್ರೀರಂಗಪಟ್ಟಣದಲ್ಲಿ ವಾಸವಾಗಿದ್ದಾಗ ವೆಂಕಟಪ್ಪನವರ ಹಿರೀಕರೂ ಸಹ ಮೈಸೂರಿಗೆ ಬಂದು ಇಲ್ಲಿ ಅರಮನೆಯ ಕೆಲಸದಲ್ಲಿ ಕಾರ್ಯನಿರತರಾದರು.

ಪ್ರಭಾವ

ಅರಮನೆಯ ಕಾರ್ಯ ಸಾಗಲಾರಂಭಿಸಿತು. ಕಟ್ಟಡಕಾರ್ಯ ಮುಗಿಯುತ್ತಿದ್ದಂತೆ ಅಂದಿನ ಕಾಲದ ಕಲಾ ದಿಗ್ಗಜನೆಂದು ಕರೆಸಿಕೊಳ್ಳುತ್ತಿದ್ದ ರವಿವರ್ಮರಿಗೆ ಅರಮನೆಯ ಕಲಾ ಸೌಂದರ್ಯ ವಿಭಾಗವನ್ನು ವಹಿಸಲಾಯಿತು. ಆಗ ರವಿವರ್ಮರು ತಮ್ಮ ತೆಕ್ಕೆಯಲ್ಲಿ ಹಲವರು ಕಲಾವಿದರನ್ನು ಇಟ್ಟುಕೊಂಡು ಅರಮನೆಯಲ್ಲಿ ಚಿತ್ರಕಲೆಯನ್ನು ಪ್ರಾರಂಭಿಸಿದರು. ಅಲ್ಲಿ ವೆಂಕಟಪ್ಪನವರ ತಂದೆ ಕೃಷ್ಣಪ್ಪರೂ ಸಹ ಅಲ್ಲಿ ಕೆಲಸ ಮಾಡುತ್ತಿದ್ದರು. ಆಗ ವೆಂಕಟಪ್ಪನವರಿಗೆ ಇನ್ನೂ ಚಿಕ್ಕ ವಯಸ್ಸು. ಆ ಸಂದರ್ಭದಲ್ಲಿ ಕಲೆಯ ಪರಿಪೂರ್ಣ ಸತ್ಯವನ್ನು ಅರಿಯಲಾರಂಭಿಸಿದರು. ಅಂದಿನಿಂದಲೇ ವೆಂಕಟಪ್ಪನವರ ಮೇಲೆ ಕಲೆಯ ಪ್ರಭಾವ ಬೀರಲಾರಂಭಿಸಿತು. ಇಲ್ಲಿ ಅವರು ದಿನವೂ ಬಂದು ಹೋಗುವುದು ಮಾಡುತ್ತಿದ್ದರಿಂದ ಚಿಕ್ಕಂದಿನಿಂದಲೇ ಕಲಾಭ್ಯಾಸವಾಗತೊಡಗಿತು.

೧೯೦೬ರ ಹೊತ್ತಿಗೆ ಮದರಾಸಿನ ಕಲಾಪರೀಕ್ಷೆಯೊಂದರಲ್ಲಿ ಉತ್ತೀರ್ಣರಾದರು. ಇದಕ್ಕೆ ಮುಂಚೆಯೇ ಅಲ್ಲಿಯ ಮುಖ್ಯಸ್ಥರಾಗಿದ್ದ ಇ.ಬಿ. ಹ್ಯಾವೆಲ್‌ರ ಬಗ್ಗೆ ಗೌರವ ಮೂಡಿ ಅವರ ಬಳಿ ಕಲಿಯಬೇಕೆಂಬ ಬಯಕೆ ಹುಟ್ಟಿತು. ಆದರೆ ೧೮೯೬ರಲ್ಲಿಯೇ ಇವರು ಮದರಾಸಿನಿಂದ ಕಲ್ಕತ್ತಾಗೆ ವರ್ಗಾವಣೆಯಾದರು. ಆ ವಯಸ್ಸಿಗಾಗಲೇ ರಾಜ ರವಿವರ್ಮ, ಇ.ಬಿ. ಹ್ಯಾವೆಲ್‌ರ ಹಾಗೂ ಮೈಸೂರು ಆಸ್ಥಾನ ಕಲಾವಿದರ ಪ್ರಭಾವ ವೆಂಕಟಪ್ಪನವರ ಮೇಲಾಗತೊಡಗಿತು. ವಿಪರ್ಯಾಸವೆಂದರೆ ವೆಂಕಟಪ್ಪನವರ ಮೇಲೆ ಪ್ರಭಾವ




ಬೀರಿದ ಇ.ಬಿ. ಹ್ಯಾವೆಲ್‌ರವರು ೧೯೦೬ ರಲ್ಲಿಯೇ ಅನಾರೋಗ್ಯದ ಕಾರಣದಿಂದ ತಮ್ಮ ತಾಯಿನಾಡಾದ ಇಂಗ್ಲೆಂಡಿಗೆ ಹೋದವರು ಮತ್ತೆ ಬರಲೇ ಇಲ್ಲ.

ಮುಂದೆ ಮೈಸೂರು ಸಂಸ್ಥಾನದ ದಿವಾನರಾಗಿದ್ದ ಪೂರ್ಣಯ್ಯ ಹಾಗೂ ಅವರ ವಂಶದವರಾದ ಕೃಷ್ಣಮೂರ್ತಿಯವರು ವೆಂಕಟಪ್ಪನವರಲ್ಲಿ ಅರಳಿದ್ದ ಕಲಾಮಲ್ಲಿಗೆಗೆ ನೀರೆರೆದು ಬೆಳೆಸಿದರು. ಮದರಾಸಿನಲ್ಲಿ ತರಬೇತಿ ಪಡೆದಿದ್ದ ವೆಂಕಟಪ್ಪನವರು ಅರಮನೆಯ ದುರಸ್ತಿ ಕಾರ್ಯದಲ್ಲಿ ತನ್ನ ತಂದೆಗೆ ಕಲಾ ಕಾರ್ಯದಲ್ಲಿ ನೆರವಾಗುತ್ತಿದ್ದರು. ಅಲ್ಲಯ ಅಧಿಕಾರಿಗಳು ವೆಂಕಟಪ್ಪನ ಕೆಲಸವನ್ನು ಮೆಚ್ಚಿಕೊಂಡು ಮಹಾರಾಜರ ಗಮನಕ್ಕೆ ತಂದರು. ಮಹಾರಾಜರ ಆಪ್ತಕಾರ್ಯದರ್ಶಿಯಾಗಿದ್ದ ಆರ್.ಎಚ್. ಕ್ಯಾಂಪೆಬೆಲ್‌ರು ವೆಂಕಟಪ್ಪನರ ಕಲೆಯನ್ನು ಮೆಚ್ಚಿಕೊಂಡು ಹೆಚ್ಚಿನ ಶಿಕ್ಷಣಕ್ಕೆ ಇವರನ್ನು ಕಲ್ಕತ್ತಾಗೆ ಕಳಿಸಬೇಕೆಂದು ಮಹಾರಾಜರಿಗೆ ಸಲಹೆ ಮಾಡಿದರು. ಇದಕ್ಕೆ ಪುಷ್ಟಿ ನೀಡುವಂತೆ ಮಹಾರಾಜರ ಬಂಧುಗಳಾದಂತಹ ಕಿಲ್ಲೆ ದಫ್ತರ್ ಭಕ್ಷಿಯವರೂ ಸಹ ವೆಂಕಟಪ್ಪನವರ ಕುರಿತು ಚರ್ಚಿಸಿ ರಾಜರ ಮನ ಒಲಿಸಲು ಪ್ರಯತ್ನಿಸಿದರು.

ಹೀಗೆ ೧೯೦೯ ರಲ್ಲಿ ಮೈಸೂರು ಸಂಸ್ಥಾನದಿಂದ ವಿದ್ಯಾರ್ಥಿ ವೇತನವನ್ನು ಪಡೆದುಕೊಂಡು ಕಲ್ಕತ್ತಾ ಸರಕಾರೀ ಕಲಾಶಾಲೆಯನ್ನು ಸೇರಿದರು. ಇದರ ಹಿಂದೆ ಹಲವಾರು ಗಣ್ಯರ ಫಲವಿದೆ. ಹೀಗೆ ಬಂದ ವೆಂಕಟಪ್ಪನವರಿಗೆ ದುಃಖದ ಅಚ್ಚರಿ ಕಾದಿತ್ತು. ಇ.ಬಿ. ಹ್ಯಾವೆಲ್‌ರವರು ಇಲ್ಲವೆಂಬ ಸುದ್ದಿ. ಇವರ ಧೋರಣೆಗಳನ್ನು ಕೇಳಿಕೊಂಡೆ ಅವರ ಅಭಿಮಾನಯಾಗಿದ್ದ ವೆಂಕಟಪ್ಪನವರಿಗೆ ಇದು ದುಃಖಕರ ಸಂಗತಿ. ಇಲ್ಲಿ ಅವರಿಗೆ ಕಲಾಗುರುಗಳಾಗಿ ಅವನೀಂದ್ರನಾಥ ಠಾಗೂರರು ದೊರಕಿದರು. ಇವರಿಂದ ಹಲವಾರು ವಿಷಯಗಳನ್ನು ತಿಳಿಯಲಾರಂಭಿಸಿದರು. ನಂತರದ ದಿನಗಳಲ್ಲಿ ಅವನೀಂದ್ರರೂ ಸಹ ಅಚ್ಚು ಮೆಚ್ಚಾಗತೊಡಗಿದರು. ಏಕೆಂದರೆ ಅವನೀಂದ್ರರು ಹಾಗೂ ಹ್ಯಾವೆಲ್‌ರ ಧೋರಣೆಗಳು ಒಂದೇ ತೆರನಾದವುಗಳು.


ದಿನಗಳು ಕಳೆದಂತೆ ವೆಂಕಟಪ್ಪನವರ ವರ್ತನೆ ಹಾಗೂ ಅವರಿಗಿದ್ದ ಕಲಾ ಆಸಕ್ತಿಯನ್ನು ಕಂಡ ಅವನೀಂದ್ರರಿಗೆ ವೆಂಕಟಪ್ಪನ ಮೇಲೆ ಮಮಕಾರವನ್ನು ಮೂಡಿಸಿತು. ವೆಂಕಟಪ್ಪನವರೂ ಸಹ ಅವನೀಂದ್ರರ ಮಾತುಗಳನ್ನು ಶಿರಸಾವಹಿಸಿ ಪಾಲಿಸುತ್ತಿದ್ದರು. ಇಲ್ಲಿಂದ ವೆಂಕಟಪ್ಪನವರಿಗೆ ಕಲೆಯಲ್ಲಿ ನಿಜವಾದ ಪ್ರಭಾವ ಬೀರಲಾರಂಭಿಸಿತು. ಅವನೀಂದ್ರರ ಪ್ರಭಾವ ವೆಂಕಟಪ್ಪನವರ ಮೇಲೆ ಬಹಳಷ್ಟು ಬೀಳಲಾರಂಭಿಸಿತು. ಎಷ್ಟರ ಮಟ್ಟಿಗೆ ಇವರ ಪ್ರಭಾವ ಬೀರಿತ್ತೆಂದರೆ ಶಾಲೆ ಮುಗಿದ ಮೇಲೂ ಸಹ ಸಂಜೆಯ ವೇಳೆ ವೆಂಕಟಪ್ಪನವರು ಅವನೀಂದ್ರರ ಮನೆಗೆ ಹೋಗಿ ದೇಸಿ ಕಲೆಯಾದ ಸಾಂಪ್ರದಾಯಿಕ ಕಿರುರೂಪ



ಚಿತ್ರಗಳನ್ನು ಮಾಡಲು ತೊಡಗುತ್ತಿದ್ದರು. ದಿನವೂ "ಜೋಡಾಶಂಖೋ"ದಲ್ಲಿನ ಅವನೀಂದ್ರರ ಮನೆಗೆ ಬರುತ್ತಿದ್ದರು. ಇಲ್ಲಿ ಭಾರತೀಯ ಸಾಂಪ್ರದಾಯಿಕ ಕಲೆಯ ಮತ್ತೊಂದು ತರಗತಿಯೇ ಇಲ್ಲಿ ನಡೆಯುತ್ತಿರುತ್ತದೆ. ಇಲ್ಲಿ ಅವನೀಂದ್ರನಾಥ ಠ್ಯಾಗೂರ್, ಗಗನೇಂದ್ರನಾಥ ಠ್ಯಾಗೂರ್, ಸಮರೇಂದ್ರನಾಥ ಠ್ಯಾಗೂರ್, ನಂದಲಾಲ್ ಬೋಸ್ ಹೀಗೆ ಹಲವಾರು ಜನ ಕಲಾವಿದರು ಭಾರತೀಯ ಸಾಂಪ್ರದಾಯಕ ಕಲೆಯ ಕುರಿತು ಚರ್ಚೆ ಮಾಡುವುದು ಹಾಗೂ ಕಲಾಕೃತಿ ರಚಿಸುವುದು ಹೀಗೆ ಪ್ರತಿದಿನ ಕಲಾ ಚಟುವಟಿಕಯೇ ನಡೆಯುತ್ತಿತ್ತು. ನಿಜವಾದ ಪ್ರಭಾವ ವೆಂಕಟಪ್ಪನವರಿಗೆ ಇಲ್ಲಿಯೇ ಆಯಿತು.

ಇದಾದ ಬಳಕೆ ಇಂಗ್ಲೇಂಡಿನ ಲೇಡಿ ಹೆರಿಂಗ್ ಹ್ಯಾಮ್ ಎಂಬ ಶ್ರೀಮಂತ ಮಹಿಳೆ ಅವಳ ಗೆಳತಿಯಾದ ನಿವೇದಿತಳನ್ನು ಭೇಟಿಯಾಗಿ ಅಜಂತಾದ ಭಿತ್ತಿಚಿತ್ರಗಳನ್ನು ಕರುಡು ಮಾಡುವ ವಿಷಯದ ಕುರಿತು ಚರ್ಚಿಸಿದಳು. ಆಗ ನಿವೇದಿತ ತನ್ನ ಸಹೋದರನಾದ ಅವನೀಂದ್ರರ ಪರಿಚಯ ಮಾಡಿಸಿದರು. ಆಗ ಅವನೀಂದ್ರರ ಬಳಿ ತನ್ನ ಮನದ ಬಯಕೆಯನ್ನು ಬಿಚ್ಚಿಟ್ಟಳು. ಅದಕ್ಕೆ ಅವನೀಂದ್ರರು ಒಪ್ಪಿ ನಂದಲಾಲ್‌ಬೋಸ್ ಹಾಗೂ ವೆಂಕಟಪ್ಪನವರನ್ನು ಆಯ್ಕೆ ಮಾಡಿ ಹೆರಿಂಗ್‌ಹ್ಯಾಮ್‌ರೊಂದಿಗೆ ಅಜಂತಾ ಗುಹೆಗಳಿಗೆ ಕಳುಹಿಸಿಕೊಟ್ಟರು. ನಂದಲಾಲ ಬೋಸರು ತರಗತಿಯಲ್ಲಿ ಹಾಗೂ ವಯಸ್ಸಿನಲ್ಲಿ ವೆಂಕಟಪ್ಪನವರಿಗಿಂತ ಹಿರಿಯರು. ಆದ್ದರಿಂದ ವೆಂಕಟಪ್ಪನವರು ನಂದಲಾಲರ ಚಿತ್ರರಚನೆಯನ್ನು ಗಮನಿಸುತ್ತಲೇ ಇರುತ್ತಿದ್ದರು. ಇಲ್ಲಿ ನಂದಲಾಲರ ಹಾಗೂ ಅಜಂತಾ ಗುಹೆಯಲ್ಲಿಯ ಭಿತ್ತಿಚಿತ್ರಗಳ ಪ್ರಭಾವ ಹೆಚ್ಚಾಗಿ ವೆಂಕಟಪ್ಪನವರ ಮೇಲಾಯಿತು.

ಮುಂದುವರೆದಂತೆ ದೇಶಿ ಕಲೆಯ ಪ್ರಭಾವ ದೇಶದಲ್ಲೆಲ್ಲಾ ಪ್ರಬಲ ಆಂದೋಲನವನ್ನು ಮಾಡತೊಡಗಿತು. ಅವನೀಂದ್ರರ ಆ ಗುಂಪಲ್ಲಿ ವೆಂಕಟಪ್ಪನವರೂ ಇದ್ದರು. ಜೋಡಾ ಶಂಖೋದ ಅರಮನೆಯಲ್ಲಿ ಇವರೂ ಸೇರುತ್ತಿದ್ದರು. ಇಲ್ಲಿ ಕ್ಷಿತೀಂದ್ರನಾಥ ಮಝುಮ್‌ದಾರ್‌ರವರ ಕಲೆಯ ಪ್ರಭಾವವೂ ಸಹ ವೆಂಕಟಪ್ಪನರ ಮೇಲೆ ಹಾಗೂ ಅವರ ಕಲೆಯ ಮೇಲೆ ಪ್ರಭಾವ ಬೀರಲಾರಂಭಿಸಿತು. ಇದಲ್ಲದೆ ಸುರೇಂದ್ರನಾಥ ಠ್ಯಾಗೂರರ ಅಜಂತಾ ಮಾದರಿಯ ಭಿತ್ತಿ ಚಿತ್ರಗಳೂ ಸಹ ವೆಂಕಟಪ್ಪನವರ ಮೇಲೆ ಪ್ರಭಾವ ಬೀರಲಾರಂಭಿಸಿ, ಒಟ್ಟಾರೆಯಾಗಿ ಜೋಡಾ ಶಂಖೋದಲ್ಲಿ ಸೇರುತ್ತಿದ್ದ ಎಲ್ಲಾ ಕಲಾದರ ನಿಲುವೂ ಸಹ ಒಂದೇ ಆಗಿತ್ತು. ಪಾಶ್ಚಾತ್ಯರು ಭಾರತೀಯ ಸಾಂಪ್ರದಾಯಿಕ ಕಲೆಯನ್ನು ತುಳಿಯತ್ತಿದ್ದಾರೆ. ಇದನ್ನು ಉಳಿಸುವ ಸಲುವಾಗಿ ನಾವು ಇದರ ಕುರಿತು ಕಲಾಕೃತಿಯನ್ನು ರಚಿಸಿ ಪ್ರಪಂಚಕ್ಕೆ ಭಾರತೀಯ ಸಾಂಪ್ರದಾಯಿಕ ಕಲೆಯ ಮಹತ್ವವನ್ನು ತಿಳಿಸಬೇಕೆಂಬುದಾಗಿತ್ತು.




ಈ ನಿಟ್ಟಿನಲ್ಲಿ ವೆಂಕಟಪ್ಪನವರೂ ಸಹ ಸ್ವದೇಶಿ ಸಾಂಪ್ರದಾಯಿಕ ಕಲೆಯ ಆಂದೋಲನದಲ್ಲಿ ತಾವೂ ಕೂಡ ಕೈಜೋಡಿಸಿದರು. ಇದರ ಪ್ರಭಾವದಿಂದಲೋ ಏನೋ ಇವರು ತೈಲವರ್ಣವನ್ನು ಬಿಟ್ಟು ಜಲವರ್ಣ ಕಲಾಕೃತಿಯನ್ನು ಹೆಚ್ಚು ಹೆಚ್ಚು ರಚಿಸಿದರು. ಒಟ್ಟಾರೆಯಾಗಿ ವೆಂಕಟಪ್ಪನವರಿಗೆ ಬಾಲ್ಯದಿಂದಲೇ ಕಲೆಯ ಪ್ರಭಾವ ಬೀರುತ್ತಾ ಬಂದಿತು. ಇವರು ಹುಟ್ಟಿದ ಮನೆಯ ಪರಿಸರ ಹಾಗೂ ವೃತ್ತಿ ಎರಡೂ ಸಹ ಚಿತ್ರಕಲೆ ಆಗಿತ್ತು. ಇದರಿಂದ ಪ್ರಭಾವಿತರಾಗಿ ಮದರಾಸ್ ಹಾಗೂ ಕಲ್ಕತ್ತಾಗಳಲ್ಲಿ ಶಿಕ್ಷಣ ಮುಗಿಸಿ ಅಲ್ಲಯೂ ಸಹ ಹಲವಾರು ಕಲಾವಿದರಿಂದ ಪ್ರಭಾವಿತರಾದರು. ಮುಖ್ಯವಾಗಿ ಇವರ ನೆಚ್ಚಿನ ಗುರುವಾಗಿದ್ದ ಅವನೀಂದ್ರರ ಪ್ರಭಾವವು ಅವನೀಂದ್ರರ ಬದುಕಿನ ಮೇಲೆ ಹಾಗೂ ಕಲೆಯ ಮೇಲಾಯಿತು.

ಪ್ರೇರಣೆ

ವೆಂಕಟಪ್ಪನವರ ಬಾಲ್ಯದ ದಿನಗಳಿಂದಲೇ ಕಲೆ ಜೀವನವನ್ನು ಅನುಭವಿಸಿದವು. ಇವರ ವಂಶ ಮೂಲ ವೃತ್ತಿ ಹಾಗೂ ಪ್ರವೃತ್ತಿ ಚಿತ್ರಕಲೆಯೇ ಆಗಿತ್ತು. ಇವರ ಬಾಲ್ಯದಲ್ಲಿದ್ದಾಗ ಅರಮನೆಗೆ ಬೆಂಕಿ ಬಿದ್ದು ಮತ್ತೊಂದು ಅರಮನೆಯನ್ನು ಕಟ್ಟುವ ಸಂದರ್ಭದಲ್ಲಿ ಇವರ ತಂದೆಯಾದ ಕೃಷ್ಣಪ್ಪರೂ ಸಹ ಅರಮನೆಯಲ್ಲಿ ಚಿತ್ರಗಾರ ಕೆಲಸವನ್ನು ಮಾಡುತ್ತಿದ್ದರು. ಮೊದಲಿಗೆ ತನ್ನ ತಂದೆಯಿಂದ ಪ್ರಭಾವಿತರಾದ ಇವರು ಕಲಾವಲಯದಲ್ಲಿ ಈ ಮಟ್ಟದ ಹೆಸರು ಮಾಡಲು ಕಾರಣ ಹಾಗೂ ಪ್ರೇರಣಾ ಶಕ್ತಿಯಾದವರು ಇವರ ತಂದೆ ಕೃಷ್ಣಪ್ಪನವರು.


ಬಾಲ್ಯದಲ್ಲಿ ತನ್ನ ತಂದೆಯ ಬಳಿ ಕಲಾಶಿಕ್ಷಣವನ್ನು ಪಡೆದು ಹಾಗೂ ಅರಮನೆಯ ದುರಸ್ತಿ ಕಾರ್ಯದ ವೇಳೆ ಅಲ್ಲಿಗೆ ಬಾಲಕ ವೆಂಕಟಪ್ಪನವರು ತೆರಳುತ್ತಿದ್ದರು. ಇಲ್ಲಿ ದೇಶದ ನಾನಾ ಕಡೆಗಳಿಂದ ಕಲಾವಿದರನ್ನು ಕಂಡ ವೆಂಕಟಪ್ಪನವರಿಗೆ ಒಂದೇ ಸ್ಥಳದಲ್ಲಿ ಹಲವು ಶೈಲಿಯ ಕಲೆಗಳ ಅನುಭವವಾಯಿತು. ಆಗ ಅಲ್ಲಿ ಕಲಾವಿದರಿಗೆ ಸಿಗುತ್ತಿದ್ದ ಗೌರವ, ಮರ್ಯಾದೆಗಳನ್ನು ಕಂಡು ಪ್ರೇರೇಪಿತರಾದರು. ತಾನೂ ಸಹ ಈ ಕ್ಷೇತ್ರದಲ್ಲಿ ದೊಡ್ಡ ಕಲಾವಿದನಾಗಬೇಕೆಂಬ ಬಯಕೆ ವೆಂಕಟಪ್ಪನವರಿಗೆ ಅಂದಿನಿಂದಲೇ ಮೂಡತೊಡಗಿತು.

ಮೈಸೂರು ಅರಮನೆಯ ದುರಸ್ತಿ ಕಾರ್ಯದಲ್ಲಿ ಚಿತ್ರಕಲೆಯ ಸಂಪೂರ್ಣ ಜವಾಬ್ದಾರಿಯನ್ನು ರಾಜ ರವಿವರ್ಮರಿಗೆ ನೀಡಲಾಗಿತ್ತು. ರಾಜ ರವಿವರ್ಮರು ತಮ್ಮ ಜೊತೆಗೆ ಹಲವಾರು ಜನ ಕಲಾವಿದರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅರಮನೆಯ ಚಿತ್ರ ರಚನಾ ಕಾರ್ಯದಲ್ಲಿ ತೊಡಗಿದರು. ಆ ಗುಂಪಿನಲ್ಲಿ ವೆಂಕಟಪ್ಪನವರ ತಂದೆ ಕೃಷ್ಣಪ್ಪನವರೂ ಸಹ ಇದ್ದರು. ಆ ಸಂದರ್ಭದಲ್ಲಿ ಬಾಲಕ



ವೆಂಕಟಪ್ಪನವರೂ ಸಹ ಅರಮನೆಗೆ ಹೋಗಿ ಬರುತ್ತಿದ್ದರು. ಅಲ್ಲಿ ರವಿವರ್ಮರನ್ನು ಕಂಡು ವೆಂಕಟಪ್ಪನವರು ಅವರ ಪ್ರಭಾವಕ್ಕೆ ಒಳಗಾಗಿ ಅವರಿಂದಲೂ ಪ್ರೇರಣೆ ಹೊಂದಿದರು. ಮುಂದುವರೆದಂತೆ ಇವರು ೧೯೦೯ ರಲ್ಲಿ ಕಲ್ಕತ್ತಾಗೆ ಕಲಾಶಾಲೆಗೆ ಸೇರಿದರು. ಅಲ್ಲಿ ಹಲವಾರು ಮೇರು ಪ್ರತಿಭೆಗಳನ್ನು ಕಂಡು ಬೆರಗಾದರು. ವೆಂಕಟಪ್ಪನವರಿಗೆ ಕಲ್ಕತ್ತಾದಲ್ಲಿ ಕಲಾ ಪ್ರಭಾವ, ಪ್ರೇರಣೆ ಹೆಚ್ಚಾಗಿದ್ದು ೧೯೦೯ರಲ್ಲಿ. ಕಲ್ಕತ್ತಾಕ್ಕೆ ಬಂದ ವೆಂಕಟಪ್ಪನವರಿಗೆ ಅವನೀಂದ್ರನಾಥರು ಉಪನ್ಯಾಸಕರಾಗಿ ದೊರಕಿದರು. ಇವರು, ಇವರ ಕಲಾ ಚಿಂತನೆ, ಧೋರಣೆಗಳು ವೆಂಕಟಪ್ಪನವರಿಗಿದ್ದ ಕಲಾ ಒಲವನ್ನು ಗಟ್ಟಿಯಾಗಿ ಉಳಿಸಲಾರಂಭಿಸಿತು. ಪ್ರಾಥಮಿಕ ಹಂತದಲ್ಲಿಯೇ ಕಲಾಶಾಲೆಯಲ್ಲಿ ವೆಂಕಟಪ್ಪನವರು ತೋರುತ್ತಿದ್ದ ಕಲಾಸಕ್ತಿಯನ್ನು ಕಂಡು ಅವನೀಂದ್ರರಿಗೆ ವೆಂಕಟಪ್ಪನವರ ಮೇಲೆ ಪ್ರೀತಿ ಒಡಮೂಡಿತು. ವೆಂಕಟಪ್ಪನವರಿಗೆ ಇ.ಬಿ. ಹ್ಯಾವೆಲ್‌ರ ಪ್ರಭಾವ ಮದರಾಸಿನ ಕಲಾಶಾಲೆಯಲ್ಲಿ ಓದುವಾಗಲೇ ಇದ್ದಿತು. ಆದರೆ ಇವರು ಮದರಾಸಿಗೆ ಹೋದ ಸಂದರ್ಭದಲ್ಲಿ ಅವರು ಅಲ್ಲಿಂದ ಕಲ್ಕತ್ತಾಗೆ ಹೋಗಿದ್ದರು.

೧೯೦೯ರಲ್ಲಿ ಕಲ್ಕತ್ತಾಗೆ ವೆಂಕಟಪ್ಪನವರು ಬರುವ ವೇಳೆಗೆ ಇಲ್ಲಿಂದ ಹ್ಯಾವೆಲ್‌ರವರು ತಮ್ಮ ತಾಯಿನಾಡಿಗೆ ತೆರಳಿದ್ದರು. ಇವರಿಂದ ಪ್ರೇರಣೆಗೆ ಒಳಗಾಗಿದ್ದ ವೆಂಕಟಪ್ಪನವರಿಗೆ ಹ್ಯಾವೆಲ್‌ರವರ ಧೋರಣೆ, ಚಿಂತನೆ, ಕಲಾನಿಲುವುಗಳು ಕಂಡಿದ್ದು ಹ್ಯಾವೆಲ್‌ರ ಆಪ್ತ ಗೆಳೆಯರಾಗಿದ್ದ ಅವನೀಂದ್ರರಲ್ಲಿ. ಇ.ಬಿ. ಹ್ಯಾವೆಲ್, ಆನಂದ ಕುಮಾರಸ್ವಾಮಿ, ಅವನೀಂದ್ರನಾಥ ಠ್ಯಾಗೂರ್ ಇವರೆಲ್ಲರೂ ಸೇರಿ ಸ್ವದೇಶಿ ಕಲಾ ಆಂದೋಲನವನ್ನು ಆರಂಭಿಸಿದರು. ಇದರ ಸಲುವಾಗಿ ಹಲವಾರು ಬೆಂಗಾಲಿ ಕಲಾವಿದರು ಇದರಲ್ಲಿ ಪಾಲ್ಗೊಂಡರು. ನಂತರದಲ್ಲಿ ಬಂದಂತಹ ವೆಂಕಟಪ್ಪನವರೂ ಸಹ ಈ ಆಂದೋಲನದಲ್ಲಿ ಒಬ್ಬರಾದರು. ಇದರಿಂದ ಪ್ರೇರಣೆಗೊಳಗಾದ ವೆಂಕಟಪ್ಪನವರು ಸಹಜವಾಗಿಯೇ ಸ್ವದೇಶಿ ಕಲೆಗೆ ಪ್ರಭಾವಿತರಾದರು. ಇದಾದ ಬಳಿಕ ಇಂಗ್ಲೇಂಡಿನ ಲೇಡಿ ಹೆರಿಂಗ್‌ಹ್ಯಾಮ್ ಎಂಬ ಇಂಗ್ಲೇಂಡಿನ ಮಹಿಳೆ ಅಜಂತಾದಲ್ಲಿನ ಭಿತ್ತಿಚಿತ್ರಗಳ ಕರಡು ಮಾಡಿಸುವ ಕ್ರಿಯೆಯಲ್ಲಿ ತೊಡಗಿದಳು. ಇದಕ್ಕಾಗಿ ಕಲಾವಿದರ ಸಹಾಯವನ್ನು ಅವನೀಂದ್ರರ ಬಳಿ ಬೇಡಿದಾಗ ಅವನೀಂದ್ರರು ತಮ್ಮ ನೆಚ್ಚಿನ ಶಿಷ್ಯರಾದ ನಂದಲಾಲ್‌ಬೋಸ್ ಹಾಗೂ ವೆಂಕಟಪ್ಪನವರನ್ನು ಆಯ್ಕೆ ಮಾಡಿ ಅಜಂತಾಗೆ ಕಳುಹಿಸಿಕೊಟ್ಟರು. ಅಜಂತದಲ್ಲಿನ ಭಿತ್ತಿಚಿತ್ರಗಳನ್ನು ಕಂಡ ವೆಂಕಟಪ್ಪನವರಿಗೆ ಭಾರತೀಯ ಕಲೆಯ ಶ್ರೀಮಂತಿಕೆಯ ಅರಿವು ಮೂಡಿತು. ಇಲ್ಲಿನ ವಸ್ತು ವಿಷಯ, ಸಂಯೋಜನೆ, ವರ್ಣಗಾರಿಕೆ, ರೇಖಾ ವಿನ್ಯಾಸ ಇದೆಲ್ಲವೂ ವೆಂಕಟಪ್ಪನವರ ಕಲೆಯ ಮೇಲೆ ಹಾಗೂ ಕಲಾ ಬದುಕಿನ ಮೇಲೆ ಪ್ರೇರಣೆಯಾದವು.




ತಂತ್ರ ಮತ್ತು ಶೈಲಿ

ವೆಂಕಟಪ್ಪನವರು ಭಾರತೀಯ ಕಲಾವಲಯದಲ್ಲಿಯೇ ಮೇರು ಪ್ರತಿಭೆ. ಇವರು ಜಲವರ್ಣದಲ್ಲಿ ಸಿದ್ಧ ಹಸ್ತರು. ಇವರು ಮಾಡುತ್ತಿದ್ದ 'ವಾಷಿಂಗ್ ಮೆತೆಡ್' ಜಲವರ್ಣದಲ್ಲಿ ಹೊಸ ಆಯಾಮವನ್ನೇ ಸೃಷ್ಟಿಸಿತು. ಇವರು ಜಲವರ್ಣ ಕಲಾಕೃತಿಗಳಲ್ಲಿ ತಮ್ಮದೇ ಆದಂತಹ ಛಾಪು ಮೂಡಿಸಿದರು. ಇವರ ವರ್ಣ ಮಿಶ್ರಣ ಹಾಗೂ ವರ್ಣಲೇಪನ ಗತಿಯನ್ನು ತಿಳಿಯುವುದು ಅಸಾಧ್ಯವಾದ ಮಾತು. ವರ್ಣಗಳಲ್ಲಿ ತೋರಿಸುತ್ತಿದ್ದ ಯಥಾದರ್ಶನದ ವಿಸ್ತಾರ ಹಾಗೂ ವಿಸ್ತೀರ್ಣ ನೋಡುಗರಿಗೆ ಭ್ರಮೆಯನ್ನು ಉಂಟು ಮಾಡುತ್ತಿತ್ತು.

ಇವರು ಬಾಲ್ಯದಲ್ಲಿ ಹಲವಾರು ಶೈಲಿಯ ಕಲೆಗಳನ್ನು ಕಂಡವರು. ಆ ವಯಸ್ಸಿನಲ್ಲಿ ವೆಂಕಟಪ್ಪನವರಿಗೆ ಯಾವ ಶೈಲಿಯನ್ನು ಅಳವಡಿಸಿಕೊಳ್ಳಬೇಕೆಂಬ ಗೊಂದಲ ಕಾಡತೊಡಗಿತು. ಕಲ್ಕತ್ತಾ ಕಲಾಶಾಲೆಗೆ ಸೇರಿದ ಬಳಿಕವೂ ಈ ಗೊಂದಲ ಮುಂದುವರೆಯಿತು. ಏಕೆಂದರೆ, ಕಲಾಶಾಲೆಯಲ್ಲಿ ಅಕ್ಯಾಡಮಿಕ್ ಕೃತಿಗಳಾದ ಭಾವಚಿತ್ರ, ವ್ಯಕ್ತಿ ಚಿತ್ರ, ವಸ್ತು ಚಿತ್ರ ಹಾಗೂ ನಿಸರ್ಗ ಚಿತ್ರಣಗಳನ್ನು ಕಲಿತರೆ, ಬಾಹ್ಯವಾಗಿ ಅಂದರೆ ಅವನೀಂದ್ರರ ಮನೆಯಲ್ಲಿ ಸಂಜೆಯ ವೇಳೆ ಸ್ವದೇಶಿ ಕಲೆಯ ತರಬೇತಿ ಪಡಯುತ್ತಿದ್ದರು. ಈ ಎರಡರಲ್ಲಿ ಯಾವ ಶೈಲಿಯನ್ನು ಅನುಸರಿಸಬೇಕೆಂದು ವೆಂಕಟಪ್ಪನವರಲ್ಲಿ ಗೊಂದಲ ಮೂಡಲಾರಂಭಿಸಿತು. ಅಜಂತಾದಲ್ಲಿ ಭಿತ್ತಿ ಚಿತ್ರಗಳನ್ನು ರಚನೆ ಮಾಡಲು ಹೋದ ಸಂದರ್ಭದಲ್ಲಿ ಅವರಿಗೆ ಭಾರತೀಯ ಕಲೆಯ ಪ್ರಭಾವ ಹೆಚ್ಚಾಗಿ ಬೀರಲಾರಂಭಿಸಿತು. ಆದುದರಿಂದ ಇವರ ಕಲಾಕೃತಿಗಳಲ್ಲಿ ಭಾರತೀಯ ಸಾಂಪ್ರದಾಯಿಕ ಶೈಲಿಯನ್ನು ನಾವು ಕಾಣಬಹುದು.

ಇದಲ್ಲದೆ ಅವನೀಂದ್ರರ ಮಾರ್ಗದರ್ಶನ ಹಾಗೂ ನಂದಲಾಲರ ಅನುಭವಗಳು ವೆಂಕಟಪ್ಪನವರನ್ನು ಭಾರತೀಯ ಕಲೆಯ ಕಡೆ ವಾಲುವಂತೆ ಮಾಡಿತು. ವೆಂಕಟಪ್ಪನವರ ನಿಸರ್ಗ ಚಿತ್ರ ಹಾಗೂ ಭಾವಚಿತ್ರಗಳನ್ನು ಹೊರತುಪಡಿಸಿ ನೋಡಿದಾಗ ಸಂಯೋಜನೆಯಲ್ಲಿ ಭಾರತೀಯ ಶೈಲಿ, ತಂತ್ರಗಳನ್ನು ಬಳಸಿರುವುದು ನೇರವಾಗಿ ಕಾಣಸಿಗುತ್ತವೆ. ಇವರು ಜಲವರ್ಣದ ಕಲಾಕೃತಿಗಳನ್ನು ಮಾಡುತ್ತಿದ್ದ ಕಾರಣದಿಂದ ಸಂಯೋಜನೆಯನ್ನು ಕಿರು ರೂಪದಲ್ಲಿಯೇ ಮಾಡುತ್ತಿದ್ದರು. ೧೫" x ೧೮" ಇಂಚುಗಳ ಅಳತೆಯಲ್ಲಿ ಹಲವಾರು ಸಂಯೋಜನೆಗಳನ್ನು ಇವರು ಮಾಡಿದ್ದಾರೆ.

ಇವರು ತಮ್ಮ ಅಭ್ಯಾಸ ಹಂತದಲ್ಲಿ ರಾಮಾಯಣದ ವಿಷಯವನ್ನಾಧರಿಸಿ ಹಲವಾರು ಕಲಾಕೃತಿಗಳನ್ನು ಇವರು ಮಾಡಿದ್ದು, ಇವರು ನಾವ್ರೆ ಕಾಗದದ ಮೇಲೆ ಮಾಡುತಿದ್ದ ಕಾರಣ ಮೊದಲಿಗೆ ತಮಗೆ ಬೇಕಾದಂತೆ ಕಾಗದದ ಮೇಲೆ ಬಣ್ಣಗಳನ್ನು ತಿಳಿಯಾಗಿ ಲೇಪಿಸಿಕೊಳ್ಳುತ್ತಿದ್ದರು. ಆನಂತರ ಮೊದಲೇ




ಕರಡು ಮಾಡಿಕೊಂಡಿದ್ದ ವಿಷಯದ ರೇಖಾವಿನ್ಯಾಸವನ್ನು ವರ್ಣ ಲೇಪಿಸಿದ ಕಾಗದದ ಮೇಲೆ ಅಚ್ಚು ಹಾಕುತ್ತಿದ್ದರು. ಸಂಪೂರ್ಣವಾಗಿ ಅಚ್ಚಾದ ಮೇಲೆ ವರ್ಣಲೇಪಿಸಿದ ಕಾಗದದ ಮೇಲೆ ವಿಷಯಕ್ಕೆ ತಕ್ಕಂತೆ ವರ್ಣ ವಿನ್ಯಾಸಗೊಳಿಸಿ ಬಾಹ್ಯ ರೇಖೆಯಿಂದ ಆ ಕಲಾಕೃತಿಯನ್ನು ಸಂಪೂರ್ಣವಾಗಿ ಮುಗಿಸುತ್ತಿದ್ದರು. ಇನ್ನು ಜಲವರ್ಣದ ನಿಸರ್ಗ ಚಿತ್ರಗಳಲ್ಲಿಯೂ ಇದೇ ರೀತಿಯ ತಂತ್ರವನ್ನು ಉಪಯೋಗಿಸುತ್ತಿದ್ದರು. ಆದರೆ ಶೈಲಿ ಮಾತ್ರ ಪಾಶ್ಚಾತ್ಯರದಾಗಿತ್ತು. ನಿಸರ್ಗ ಚಿತ್ರಣ ಇವರ ನೆಚ್ಚಿನ ವಿಷಯ. ಇವರು ಮಾಡಿರುವ ಜಲವರ್ಣ ನಿಸರ್ಗ ಚಿತ್ರಣವು ಯಾವ ತೈಲವರ್ಣ ನಿಸರ್ಗ ಚಿತ್ರಕ್ಕಿಂತ ಕಡಿಮೆ ಇರಲಿಲ್ಲ. ವಾಷಿಂಗ್ ಮೆತೆಡ್ ತಂತ್ರದ ಜಲವರ್ಣದ ಕಲಾಕೃತಿಗಳು ಭಾರತೀಯ ಹಾಗೂ ಪಾಶ್ಚಾತ್ಯ ಎರಡು ಶೈಲಿಯಲ್ಲಿಯೂ ಬಳಸುತ್ತಿದ್ದರು.

ಶಿಲ್ಪಗಳ ವಿಚಾರಕ್ಕೆ ಬಂದರೆ ಇವರು ಪ್ಲಾಸ್ಟರ್ ಆಫ್ ಪ್ಯಾರಿಸ್ ಮಾಧ್ಯಮದಲ್ಲಿ ಕಲಾಕೃತಿಗಳನ್ನು ರಚಿಸಿದ್ದಾರೆ. ಇವರು ತ್ರಿ ಆಯಾಮದ ಹಾಗೂ ದ್ವಿ ಆಯಾಮದ ಎರಡೂ ವಿಧದಲ್ಲಿಯೂ ಶಿಲ್ಪ ರಚನೆಯನ್ನು ಮಾಡಿದ್ದಾರೆ. ಇವರು ವ್ಯಕ್ತಿಯ ಭಾವಚಿತ್ರಗಳನ್ನು ತ್ರಿ ಆಯಾಮದಲ್ಲಿಯೂ ಹಾಗೂ ಸೃಜನ ಸಂಯೋಜನೆಯನ್ನು ದ್ವಿ ಆಯಾಮದಲ್ಲಿ ಭಾರತೀಯ ಹಾಗೂ ಪಾಶ್ಚಾತ್ಯ ಶೈಲಿ ಹಾಗೂ ತಂತ್ರಗಳನ್ನು ಬಳಸಿಕೊಂಡು ಶಿಲ್ಪಗಳನ್ನು ರಚಿಸಿದ್ದಾರೆ. ತ್ರಿ ಆಯಾಮದ ವ್ಯಕ್ತಿಯ ಭಾವ ಶಿಲ್ಪಗಳಲ್ಲಿ ಹೆಚ್ಚಿನದಾಗಿ ಪಾಶ್ಚಾತ್ಯರ ಪ್ರಭಾವವಿದ್ದು, ಅವರ ತಂತ್ರ ಮತ್ತು ಶೈಲಿಯನ್ನು ಇಲ್ಲಿ ಬಳಸಲಾಗಿದೆ. ಇನ್ನು ದ್ವಿ ಆಯಾಮದ ಶಿಲ್ಪಗಳಲ್ಲಿ ಭಾರತೀಯ ವಿಷಯಗಳು ಹಾಗೂ ಭಾರತೀಯ ಶೈಲಿ ತಂತ್ರಗಳನ್ನು ಬಳಸಿಕೊಂಡು ಶಿಲ್ಪಗಳನ್ನು ಮಾಡಲಾಗುತ್ತಿತ್ತು.

❖❖❖

ಅಧ್ಯಾಯ - ಏಳು

ಕೆ. ವೆಂಕಟಪ್ಪನವರ ಕುರಿತು ಬಂದ ಕಲಾ ಸಾಹಿತ್ಯ, ಪ್ರಶಸ್ತಿ ಪುರಸ್ಕಾರಗಳು




ಅಧ್ಯಾಯ : ಏಳು

ಕೆ. ವೆಂಕಟಪ್ಪನವರ ಕುರಿತು ಬಂದ ಸಾಹಿತ್ಯ, ಪ್ರಶಸ್ತಿ, ಪುರಸ್ಕಾರಗಳು

ಕೆ. ವೆಂಕಟಪ್ಪ ಕರ್ನಾಟಕ ಕಂಡ ಸಮಕಾಲೀನ ಅಗ್ರಗಣ್ಯ ಕಲಾವಿದರಲ್ಲಿ ಮೊದಲಿಗರು. ತಮ್ಮ ಜೀವನವನ್ನೇ ಕಲೆಗಾಗಿ ಮುಡುಪಿಟ್ಟ ಕಲಾತಪಸ್ವಿ ಕೆ. ವೆಂಕಟಪ್ಪ. ತಮ್ಮ ಬಾಳಿನುದ್ದಕ್ಕೂ ಬ್ರಹ್ಮಚರ್ಯವನ್ನು ಪಾಲಿಸುತ್ತಾ, ಕಲಾದೇವಿಯ ಆರಾಧನೆಯಲ್ಲಿ ಕೊನೆ ಉಸಿರೆಳೆದ ವೆಂಕಟಪ್ಪನವರ ಪುಟಗಳಲ್ಲಿ ಕಾಣಸಿಗುವುದು ಮಾತ್ರ ಕಲೆ, ಕಲೆ, ಕಲೆ.

ಮೂಲತಃ ಕಲಾವಿದರ ಕುಟುಂಬದಲ್ಲಿ ಜನಿಸಿದ ವೆಂಕಟಪ್ಪನವರ ಮನೆ ವೃತ್ತಿ, ಪ್ರವೃತ್ತಿ ಎರಡೂ ಚಿತ್ರಕಲೆಯಾಗಿತ್ತು. ಚಿಕ್ಕವರಿದ್ದಾಗಿನಿಂದಲೂ ಮೈಸೂರಿನ ಅರಮನೆಯಲ್ಲಿ ಓಡಾಡಿ ಬೆಳೆದ ವೆಂಕಟಪ್ಪನವರು ಅರಮನೆಯ ದುರಸ್ತಿಕಾರ್ಯದಲ್ಲಿ ನೆರವಾದರು. ಇದೆಲ್ಲದರ ಪ್ರಭಾವದಿಂದ ಶ್ರೀಮಾನ್ ಶ್ರೀ ಕೆ. ವೆಂಕಟಪ್ಪನವರು ಆಯ್ದುಕೊಂಡಿದ್ದು. ಚಿತ್ರಕಲೆ ಎಂಬ ವೃತ್ತಿ, ಪ್ರವೃತ್ತಿಯನ್ನು ತಮ್ಮ ಚಿಕ್ಕವಯಸ್ಸಿನಲ್ಲಿಯೇ ತನ್ನ ತಂದೆಯಾದ ಕೃಷ್ಣಪ್ಪನವರ ಪ್ರಭಾವ ಹಾಗೂ ಕೃಷ್ಣಪ್ಪನವರ ಸಹವರ್ತಿಗಳ ಪ್ರಭಾವ, ರಾಜ ರವಿವರ್ಮರಂತಹ ಹಿರಿಯ ಕಲಾವಿದರ ಪ್ರಭಾವ ವೆಂಕಟಪ್ಪನವರ ದಿಕ್ಕನ್ನೇ ಬದಲಾಯಿಸಿತು. ಚಿತ್ರಕಲೆಯನ್ನು ಬಿಟ್ಟರೆ ಬೇರಾವ ವಿಷಯಗಳು ಇವರ ತಲೆಗೆ ಹಿಡಿಯಲಿಲ್ಲ.

ಮುಂದೆ ೧೯೦೬ ರಲ್ಲಿ ಮದರಾಸಿನ ಚಿತ್ರಕಲಾ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ೧೯೦೯ಕ್ಕೆ ಉನ್ನತ ಚಿತ್ರಕಲಾ ಶಿಕ್ಷಣ ಪಡೆಯಲು ಮೈಸೂರು ಸಂಸ್ಥಾನದ ನೆರವಿನಿಂದ ವಿದ್ಯಾರ್ಥಿವೇತನದೊಂದಿಗೆ




ಕಲ್ಕತ್ತಾಗೆ ಬಂದರು. ಇಲ್ಲಿ ಸರಕಾರಿ ಕಲಾಶಾಲೆಯಲ್ಲಿ ಸೇರಿ ಅವನೀಂದ್ರರ ನೆಚ್ಚಿನ ಶಿಷ್ಯರಾದರು. ಇಲ್ಲಿ ಏಳು ವರ್ಷಗಳ ಕಾಲ ವ್ಯಾಸಂಗ ಮುಗಿಸಿ ಇಲ್ಲೇ ಉದ್ಯೋಗ ಅವಕಾಶ ಸಿಕ್ಕರೂ ಸಹ ಮೈಸೂರಿಗೆ ಬಂದು ಅರಮನೆಯ ಸೇವೆಗೆ ಮುಂದಾದರು. ನಾಲ್ವಡಿ ಕೃಷ್ಣರಾಜರವರು ವೆಂಕಟಪ್ಪನವರಿಗೆ ಇಲ್ಲಿ ಮಾನ್ಯತೆಯನ್ನು ನೀಡಿದರು. ನಾಲ್ವಡಿಯವರು ತೀರಿಕೊಂಡ ಬಳಿಕ ಮೈಸೂರು ಬಿಟ್ಟು ಬೆಂಗಳೂರಿಗೆ ಬಂದು ತಮ್ಮ ಸ್ವಂತ ನಿವೇಶನದಲ್ಲಿ ಮನೆಯೊಂದನ್ನು ಕಟ್ಟಿಸಿಕೊಂಡು ಇಲ್ಲಿಯೇ ಸ್ಟುಡಿಯೋ ಒಂದನ್ನು ಸ್ಥಾಪಿಸಿ ಕಲಾಕೃತಿಯ ರಚನೆಯಲ್ಲಿ ತೊಡಗಿದರು. ಮುಂದೆ ಮಂಡಿ ನೋವು, ಮಧುಮೇಹ, ರಕ್ತದೊತ್ತಡ ಕಾಯಿಲೆಗಳಿಂದ ಬಳಲಿ ತಮ್ಮ ಸ್ವಗೃಹದಲ್ಲಿಯೇ ೧೯೬೫ರ ಮೇ ತಿಂಗಳ ೨೫ ರಂದು ಮಧ್ಯಾಹ್ನ ಒಂದು ಘಂಟೆಗೆ ದೈವಾಧೀನರಾದರು.

ಇನ್ನು ವೆಂಕಟಪ್ಪನವರನ್ನು ಕುರಿತಂತಹ ಹಲವಾರು ಪತ್ರಿಕಾ ಸಾಹಿತ್ಯ ಹಾಗೂ ಪುಸ್ತಕ ಸಾಹಿತ್ಯಗಳು ಹೊರಬಂದಿವೆ. ಆದರೆ ಇವರು ಬದುಕಿರುವವರೆವಿಗೂ ಇದು ಸಾಧ್ಯವಾಗಲಿಲ್ಲ ಎಂಬುದು ವಿಪರ್ಯಾಸ. ಆದರೆ ಇವರು ತೀರಿಕೊಂಡ ಮೂರು ವರ್ಷದಲ್ಲಿ ಕೇಂದ್ರ ಲಲಿತಕಲಾ ಅಕಾಡಮಿ, ನವದೆಹಲಿ ಎಚ್ಚೆತ್ತುಕೊಂಡಿತು. ೧೯೬೮ ರಲ್ಲಿ 'ವೆಂಕಟಪ್ಪ' ಎಂಬ ಇಂಗ್ಲೀಷ್ ಆವೃತ್ತಿಯ ಸಣ್ಣದಾದ ಕಿರುಹೊತ್ತಿಗೆಯೊಂದನ್ನು ಹೊರತಂದಿತು. ಇದರ ಸಂಪಾದಕತ್ವವನ್ನು ಜಯ ಅಪ್ಪಸ್ವಾಮಿಯವರು ವಹಿಸಿಕೊಂಡಿದ್ದರು. ಇದಾದ ಬಳಿಕ ಹಲವಾರು ಕಿರು ಲೇಖನಗಳು ಪ್ರಕಟವಾಗತೊಡದವು. ಪತ್ರಿಕೆಗಳಲ್ಲಿ, ವಾರಪತ್ರಿಕೆಗಳಲ್ಲಿ ಕಲಾ ಪುರವಣಿಗಳಲ್ಲಿ ಕಾಣಿಸಿಕೊಳ್ಳತೊಡಗಿದವು. ವೆಂಕಟಪ್ಪನವರನ್ನು ಕುರಿತು ಕನ್ನಡ, ಇಂಗ್ಲೀಷ್, ಹಿಂದಿ ಹಾಗೂ ಬೆಂಗಾಲಿ ಭಾಷೆಯಲ್ಲಿಯೂ ಹಲವು ಲೇಖನಗಳು ಬಂದಿವೆ.

ವೆಂಕಟಪ್ಪನವರನ್ನು ಕುರಿತು ಕನ್ನಡದಲ್ಲಿಯೂ ಹಲವಾರು ಪುಸ್ತಕ ಸಾಹಿತ್ಯ, ಪತ್ರಿಕಾ ಸಾಹಿತ್ಯ ಹಾಗೂ ಕಲಾ ಪುರವಣಿಗಳಲ್ಲಿ ಹಲವಾರು ಕಲಾ ವಿಮರ್ಶಾ ಲೇಖನಗಳು ಪ್ರಕಟಗೊಂಡಿವೆ. ಮುಖ್ಯವಾಗಿ ಕೇಂದ್ರ ಲಲಿತಕಲಾ ಅಕಾಡೆಮಿ, ದೆಹಲಿ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ ಹೀಗೆ ಹಲವು ಮುಖ್ಯ ಸರಕಾರಿ ಸಂಸ್ಥೆಗಳು ಇವರ ಕುರಿತಾಗಿ ಪುಸ್ತಕಗಳನ್ನು ಹೊರತಂದಿವೆ. ಇದರ ಕುರಿತಾಗಿ ಬಂದಂತಹ ಪುಸ್ತಕ ಸಾಹಿತ್ಯವನ್ನು ಒಂದೊಂದಾಗಿ ವಿವೇಚಿಸೋಣ.

ವೆಂಕಟಪ್ಪ (ಇಂಗ್ಲೀಷ್) ೧೯೬೮

ವೆಂಕಟಪ್ಪ ಎಂಬ ಇಂಗ್ಲೀಷ್ ಆವೃತ್ತಿಯ ಪುಸ್ತಕವನ್ನು ೧೯೬೮ರಲ್ಲಿ ಲಲಿತಕಲಾ ಅಕಾಡೆಮಿ, ನವದೆಹಲಿಯವರು ಹೊರತಂದರು. ಇದರ ಸಂಪಾದಕರು ಜಯ ಅಪ್ಪಸ್ವಾಮಿಯವರು. ಈ ಪುಸ್ತಕವು




ಕಿರಿದಾಗಿದ್ದು 'CONTEMPORARY INDIAN SERIES' (ಕಾಂಟೆಂಪರರಿ ಇಂಡಿಯನ್ ಸೀರಿಸ್) ಎಂಬ ಆವೃತ್ತಿಯ ಈ ಪುಸ್ತಕ ಹೊರಬಂದಿದೆ. ಇದರ ಮುಖಪುಟವನ್ನಾಗಿ ಹೇಮ ಮೃಗ ದಮಯಂತಿಯ ಮೊಘಲ್ ಶೈಲಿಯ ಕಿರು ರೂಪ ಚಿತ್ರವನ್ನು ಬಳಸಲಾಗಿದೆ. ಇದು ವೆಂಕಟಪ್ಪನವರ ಕಲಾಕೃತಿಯಾಗಿದೆ. ಈ ಪುಸ್ತಕಕ್ಕೆ ಮುನ್ನುಡಿಯನ್ನು ವಿ. ಸೀತಾರಾಮಯ್ಯನವರು ಬರೆದಿದ್ದಾರೆ. ಇದನ್ನು ಬಿಟ್ಟರೆ ಇನ್ನುಳಿದಂತೆ ವೆಂಕಟಪ್ಪನವರ ಶಿಲ್ಪ ಚಿತ್ರಗಳ ಛಾಯಾಚಿತ್ರವನ್ನು ಬಳಸಿಕೊಳ್ಳಲಾಗಿದೆ. ಕೊನೆಯ ಪುಟದಲ್ಲಿ ವೆಂಕಟಪ್ಪನವರ ಕಲಾಕೃತಿ, ಶೀರ್ಷಿಕೆ, ಮಾಧ್ಯಮ, ವರ್ಷ ಹಾಗೂ ಎಲ್ಲಿ ಇವುಗಳ ಸಂಗ್ರಹವಿದೆ ಎಂಬುದರ ಪೂರ್ಣ ಮಾಹಿತಿಯನ್ನು ನೀಡಲಾಗಿದೆ. ಇದರ ಮುಂದಿನ ಪುಟದಲ್ಲಿ ಜೀವನ ಸಾಧನೆಯ ವರ್ಷ ಹಾಗೂ ಆ ವರ್ಷದಲ್ಲಿ ನಡೆದ ಸಂಗತಿಗಳ ಸಂಕ್ಷಿಪ್ತ ಮಾಹಿತಿಯನ್ನು ಈ ಪುಸ್ತಕದಲ್ಲಿ ಹೇಳಲಾಗಿದೆ.

ಕೆ. ವೆಂಕಟಪ್ಪ (೧೯೮೩ – ೧೯೯೩) :

ಕೆ. ವೆಂಕಟಪ್ಪ ಎಂಬ ಕಿರುಪುಸ್ತಕ ಕನ್ನಡ ಆವೃತ್ತಿಯಲ್ಲಿ ಎರಡು ಬಾರಿ ಮುದ್ರಣಗೊಂಡಿದೆ. ಮೊದಲ ಮುದ್ರಣ ೧೯೮೩ ಹಾಗೂ ಎರಡನೆಯ ಮುದ್ರಣ ೧೯೯೩ ರಲ್ಲಿ. ಇದನ್ನು ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು ಈ ಸರಕಾರಿ ಸಂಸ್ಥೆ ಹೊರತಂದಿದ್ದು, ಇದರ ಮುಖ್ಯ ಸಂಪಾದಕರಾಗಿ ಪಿ.ಆರ್. ತಿಪ್ಪೇಸ್ವಾಮಿಯವರು ಕಾರ್ಯನಿರ್ವಹಿಸಿದ್ದಾರೆ. ಮೊದಲನೇ ಆವೃತ್ತಿಗೆ ಟಿ.ವಿ. ಅಕ್ಕಿ, ಅಧ್ಯಕ್ಷರು, ಕರ್ನಾಟಕ ಲಲಿತಕಲಾ ಅಕಾಡೆಮಿ ಇವರು ಮುನ್ನುಡಿ ಬರೆದರೆ, ಎರಡನೇ ಆವೃತ್ತಿಗೆ ಪಿ.ಆರ್. ತಿಪ್ಪೇಸ್ವಾಮಿ, ಅಧ್ಯಕ್ಷರು, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ಇವರು ಮುನ್ನುಡಿಯನ್ನು ಬರೆದಿದ್ದಾರೆ.

ಮುಖಪುಟದ ಹಿಂಭಾಗದಲ್ಲಿ ಪಿ.ಆರ್. ತಿಪ್ಪೇಸ್ವಾಮಿಯವರ ಪರಿಚಯವನ್ನು ಕಾಣಬಹುದು. ನಂತರದ ಪುಟದಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ನಿಜಲಿಂಗಪ್ಪನವರು ವೆಂಕಟಪ್ಪನವರಿಗೆ ಸನ್ಮಾನ ಮಾಡಲು ಬಂದಾಗ ತೆಗೆದ ವೆಂಕಟಪ್ಪನವರ ಭಾವಚಿತ್ರವಿದೆ. ನಂತರದ ಪುಟದಲ್ಲಿ ವಿಷಯಕ್ಕೆ ಬರಲಾಗಿದೆ. ಇಲ್ಲಿ ವೆಂಕಟಪ್ಪನವರ ಮತ್ತೊಂದು ಭಾವಚಿತ್ರವಿದೆ. ಆನಂತರ ಕೆ. ವೆಂಕಟಪ್ಪ ಎಂಬ ಶೀರ್ಷಿಕೆ ಇದ್ದು, ವೆಂಕಟಪ್ಪನವರು ಸದಾಕಾಲ ಹೇಳುತ್ತಿದ್ದ ಆಂಗ್ಲಭಾಷೆಯ ಅವರ ಸೌಜನ್ಯವನ್ನು ಬಿಂಬಿಸುವ ವಾಕ್ಯವನ್ನು "My Knowledge of fine arts is a drop in the Ocean" ಎಂಬುದಾಗಿ ಮುದ್ರಿಸಲಾಗಿದೆ. ಇದರ ಕನ್ನಡದ ಅನುವಾದ "ನನ್ನ ಕಲಾಜ್ಞಾನವೆಂಬುದು ಸಾಗರದಲ್ಲಿ ಒಂದು ಹನಿ ಇದ್ದ ಹಾಗೆ" ಎಂಬುದಾಗಿದೆ. ಇದು ಅವರ ಸೌಜನ್ಯದ ಪ್ರತೀಕವಲ್ಲವೆ.




ಹೀಗೆ ಮುಂದುವರೆಯುತ್ತಾ ಇವರ ಪೂರ್ವಜರ ಪರಿಚಯವನ್ನು ಮಾಡಿಸಲಾಗಿದೆ. ನಂತರ ಅರಸರ ಪ್ರೋತ್ಸಾಹವನ್ನು ಹೇಳಲಾಗಿದೆ. ಅವರ ಅಚ್ಚುಕಟ್ಟುತನ, ಉಡುಗೆ-ತೊಡುಗೆಯ ಪರಿಚಯವನ್ನು ಇಲ್ಲಿ ಹೇಳಲಾಗಿದೆ. ಆನಂತರ ಬೆಂಗಳೂರಿನ ಜೀವನದ ಕುರಿತು ಬಿಂಬಿಸಲಾಗಿದೆ. ಮತ್ತೆ ಇವರ ಕಲೆಯ ತಂತ್ರಗಾರಿಕೆ, ಶೈಲಿಗಳ ಕುರಿತು ಹೇಳಲಾಗಿದೆ. ಆನಂತರದಲ್ಲಿ ಇವರ ವಿಶಿಷ್ಟ ಕೃತಿಗಳ ಕುರಿತು ಒಂದೊಂದಾಗಿ ವಿವರಿಸಿದ್ದಾರೆ. ಆನಂತರದ ಪುಟಗಳಲ್ಲಿ ಇವರ ಚಿತ್ರ ಮತ್ತು ಶಿಲ್ಪಗಳ ಛಾಯಾಚಿತ್ರವನ್ನು ಅಳವಡಿಸಲಾಗಿದ್ದು, ಕೊನೆಯಿಂದ ಎರಡನೇ ಪುಟದಲ್ಲಿ ಅಂದಿನ ಮಾನ್ಯ ಮುಖ್ಯಮಂತ್ರಿಗಳಾದ ನಿಜಲಿಂಗಪ್ಪನವರು ವೆಂಕಟಪ್ಪನವರನ್ನು ಸನ್ಮಾನಿಸುತ್ತಿರುವ ಛಾಯಾ ಚಿತ್ರವನ್ನು ಕಾಣಬಹುದು. ಇನ್ನುಳಿದಂತೆ ಮುಂದಿನ ಪುಟಗಳಲ್ಲಿ ಇವರ ಚಿತ್ರಗಳು, ಮಾಧ್ಯಮಗಳು ಹಾಗೂ ಎಲ್ಲಿ ಸಂಗ್ರಹವಿದೆ ಎಂಬ ಸೂಚನೆ ಇದೆ. ಅದರ ಮುಂದಿನ ಪುಟದಲ್ಲಿ ವೆಂಕಟಪ್ಪನವರ ಸಂಪೂರ್ಣ ಜೀವನವನ್ನು ವಾರ್ಷಿಕವಾಗಿ ಸಂಕ್ಷಿಪ್ತವಾಗಿ ತಿಳಿಸಲಾಗಿದೆ.

ಕೆ. ವೆಂಕಟಪ್ಪ : ಸವಿನೆನಪು (೧೯೮೭)

ಕೆ. ವೆಂಕಟಪ್ಪನವರ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ ಈ ಸವಿನೆನಪಿನ ಹಲವು ಲೇಖನಗಳುಳ್ಳ ಸಂಪಾದನಾ ಗ್ರಂಥವನ್ನು ಹೊರತರಲಾಗಿದೆ. ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು ಇವರು ೧೯೮೭ ರಲ್ಲಿ ಈ ಲೇಖನ ಸಂಪಾದನೆಯ ಮಾಲೆಯನ್ನು ಹೊರತಂದಿದ್ದಾರೆ. ಇದರ ಸಂಪಾದಕರು ಎಸ್.ಎನ್. ಚಂದ್ರಶೇಖರ್‌ರವರು. ಇದರ ಮುನ್ನುಡಿಯನ್ನು ಸೋಮಶೇಖರ. ಎಂ. ಸಾಲಿ ಅಧ್ಯಕ್ಷರು, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು ಇವರು ಬರೆದಿದ್ದಾರೆ. ಮುಂದಿನ ಪುಟದಲ್ಲಿ ವಿಷಯ ಸೂಚಿ ಹಾಗೂ ವರ್ಣಚಿತ್ರಗಳು ಎಂಬ ಎರಡು ಪರಿವಿಡಿಗಳಿವೆ.

ಮೊದಲಿಗೆ 'ವರ್ಣಶಿಲ್ಪಿ ವೆಂಕಟಪ್ಪನವರಿಗೆ' ಎಂಬ ಶೀರ್ಷಿಕೆಯನ್ನು ಕೊಟ್ಟು ಕುವೆಂಪುರವರ ಎರಡು ಕವನಗಳನ್ನು ಇಲ್ಲಿ ಮುದ್ರಿಸಲಾಗಿದೆ. ಒಂದು ೩೦-೦೫-೧೯೨೯ ರಲ್ಲಿ ಶಕುಂತಲೆ ಕಣ್ವಾಶ್ರಮದಿಂದ ಬೀಳ್ಕೊಡುವ ಶಿಲ್ಪವನ್ನು ನೋಡಿ ಬಂದು ಬರೆದಿರುವುದು, ಮತ್ತೊಂದು ೧೬-೦೮-೧೯೩೧ ರಲ್ಲಿ ವೆಂಕಟಪ್ಪನವರ ಕಲಾಶಾಲೆಯಲ್ಲಿ ನೀಲಗಿರಿಯ ಚಿತ್ರಗಳನ್ನು ನೋಡಿ ಬಂದು ಬರೆದಿರುವ ಎರಡು ಕವಿತೆಗಳಿವೆ. ಆನಂತರ ಎಂ.ವಿ. ಸೀತಾರಾಮಯ್ಯನವರು 'ಕಲಾತಪಸ್ವಿ' ಎಂಬ ಲೇಖನವನ್ನು ಬರೆದಿದ್ದು, ಇದರಲ್ಲಿ ಅವರ ಸಂಪೂರ್ಣ ಜೀವನದ ವೃತ್ತಾಂತವನ್ನು ಬಹು ಸಂಕ್ಷಿಪ್ತವಾಗಿ ಹೇಳಿದ್ದಾರೆ. 'ಕುಂಚದೊಂದಿಗೇ ಹುಟ್ಟಿದನೋ ಈ ಕಲಾವಿದ?' ಎಂಬ ಶೀರ್ಷಿಕೆಯ ಲೇಖನವನ್ನು ಸಿ. ನಿಜಲಿಂಗಪ್ಪನವರು ಬರೆದಿದ್ದಾರೆ. ಇವರು ಸೆಂಟ್ರಲ್ ಕಾಲೇಜಿನಲ್ಲಿ ಓದುವಾಗ 'ಪ್ರಬುದ್ಧ ಕರ್ನಾಟಕ'




ಎಂಬ ಪತ್ರಿಕೆಯಲ್ಲಿ ಮುಖಪುಟಕ್ಕೆ ವೆಂಕಟಪ್ಪನವರ 'ವೀಣೆಯ ಹುಚ್ಚು' ಎಂಬ ಕೃತಿಯನ್ನು ಮುದ್ರಿಸಲಾಗಿತ್ತು. ಇದರ ಕುರಿತಾಗಿ ತಮ್ಮ ಸವಿನೆನಪನ್ನು ಹಂಚಿಕೊಂಡಿದ್ದಾರೆ. ವೈ. ಸುಬ್ರಹ್ಮಣ್ಯರಾಜುರವರು 'ಸಿದ್ಧಿಪುರುಷ' ಎಂಬ ಶೀರ್ಷಿಕೆಯನ್ನು ಕೊಟ್ಟು ವೆಂಕಟಪ್ಪನವರ ಜೀವನದ ಕೆಲವು ತುಣುಕು ವಿಚಾರಗಳನ್ನು ಇಲ್ಲಿ ಹಂಚಿಕೊಂಡಿದ್ದಾರೆ. ಡಾ. ಕೆ. ರಂಗಾಚಾರ್ ಎಂಬುವವರು 'ನನ್ನ ವಿಶಿಷ್ಟ ರೋಗಿ' ಎಂಬ ಲೇಖನವನ್ನು ಬರೆದುಕೊಂಡಿದ್ದಾರೆ. ೧೯೫೮, ಮಾರ್ಚ್ ೨೦ನೇ ತಾರೀಖಿನ ಘಟನೆ, ಇವರು ವೆಂಕಟಪ್ಪನವರನ್ನು ಮನೆಗೆ ನೋಡಲು ಹೋದಾಗ ಅಲ್ಲಿ ಆದ ಮಾತಿನ ಪ್ರಸಂಗದ ಕುರಿತಾಗಿ ಈ ಲೇಖನವಿದೆ. ಮತ್ತೊಂದು ಲೇಖನ 'ವರ್ಣಮಯ ಬದುಕು' ಎಂ.ಎಸ್. ನಂಜುಂಡರಾವ್‌ರವರು ಈ ಲೇಖನವನ್ನು ಬರೆದಿದ್ದು, ಇದರಲ್ಲಿ ವೆಂಕಟಪ್ಪನವರ ಬದುಕಿನ ತಿಳಿಯಾದ ಅನುಭವ, ನಿಸರ್ಗ ಪ್ರೀತಿ, ನಾದೋಪಾಸನೆಗಳ ಕುರಿತಂತೆ ವಿಶ್ಲೇಷಿಸಲಾಗಿದೆ. ಕೊನೆಯದಾಗಿ ಪಿ.ಆರ್. ತಿಪ್ಪೇಸ್ವಾಮಿಯವರು ಬರೆದ 'ಆದರ್ಶ ಜೀವಿ' ಎಂಬ ಲೇಖನದಲ್ಲಿ ವೆಂಕಟಪ್ಪನವರ ಆದರ್ಶ ಜೀವನ, ಅವರ ನಿಲುವು, ಧೋರಣೆ ಅವರಿಗೆ ಬಂದಂತಹ ಕಷ್ಟಗಳು, ಅದಕ್ಕೆ ಬಗ್ಗದ ಅದರಲ್ಲೂ ಜೀವನಾದರ್ಶವನ್ನು ತೋರಿದ ಹಿರಿಮೆಯ ಕುರಿತು ಹೇಳಲಾಗಿದೆ.

ಕಲಾ ತಪಸ್ವಿ ವೆಂಕಟಪ್ಪ (೧೯೮೮)

'ಕಲಾತಪಸ್ವಿ ವೆಂಕಟಪ್ಪ' ಎನ್ನುವ ಪುಸ್ತಕವು ಇಂಗ್ಲೀಷ್ ಹಾಗೂ ಕನ್ನಡ ಎರಡೂ ಆವೃತ್ತಿಯಲ್ಲಿ ದೊರೆಯುತ್ತವೆ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರಕಾರ ಇವರು ಹೊರತಂದ ಪುಸ್ತಕವಾಗಿದ್ದು, ಪ್ರೊ. ಎಸ್.ಕೆ. ರಾಮಚಂದ್ರರಾವ್‌ರವರು ಈ ಪುಸ್ತಕವನ್ನು ಬರೆದಿದ್ದಾರೆ. ಇದಕ್ಕೆ ಮುನ್ನುಡಿಯನ್ನು ಐ.ಎಂ. ವಿಠಲಮೂರ್ತಿ ಎಂಬುವವರು ಬರೆದಿದ್ದಾರೆ. ಪರಿವಿಡಿ ಇಂತಿದೆ. ಮೊದಲ ಮಾತು, ಜೀವನ ಇದರಲ್ಲಿ ಐದು ಉಪವಿಭಾಗಗಳಿವೆ. ಮೈಸೂರಿನಲ್ಲಿ ಮೊದಲ ವರ್ಷಗಳು, ಬಂಗಾಳದ ಕಲಾಶಾಲೆಯಲ್ಲಿ, ಹಿಮಾಲಯ ಯಾತ್ರೆ, ಮರಳಿ ಮೈಸೂರಿನಲ್ಲಿ, ಬೆಂಗಳೂರಿನಲ್ಲಿ ಹೀಗೆ ಐದು ಉಪವಿಭಾಗಗಳಿವೆ. ವ್ಯಕ್ತಿ, ಕಲೆ ಹೀಗೆ ಮೂರು ಮುಖ್ಯ ಅಧ್ಯಾಯಗಳನ್ನು ಕಾಣಬಹುದು.

ಮೊದಲ ಮಾತಿನಲ್ಲಿ ಲೇಖಕರಾದ ರಾಮಚಂದ್ರರಾವ್‌ರವರು ವೆಂಕಟಪ್ಪನವರ ಒಡನಾಟದಲ್ಲಿ ಕಳೆದ ಸನ್ನಿವೇಶಗಳನ್ನು ಹಂಚಿಕೊಂಡಿದ್ದಾರೆ. ಜೀವನ ಎಂಬ ಅಧ್ಯಾಯದಲ್ಲಿ ವೆಂಕಟಪ್ಪನವರ ಸಂಪೂರ್ಣ ಜೀವನ, ಹುಟ್ಟಿನಿಂದ ಸಂಧ್ಯಾ ಕಾಲದವರೆವಿಗೂ ಎಲ್ಲವನ್ನೂ ವಿಸ್ತಾರವಾಗಿ ಹೇಳಲಾಗಿದೆ. ವ್ಯಕ್ತಿ ಅಧ್ಯಾಯದಲ್ಲಿ ವೆಂಕಟಪ್ಪನವರ ವ್ಯಕ್ತಿತ್ವ ನಡವಳಿಕೆಯ ಬಗ್ಗೆ ಹೇಳಲಾಗಿದೆ. ಕಲೆ ಅಧ್ಯಾಯದಲ್ಲಿ ವೆಂಕಟಪ್ಪನವರು ರಚಿಸಿದ ವಿಶಿಷ್ಟ ಕೃತಿಗಳ ಸಾರವನ್ನು ತಿಳಿಸಲಾಗಿದೆ. ಕೊನೆಯದಾಗಿ ಮುಖ್ಯ ಪ್ರಸಂಗಗಳನ್ನು ಕಾಲಬದ್ಧವಾಗಿ ಜೋಡಿಸಲಾಗಿದೆ.



A HOMAGE TO K. VENKATAPPA (1987)

ಈ ಕೃತಿಯು ಸಂಪೂರ್ಣ ಇಂಗ್ಲೀಷ್ ಭಾಷೆಯಲ್ಲಿದ್ದು ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ಇವರು ಅರ್ಪಿಸಿರುವ ಕೆ. ವೆಂಕಟಪ್ಪ : ಸವಿನೆನಪು ಎಂಬ ಸಂಪಾದನಾ ಲೇಖನದ ಇಂಗ್ಲೀಷ್ ಅವತರಣಿಕೆ ಇದಾಗಿದೆ. ಇದನ್ನು ಸಹ ಎಸ್.ಎನ್. ಚಂದ್ರಶೇಖರ್‌ರವರು ಸಂಪಾದಿಸಿದ್ದಾರೆ.


ವೆಂಕಟಪ್ಪ : ಸಮಕಾಲೀನ ಪುನರಾವಲೋಕನ : (೧೯೯೦-೨೦೦೮)

ಕೆ.ವಿ. ಸುಬ್ರಹ್ಮಣ್ಯಂರವರು ರಚಿಸಿರುವ 'ವೆಂಕಟಪ್ಪ : ಸಮಕಾಲೀನ ಪುನರಾವಲೋಕನ' ಎಂಬ ಪುಸ್ತಕವು ವೆಂಕಟಪ್ಪನವರ ದಿನಚರಿ ಆಧಾರವಾಗಿಟ್ಟುಕೊಂಡು ರಚಿಸಿದ್ದಾಗಿದೆ. ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ಇವರು ಎರಡು ಬಾರಿ ಈ ಪುಸ್ತಕವನ್ನು ಮುದ್ರಿಸಿದ್ದಾರೆ. ೧೯೯೦ರಲ್ಲಿ ಮೊದಲಬಾರಿಗೆ ಹಾಗೂ ಎರಡನೇ ಬಾರಿಗೆ ೨೦೦೮ರಲ್ಲಿ ಹೊರಬಂದಿದೆ.

ಈ ಪುಸ್ತಕವನ್ನು ಕೆ.ವಿ.ಸು. ರವರು ತಮ್ಮ ತಾಯಿಯವರಿಗೆ ಅರ್ಪಿಸಿದ್ದಾರೆ. ಮುನ್ನುಡಿಯನ್ನು ಕೆ.ವಿ.ಸು.ರವರು ಬರೆದಿದ್ದರೆ, ಬೆನ್ನುಡಿಯನ್ನು ಡಾ. ಹಾ.ಮಾ. ನಾಯಕರವರು ಬರೆದಿದ್ದಾರೆ. ಈ ಪುಸ್ತಕದ ಪರಿವಿಡಿ ಇಂತಿದೆ. ಕೆ. ವೆಂಕಟಪ್ಪನವರ ಹಿನ್ನೋಟ, ದಿನಚರಿಯ ಪುಟಗಳಿಂದ, ಪತ್ರಗಳು, ಪುನರುಜ್ಜೀವನದ ಪುನರಾವಲೋಕನ, ಕೆ.ವಿ. ಸಂಗ್ರಹದಲ್ಲಿದ್ದ ಪ್ರಮುಖ ಗ್ರಂಥಗಳು, ಗ್ರಂಥಋಣ, ಶಬ್ದ ಸೂಚಿ ಹೀಗೆ ಏಳು ಹಂತದಲ್ಲಿ ವಿಂಗಡಿಸಿ ಈ ಕೃತಿಯನ್ನು ರಚಿಸಲಾಗಿದೆ. ಮೊದಲನೆಯದಾಗಿ 'ಕೆ. ವೆಂಕಟಪ್ಪ : ಒಂದು ಹಿನ್ನೋಟ' ಎಂಬ ಅಧ್ಯಾಯದಲ್ಲಿ ಬಾಲ್ಯದಿಂದ ಅಂತ್ಯದವರೆಗಿನ ಅವರ ವಿಶಿಷ್ಟ ಸಂಗತಿಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. 'ದಿನಚರಿಯ ಪುಟಗಳಿಂದ' ೧೯೨೬ ಜನವರಿಯಿಂದ ೧೯೫೮ ಏಪ್ರಿಲ್‌ವರೆಗೂ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. 'ಪತ್ರಗಳು' ಈ ಅಧ್ಯಾಯದಲ್ಲಿ ವೆಂಕಟಪ್ಪನವರು ಇತರರಿಗೆ ಬರೆದ ಮುಖ್ಯ ಪತ್ರಗಳನ್ನು ಹೇಳಲಾಗಿದೆ. 'ಪುನರುಜ್ಜೀವನದ ಪುನರಾವಲೋಕನ' ಇದೊಂದು ವಿಶಿಷ್ಟ ಅಧ್ಯಾಯವಾಗಿದ್ದು, ಇಲ್ಲಿ ಬಂಗಾಳದಲ್ಲಾದ ಭಾರತೀಯ ಕಲೆಯ ಪುನರುಜ್ಜೀವನ ತಿಳಿಸಿದ್ದು, ಅಮೃತಶೇರ್‌ಗಿಲ್ ಇಂದಿನ ಕಲಾವಿದರ ಕುರಿತು ಹೇಳಲಾಗಿದೆ. 'ಕೆ.ವಿ. ಸಂಗ್ರಹದಲ್ಲಿದ್ದ ಪ್ರಮುಖ ಗ್ರಂಥಗಳು' ಈ ಅಧ್ಯಾಯದಲ್ಲಿ ವೆಂಕಟಪ್ಪನವರ ಬಳಿ ಇದ್ದ ಗ್ರಂಥಗಳ ಕುರಿತು ಹೇಳಲಾಗಿದೆ. ಕೊನೆಯದಾಗಿ 'ಗ್ರಂಥ ಋಣ' ಹಾಗೂ 'ಶಬ್ದ ಸೂಚಿ'ಗಳಿಂದ ಈ ಪುಸ್ತಕವನ್ನು ಮುಗಿಸಲಾಗಿದೆ.

ಕಲಾತಪಸ್ವಿ ಕೆ. ವೆಂಕಟಪ್ಪ : (೨೦೦೪)

ಪ್ರೊ ಸಾ.ಕೃ. ರಾಮಚಂದ್ರರಾವ್‌ರವರು ರಚಿಸಿರುವ ಈ ಪುಸ್ತಕವು ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ ಇವರು ೨೦೦೪ ರಲ್ಲಿ ಈ ಪುಸ್ತಕವನ್ನು



ಮುದ್ರಿಸಿದ್ದಾರೆ. ಮುನ್ನುಡಿಯನ್ನು ಕೆ.ಆರ್. ರಾಮಕೃಷ್ಣ, ನಿರ್ದೇಶಕರು ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ ಇವರು ಬರೆದಿದ್ದಾರೆ. ೧೯೮೮ ರಲ್ಲಿ ಮುದ್ರಣವಾದ 'ಕಲಾತಪಸ್ವಿ ವೆಂಕಟಪ್ಪ' ಎಂಬ ಪುಸ್ತಕದಲ್ಲಿರುವ ಎಲ್ಲಾ ಅಂಶಗಳು ಇದರಲ್ಲಿದ್ದು ಹೆಚ್ಚಿನದಾಗಿ ವೆಂಕಟಪ್ಪನವರು ರಚಿಸಿರುವ ರೇಖಾ ಚಿತ್ರಗಳು, ವರ್ಣಚಿತ್ರಗಳು, ಶಿಲ್ಪಗಳ ಛಾಯಾಚಿತ್ರಗಳು ಇದರಲ್ಲಿ ಹೆಚ್ಚಿನದಾಗಿ ಸಿಗುತ್ತವೆ.

ಕೆ. ವೆಂಕಟಪ್ಪ : (೨೦೦೪)


'ಕೆ. ವೆಂಕಟಪ್ಪ' ಎಂಬ ಪುಸ್ತಕವನ್ನು ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ ಇವರು ೨೦೦೪ರಲ್ಲಿ ಮುದ್ರಿಸಿದ್ದಾರೆ. ಇದರ ಮೂಲ ಸಂಪಾದಕರು ಕೆ.ಆರ್. ರಾಮಕೃಷ್ಣರವರು. ಈ ಪುಸ್ತಕವೂ ಸಹಿತ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ಇವರು ೧೯೮೭ರಲ್ಲಿ ಹೊರತಂದ 'ಕೆ. ವೆಂಕಟಪ್ಪ : ಸವಿನೆನಪು' ಎಂಬ ಪುಸ್ತಕವನ್ನು ಆಧರಿಸಿ ಅದರಲ್ಲಿರುವ ಲೇಖನವನ್ನು ಬಳಸಿಕೊಂಡು ಈ ಪುಸ್ತಕವನ್ನು ಪೂರ್ಣಗೊಳಿಸಲಾಗಿದೆ.

ಕೆ. ವೆಂಕಟಪ್ಪ ಚಿತ್ರ ಸಂಪುಟ

ಈ ಚಿತ್ರಸಂಪುಟವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹೊರತಂದಿದ್ದು, ಇದರಲ್ಲಿ ವೆಂಕಟಪ್ಪನವರ ಕುರಿತು ಸಂಕ್ಷಿಪ್ತ ಮಾಹಿತಿಯನ್ನು ಇಲ್ಲಿ ಹೇಳಲಾಗಿದ್ದು ಉಳಿದಂತೆ ಎಂಭತ್ತು ಭಾಗದಷ್ಟು ವೆಂಕಟಪ್ಪನವರ ಚಿತ್ರ ಹಾಗೂ ಶಿಲ್ಪಗಳ ಛಾಯಾಚಿತ್ರವನ್ನು ಇಲ್ಲಿ ಮುದ್ರಿಸಲಾಗಿದೆ. ಈ ಪುಸ್ತಕವು ಕನ್ನಡ ಹಾಗೂ ಇಂಗ್ಲೀಷ್ ಎರಡು ಆವೃತ್ತಿಯಲ್ಲಿ ಸಿಗುತ್ತದೆ.

ಪ್ರಶಸ್ತಿ-ಪುರಸ್ಕಾರಗಳು

ವೆಂಕಟಪ್ಪನವರಿಗೆ ಬಾಲ್ಯದಲ್ಲಿಯೇ ಹಲವು ಪ್ರಶಸ್ತಿ-ಪುರಸ್ಕಾರಗಳು ಬಂದಿವೆ. ಆದರೆ ಅದರ ಮಾಹಿತಿ ಹೆಚ್ಚಾಗಿ ಎಲ್ಲಿಯೂ ಸಿಗುವುದಿಲ್ಲ. ಇದಲ್ಲದೆ ವೆಂಕಟಪ್ಪನವರು ಎಂದಿಗೂ ಪ್ರಶಸ್ತಿ-ಪುರಸ್ಕಾರಗಳ ಬೆನ್ನತ್ತಿ ಹೋದವರಲ್ಲ. ಆದರೂ ಕೊನೆಗಾಲದಲ್ಲಿ ವೆಂಕಟಪ್ಪನವರ ಮನೆ ಬಾಗಿಲನ್ನು ಪ್ರಶಸ್ತಿ-ಪುರಸ್ಕಾರಗಳು ಹುಡುಕೊಂಡು ಬಂದವು. ೧೯೬೧ರ ಜೂನ್ ಹದಿನೇಳರಂದು ಕೇಂದ್ರೀಯ ಲಲಿತಕಲಾ ಅಕಾಡೆಮಿಯು ವೆಂಕಟಪ್ಪನವರನ್ನು 'ಫೆಲೋ' ಆಗಿ ಆರಿಸಿಕೊಂಡು ಅವರಿಗೆ ಪುರಸ್ಕಾರ ರೂಪವಾಗಿ ತಾಮ್ರಪತ್ರವನ್ನು ನೀಡಿ ಗೌರವಿಸಲು ನಿರ್ಧರಿಸಿತು. ವ್ಯವಸ್ಥಾಪಕರು ೧೯೬೨ರ ಮಾರ್ಚ್ ತಿಂಗಳಲ್ಲಿ ದಿಲ್ಲಿಯಲ್ಲಿ ಅವರಿಗಾಗಿ ಒಂದು ಸನ್ಮಾನ ಸಮಾರಂಭವನ್ನು ಏರ್ಪಡಿಸಿ, ಅಲ್ಲಿಗೆ ಬರಬೇಕೆಂದು



ವೆಂಕಟಪ್ಪನವರಿಗೆ ಪತ್ರ ಬರೆದರು. ಆದರೆ ತೀರಾ ನಿತ್ರಾಣದಿಂದ ಹಾಸಿಗೆ ಹಿಡಿದಿದ್ದ ವೆಂಕಟಪ್ಪನವರು ಪ್ರಯಾಣ ಮಾಡುವ ಸ್ಥಿತಿಯಲ್ಲಿರಲಿಲ್ಲ. ವ್ಯವಸ್ಥಾಪಕರು ಬೆಂಗಳೂರಲ್ಲೇ ಸಮಾರಂಭವನ್ನು ಏರ್ಪಡಿಸುವೆವೆಂದಾಗಲೂ ವೆಂಕಟಪ್ಪ ಒಪ್ಪಲಿಲ್ಲ. "ಮೈಯೂ ಮನಸ್ಸೂ ತುಂಬ ದಣಿದಿದೆ, ಎಳ್ಳಷ್ಟೂ ತ್ರಾಣವಿಲ್ಲ, ಸಮಾರಂಭವೆಂದರೆ ಕೆಲವು ನಿಮಿಷಗಳಾದರೂ ಕೂತಿರಬೇಕು, ಪ್ರಶಸ್ತಿಯನ್ನು ಸ್ವೀಕರಿಸಬೇಕು, ಅದಕ್ಕೂ ನನಗೆ ಅನುಕೂಲವಿಲ್ಲ" ಎಂದು ಹೇಳಿ ಸಮಾರಂಭವನ್ನು ರದ್ದುಪಡಿಸಿರೆಂದು ಸೂಚಿಸಿದರು. ಆದರೆ ಕೇಂದ್ರೀಯ ಲಲಿತಕಲಾ ಅಕಾಡೆಮಿಯ ವ್ಯವಸ್ಥಾಪಕರು ದಿಲ್ಲಿಯಿಂದ ಬೆಂಗಳೂರಿಗೆ ಬಂದು ಅದೇ ವರ್ಷದ ಆಗಸ್ಟ್ ಏಳರಂದು ಅವರ ಮನೆಯಲ್ಲೇ ಸಣ್ಣದೊಂದು ಸಮಾರಂಭವನ್ನು ನಡೆಸಿ ಅವರಿಗೆ ತಾಮ್ರಪತ್ರ, ಅಂಗವಸ್ತ್ರಗಳನ್ನು ನೀಡಿ ಗೌರವಿಸಿದರು. ಕೇಂದ್ರ ಲಲಿಕಲಾ ಅಕಾಡೆಮಿಯ ಅಧ್ಯಕ್ಷರೂ, ಗುಜರಾತಿನ ರಾಜ್ಯಪಾಲರೂ ಆಗಿದ್ದ ಮೇಥಿ ನವಾಭ್ ಜಂಗ್ ಬಹದೂರ್ ಅವರೂ ಆಗ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಸಿ. ನಿಜಲಿಂಗಪ್ಪನವರೂ ಮತ್ತು ವೆಂಕಟಪ್ಪನವರ ಅಭಿಮಾನಿಗಳು ಕೆಲವರು ಈ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.[೧]


ಇದರ ಮರುವರ್ಷ ೧೯೬೭ರ ಡಿಸೆಂಬರ್ ೨ರಂದು ಕರ್ನಾಟಕ ಚಿತ್ರಕಲಾ ಪರಿಷತ್ತಿನ ವ್ಯವಸ್ಥಾಪಕರು ವೆಂಕಟಪ್ಪನವರ ಮನೆಯಲ್ಲಿಯೇ ಬಂದು ಸಣ್ಣದೊಂದು ಸಮಾರಂಭವನ್ನೇರ್ಪಡಿಸಿ ಅವರಿಗೆ ಭಿನ್ನವತ್ತಳಿಕೆಯನ್ನು ಅರ್ಪಿಸಿ ಸನ್ಮಾನ ಮಾಡಿದರು. ಆ ಸಂದರ್ಭದಲ್ಲಿ ವೆಂಕಟಪ್ಪನವರು ಕೆಲವು ಮಾತುಗಳನ್ನು ನುಡಿದರು "ಈ ಸನ್ಮಾನಕ್ಕೆ ನಾನು ಅರ್ಹನಲ್ಲ, ನಾನೊಬ್ಬ ಕಲಾವಿದ್ಯಾರ್ಥಿ ಅಷ್ಟೇ. ನಾನು ಇನ್ನೂ ಕಲಿಯಬೇಕಾದದ್ದು ಬಹಳ ಇದೆ. ಅದಕ್ಕೆ ಒಂದು ಜೀವನವಾದರೂ ಸಾಕಾಗದು" ಎಂಬ ಸೌಜನ್ಯದ ನುಡಿಗಳನ್ನು ಹೇಳಿದರು.

ವೆಂಕಟಪ್ಪನವರಿಗೆ ಗೌರವ ಸಲ್ಲಿಸುವ ಕುರಿತಾಗಿ ರಾಜ್ಯ ಶ್ರೇಷ್ಠ ಚಿತ್ರಕಲಾವಿದರಿಗೆ 'ಕೆ. ವೆಂಕಟಪ್ಪ' ಪ್ರಶಸ್ತಿಯನ್ನು ಪ್ರದಾನ ಮಾಡಲಾಗುವುದು. ಚಿತ್ರಕಲಾ ಕ್ಷೇತ್ರದಲ್ಲಿ ಜೀವಮಾನ ಸಾಧನೆ ಮಾಡಿದವರಿಗೆ ಈ ಪ್ರಶಸ್ತಿಯನ್ನು ನೀಡಲಾಗುವುದು. ಈ ಪ್ರಶಸ್ತಿಯಲ್ಲಿ ಒಂದು ಫಲಕ, ಪ್ರಶಸ್ತಿ ಪತ್ರ ಹಾಗೂ ಮೂರು ಲಕ್ಷ ರೂ. ನಗದು ಬಹುಮಾನವನ್ನು ನೀಡಲಾಗುವುದು.

❖❖❖

೦೧. ಸಾ.ಕೃ.ರಾಮಚಂದ್ರರಾವ್ : ಕಲಾತಪಸ್ವಿ ಕೆ. ವೆಂಕಟಪ್ಪ, ಪ್ರಾ.ಸಂ.ನಿ. ಹೊಸಪೇಟೆ, ೨೦೦೪.

ಅಧ್ಯಾಯ - ಎಂಟು
ಸಮಾರೋಪ




ಅಧ್ಯಾಯ : ಎಂಟು

ಸಮಾರೋಪ

ಮಾನವನ ಆಕಾಂಕ್ಷೆಯ ಬದುಕಿನ ಮೂಲ ಗುಟ್ಟು ಎರಡು. ಅವು ಮಾನವನ ಸುಪ್ತ ಮನಸ್ಸಿನಲ್ಲಿ ಆವರಿಸಿಕೊಂಡಿರುತ್ತವೆ. ಅವು ನೆನಪೆಂಬ ಗೊಬ್ಬರ, ಮರೆವು ಎಂಬ ಮಳೆ ಹನಿಯಿಂದ ಹೃದಯದಲ್ಲಿ ಗಿಡವೊಂದು ಮೊಳೆಯುತ್ತದೆ. ಆ ಗಿಡವು ದಿನವೂ ಎರಡು ಫಲಗಳನ್ನು ನೀಡುತ್ತದೆ. ಒಂದು ಕನಸು, ಮತ್ತೊಂದು ಕಲೆ. ಇವೆರಡೂ ಇರದ ಜೀವನವನ್ನು ಒಮ್ಮೆ ಊಹಿಸಿ ನೋಡುವುದಕ್ಕೂ ಆಸಾಧ್ಯವಾದುದು. ಮಾನವನಿಗೆ ಗಾಳಿ, ನೀರು, ಬೆಳಕು ಎಷ್ಟು ಅವಶ್ಯಕವೋ ಅಷ್ಟೇ ಅವಶ್ಯವಾದವು ಈ ಕಲೆ ಮತ್ತು ಕನಸು. ಗಾಳಿ, ನೀರು ಇರದೆ ಮನುಷ್ಯನು ಹೇಗೆ ಇರುಲು ಸಾಧ್ಯವಿಲ್ಲವೋ ಅದೇ ರೀತಿ ಕಲೆ ಮತ್ತು ಕನಸುಗಳು ಅನಿವಾರ್ಯವಾದ ಮೂಲಭೂತ ಅಂಶಗಳಾಗಿವೆ.

ಆದಿಮಾನವನ ಕಾಲದಿಂದಲೂ ಸಹ ಇವೆರಡರ ನೆರಳಲ್ಲೇ ಆಶಾವಾದಿಯಾಗಿ ಸಾವಿರಾರು ವರ್ಷಗಳಿಂದ ಮನುಷ್ಯನು ಈ ಭೂಮಿಯ ಮೇಲೆ ಬದುಕು ನಡೆಸುತ್ತಿದ್ದಾನೆ. ತನ್ನ ಜೀವನದ ಬೇಸರದ ಕ್ಷಣಗಳನ್ನು ಕಲೆಯ ಮೂಲಕವಷ್ಟೇ ಮನೋರಂಜನೆಯನ್ನು ಪಡೆಯಲು ಸಾಧ್ಯ ಎಂಬ ಸಣ್ಣ ಜ್ಞಾನ ಅವರಿಗೆ ಆ ಕಾಲದಲ್ಲಿಯೇ ಇತ್ತು. ಆದರೆ ಈಗಿನವರಿಗೆ ಇಲ್ಲದ್ದು ಸಮಾಜದ ದುರ್ದೈವ. ಆದಿಮಾನವನು ಅಂದಿನ ಕಾಲದಿಂದಲೂ ಇಂದಿನವರೆಗೆ ಜೀವನದ ಸಂಕಷ್ಟಗಳಿಗೆ ನಿರಾಶನಾಗಿ ಹೇಡಿಯಂತೆ ಎಂದಿಗೂ ತಲೆಮರೆಸಿಕೊಂಡಿಲ್ಲ. ಆ ರೀತಿ ಆಗಿದ್ದರೆ ಭೂಮಿಯ ಮೇಲೆ ಇಂದು




ಮಾನವ ಸಂತತಿಯೇ ಉಳಿಯುತ್ತಿರಲಿಲ್ಲ. ಶತ ಶತಮಾನಗಳಿಂದ ಮಾನವ ಕುಲಕೋಟಿ ಇಂದಿಗೂ ಸಮಾಜದಲ್ಲಿ ಸ್ವಾಸ್ಥ್ಯವನ್ನು ಕಾಪಾಡಿಕೊಂಡು ಎಲ್ಲರೂ ಸಮಾನ ಮನಸ್ಕರಾಗಿ ಕಾಣುವ ಕನಸು ಮತ್ತೊಂದು ಯಾವುದೇ ಕಲೆಯ ಮೂಲಕವಾಗಿ ಮನಸ್ಸಿನ ಚೇತನವನ್ನು ಉಳಿಸಿಕೊಂಡಿರುವುದರಿಂದ ಮಾತ್ರ ಇದು ಸಾಧ್ಯವಾಗಿದೆ.

ಅದೇ ರೀತಿಯಲ್ಲಿ ಕನಸು ಮತ್ತು ಕಲೆಯನ್ನು ಜೀವನವಾಗಿರಿಸಿಕೊಂಡ ಮಹಾನ್ ಚೇತನ ನಮ್ಮ ಕರುನಾಡ ಕನ್ನಡಿಗನೆಂದರೆ ಅದು ಅಚ್ಚರಿಯ ಮಾತಲ್ಲ. ಆ ಕರುನಾಡು ಕಂಡ ಮಹಾನ್ ಚೇತನವೇ ಕೆ. ವೆಂಕಟಪ್ಪನವರು. ಮೂಲತಃ ಕಲಾವಿದ ಕುಟುಂಬಕ್ಕೆ ಸೇರಿದ ವೆಂಕಟಪ್ಪನವರು ಹುಟ್ಟಿದ್ದು ಮೈಸೂರಿನಲ್ಲಿಯೇ. ಇವರ ಬಾಲ್ಯವೂ ಸಹ ಅರಮನೆಯಲ್ಲಿ ಓಡಾಡಿಕೊಂಡು ಮುಗಿಯಿತು. ತನ್ನ ಪರಿಸರದ ಸುತ್ತಲೂ ಕಲೆಯನ್ನು ಮತ್ತು ಕಲಾವಿದರನ್ನು ಕಂಡ ವೆಂಕಟಪ್ಪನವರು ಜೀವನವನ್ನೇ ಕಲೆ ಎಂದು ಭಾವಿಸಿಕೊಂಡು ಕಲೆಗಾಗಿಯೇ ತಮ್ಮ ಜೀವನವನ್ನು ಮುಡುಪಾಗಿಟ್ಟರು. ತಮ್ಮ ಜೀವನದಲ್ಲಿ ಬ್ರಹ್ಮಚರ್ಯವನ್ನು ಪಾಲಿಸಿಕೊಂಡು ಜೀವನದುದ್ದಕ್ಕೂ ಒಂಟಿಯಾಗಿಯೇ ಸಾಗಿದರು. ಇವರು ಒಂದು ಕೈಯಲ್ಲಿ ಕುಂಚ ಹಾಗೂ ಇನ್ನೊಂದು ಕೈಯಲ್ಲಿ ವೀಣೆಯನ್ನು ಹಿಡಿದುಕೊಂಡು ಪೂರ್ತಿ ಜೀವನ ಕಳೆದರು.

೧೯೦೯ರ ಹೊತ್ತಿಗೆ ಮೈಸೂರು ಸಂಸ್ಥಾನದ ವಿದ್ಯಾರ್ಥಿ ವೇತನವನ್ನು ಪಡೆದುಕೊಂಡು ಕಲ್ಕತ್ತಾದ ಸರಕಾರಿ ಕಲಾಶಾಲೆಗೆ ಸೇರಿದರು. ಇಲ್ಲಿ ಅವನೀಂದ್ರರ ಶಿಷ್ಯರಾಗಿ ಏಳು ವರ್ಷಗಳ ಕಾಲ ಕಲೆಯ ಅಭ್ಯಾಸ ಮಾಡಿದರು. ಇದಾದ ನಂತರ ಮೈಸೂರಿಗೆ ಅರಮನೆಯ ಸೇವೆ ಮಾಡಲು ಹಿಂದಿರುಗಿದರು. ಬಹುಕಾಲ ಅರಮನೆಯ ಸೇವೆಯಲ್ಲಿಯೇ ನಿರತರಾದರು. ನಾಲ್ವಡಿ ಕೃಷ್ಣರಾಜರ ಮರಣದ ನಂತರ ಮೈಸೂರು ಬಿಟ್ಟು ಬೆಂಗಳೂರಿಗೆ ತೆರಳಿ ಅಲ್ಲಿ ಸ್ವಂತ ನಿವೇಶನವನ್ನು ಪಡೆದು ಅಲ್ಲಿಯೇ ಮನೆ ಮತ್ತು ಸ್ಟುಡಿಯೋವನ್ನು ಕಟ್ಟಿಕೊಂಡರು. ಇಲ್ಲಿಯೇ ಬಹುಕಾಲ ಜೀವಿಸಿ ಕಲೆಯಲ್ಲೂ ಸಾಧನೆಗೈದು ಸ್ವಗೃಹದಲ್ಲಿಯೇ ಕೊನೆ ಉಸಿರೆಳೆದರು. ಆದರೆ ಇಂದಿಗೂ ಅವರು ಜೀವಂತ. ಎಲ್ಲರೂ ಹುಟ್ಟಿದ ಮೇಲೆ ಸಾಯುತ್ತಾರೆ. ಆದರೆ ಸತ್ತ ಮೇಲೆ ಬದುಕುವವನೇ ನಿಜವಾದ ಮನುಷ್ಯನಾಗುವನು.

ಈ ಎಲ್ಲಾ ಹಿನ್ನೆಲೆಯನ್ನು ಇಟ್ಟುಕೊಂಡು ಕೆ. ವೆಂಕಟಪ್ಪನವರ ಬದುಕು ಮತ್ತು ಕಲೆಯನ್ನು ಸೂಕ್ಷ್ಮವಾದಂತಹ ಅಧ್ಯಯನಕ್ಕೆ ಒಳಪಡಿಸಿದಾಗ ಅನೇಕ ಗಮನಾರ್ಹ ಸಂಗತಿಗಳು ಕಂಡು ಬರುತ್ತವೆ. ಇದೇ ಉದ್ದೇಶವನ್ನಿಟ್ಟುಕೊಂಡು ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಈ ಅಧ್ಯಯನವು ಒಟ್ಟು ಎಂಟು ಅಧ್ಯಾಯದಲ್ಲಿ ನಿರೂಪಣೆಗೊಂಡಿದೆ. ಪ್ರತಿಯೊಂದು ಆಧ್ಯಾಯದಲ್ಲಿ ನಿರೂಪಿತಗೊಂಡಂತಹ ಅಂಶಗಳು ಮತ್ತು ಅದರಿಂದ ಹೊರಬಂದ ಫಲಿತಗಳನ್ನು ಕೆಳಗಿನಂತೆ ಸ್ಥೂಲವಾಗಿ ಸಮೀಕ್ಷಿಸಬಹುದಾಗಿದೆ.




ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವಿಧಾನ ಮತ್ತು ವ್ಯಾಪ್ತಿಗಳನ್ನು ಕುರಿತು ಹೇಳಲಾಗಿದೆ. ಇಲ್ಲಿ ಕಲಾವಿದ ಕೆ. ವೆಂಕಟಪ್ಪನವರ ಕಲೆ ಮತ್ತು ಬದುಕು ಅಧ್ಯಯನವನ್ನು ಯಾವ ಕಾರಣಕ್ಕಾಗಿ ಕೈಗೆತ್ತಿಕೊಳ್ಳಲಾಗಿದೆ ? ಇದರ ಮಹತ್ವವೇನು ? ಸಮಾಜಕ್ಕೆ, ಕಲಾವಲಯಕ್ಕೆ ಇದರಿಂದ ಆಗಬಹುದಾದ ಸಾಧಕ–ಬಾಧಕಗಳೇನು ? ಈ ಅಧ್ಯಯನದಿಂದ ಆಗುವ ಅನುಕೂಲಗಳೇನು ? ಇವರ ಚಿತ್ರ ಮತ್ತು ಶಿಲ್ಪಗಳು ಸಮಾಜದ ಮೇಲೆ ಯಾವ ರೀತಿಯ ಪರಿಣಾಮ ಬೀರಿದೆ ಎಂದು ಕಂಡುಕೊಳ್ಳುವ ನಿಟ್ಟಿನಲ್ಲಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ ಎಂಬಂತಹ ಸಂಗತಿಗಳನ್ನು ಈ ಅಧ್ಯಾಯದಲ್ಲಿ ಬಿಂಬಿಸಲು ಪ್ರಯತ್ನಿಸಲಾಗಿದೆ. ಒಟ್ಟಾರೆಯಾಗಿ ಅಧ್ಯಯನದ ಮಹತ್ವ ಮತ್ತು ಮೌಲೀಕತೆಗಳನ್ನು ನಿರೂಪಿಸುವ ಪ್ರಯತ್ನ ಈ ಅಧ್ಯಾಯದಲ್ಲಿ ಕಂಡುಬರುತ್ತದೆ.

ಎರಡನೆಯ ಅಧ್ಯಾಯ ಕೆ. ವೆಂಕಟಪ್ಪನ ಮತ್ತು ಸಮಕಾಲೀನ ಸಂದರ್ಭದ ಈ ಅಧ್ಯಾಯ ಸಂಶೋಧನೆಯ ಜೀವಾಳವಾಗಿದೆ. ಇಲ್ಲಿ ವೆಂಕಟಪ್ಪನವರ ಸಂಪೂರ್ಣ ಜೀವನವನ್ನು ವಿಸ್ತಾರವಾಗಿ ಹೇಳಲಾಗಿದೆ. ವೆಂಕಟಪ್ಪನವರ ಪೂರ್ವಜರ ಇತಿಹಾಸ, ವೆಂಕಟಪ್ಪನವರ ಬಾಲ್ಯದ ಜೀವನ, ವೆಂಕಟಪ್ಪನವರ ಕಲ್ಕತ್ತಾ ಜೀವನ, ಮರಳಿ ಮೈಸೂರಿಗೆ, ಅಲ್ಲಿಂದ ಬೆಂಗಳೂರಿಗೆ, ಹೀಗೆ ಇವರ ಜೀವನದಲ್ಲಿ ಬರುವ ತಿರುವುಗಳ ವೃತ್ತಾಂತವನ್ನು ವಿಸ್ತೃತವಾಗಿ ಹೇಳಲಾಗಿದೆ.

ವೆಂಕಟಪ್ಪನವರ ಪೂರ್ವಜರ ಇತಿಹಾಸದಲ್ಲಿ ಅವರು ಎಲ್ಲಿಯವರು ? ಅವರ ಮಾತೃ ಭಾಷೆ, ಅವರ ಸಂಸ್ಕೃತಿ, ಸಂಸ್ಕಾರಗಳ ಬಗ್ಗೆ ವಿವೇಚಿಸಲಾಗಿದೆ. ಮೈಸೂರಿನ ಬಾಲ್ಯದ ಜೀವನದಲ್ಲಿ ಇವರ ಹುಟ್ಟು, ಬೆಳವಣಿಗೆ, ಇವರ ಮೇಲಾದ ಕಲಾ ಪ್ರೇರಣೆ, ಪ್ರಭಾವ, ಕಲಾ ಆಸಕ್ತಿ ಬೆಳೆಯಲು ಕಾರಣ. ಇವೆಲ್ಲದರ ಸಂಪೂರ್ಣ ಮಾಹಿತಿಯನ್ನು ಇಲ್ಲಿ ಹೇಳಲಾಗಿದೆ. ಕಲ್ಕತ್ತಾ ಜೀವನದಲ್ಲಿ ಅವರು ಕಲ್ಕತ್ತಾದ ಸರಕಾರಿ ಕಲಾಶಾಲೆಗೆ ಸೇರಿದಾಗ ಅಲ್ಲಿ ಇವರು ನಡೆಸಿದ ಅಭ್ಯಾಸ, ಇವರ ಮೇಲಾದ ಪರಿಣಾಮ, ಪ್ರಭಾವ, ಬೇರೆ ಬೇರೆ ಕಲಾವಿದರ ಕಲಾ ಅರಿವು, ಅಜಂತಾ ಭಿತ್ತಿ ಚಿತ್ರಗಳು, ಹಿಮಾಲಯ ಯಾತ್ರೆ, ಅವನೀಂದ್ರನಾಥರ ಮಾರ್ಗದರ್ಶನ, ನಂದಲಾಲರ ಗೆಳೆತನ ಹೀಗೆ ಹಲವಾರು ಸಂಗತಿಗಳನ್ನು ಕಲ್ಕತ್ತಾ ಜೀವನದಲ್ಲಿ ತಿಳಿಯಬಹುದು.

ಮರಳಿ ಮೈಸೂರಿಗೆ ಹಿಂದಿರುಗಿದ್ದು ಈ ಹಂತದಲ್ಲಿ. ಅವರು ಯಾವಾಗ ಮರಳಿ ಮೈಸೂರಿಗೆ ಬಂದರು? ಯಾವ ಯಾವ ಕನಸುಗಳನ್ನು ಬಂಗಾಳದಿಂದ ಹೊತ್ತು ತಂದಿದ್ದರು ? ಅವರು ಬಂಗಾಳದಲ್ಲಿ ಯಾವ ಯಾವ ಅವಕಾಶಗಳನ್ನು ಇಟ್ಟುಕೊಂಡು ಮೈಸೂರಿಗೆ ಬಂದರು? ಮೈಸೂರಿಗೆ ಬಂದಾಗ ವೀಣೆ ಆಸಕ್ತಿ ಹೇಗೆ ಬೆಳೆಯಿತು? ಅರಮನೆಯಲ್ಲಿ ಇವರಿಗೆ ಯಾವ ಅವಕಾಶಗಳು



ದೊರೆತವು? ನಾಲ್ವಡಿಯವರಿಗೆ ವೆಂಕಟಪ್ಪನವರ ಮೇಲಿದ್ದ ಅಭಿಪ್ರಾಯ, ಅಂಭಾವಿಲಾಸಕ್ಕೆ ಮಾಡಿದ ಫಲಕಗಳು, ಮೈಸೂರನ್ನು ಬಿಡಲು ಕಾರಣಗಳು ಎಲ್ಲವನ್ನೂ ಇಲ್ಲಿ ಸವಿಸ್ತಾರವಾಗಿ ವಿವೇಚಿಸಲಾಗಿದೆ.


ಬೆಂಗಳೂರಿನಲ್ಲಿ ವಾಸ್ತವ್ಯ, ಮೈಸೂರನ್ನು ಯಾವ ಕಾರಣಗಳಿಂದ ಬಿಡಬೇಕಾಯಿತು. ಅಲ್ಲಿ ಅವರಿಗಾದ ಅನ್ಯಾಯ, ಬೆಂಗಳೂರಿನಲ್ಲಿ ನಿವೇಶನಕೊಂಡು ಮನೆಯನ್ನು ಕಟ್ಟಿದ್ದು, ಇಲ್ಲಿ ಅವರಿಗೆ ದಿನವೂ ಆಗುತ್ತಿದ್ದ ಕಿರಿಕಿರಿ, ಊಟಿಯ ಯಾತ್ರೆ, ಫಲಕಗಳ ಮರು ನಿರ್ಮಾಣ, ಕಲಾಶಾಲೆ ಕಟ್ಟುವ ಬಯಕೆ, ವೀಣಾಭ್ಯಾಸ ಹೀಗೆ ಹತ್ತು ಹಲವು ಸಂಗತಿಗಳಿಗೆ ಉತ್ತರವನ್ನು ಈ ಅಧ್ಯಾಯದಲ್ಲಿ ಕಂಡುಕೊಳ್ಳಲಾಗಿದೆ.

ಮೂರನೇ ಅಧ್ಯಾಯದಲ್ಲಿ ಕೆ. ವೆಂಕಟಪ್ಪನವರ ರೇಖಾಚಿತ್ರಗಳು ಎಂಬುದರ ಬಗ್ಗೆ ಅಧ್ಯಯನ ಮಾಡಲಾಗಿದ್ದು, ಇಲ್ಲಿ ವೆಂಕಟಪ್ಪನವರು ಯಾವ ಯಾವ ರೇಖಾಚಿತ್ರಗಳನ್ನು ಮಾಡಿದರು ? ಇವರ ರೇಖಾಚಿತ್ರಗಳ ಮೇಲಾದ ಪ್ರಭಾವ, ಪ್ರೇರಣೆ, ಅಜಂತಾದಲ್ಲಿ ಇವರು ರಚಿಸಿದ್ದ ರೇಖಾಚಿತ್ರಗಳು, ದೇವತೆಯ ರೇಖಾಚಿತ್ರಗಳು, ತಳಮಾನದ ರೇಖಾಚಿತ್ರಗಳು, ಅಂಗಾಂಗಗಳ ರೇಖಾಚಿತ್ರಗಳು, ಸಾಮ್ಯತೆಯ ರೇಖಾಚಿತ್ರಗಳು, ವಿನ್ಯಾಸಗಳು, ಹಲವು ಬಗೆಯ ರೇಖಾ ಚಿತ್ರಗಳನ್ನು ಇವರು ರಚಿಸಿದ್ದು, ಇವುಗಳ ಕುರಿತು ಸ್ಥೂಲವಾದ ವಿಮರ್ಶೆ ಹಾಗೂ ವಿವೇಚನೆಯನ್ನು ಮಾಡಲಾಗಿದೆ.

ನಾಲ್ಕನೆಯ ಅಧ್ಯಾಯವನ್ನಾಗಿ ಕೆ. ವೆಂಕಟಪ್ಪನವರ ವರ್ಣಚಿತ್ರಗಳು ಎಂಬ ಶೀರ್ಷಿಕೆಯಿಂದ ಅಧ್ಯಯನ ಮಾಡಲಾಗಿದೆ. ಇಲ್ಲಿ ವೆಂಕಟಪ್ಪನವರು ಬರೆದಂತಹ ಎಲ್ಲಾ ಅಂದರೆ, ಪ್ರಕೃತಿ ಚಿತ್ರಣ, ಭಾವ ಚಿತ್ರಣ, ಹೂ ಬಳ್ಳಿಯ ಚಿತ್ರಣ, ಸಂಯೋಜನೆಯ ಚಿತ್ರಗಳನ್ನಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ. ಪ್ರಕೃತಿ ಚಿತ್ರಣದಲ್ಲಿ ಮೈಸೂರಿನಲ್ಲಿ ಮಾಡಿದಂತಹ ಚಿತ್ರಗಳು ಹಾಗೂ ಊಟಿಯಲ್ಲಿ ಮಾಡಿದಂತಹ ಚಿತ್ರಗಳೆಂದು ವಿಭಾಗಿಸಿದ್ದು, ಎಲ್ಲವನ್ನೂ ಕಾಲಾನುಸಾರವಾಗಿ ವಿಂಗಡಿಸಲಾಗಿದೆ.

ಸಂಯೋಜನೆಯ ಚಿತ್ರಗಳಲ್ಲಿ ರಾಮಾಯಣಕ್ಕೆ ಸಂಬಂಧಪಟ್ಟ ಚಿತ್ರಗಳು, ಅಜಂತಾದಲ್ಲಿ ರಚಿಸಿದ ಚಿತ್ರಗಳು, ಬುದ್ಧನ ಉಪದೇಶ, ಶಾಕುಂತಲೆ-ಹೇಮ ಮೃಗ, ವೀಣೆಯ ಹುಚ್ಚು, ಶಿವರಾತ್ರಿ ಹೀಗೆ ಇವರು ರಚಿಸಿರುವ ಹಲವು ಕೃತಿಗಳನ್ನು ವಿಮರ್ಶಿಸಿ ವಿಶ್ಲೇಷಿಸಲಾಗಿದೆ. ಭಾವಚಿತ್ರಕಲೆಯಲ್ಲೂ ಸಹ ಇವರು ಮಾಡಿರುವ ತಂತ್ರಗಾರಿಕೆಯನ್ನು ಹೇಳಲಾಗಿದೆ. ಆನೆಯ ದಂತದ ಫಲಕದ ಮೇಲೆ ಜಲವರ್ಣ ಕೃತಿಗಳು ಮಾಡಿರುವುದನ್ನು ವಿವೇಚನಾತ್ಮಕವಾಗಿ ಹೇಳಲಾಗಿದೆ. ಹಾಗೆ ಹೂ ಬಳ್ಳಿಯ ಚಿತ್ರಗಳನ್ನು ಸಹ ಸಕಲ ರೀತಿಯಿಂದ ಇವುಗಳನ್ನು ವಿವೇಚಿಸಿ ವಿಮರ್ಶೆಗೆ ಒಳಪಡಿಸಲಾಗಿದೆ.

ಅಧ್ಯಾಯ ಐದರಲ್ಲಿ ಪ್ಲಾಸ್ಟರ್ ಆಫ್ ಪ್ಯಾರಿಸ್ ಮಾಧ್ಯಮದ ಶಿಲ್ಪಕೃತಿಗಳ ಬಗ್ಗೆ ವಿವರಿಸಲಾಗಿದೆ. ಇಲ್ಲಿ ಶಿಲ್ಪಕಲೆಯ ಹಲವು ಮಾಧ್ಯಮಗಳ ಬಗ್ಗೆ ವಿವರಿಸಲಾಗಿದ್ದು, ಅವುಗಳ ಸಾಧಕ-ಬಾಧಕಗಳ




ಗುಣಗ್ರಹಣಗಳನ್ನು ಎತ್ತಿ ಹಿಡಿಯಲಾಗಿದೆ. ಇವರು ಆಯ್ಕೆ ಮಾಡಿಕೊಂಡ ವಿಷಯಗಳು ಹಲವು. ಅವುಗಳಲ್ಲಿ ದ್ವಿ ಆಯಾಮದ ಫಲಕಗಳು ಹಾಗೂ ತ್ರಿ ಆಯಾಮದ ದುಂಡು ಶಿಲ್ಪಗಳು ಹೀಗೆ ಎರಡು ವಿಧವಾಗಿ ವಿಂಗಡಿಸಿಕೊಂಡು ವಿಷಯಾನುಸಾರವಾಗಿ ವಿಸ್ತೃತ ಚರ್ಚೆಯ ಅವಕಾಶವನ್ನು ಇಲ್ಲಿ ಮಾಡಲಾಗಿದೆ ಹಾಗೂ ವೆಂಕಟಪ್ಪನವರ ಮೇಲಾದ ಪ್ರಭಾವ-ಪ್ರೇರಣೆ, ಶೈಲಿ, ತಂತ್ರಗಳ ಕುರಿತು ವಿವೇಚಿಸಲಾಗಿದೆ.

ಅಧ್ಯಾಯ ಆರರಲ್ಲಿ ಕೆ. ವೆಂಕಟಪ್ಪನವರ ಕಲಾಕೃತಿಯ ಮೇಲಾದ ಪ್ರಭಾವ-ಪ್ರೇರಣೆ, ತಂತ್ರ ಮತ್ತು ಶೈಲಿಯನ್ನು ಇಲ್ಲಿ ಹೇಳಲಾಗಿದೆ. ವೆಂಕಟಪ್ಪನವರ ಎಲ್ಲಾ ಮಾಧ್ಯಮಗಳ ಹಾಗೂ ಎಲ್ಲಾ ಕೃತಿಗಳ ಮೇಲಾದ ಪ್ರಭಾವ-ಪ್ರೇರಣೆಗಳನ್ನು, ಶೈಲಿ, ತಂತ್ರಗಳ ಕುರಿತು ವಿವೇಚಿಸಲಾಗಿದೆ.

ಅಧ್ಯಾಯ ಆರರಲ್ಲಿ ಕೆ. ವೆಂಕಟಪ್ಪನವರ ಕಲಾಕೃತಿಯ ಮೇಲಾದ ಪ್ರಭಾವ-ಪ್ರೇರಣೆಗಳನ್ನು ಇಲ್ಲಿ ತಾಳೆ ಹಾಕಲಾಗಿದೆ. ಇವರ ಬಾಲ್ಯದ ಜೀವನದಿಂದಿಡಿದು ಅವರ ಮುಪ್ಪಿನವರೆಗೆ ಮಾಡಿರುವ ಎಲ್ಲಾ ಕೃತಿಯ ಮೇಲೂ ಬೆಳಕನ್ನು ಚೆಲ್ಲಿ ಅವುಗಳ ಗುಣಗ್ರಹಣಗಳ ತಂತ್ರ, ಶೈಲಿ, ಪ್ರಭಾವ-ಪ್ರೇರಣೆಗಳ ವಿಸ್ತಾರವಾದ ವಿವರಣೆಯನ್ನು ಇಲ್ಲಿ ಮಾಡಲಾಗಿದೆ.

ಅಧ್ಯಾಯ ಏಳರಲ್ಲಿ ಕೆ. ವೆಂಕಟಪ್ಪನವರ ಕುರಿತು ಬಂದಂತಹ ಸಾಹಿತ್ಯ, ಇದರಲ್ಲಿ ವೆಂಕಟಪ್ಪನವರ ಕುರಿತು ಬಂದಂತಹ ಪತ್ರಿಕಾ ಸಾಹಿತ್ಯ, ದಿನಪತ್ರಿಕೆ, ವಾರ ಪತ್ರಿಕೆ, ಮಾಸ ಪತ್ರಿಕೆ, ಬಿಡಿ ಲೇಖನಗಳು, ಪುಸ್ತಕ ಸಾಹಿತ್ಯ ಎಲ್ಲವನ್ನೂ ವಿಸ್ತಾರವಾಗಿ ಅಭ್ಯಾಸ ಮಾಡಲಾಗಿದೆ. ಪುಸ್ತಕ ಸಾಹಿತ್ಯದಲ್ಲಿ ಇವರ ಕುರಿತು ಬಂದಂತಹ ಹಲವಾರು ಪುಸ್ತಕಗಳ ಒಳನೋಟವನ್ನು ಸಂಪೂರ್ಣವಾಗಿ ಬಿಂಬಿಸಲಾಗಿದೆ. ಇದರಿಂದ ಇವರ ಜೀವನ ಶೈಲಿ, ಕಲಾ ಬದುಕು, ಇವರು ಮಾಡಿರುವ ಕಲಾಕೃತಿಗಳು, ಅವುಗಳಿಗೆ ಬಂದಂತಹ ವಿಮರ್ಶೆಗಳು, ಇವರ ಸಂಪೂರ್ಣ ಜೀವನ, ಇವರ ಮೇಲಾದ ಪ್ರಭಾವಗಳು, ಹೀಗೆ ಎಲ್ಲವನ್ನೂ ಸಾಕ್ಷತ್ಕರಿಸುವ ಪುಸ್ತಕ ಸಾಹಿತ್ಯವನ್ನು ಆಳವಾಗಿ ಹೊಕ್ಕು ಅದರ ಸಂಪೂರ್ಣ ತಿರುಳಿನ ಗಹನತೆಯನ್ನು ಹೇಳಲಾಗಿದೆ.

ಅಧ್ಯಾಯ ಎಂಟರಲ್ಲಿ ಸಮಾರೋಪವಿದ್ದು, ಹೀಗೆ ಎಂಟು ಅಧ್ಯಾಯಗಳನ್ನು ಹೊಂದಿದ ಈ ಅಧ್ಯಯನದಲ್ಲಿ ಅನೇಕ ರೀತಿಯ ಫಲಿತಗಳನ್ನು ಕಂಡುಕೊಳ್ಳಲಾಗಿದ್ದು, ಅವೆಲ್ಲವುಗಳನ್ನು ಈ ಅಧ್ಯಾಯದ ಸಮಾರೋಪದಲ್ಲಿ ಸಮೀಕ್ಷಿಸಲಾಗಿದೆ. ಈ ಅಧ್ಯಯನದಿಂದ ಕಂಡುಕೊಂಡ ಪ್ರಮುಖ ಅಂಶಗಳನ್ನು ಕೆಳಕಂಡಂತೆ ಹೇಳಲಾಗಿದೆ.



೧. ಕರ್ನಾಟಕದಲ್ಲಿ ಇಂತಹ ಮೇರು ಕಲಾವಿದನೊಬ್ಬನ ಸಂಶೋಧನಾ ಅಧ್ಯಯನದ ಮೇಲೆ ಬೆಳಕು ಚೆಲ್ಲದ ವಿಶ್ವವಿದ್ಯಾಲಯದ, ಸರಕಾರದ ನಿರ್ಲಕ್ಷ್ಯ ಕಂಡುಬರುತ್ತದೆ.

೨. ಈ ಅಧ್ಯಯನದಿಂದ ಇವರ ಪೂರ್ವಿಕರ ಇತಿಹಾಸ, ನೆಲೆ, ಭಾಷೆ, ಸಂಸ್ಕೃತಿ, ಸಂಸ್ಕಾರಗಳ ಕಡೆಗೆ ಬೆಳಕು ಚೆಲ್ಲಿದಂತಾಗುತ್ತದೆ.

೩. ಕರ್ನಾಟಕದಿಂದ ಹೋಗಿ ಕಲ್ಕತ್ತಾದಲ್ಲಿ ಕಲಾಶಿಕ್ಷಣ ಮುಗಿಸಿ ಬಂದ ಕೀರ್ತಿ ಇವರಿಗೆ ಸಲ್ಲುತ್ತಿದ್ದು ಅದನ್ನು ಕಲಾವಲಯಕ್ಕೆ ಪರಿಚಯಿಸಿದಂತಾಗುತ್ತದೆ.

೪. ಮೈಸೂರು ಸಂಸ್ಥಾನ ಇವರಿಗೆ ಸ್ವತಂತ್ರ ಪೂರ್ವದಲ್ಲಿ ವಿದ್ಯಾರ್ಥಿ ವೇತನವನ್ನು ಕೊಟ್ಟು ಬೇರೆ ರಾಜ್ಯವೊಂದಕ್ಕೆ ಕಳಿಸಿಕೊಟ್ಟ ಕೀರ್ತಿಯನ್ನು ನೆನೆದಂತಾಗುತ್ತದೆ.

೫. ಅವನೀಂದ್ರರು ಬಂಗಾಳಿ ಕಲಾಶಾಲೆಯಲ್ಲಿ ಬಹಳಷ್ಟು ಜನರಿದ್ದರೂ ಸಹ ವೆಂಕಟಪ್ಪನವರನ್ನು ಅಜಂತಾ, ಭಿತ್ತಿಚಿತ್ರಗಳ ಕರಡು ಮಾಡಲು ಕಳಿಸಿದ್ದರಿಂದ ಇವರಿಗಿದ್ದ ಮಹತ್ವವನ್ನು ತಿಳಿಯಬಹುದು.


೬. ದಂತ ಫಲಕಗಳ ಮೇಲೆ ಜಲವರ್ಣದಲ್ಲಿ ಚಿತ್ರವನ್ನು ರಚಿಸುತ್ತಿದ್ದ ಇವರ ತಂತ್ರಗಾರಿಕೆಯ ಮೇಲೆ ಬೆಳಕು ಚೆಲ್ಲಿದಂತಾಗುತ್ತದೆ.

೭. ಎಲ್ಲದಕ್ಕಿಂದ ಮುಖ್ಯವಾಗಿ ಅವರು ಹೇಳುತ್ತಿದ್ದ ಮಾತು "ನಾನು ಎಲ್ಲರಿಗಿಂತ ಕಿರಿಯವನು, ಕಲೆಯಲ್ಲಿ ಕಲಿಯಬೇಕಾದದ್ದು ಬಹಳ ಇದೆ, ನಾನಿನ್ನೂ ಕಲಾವಿದನಲ್ಲ, ಕಲಾ ವಿದ್ಯಾರ್ಥಿ, ಸಾಗರದಷ್ಟು ಕಲೆ ಇದ್ದರೆ, ಅದರಲ್ಲಿ ಒಂದು ಹನಿಯನ್ನು ಮಾತ್ರ ಕಲಿತಿದ್ದೇನೆ" ಎಂಬ ಇವರ ಸೌಜನ್ಯದ ಮಾತುಗಳನ್ನು ಕೇಳುತ್ತಿದ್ದರೆ ಇವರ ಹಿರಿಮೆಯ ಅರಿವು ನಮಗಾಗುತ್ತದೆ.

೮. ವೆಂಕಟಪ್ಪನವರ ಬದುಕು ಬರಹದ ಬಗ್ಗೆ ಅರಿತ ಕಲವಿದರು ತಮ್ಮ ಸಾಧನೆಯ ನೋಟವನ್ನು ಬೆರೆಡೆಗೆ ಹರಿಸಲು ಸಹಾಯಕವಾಗುತ್ತದೆ.

❖❖❖

ಅನುಬಂಧಗಳು



ಅನುಬಂಧ – ೧

ಗ್ರಂಥಋಣ

೧.	**ಕಲಾತಪಸ್ವಿ ವೆಂಕಟಪ್ಪ**	:	**ಪ್ರೊ॥ ಸಾ.ಕೃ. ರಾಮಚಂದ್ರರಾವ್** ಕನ್ನಡ ಮತ್ತು ಸಂಸ್ಕೃತಿ ಇಲಾಖೆ – ೧೯೮೮
೨.	**ಕೆ. ವೆಂಕಟಪ್ಪ ಚಿತ್ರಪಟ**	:	**ಪ್ರೊ. ಎಸ್.ಕೆ. ರಾಮಚಂದ್ರರಾವ್** ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು
೩.	**ಕೆ. ವೆಂಕಟಪ್ಪ**	:	**ಪ್ರೊ॥ ಸಾ.ಕೃ. ರಾಮಚಂದ್ರರಾವ್** ಪ್ರಾಚ್ಯ ವಸ್ತು ಸಂಗ್ರಹಾಲಯ ನಿರ್ದೇಶನಾಲಯ ಹೊಸಪೇಟೆ
೪.	**ಕೆ. ವೆಂಕಟಪ್ಪ**	:	**ಪಿ.ಆರ್. ತಿಪ್ಪೇಸ್ವಾಮಿ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು – ೧೯೯೩
೫.	**ಕೆ. ವೆಂಕಟಪ್ಪ – ಸವಿನೆನಪು:**	:	**(ಸಂ) ಎಸ್.ಎನ್. ಚಂದ್ರಶೇಖರ್** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು– ೧೯೮೭
೬	**ಕೆ. ವೆಂಕಟಪ್ಪ**	:	**ಕೆ.ಆರ್. ರಾಮಕೃಷ್ಣ** ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ
೭	**ಕೆ. ವೆಂಕಟಪ್ಪ**	:	**(ಸಂ) ಜಯ ಅಪ್ಪಸಾಮಿ** ಲಲಿತಕಲಾ ಅಕಾಡೆಮಿ, ದೆಹಲಿ – ೧೯೬೮
೮.	**ಕೆ. ವೆಂಕಟಪ್ಪ**	:	**(ಸಂ) ಪಿ.ಆರ್. ತಿಪ್ಪೇಸ್ವಾಮಿ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು– ೧೯೮೩

೯. ವೆಂಕಟಪ್ಪ ಸಮಕಾಲೀನ ಪುನರಾವಲೋಕನ : **ಕೆ.ವಿ. ಸುಬ್ರಹ್ಮಣ್ಯಂ**
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು– ೧೯೯೦

೧೦. ಕಲಾನ್ವೇಷಕ ಆರ್.ಎಂ. ಹಡಪದ : **ಡಾ॥ ಸಿದ್ಧಲಿಂಗಸ್ವಾಮಿ ಹಿರೇಮಠ**
ಶ್ರೀ ತೋಂಟದಾರ್ಯ ಸಂಸ್ಥಾನಮಠ, ಗದಗ ೨೦೧೦

೧೧. ಆಲೇಖ್ಯ : **ಡಾ॥ ಅ.ಲ. ನರಸಿಂಹನ್**
ಸಂಯೋಜಿತ,
ಬೆಂಗಳೂರು – ೧೯೯೯

೧೨. ಕಲಾವಿದ ಹೆಬ್ಬಾರರ ರೇಖಾ ಲಾವಣ್ಯ : **ವ್ಯಾಸರಾಯ ಬಲ್ಲಾಳ**
ನವಕರ್ನಾಟಕ ಪ್ರಕಾಶನ, ಬೆಂಗಳೂರು ೧೯೯೯


೧೩. ಕಲೆ ಎಂದರೇನು ? : **ಸಿ.ಪಿ.ಕೆ.**
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ೨೦೦೦

೧೪. ಕಲಾ ಪ್ರಪಂಚ : **ಡಾ॥ ಶಿವರಾಮಕಾರಂತ**
ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ೧೯೭೮

೧೫. ಕಲಾನುಭವ : **ವಿ. ಸೀತಾರಾಮಯ್ಯ**
ಬೆಂಗಳೂರು ವಿಶ್ವವಿದ್ಯಾಲಯ
ಮೈಸೂರು – ೧೯೭೬.

೧೬ ಕಲಾ ಸಂವೇದನೆಯ ಒಳನೋಟಗಳು : **ಕೆ.ವಿ. ಸುಬ್ರಮಣ್ಯಂ**
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು – ೧೯೯೭

೧೭ ಕಲಾಕೋಶ : **ಸಂ : ಎಸ್. ಮರಿಶಾಮಾಚಾರ್**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು – ೧೯೯೪



೧೮. **ಕರ್ನಾಟಕದ ಜನಪದ ಚಿತ್ರಕಲೆ** : **ಡಾ॥ ಎಸ್.ಸಿ. ಪಾಟೀಲ್**
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜ. ತೋಂಟದಾರ್ಯ ಸಂಸ್ಥಾನ ಮಠ, ಗದಗ
೧೯೯೩.

೧೯. **ಕರ್ನಾಟಕ ಆಧುನಿಕ ಶಿಲ್ಪಕಲೆ** : **ಕೆ. ವಿ. ಸುಬ್ರಮಣ್ಯಂ**
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
೧೯೯೬

೨೦. **ಚಿತ್ರ ಚಿತ್ತ** : **ಚಿ.ಸು. ಕೃಷ್ಣಶೆಟ್ಟಿ**
ಇಳಾ ಪ್ರಕಾಶನ,
ಬೆಂಗಳೂರು–೨೦೦೦


೨೧. **ಚಿತ್ರಕಲಾವಿದ ಜೆ.ಎಸ್. ಖಂಡೇರಾವ್ ಕಲಾ ಮತ್ತು ಬದುಕು** : **ಮಲ್ಲಿಕಾರ್ಜುನ ಸಿ ಬಾಗೊಡಿ,**
ಅಪ್ರಕಟಿತ ಪಿ.ಹೆಚ್.ಡಿ. ಮಹಾಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೨

೨೨. **ಕಲಾನ್ವೇಷಕ ಆರ್.ಎಂ. ಹಡಪದ** : **ಡಾ॥ ಸಿದ್ಧಲಿಂಗಸ್ವಾಮಿ ಹಿರೇಮಠ**
ತೋಂಟದಾರ್ಯ ಸಂಸ್ಥಾನ ಮಠ, ಗದಗ – ೨೦೧೦


೨೩. **ಚಿತ್ರಕಲೆ ಮತ್ತು ಮನೋವಿಕಾಸ** : **ಡಾ॥ ಸಿ.ಆರ್. ಚಂದ್ರಶೇಖರ್**
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು –
೧೯೯೪

೨೪. **ನಿಜದ ನೆಲೆ** : **ಸಂ. ಡಾ. ಎಸ್. ಸಿ. ಪಾಟೀಲ ಮತ್ತು ಸತ್ಯಾನಂತ ಪಾತ್ರೋಟ**
ಡಾ॥ ಬಿ.ಕೆ. ಹಿರೇಮಠ (ಅಭಿನಂದನ ಗ್ರಂಥ)
ವೈರಾಗ್ಯದ ಮಲ್ಲಣಾರ್ಯ ಪ್ರಕಾಶನ
ಪ್ರ.ಸಂ.ಡಾ.ವಿ.ಆರ್. ಹಿರೇಮಠ, ಬಾಗಲಕೋಟೆ
೨೦೦೩

೨೫. **ಪಿ.ಆರ್. ತಿಪ್ಪೇಸ್ವಾಮಿ** : **ಎಂ. ಎಸ್. ನಂಜುಂಡರಾವ್**
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
೧೯೯೪




೨೬.	ಭಾರತೀಯ ಚಿತ್ರಕಲೆ	:	**ಡಾ॥ ಶಿವರಾಮಕಾರಂತ** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
೨೭.	ರೇಖಾ ಚಿತ್ರ	:	**ಸಂ. ಬಿ. ವಿ. ಕೆ. ಶಾಸ್ತ್ರಿ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು ೧೯೯೧
೨೮.	ವರ್ಣ ಸಂಚಯ	:	**ಡಾ॥ ಎಸ್.ಸಿ. ಪಾಟೀಲ** ವಿಜಯ ಚಿತ್ರಕಲಾ ಮಹಾವಿದ್ಯಾಲಯ, ಇಲಕಲ್ಲ ೨೦೦೧
೨೯.	ಶಿಲ್ಪಕಲೆ	:	**ವಿಜಯರಾವ್** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು ೧೯೯೬
೩೦.	ಸಮಕಾಲೀನ ಕಲೆ	:	**ಸಂ. ಬಿ.ವಿ.ಕೆ. ಶಾಸ್ತ್ರಿ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು ೧೯೮೭
೩೧.	ಸಂಯೋಜನೆ	:	**ಡಾ. ಅ.ಲ. ನರಸಿಂಹನ್** ಸಂಯೋಜಿತ ಪ್ರಕಾಶನ ಬೆಂಗಳೂರು – ೧೯೮೭.



ಅನುಬಂಧ – ೨
ಕೆ. ವೆಂಕಟಪ್ಪನವರ ಜೀವನದ ಮುಖ್ಯ ಪ್ರಸಂಗಗಳು

ಜನನ (ಮೈಸೂರಿನಲ್ಲಿ)	– ಜೂನ್ ೨೩, ೧೮೮೬ (ಸರ್ವಜಿತ್, ಆಷಾಢ ಶುದ್ಧ ದ್ವಿತೀಯಾ)
ಮೈಸೂರು ಔದ್ಯಮಿಕ ಶಾಲೆ ಸೇರಿದ್ದು	– ೧೯೦೨
ಮದ್ರಾಸು ಸರಕಾರದ ಕಲಾಪರೀಕ್ಷೆಗಳಲ್ಲಿ ತೇರ್ಗಡೆಯಾದದ್ದು	– ೧೯೦೬
ಕಲ್ಕತ್ತೆಯ ಸರಕಾರಿ ಕಲಾಶಾಲೆಯನ್ನು ಸೇರಿದ್ದು	– ೧೯೦೯
ಮಹಿಳೆ (ತೈಲ ಚಿತ್ರ)	– ೧೯೦೯
ಪಕ್ಷಿ (ವರ್ಣಚಿತ್ರ, ಮೊಘಲ್ ಪದ್ಧತಿಯಲ್ಲಿ)	– ೧೯೧೦
ಅಜಂತಾ ಭಿತ್ತಿ ಚಿತ್ರಗಳ ಪ್ರತಿ ಮಾಡಿಕೊಳ್ಳು ಹೋದದ್ದು	– ೧೯೧೧
ಅರ್ಧನಾರೀಶ್ವರ ಮತ್ತು ಬಂಗಾಳದ ಮೀನು ಮಾರುಕಟ್ಟೆ	– ೧೯೧೧
ರಾಮಾಯಣದ ಚಿತ್ರಗಳು	– ೧೯೧೩
ಹಿಮಾಲಯ ಯಾತ್ರೆ (ಪಂಚಕೇದಾರ ದರ್ಶನಕ್ಕಾಗಿ)	– ಏಪ್ರಿಲ್–ಜೂನ್ ೧೯೧೩
ಅಪರಿಗ್ರಹ ವ್ರತವನ್ನು ಸ್ವೀಕರಿಸಿದ್ದು	– ಮೇ ೬, ೧೯೧೩
ವೀಣಾಭ್ಯಾಸದ ಆರಂಭ (ಶ್ರೀರಂಗದ ರಾಮಸ್ವಾಮಿ ಅಯ್ಯಂಗಾರರ ಬಳಿ)	– ೧೯೧೩ ರ ಕೊನೆಯ ಭಾಗ
ಶೃತಿ ವೀಣೆಯನ್ನು ಸಿದ್ಧಪಡಿಸಿದ್ದು	– ೧೯೧೪ ರ ಜನವರಿ
ಅವನೀಂದ್ರನಾಥರು (ದಂತ ಫಲಕದ ಮೇಲೆ ಕಿರುಚಿತ್ರ)	– ೧೯೧೪
ಮೈಸೂರಿಗೆ ಹಿಂದಿರುಗಿದ್ದು	– ಜೂನ್ ೧, ೧೯೧೬
ಹಳೆ ಅಗ್ರಹಾರದ ಚಿತ್ರಣ	– ೧೯೧೭
ಮೈಸೂರು ಅರಮನೆಗೆ ಕೆಲಸ ಮಾಡಲು ಹೋಗಿದ್ದು	– ೧೯೧೮
ಮಹಾರಾಜ ಕೃಷ್ಣರಾಜ ಒಡೆಯರು (ದಂತ ಫಲಕದ ಮೇಲೆ ಕಿರುಚಿತ್ರ, ಮಿರ್ಜಾ ಇಸ್ಮಾಯಿಲರಿಗಾಗಿ ಮಾಡಿದ್ದು)	– ೧೯೧೮
ಮಾಣಿ (ಶಿಲ್ಪ)	– ೧೯೧೮, ಪುನರ್ ನಿರ್ಮಾಣ ೧೯೫೦ರಲ್ಲಿ
ವೀಣೆ ಶೇಷಣ್ಣನವರ ಬಳಿ ಶಿಕ್ಷಣ ಮೊದಲಾದದ್ದು	– ಮಾರ್ಚ್ ೭, ೧೯೧೮
ವೀಣೆ ಶೇಷಣ್ಣ (ಶಿಲ್ಪ) ಮುಗಿದಿದ್ದು	– ಆಗಸ್ಟ್ ೬, ೧೯೧೮
ಚಾಮುಂಡಿ ಬೆಟ್ಟದಿಂದ ದೃಶ್ಯಗಳು (೨ ವರ್ಣಚಿತ್ರಗಳು)	– ೧೯೧೯
ವೀಣೆಯ ಹುಚ್ಚು (ವರ್ಣಚಿತ್ರ)	– ೧೯೨೧–೨೨
ಮಹಾಶಿವರಾತ್ರಿ	– ೧೯೨೩



ಜೇಮ್ಸ್‌ಕಸಿನ್ಸ್‌ರಿಗಾಗಿ ಚಾಂದ್‌ಬೀಬಿ (ಕಿರುಚಿತ್ರ) – ೧೯೨೩

ಅಂಗಸಾಧನೆ (ಸರ್ದಾರ್ ಗೋಪಾಲರಾಜ ಅರಸರ ಚಿತ್ರಣ) ಮುಗಿದಿದ್ದು – ಮೇ ೧೦, ೧೯೨೩

ರವೀಂದ್ರನಾಥ ಠಾಕೂರರು (ಶಿಲ್ಪ) ಮುಗಿದಿದ್ದು – ಡಿಸೆಂಬರ್ ೨೭, ೧೯೨೩ (ಪರಿಷ್ಕಾರ ೧೯೫೬)

ಮಾರೀಚನು ಹೇಮಮೃಗವಾಗಿ ಸೀತೆಯನ್ನು ಭ್ರಮೆಗೀಡು ಮಾಡಿದ್ದು (ವರ್ಣಚಿತ್ರ) – ೧೯೨೩

ಮಹಾತ್ಮಾಗಾಂಧಿಯವರ ಸಂದರ್ಶನ (ಬೆಳಗಾಂವಿಯಲ್ಲಿ) – ಡಿಸೆಂಬರ್ ೨೮, ೧೯೨೪

ಮೈಸೂರು ಅರಮನೆಯ ಅಂಬಾವಿಲಾಸ ತೊಟ್ಟಿಯ ಅಲಂಕರಣಕ್ಕೆ ತೊಡಗಿದ್ದು – ೧೯೨೪

ಕುಚ್‌ಬಿಹಾರದ ಅರಸರು (ದಂತಫಲಕದ ಮೇಲೆ ಕಿರುಚಿತ್ರ) – ೧೯೨೪–೧೯೨೬

ಸಿದ್ಧಾರ್ಥನ ರಾಜ್ಯ ಪರಿತ್ಯಾಗ (ಫಲಕ) – ೧೯೨೪ (ಪರಿಷ್ಕಾರ ೧೯೫೧–೫೨)

ದ್ರೋಣಾಚಾರ್ಯರ ಶಿಕ್ಷಣ (ಫಲಕ) – ೧೯೨೫

ಏಕಲವ್ಯನ ಅಭ್ಯಾಸ (ಫಲಕ) – ೧೯೨೫

ಬೆಂಗಳೂರಿನಲ್ಲಿ ಚಿತ್ರಶಾಲೆ ಕಟ್ಟಲು ನಿವೇಶನ ಕೊಂಡದ್ದು – ಏಪ್ರಿಲ್ ೧೫, ೧೯೨೬

ಊಟಿಯಲ್ಲಿ ನಿಸರ್ಗ ಚಿತ್ರಗಳ ಸಿದ್ಧತೆ – ಮೇ ೯ ರಿಂದ ಅಕ್ಟೋಬರ್ ೨೭, ೧೯೨೬ ಮತ್ತೆ ಮಾರ್ಚ್, ೨೯ ರಿಂದ ಸೆಪ್ಟಂಬರ್ ೨೭, ೧೯೩೦

ಶಕುಂತಲೆಯ ನಿರ್ಗಮನ (ಫಲಕ) – ೧೯೨೮ (ಪರಿಷ್ಕಾರ ೧೯೪೮)

ಮೈಸೂರು ಮಹಾರಾಜರು ಚಿತ್ರಶಾಲೆಗೆ ಭೇಟಿಕೊಟ್ಟದ್ದು – ಜನವರಿ ೨೭, ೧೯೩೦

ರಾಮನಿಂದ ಹನುಮಂತನಿಗೆ ಅಂಗುಲಿ ಪ್ರಧಾನ – ೧೯೩೨

ಬುದ್ಧ ಪರಿವ್ರಾಜಕನಾಗಿ (ಫಲಕ) – ೧೯೩೪

ಕೊಡೈಕೆನಾಲಿನ ದೃಶ್ಯಗಳು (ವರ್ಣಚಿತ್ರಗಳು) – ಏಪ್ರಿಲ್ ೨೧ ರಿಂದ ಜುಲೈ ೨೧, ೧೯೩೪


ನಂದಿಬೆಟ್ಟಕ್ಕೆ ಬಂದದ್ದು – ಮಾರ್ಚ್ ೭ ರಿಂದ ಏಪ್ರಿಲ್ ೨೧, ೧೯೩೪

ಮಹಾರಾಜ ಕೃಷ್ಣರಾಜ ಒಡೆಯರು (ದಂತ ಫಲಕದ ಮೇಲೆ ಕಿರುಚಿತ್ರ, ಸರ್ದಾರ್ ಗೋಪಾಲರಾಜ ಅರಸರಿಗಾಗಿ) – ೧೯೩೯

ಶಿವತಾಂಡವ (ಫಲಕ) – ೧೯೪೦ (ಪರಿಷ್ಕಾರ ೧೯೫೬)

ಕೃಷ್ಣರಾಜ ಒಡೆಯರ ನಿಧನಾನಂತರ ಅರಮನೆಯೊಂದಿಗೆ ವಿರಸ ಒದಗಿ, ಮೈಸೂರು ಬಿಟ್ಟು ಬೆಂಗಳೂರಿಗೆ ಹೊರಟಿದ್ದು – ಅಕ್ಟೋಬರ್ ೨೩, ೧೯೪೦

ಸ್ವಂತ ಚಿತ್ರಶಾಲೆಯ ನಿರ್ಮಾಣ (ಗೃಹ ಪ್ರವೇಶ) – ಜೂನ್ ೪, ೧೯೪೧



ಮೈಸೂರು ಅರಮನೆಯ ಮೇಲೆ ನ್ಯಾಯಾಲಯದಲ್ಲಿ ಕಟ್ಟಳೆ ಹೂಡಿದ್ದು	– ಸೆಪ್ಟಂಬರ್ ೫, ೧೯೪೩
ಕಟ್ಟಳೆ ನ್ಯಾಯಾಲಯದಲ್ಲಿ ತಿರಸ್ಕೃತವಾದದ್ದು	– ಅಕ್ಟೋಬರ್ ೨೮, ೧೯೪೬
ರಾಜವೀಣೆಯ ನಿರ್ಮಾಣ ಮುಗಿದಿದ್ದು	– ಜನವರಿ ೨, ೧೯೪೯
ಮೊಳಕಾಲುಗಳಲ್ಲಿ ನೋವು, ಕಣ್ಣುಗಳ ತೊಂದರೆ ಕಂಡಿದ್ದು	– ೧೯೫೨ ರ ಕಡೆಯ ಭಾಗ
ಡಯಾಬಿಟಿಸ್ ವ್ಯಾಧಿಯೆಂದು ಗೊತ್ತಾದದ್ದು	– ಆಗಸ್ಟ್ ೨೮, ೧೯೫೪
ಸೂರ್ಯಾಸ್ತ (ವರ್ಣಚಿತ್ರ) ಮುಗಿದಿದ್ದು	– ನವೆಂಬರ್ ೧೮, ೧೯೫೭
ವ್ಯಾಧಿ ಉಲ್ಬಣಿಸಿದ್ದು	– ಮಾರ್ಚ್ ೧೯೫೮
ದಿಲ್ಲಿಯ ಲಲಿತಕಲಾ ಅಕಾಡೆಮಿಯ ಫೆಲೊ ಆಗಿ ಆಯ್ಕೆ	– ಜೂನ್ ೧೭, ೧೯೬೧
ಕೇಂದ್ರ ಲಲಿತಕಲಾ ಅಕಾಡೆಮಿಯ ಪುರಸ್ಕಾರ (ತಾಮ್ರಪತ್ರ ಮತ್ತು ಅಂಗವಸ್ತ್ರಗಳ ಪ್ರದಾನ) ಸಮಾರಂಭ ಅವರ ನಿವಾಸದಲ್ಲೇ ನಡೆದದ್ದು.	– ಆಗಸ್ಟ್ ೭, ೧೯೬೨
ಕರ್ನಾಟಕ ಚಿತ್ರಕಲಾ ಪರಿಷತ್ತು, ಭಿನ್ನವತ್ತಳಿಕೆಯನ್ನು ಅರ್ಪಿಸಿದ್ದು	– ಡಿಸೆಂಬರ್ ೨, ೧೯೬೨
ಮರಣ (ತಮ್ಮ ನಿವಾಸದಲ್ಲಿ ಅಪರಾಹ್ನ ಒಂದು ಗಂಟೆಗೆ)	– ಮೇ ೨೫, ೧೯೬೫
ದಹನ ಸಂಸ್ಕಾರ (ಹರಿಶ್ಚಂದ್ರಘಾಟಿನಲ್ಲಿ, ಪ್ರಾಹ್ಣ ೧೧.೪೫ ಗಂಟೆಗೆ)	– ಮೇ ೨೬, ೧೯೬೫
ಬೆಂಗಳೂರಿನಲ್ಲಿ ವೆಂಕಟಪ್ಪ ಚಿತ್ರಕಲಾ ಶಾಲೆಯ ವ್ಯವಸ್ಥೆ	– ೧೯೭೪

